ಶುಕ್ರವಾರ, ಆಗಸ್ಟ್ 30, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 242 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
'ಕಥೆ ಬಯಸಿದ ಪಾತ್ರ ಮಾಡುತ್ತೇನೆ'
'ಪೆಪೆ' ಚಿತ್ರದ ನಾಯಕ ನಟ ವಿನಯ್ ರಾಜ್‌ಕುಮಾರ್ ಸಂದರ್ಶನ

ಆಳ-ಅಗಲ
ಪಾಲು ಹಂಚಿಕೆ: ಏಕೀ ವ್ಯತ್ಯಾಸ?
ಭಾರಿ ಮಳೆ: ಜಲಾಶಯಗಳು ಭರ್ತಿ 7
ಮುಕೇಶ್ ವಿರುದ್ಧ ಅತ್ಯಾಚಾರ ಪ್ರಕರಣ 13
'ಕೈಗಾರಿಕಾ ಜಮೀನು ಬಳಕೆ ಆಗದಿದ್ದರೆ ವಾಪಸ್' 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,134	25,151	₹73,260 (ಬೆಂಗಳೂರು)	₹88,200 (ಬೆಂಗಳೂರು)	83.89

16ನೇ ಹಣಕಾಸು ಆಯೋಗದ ಅಧ್ಯಕ್ಷ ಅರವಿಂದ್ ಪನಗಡಿಯಾಗೆ ಮುಖ್ಯಮಂತ್ರಿ ಒತ್ತಾಯ

ತೆರಿಗೆ: ಶೇ 60ರಷ್ಟು ಪಾಲು ಕೊಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರದ ತೆರಿಗೆ ಆದಾಯದಲ್ಲಿ ರಾಜ್ಯಗಳ ಬಾಬ್ತಿಗೆ ಕರ್ನಾಟಕದಿಂದ ಹೋಗುವ ಮೊತ್ತದಲ್ಲಿ ಶೇ 60ರಷ್ಟು ನಮಗೇ ವಾಪಸ್ ಬರಬೇಕು. ತೆರಿಗೆ ಪಾಲು ಹಂಚಿಕೆಯಲ್ಲಿ ರಾಜ್ಯಕ್ಕಾಗಿರುವ ಅನ್ಯಾಯ ಸರಿಪಡಿಸಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 16ನೇ ಹಣಕಾಸು ಆಯೋಗವನ್ನು ಒತ್ತಾಯಿಸಿದರು.

ರಾಜ್ಯಗಳಿಗೆ ತೆರಿಗೆ ಪಾಲು ಮತ್ತು ಇತರ ಸಹಾಯಾನುದಾನಗಳ ಪ್ರಮಾಣ ನಿರ್ಧರಿಸುವ ಸಂಬಂಧ ರಾಜ್ಯಗಳ ಜತೆಗೆ ಸಮಾಲೋಚನಾ ಸಭೆ ಆರಂಭಿಸಿರುವ 16ನೇ ಹಣಕಾಸು ಆಯೋಗವು, ಗುರುವಾರ ರಾಜ್ಯಕ್ಕೆ ಭೇಟಿ ನೀಡಿದೆ.

ಅರವಿಂದ್ ಪನಗಡಿಯಾ ಅಧ್ಯಕ್ಷತೆಯ ಆಯೋಗದ ಜತೆಗೆ ನಡೆದ ಸಭೆಯಲ್ಲಿ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ನಾವು ಕೇಂದ್ರಕ್ಕೆ ಒಂದು ರೂಪಾಯಿ ನೀಡಿದರೆ, ನಮಗೆ ವಾಪಸ್ ಬರುತ್ತಿರುವುದು 15 ಪೈಸೆಯಷ್ಟೆ. ಬಡ ರಾಜ್ಯಗಳಿಗೆ ನೆರವು ನೀಡಬೇಕು ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಅದಕ್ಕೆಂದು ಕರ್ನಾಟಕದ ಹಿತಾಸಕ್ತಿಯನ್ನು ಬಲಿಕೊಡಲಾಗದು. ಉತ್ತಮವಾಗಿ ಕಾರ್ಯನಿರ್ವಹಿಸಿ, ತೆರಿಗೆ ಸಂಗ್ರಹದಲ್ಲಿ ಗುರಿ ಮುಟ್ಟಿರುವ ಕರ್ನಾಟಕದಂತಹ ರಾಜ್ಯಗಳಿಗೆ ನಷ್ಟವಾಗುವುದನ್ನು ತಡೆಯಿರಿ' ಎಂದು ಅವರು ಒತ್ತಾಯಿಸಿದರು.

'15ನೇ ಹಣಕಾಸು ಆಯೋಗವು ಕೇಂದ್ರದ ತೆರಿಗೆ ಆದಾಯದಲ್ಲಿ ಕರ್ನಾಟಕದ ಪಾಲನ್ನು ಶೇ 4.713ರಿಂದ ಶೇ 3.647ಕ್ಕೆ ಇಳಿಕೆ ಮಾಡಿತ್ತು. ಇದರಿಂದ ಐದು ವರ್ಷಗಳಲ್ಲಿ ರಾಜ್ಯಕ್ಕೆ ಸುಮಾರು ₹80,000 ಕೋಟಿ ನಷ್ಟವಾಗಿದೆ. ಈ ಅನ್ಯಾಯವನ್ನು ಸರಿಪಡಿಸಬೇಕು. ತೆರಿಗೆ ಪಾಲು ನಿರ್ಧರಿಸುವಲ್ಲಿ 15ನೇ ಹಣಕಾಸು ಆಯೋಗವು ಪರಿಗಣಿಸಿದ್ದ ಮಾನದಂಡಗಳನ್ನು ಪರಿಷ್ಕರಿಸಬೇಕು' ಎಂದು ಕೋರಿದರು.

5ನೇ ಪುಟ ನೋಡಿ

ಸೆಸ್‌ಗೆ ಮಿತಿ ಹಾಕಿ: ರಾಜ್ಯದ ಒತ್ತಾಯ

1. ಕೇಂದ್ರ ಸರ್ಕಾರದ ತೆರಿಗೆ ಆದಾಯದಲ್ಲಿನ ರಾಜ್ಯಗಳ ಪಾಲು ಈಗ ಶೇ 41ರಷ್ಟು ಇದೆ. ಅದನ್ನು ಶೇ 50ಕ್ಕೆ ಏರಿಕೆ ಮಾಡಬೇಕು
2. ಸೆಸ್ ಮತ್ತು ಸರ್‌ಚಾರ್ಜ್‌ನ ಪ್ರಮಾಣವು ಕೇಂದ್ರದ ಒಟ್ಟು ತೆರಿಗೆ ಆದಾಯದ ಶೇ 5ರಷ್ಟನ್ನು ಮೀರಬಾರದು. ಶೇ 5ರಷ್ಟನ್ನು ಮೀರಿದ ಮೊತ್ತವು ರಾಜ್ಯಗಳ ಬಾಬ್ತಿಗೆ ಜಮೆಯಾಗುವಂತೆ ಕಾನೂನು ತಿದ್ದುಪಡಿ ಮಾಡಬೇಕು
3. ಕೇಂದ್ರ ಸರ್ಕಾರದ ಎಲ್ಲ ತೆರಿಗೆಯೇತರ ಆದಾಯವನ್ನೂ ರಾಜ್ಯಗಳ ಬಾಬ್ತಿನ ವ್ಯಾಪ್ತಿಗೆ ತರಲು ಸಂವಿಧಾನಕ್ಕೆ ತಿದ್ದುಪಡಿ ತರಬೇಕು
4. ಬೆಂಗಳೂರಿನ ಹೂಡಿಕೆಗೆ ಐದು ವರ್ಷಗಳಲ್ಲಿ ₹55,586 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ. ಇದರಲ್ಲಿ ಕೇಂದ್ರವು ₹27,793 ಕೋಟಿ ಅನುದಾನ ನೀಡಬೇಕು. ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ರಾಜ್ಯವು ₹25,000 ಕೋಟಿ ವೆಚ್ಚ ಮಾಡಲಿದ್ದು, ಕೇಂದ್ರವೂ ಅಷ್ಟೇ ಮೊತ್ತದ ಅನುದಾನ ನೀಡಬೇಕು. ಪಶ್ಚಿಮ ಘಟ್ಟದಲ್ಲಿ ವಿಕೋಪ ನಿರ್ವಹಣೆ ಮತ್ತು ಪುನರ್ವಸತಿಗೆ ₹10,000 ಕೋಟಿ ಸೇರಿ ಒಟ್ಟು ₹62,793 ಕೋಟಿ ಅನುದಾನ ನೀಡಬೇಕು

ನಮ್ಮ ವ್ಯಾಪ್ತಿಯದ್ದಲ್ಲ: ಆಯೋಗ

1. ಕರ್ನಾಟಕವೂ ಸೇರಿ ಈಗ ಐದು ರಾಜ್ಯಗಳ ಜತೆಗಷ್ಟೇ ಸಮಾಲೋಚನೆ ನಡೆದಿದೆ. ಎಲ್ಲ ರಾಜ್ಯಗಳ ಅಭಿಪ್ರಾಯ ಮತ್ತು ದತ್ತಾಂಶಗಳ ಆಧಾರದಲ್ಲಿ ಇದನ್ನು ಪರಿಶೀಲಿಸುತ್ತೇವೆ
2. ಸೆಸ್ ಮತ್ತು ಸರ್‌ಚಾರ್ಜ್‌ಗೆ ಸಂಬಂಧಿಸಿದಂತೆ ಈವರೆಗೆ ಯಾವ ಆಯೋಗವೂ ಶಿಫಾರಸು ಮಾಡಿಲ್ಲ. ಅಂತಹ ಶಿಫಾರಸಿಗೆ ಅವಕಾಶವಿದ್ದಂತಿಲ್ಲ
3. ತೆರಿಗೆಯೇತರ ಆದಾಯವನ್ನು ರಾಜ್ಯಗಳ ತೆರಿಗೆ ಬಾಬ್ತಿನ ವ್ಯಾಪ್ತಿಗೆ ತರುವ ವಿಚಾರ ಕೇಂದ್ರ ಸರ್ಕಾರದ ವಿವೇಚನೆಗೆ ಬಿಟ್ಟದ್ದು
4. ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿ ಮತ್ತು ಪ್ರದೇಶವಾರು ಅಭಿವೃದ್ಧಿಗೆ ರಾಜ್ಯ ಸರ್ಕಾರ ಇಟ್ಟಿರುವ ಅನುದಾನ ಬೇಡಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗುತ್ತದೆ. ಅದನ್ನು ಪರಿಗಣಿಸಲಾಗುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಈಗಲೇ ಹೇಳಲಾಗದು. ಅನುದಾನಕ್ಕೆ ಶಿಫಾರಸು ಮಾಡಿದರೂ ಯಾವ ಬಾಬ್ತಿನಲ್ಲಿ ಅದನ್ನು ಕೊಡಬೇಕು ಎಂಬುದನ್ನು ಪರಿಶೀಲಿಸಬೇಕಾಗುತ್ತದೆ

16ನೇ ಹಣಕಾಸು ಆಯೋಗವು ನಮ್ಮ ಮನವಿಯನ್ನು ಪರಿಗಣಿಸಿ, ನಮಗಾಗಿರುವ ಅನ್ಯಾಯವನ್ನು ಸರಿಪಡಿಸುತ್ತದೆ ಎಂಬ ನಿರೀಕ್ಷೆ ಇದೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ರಾಜ್ಯ ಸರ್ಕಾರ ನೀಡಿದ ದತ್ತಾಂಶ ಮತ್ತು ವಿವರಣೆ ಗಮನ ಸೆಳೆಯುವಂತೆ ಇತ್ತು. ಈ ಬೇಡಿಕೆಗಳನ್ನು ಪರಿಗಣಿಸುವ ಬಗ್ಗೆ ಪರಿಶೀಲನೆ ನಡೆಸುತ್ತೇವೆ
ಅರವಿಂದ್ ಪನಗಡಿಯಾ, ಅಧ್ಯಕ್ಷ, 16ನೇ ಹಣಕಾಸು ಆಯೋಗ

ಉತ್ಸವ...ಉತ್ಸಾಹ

ಬೆಂಗಳೂರಿನ ಸೇಂಟ್ ಮೇರೀಸ್ ಬೆಸಿಲಿಕಾ ಚರ್ಚ್‌ನಲ್ಲಿ ವಾರ್ಷಿಕ ಉತ್ಸವದ ಅಂಗವಾಗಿ ಗುರುವಾರ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಕ್ತರು ಸುರಿವ ಮಳೆಯಲ್ಲೂ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಆದಾಯ ಮೀರಿ ಆಸ್ತಿ ಗಳಿಕೆ ಆರೋಪ: ಸಿಬಿಐಗೆ ಹಿನ್ನಡೆ

ಡಿಕೆಶಿ ವಿರುದ್ಧದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ಮೀರಿದ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಈ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ಹಿಂಪಡೆದಿದ್ದ ಈಗಿನ ಕಾಂಗ್ರೆಸ್ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಸಿಬಿಐ ತನಿಖೆ ಹಿಂಪಡೆದ ಆದೇಶವನ್ನು ಪ್ರಶ್ನಿಸಿ ಸಿಬಿಐ ಹಾಗೂ ಯತ್ನಾಳ್ ಸಲ್ಲಿಸಿದ್ದ ಎರಡು ಪ್ರತ್ಯೇಕ ರಿಟ್ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಹಾಗೂ ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ಪ್ರಕಟಿಸಿತು.

'ಸಿಬಿಐ ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತದೆ. ಅರ್ಜಿಯಲ್ಲಿ ದೆಹಲಿ ವಿಶೇಷ ಪೊಲೀಸ್ ಕಾಯ್ದೆ-1946 ಮತ್ತು ಅಕ್ರಮ ಹಣ ವರ್ಗಾವಣೆ ಕಾಯ್ದೆ-2002ರ ಅನ್ವಯ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಂವಿಧಾನಿಕ ಅಧಿಕಾರದ ಕುರಿತ ನಿಬಂಧನೆಗಳಿಗೆ ಸಂಬಂಧಿಸಿದ ವಿಚಾರಗಳು ಇಲ್ಲಿ ಉದ್ಭವವಾಗಿವೆ. ಅರ್ಜಿಯಲ್ಲಿನ ಎಲ್ಲ ಪಕ್ಷಗಾರರ ವಾದ ಮತ್ತು ಕಾನೂನಿನ ನಿಬಂಧನೆಗಳನ್ನು ಸೂಕ್ಷ್ಮವಾಗಿ ಆಲಿಸಿದಾಗ ಇದು ಮನದಟ್ಟಾಗಿದೆ' ಎಂದು ನ್ಯಾಯಪೀಠ ಹೇಳಿದೆ.

5ನೇ ಪುಟ ನೋಡಿ

ಸಿಎಂ ಪ್ರಕರಣ: ನಾಳೆಗೆ ವಿಚಾರಣೆ ಮುಂದೂಡಿಕೆ

'ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಖಾಸಗಿ ದೂರಿಗೆ ಸಂಬಂಧಿಸಿದ ವಿಚಾರಣೆಯನ್ನು ಮುಂದೂಡಬೇಕು ಮತ್ತು ಯಾವುದೇ ಆತುರದ ಕ್ರಮ ಕೈಗೊಳ್ಳಬಾರದು' ಎಂಬ ಈ ಹಿಂದಿನ ಆದೇಶವನ್ನು ಹೈಕೋರ್ಟ್ ಇದೇ 31ರವರೆಗೆ ವಿಸ್ತರಿಸಿದೆ.

ಪ್ರಕರಣದ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶವನ್ನು ಪ್ರಶ್ನಿಸಿ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ನಾನು ಸಾಯುವವರೆಗೂ ನನ್ನ ಸ್ನೇಹಿತರು ತೊಂದರೆ ಕೊಡುತ್ತಲೇ ಇರುತ್ತಾರೆ. ಅಂಥವುಗಳನ್ನು ಎದುರಿಸಲು ಸಿದ್ಧನಿದ್ದೇನೆ
ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಗೌತಮ್ ಅದಾನಿ ಅಗ್ರ ಸಿರಿವಂತ

ಮುಂಬೈ (ಪಿಟಿಐ): ಹುರೂನ್ ಇಂಡಿಯಾ ಗುರುವಾರ ಬಿಡುಗಡೆ ಮಾಡಿರುವ 2024ರ ಭಾರತದ ಶ್ರೀಮಂತರ ಪಟ್ಟಿಯಲ್ಲಿ ಉದ್ಯಮಿ ಮುಕೇಶ್ ಅಂಬಾನಿ ಅವರನ್ನು ಹಿಂದಿಕ್ಕಿ, ಉದ್ಯಮಿ ಗೌತಮ್ ಅದಾನಿ ಅಗ್ರಸ್ಥಾನಕ್ಕೇರಿದ್ದಾರೆ. ಅದಾನಿ ಅವರ ಒಟ್ಟು ಸಂಪತ್ತಿನ ಮೌಲ್ಯ ₹11.6 ಲಕ್ಷ ಕೋಟಿ ದಾಟಿದೆ.

ಒಂದೇ ವರ್ಷದ ಅವಧಿಯಲ್ಲಿ ದೇಶದ ಶತಕೋಟ್ಯಧಿಪತಿಗಳ ಸಂಖ್ಯೆ 334ಕ್ಕೆ ಮುಟ್ಟಿದೆ. ಇವರ ಒಟ್ಟು ಸಂಪತ್ತು ₹159 ಲಕ್ಷ ಕೋಟಿಯಾಗಿದ್ದು, ಇದು ದೇಶದ ಜಿಡಿಪಿ ಗಾತ್ರದ ಅರ್ಧಕ್ಕಿಂತಲೂ ಹೆಚ್ಚಿದೆ. ಭಾರತದಲ್ಲಿ 2023ರಲ್ಲಿ ಐದು ದಿನಕ್ಕೆ ಒಬ್ಬರು ಶತಕೋಟ್ಯಧಿಪತಿಯಾಗಿ ಹೊರಹೊಮ್ಮಿದ್ದಾರೆ ಎಂದು ವರದಿ ಬಹಿರಂಗಪಡಿಸಿದೆ.

ಷೇರು ಮಾರುಕಟ್ಟೆಯ ವಾಸ್ತವಿಕ ಬೆಲೆಗಿಂತ ಕೃತಕ ಬೆಲೆಯಲ್ಲಿ ಅದಾನಿ ಸಮೂಹದ ಷೇರುಗಳು ಮಾರಾಟವಾಗುತ್ತಿವೆ ಎಂದು ಹಿಂಡೆನ್‌ಬರ್ಗ್ ರಿಸರ್ಚ್ 2023ರ ಜನವರಿಯಲ್ಲಿ ವರದಿ ಪ್ರಕಟಿಸಿತ್ತು. ಇದರಿಂದ ಅದಾನಿ ಸಂಪತ್ತು ₹4.74 ಲಕ್ಷ ಕೋಟಿ (ಶೇ 57ರಷ್ಟು) ಕರಗಿತ್ತು. ಆ ವೇಳೆ ₹8.08 ಲಕ್ಷ ಕೋಟಿ ಸಂಪತ್ತು ಹೊಂದಿದ್ದ ಮುಕೇಶ್ ಅಂಬಾನಿ ಮೊದಲ ಸ್ಥಾನಕ್ಕೇರಿದ್ದರು. ಈ ವರ್ಷ ಎರಡನೇ ಸ್ಥಾನಕ್ಕೆ ಕುಸಿದಿರುವ ಮುಕೇಶ್ ಅಂಬಾನಿ ಅವರ ಸಂಪತ್ತಿನಲ್ಲಿ ಶೇ 25ರಷ್ಟು ಹೆಚ್ಚಳವಾಗಿದೆ. ಒಟ್ಟು ₹10.14 ಲಕ್ಷ ಕೋಟಿ ಸಂಪತ್ತು ಹೊಂದಿದ್ದಾರೆ.

ರಾಜ್ಯಸಭೆ: ಇಬ್ಬರ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವೈಎಸ್‌ಆರ್ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯರಾದ ಎಂ. ವೆಂಕಟರಮಣ ರಾವ್ ಮತ್ತು ಬೀದಾ ಮಸ್ತಾನ್ ರಾವ್ ಯಾದವ್ ಅವರು ಗುರುವಾರ ತಮ್ಮ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ. ಅವರು ಎನ್. ಚಂದ್ರಬಾಬು ನಾಯ್ಡು ನೇತೃತ್ವದ ಟಿಡಿಪಿ ಸೇರುವ ಸಾಧ್ಯತೆ ಇದೆ.

ರಾವ್ ಮತ್ತು ಯಾದವ್ ಅವರು ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರಿಗೆ ರಾಜೀನಾಮೆ ಪತ್ರಗಳನ್ನು ಸಲ್ಲಿಸಿದರು. ರಾಜೀನಾಮೆಗಳನ್ನು ಸಭಾಪತಿ ಅಂಗೀಕರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಮೂಲಕ ರಾಜ್ಯಸಭೆಯಲ್ಲಿ ವೈಎಸ್‌ಆರ್ ಕಾಂಗ್ರೆಸ್ ಸದಸ್ಯರ ಸಂಖ್ಯೆ 9ಕ್ಕೆ ಇಳಿದಿದೆ. ಸಂಖ್ಯಾಬಲ ಹೊಂದಿರುವ ಟಿಡಿಪಿ–ಬಿಜೆಪಿ–ಜನಸೇನಾ ಪಕ್ಷಗಳ ಒಕ್ಕೂಟವು ಈ ಎರಡೂ ಸ್ಥಾನಗಳನ್ನು ಉಪ ಚುನಾವಣೆಯಲ್ಲಿ ಗೆಲ್ಲುವ ನಿರೀಕ್ಷೆಯಿದೆ.

ಎರಡೂ ಸ್ಥಾನಗಳನ್ನು ಟಿಡಿಪಿ ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತದೆಯೋ ಅಥವಾ ಒಂದನ್ನು ಮೈತ್ರಿಕೂಟಕ್ಕೆ ಬಿಟ್ಟುಕೊಡುತ್ತದೆಯೋ ಎಂಬುದು ಇನ್ನೂ ನಿರ್ಧಾರವಾಗಿಲ್ಲ.

ಮೂರು ಬಾರಿ ಶಾಸಕರಾಗಿರುವ ರಾವ್ ಅವರು 2007ರಿಂದ 2014ರಲ್ಲಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2020ರಲ್ಲಿ ರಾಜ್ಯಸಭೆ ಸದಸ್ಯರಾಗಿ ಆಯ್ಕೆಯಾದ ಅವರ ಅಧಿಕಾರಾವಧಿ 2026ರ ಜೂನ್‌ವರೆಗೆ ಇತ್ತು.

ಕೋಳ ತೊಡಿಸಿಲ್ಲ: ಸ್ಪಷ್ಟನೆ • ಧರಿಸಿದ್ದು ಕೂಲಿಂಗ್ ಗ್ಲಾಸ್ ಅಲ್ಲ ಪವರ್ ಗ್ಲಾಸ್

ಬಳ್ಳಾರಿ ಜೈಲು ಸೇರಿದ ದರ್ಶನ್

ಪ್ರಜಾವಾಣಿ ವಾರ್ತೆ

ಬಳ್ಳಾರಿ/ಬೆಳಗಾವಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ಅವರನ್ನು ಗುರುವಾರ ಬೆಳಿಗ್ಗೆ ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಯಿತು. ಅವರಿಗೆ ವಿಚಾರಣಾಧೀನ ಕೈದಿ ಸಂಖ್ಯೆ 511 ನೀಡಲಾಗಿದೆ.

ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ ನಸುಕಿನ 4.30ಕ್ಕೆ ಅವರನ್ನು ಸ್ಥಳಾಂತರಿಸುವ ಪ್ರಕ್ರಿಯೆ ಆರಂಭವಾಯಿತು. ಚಿಕ್ಕಬಳ್ಳಾಪುರ, ಅನಂತಪುರ ಮಾರ್ಗದ ಮೂಲಕ ಸಾಗಿ, ಸರಿಯಾಗಿ 9.55ಕ್ಕೆ ಪೊಲೀಸರು ದರ್ಶನ್ ಅವರನ್ನು ಬಳ್ಳಾರಿ ಜೈಲಿಗೆ ಕರೆತಂದರು. ಮಾರ್ಗದಲ್ಲಿ ಅಲ್ಲಲ್ಲಿ ಅಭಿಮಾನಿಗಳು ದರ್ಶನ್ ಪರ ಜೈಕಾರ ಹಾಕಿದರು.

ಕಿಟಕಿಗಳನ್ನು ಪರದೆಗಳಿಂದ ಮುಚ್ಚಲಾಗಿದ್ದ ಟೆಂಪೊ ಟ್ರಾವೆಲರ್‌ನಲ್ಲಿ, ಬಿಗಿ ಭದ್ರತೆಯೊಂದಿಗೆ ಕರೆತರಲಾಯಿತು. ಆರೋಗ್ಯ ತಪಾಸಣೆಗೆ ಒಳಪಡಿಸಿದ ಬಳಿಕ ಕಾನೂನು ಪ್ರಕ್ರಿಯೆ ನಡೆದವು. ನಂತರ ವಿಶೇಷ ಭದ್ರತಾ ಕೊಠಡಿಯಲ್ಲಿ ಅವರನ್ನು ಪ್ರತ್ಯೇಕವಾಗಿ ಇರಿಸಲಾಯಿತು.

'ಜೈಲಿನಲ್ಲಿ ದರ್ಶನ್‌ಗೆ ಒಂದು ತಟ್ಟೆ, ಲೋಟ, ಚೊಂಬು, ನೆಲಹಾಸು ಮತ್ತು ಹೊದಿಕೆ ಹೊರತುಪಡಿಸಿದರೆ ಬೇರೇನನ್ನೂ ನೀಡಿಲ್ಲ' ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದರು. ಕೈದಿಗಳನ್ನು ನೋಡಲು ಅವರ ಸಂಬಂಧಿಕರಿಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಆಹಾರ ನೀಡಲು ನಿರಾಕರಿಸಲಾಗಿತ್ತು.

ಜೈಲಿನಲ್ಲಿ ಬೆಳಿಗ್ಗೆ ನೀಡಲಾದ ಉಪಾಹಾರವನ್ನು ದರ್ಶನ್ ನಿರಾಕರಿಸಿದರು ಎನ್ನಲಾಗಿದೆ. ಕೊಠಡಿಯಲ್ಲಿ ಕೆಲಹೊತ್ತು ಮಲಗಿದ್ದ ಅವರು ಬಳಿಕ, ಎದ್ದು ಕುಳಿತು ಯೋಚನಾಮಗ್ನರಾಗಿದ್ದರು ಎಂದು ಮೂಲಗಳು ತಿಳಿಸಿದವು.

7ನೇ ಪುಟ ನೋಡಿ

ಬಳ್ಳಾರಿ ಕೇಂದ್ರ ಕಾರಾಗೃಹಕ್ಕೆ ಪೊಲೀಸರು ನಟ ದರ್ಶನ್ ಅವರನ್ನು ಕರೆತಂದ ಕ್ಷಣ

ನಟನ ನಿಗಾವಣೆಗೆ ಜ್ಞಾಪನಾ ಪತ್ರ

ಬೆಳಗಾವಿ: ಬಳ್ಳಾರಿ ಜೈಲಿನಲ್ಲಿ ದರ್ಶನ್ ಅವರನ್ನು ಹೇಗೆ ನೋಡಿಕೊಳ್ಳಬೇಕು ಎಂಬ ಬಗ್ಗೆ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಉತ್ತರವಲಯದ ಡಿಐಜಿ ಟಿ.ಪಿ.ಶೇಷ ಅವರು ಜೈಲಿನ ಅಧೀಕ್ಷಕರಿಗೆ ಜ್ಞಾಪನಾ ಪತ್ರ ಬರೆದಿದ್ದಾರೆ.

'ದರ್ಶನ್ ಅವರನ್ನು ಪ್ರತ್ಯೇಕ ಕೊಠಡಿಯಲ್ಲಿ ಇರಿಸಬೇಕು. ಆ ಕೊಠಡಿಗೆ 24x7 ಸಿ.ಸಿ.ಟಿ.ವಿ ಕ್ಯಾಮೆರಾ ಕಣ್ಗಾವಲು ಇರಿಸಬೇಕು. ನಿತ್ಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸಂಗ್ರಹಿಸಬೇಕು' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

'ದರ್ಶನ್ ಇರುವ ಸೆಲ್‌ನ ಕರ್ತವ್ಯಕ್ಕೆ ಪ್ರತ್ಯೇಕವಾಗಿ ಒಬ್ಬ ಮುಖ್ಯವೀಕ್ಷಕ ಅಧಿಕಾರಿ ನಿಯೋಜಿಸಿ, ನಿತ್ಯ ಜೈಲರ್ ಭೇಟಿ ನೀಡಿ ಭದ್ರತೆ ಪರಿಶೀಲಿಸಬೇಕು. ಕಾರಾಗೃಹದ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ಬೀಗ ಹಾಕಬೇಕು ಮತ್ತು ತೆರೆಯಬೇಕು. ಕರ್ತವ್ಯ ನಿರ್ವಹಿಸುವ ಮುನ್ನ ಪ್ರತಿನಿತ್ಯ ದರ್ಶನ್ ಸೆಲ್ ತಪಾಸಣೆ ಮಾಡಬೇಕು. ಸೆಲ್‌ಗೆ ನಿಯೋಜಿಸುವ ಸಿಬ್ಬಂದಿ 'ಬಾಡಿವಾರ್ನ್' ಕ್ಯಾಮೆರಾ ಧರಿಸಿರಬೇಕು' ಎಂದೂ ತಿಳಿಸಿದ್ದಾರೆ.

7ನೇ ಪುಟ ನೋಡಿ

ಮಾರ್ಗ ದಿಢೀರ್ ಬದಲು

ಬೆಂಗಳೂರು: ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನದಲ್ಲಿದ್ದ ಚಿತ್ರನಟ ದರ್ಶನ್ ಅವರನ್ನು ನಗರ ಪೊಲೀಸರು ಗುರುವಾರ ನಸುಕಿನ ಜಾವ ದಿಢೀರ್ ಮಾರ್ಗ ಬದಲಿಸಿ ಆಂಧ್ರಪ್ರದೇಶ ಮಾರ್ಗವಾಗಿ ಬಳ್ಳಾರಿಗೆ ಕರೆದೊಯ್ದರು.

ಆರೋಪಿಗಳನ್ನು ಬೇರೆ ಬೇರೆ ಕಾರಾಗೃಹಗಳಿಗೆ ಸ್ಥಳಾಂತರಿಸುವ ಜವಾಬ್ದಾರಿಯನ್ನು ಪೀಣ್ಯ ಹಾಗೂ ಹಲಸೂರು ಉಪ ವಿಭಾಗಗಳ ಎಸಿಪಿಗಳಿಗೆ ವಹಿಸಲಾಗಿತ್ತು. ಮುಂಜಾನೆ 4.30ರ ಸುಮಾರಿಗೆ ಪ್ರಯಾಣ ಆರಂಭವಾಯಿತು.

7ನೇ ಪುಟ ನೋಡಿ

'ಅನುವಾದ ಮಾಡಿದ್ದು ಭಾಷಾಂತರಕಾರರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿಗಾಗಿ ನಡೆದ ಪೂರ್ವಭಾವಿ ಪರೀಕ್ಷೆಯ ಪ್ರಶ್ನೆಗಳ ಕನ್ನಡ ಅನುವಾದ ಮಾಡಿದ್ದು ಗೂಗಲ್ ಅಥವಾ ಎಐ ಅಲ್ಲ. ಭಾಷಾಂತರ ಇಲಾಖೆಯ ಭಾಷಾಂತರಕಾರರು ಮಾಡಿದ್ದು' ಎಂದು ಕರ್ನಾಟಕ ಲೋಕ ಸೇವಾ ಆಯೋಗ ಹೇಳಿದೆ.

ಭಾಷಾಂತರವು ಆಯೋಗದ ಕಚೇರಿಯಲ್ಲೇ ನಡೆದಿದೆ. ಗೂಗಲ್ ಅಥವಾ ಕೃತಕ ಬುದ್ಧಿಮತ್ತೆ ಬಳಸಿಲ್ಲ. ಇಂತಹ ತಂತ್ರಾಂಶಗಳನ್ನು ಪ್ರಶ್ನೆಗಳ ಭಾಷಾಂತರದಲ್ಲಿ ಬಳಸಲು ಕೆಪಿಎಸ್‌ಸಿ ನಿಯಮಗಳಲ್ಲೂ ಅವಕಾಶವಿಲ್ಲ ಎಂದು ಕಾರ್ಯದರ್ಶಿ ರಾಕೇಶ್‌ಕುಮಾರ್ ಹೇಳಿದ್ದಾರೆ.

ಆಕ್ಷೇಪಣೆಗೆ ಸೆ.4ರವರೆಗೆ ಅವಕಾಶ: ಪೂರ್ವಭಾವಿ ಪರೀಕ್ಷೆಯ ಕೀ ಉತ್ತರಗಳನ್ನು ಕೆಪಿಎಸ್‌ಸಿ ಬಿಡುಗಡೆ ಮಾಡಿದ್ದು, ಆಕ್ಷೇಪಣೆ ಸಲ್ಲಿಸಲು ಸೆ.4ರವರೆಗೆ ಅವಕಾಶ ನೀಡಿದೆ. ಆಕ್ಷೇಪಣೆಗಳನ್ನು ಅಂದು ಸಂಜೆ 5.30ರ ಒಳಗೆ ಆಯೋಗಕ್ಕೆ ಸಲ್ಲಿಸಲು ಸೂಚಿಸಿದೆ.

ಪ್ರತಿ ಪ್ರಶ್ನೆಗೆ ₹50 ಶುಲ್ಕ: ಆಕ್ಷೇಪಣೆ ಸಲ್ಲಿಸಲು ಪ್ರತಿ ಪ್ರಶ್ನೆಗೆ ₹50 ಶುಲ್ಕ ನಿಗದಿ ಮಾಡಿದ್ದು, ಐಪಿಒ ಅಥವಾ ಡಿಡಿ ಮೂಲಕ ಆಯೋಗದ ಕಾರ್ಯದರ್ಶಿ ಹೆಸರಿಗೆ ಸಂದಾಯ ಮಾಡಬೇಕು ಎಂದು ಸೂಚಿಸಲಾಗಿದೆ.

'ಆಸ್ಪತ್ರೆಯಿಂದ ಮೂರು ಕರೆ, ಭಿನ್ನ ಮಾಹಿತಿ..'

ಕೋಲ್ಕತ್ತ (ಪಿಟಿಐ): ಅತ್ಯಾಚಾರ ಮತ್ತು ಹತ್ಯೆಗೀಡಾದ ವೈದ್ಯ ವಿದ್ಯಾರ್ಥಿನಿಯ ತಂದೆ–ತಾಯಿಗೆ, ಆರ್‌.ಜಿ. ಕರ್ ವೈದ್ಯಕೀಯ ಕಾಲೇಜಿನ ಸಿಬ್ಬಂದಿ ಆಗಸ್ಟ್ 9ರ ಬೆಳಿಗ್ಗೆ ಮಾಡಿದ್ದು ಎನ್ನಲಾದ ದೂರವಾಣಿ ಕರೆಯ ವಿವರಗಳು ಗುರುವಾರ ಬಹಿರಂಗವಾಗಿವೆ. 13

ಚಿನಕುರುಳಿ

ಪ್ರಕಾಶ್ ಶೆಟ್ಟಿ

ನೀಟ್ ಪಿಜಿ: ಅವ್ಯವಹಾರದ ಶಂಕೆ, ತನಿಖೆಗೆ ವಿದ್ಯಾರ್ಥಿ–ಪೋಷಕರ ಒತ್ತಾಯ

ಅಂಕ ಪ್ರಕಟಿಸದೇ ಪರೀಕ್ಷೆ ಫಲಿತಾಂಶ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಅಂಕಗಳನ್ನು ಬಹಿರಂಗಪಡಿಸದೆ ಕೇವಲ ಪರ್ಸೆಂಟೈಲ್ ಆಧಾರದಲ್ಲಿ ನೀಟ್–ಪಿಜಿ 2024ರ ಫಲಿತಾಂಶ ಪ್ರಕಟಿಸಿದ ಕೇಂದ್ರ ಆರೋಗ್ಯ ಸಚಿವಾಲಯದ ಅಧೀನದ ವೈದ್ಯಕೀಯ ವಿಜ್ಞಾನಗಳ ರಾಷ್ಟ್ರೀಯ ಪರೀಕ್ಷಾ ಮಂಡಳಿ (ಎನ್‌ಬಿಇಎಂಎಸ್) ನಡೆಗೆ ಆಕ್ಷೇಪ ವ್ಯಕ್ತವಾಗಿದೆ.

ಎಂಡಿ, ಎಂಎಸ್, ಡಿಎನ್‌ಬಿ ಸೇರಿದಂತೆ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಆ.11ರಂದು ದೇಶದ 170 ನಗರಗಳ 416 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. 2.28 ಲಕ್ಷ ಎಂಬಿಬಿಎಸ್ ಪದವೀಧರರು ಪರೀಕ್ಷೆ ಬರೆದಿದ್ದರು. ರಾಜ್ಯದ 15 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಜರಾಗಿದ್ದರು.

'200 ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೆ ನಾಲ್ಕು ಅಂಕಗಳಂತೆ ಒಟ್ಟು 800 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತದೆ. ವೈದ್ಯಕೀಯ ಪರೀಕ್ಷೆಗಳ ಇತಿಹಾಸದಲ್ಲಿ ಇದೇ ಮೊದಲ ಬಾರಿ ವಿದ್ಯಾರ್ಥಿಗಳು ಗಳಿಸಿದ ಅಂಕಗಳನ್ನು ಪ್ರಕಟಿಸದೆ ಅರ್ಹತಾ ಪಟ್ಟಿಯನ್ನಷ್ಟೇ ನೀಡಲಾಗಿದೆ. ಇದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ನೀಟ್–ಯುಜಿ ಪರೀಕ್ಷೆಯಲ್ಲಿ ಮಾಡಿದ ಎಡವಟ್ಟು, ಅನ್ಯಾಯಕ್ಕಿಂತಲೂ ಘೋರ. ಉತ್ತರ ಭಾರತದ ಕೆಲ ರಾಜ್ಯಗಳ ಲಾಬಿಗೆ ಎನ್‌ಬಿಇಎಂಎಸ್ ಮಣಿದಿದೆ. ಸಾಕಷ್ಟು ಅವ್ಯವಹಾರ ನಡೆದಿರುವ ಶಂಕೆಯನ್ನು ವಿದ್ಯಾರ್ಥಿಗಳು ವ್ಯಕ್ತಪಡಿಸಿದ್ದಾರೆ. ಈ ಕುರಿತು ಉನ್ನತ ಮಟ್ಟದ ತನಿಖೆ ನಡೆಸಬೇಕು' ಎನ್ನುತ್ತಾರೆ ಪೋಷಕರಾದ ಬೆಂಗಳೂರಿನ ಲೋಕೇಶ್.

ಒಂದೇ ದಿನ ಎರಡು ಪಾಳಿ ಪರೀಕ್ಷೆ: ಮಂಡಳಿ ನಡೆಸಿದ ಪರೀಕ್ಷಾ ವಿಧಾನಕ್ಕೂ ಆಕ್ಷೇಪಣೆಗಳು ವ್ಯಕ್ತವಾಗಿವೆ. ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳನ್ನು ಎರಡು ಭಾಗ ಮಾಡಿ ಶೇ 50ರಷ್ಟು ವಿದ್ಯಾರ್ಥಿಗಳಿಗೆ ಬೆಳಗಿನ ಅವಧಿ, ಉಳಿದ ಶೇ 50ರಷ್ಟು ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ನಂತರ ಪರೀಕ್ಷೆ ನಡೆಸಲಾಗಿತ್ತು. ಒಂದೇ ದಿನ ನಡೆಸಿದ್ದ ಎರಡು ಪರೀಕ್ಷೆಗಳಿಗೆ ಬೇರೆ ಬೇರೆ ಪ್ರಶ್ನೆಪತ್ರಿಕೆ ಸಿದ್ಧಪಡಿಸಲಾಗಿತ್ತು.

'ಬೆಳಿಗ್ಗೆ 9ರಿಂದ 12.30ರವರೆಗೆ ನಡೆದಿದ್ದ ಪರೀಕ್ಷೆಯಲ್ಲಿ ಪ್ರಶ್ನೆಗಳು ಸುಲಭವಾಗಿದ್ದವು. ಮಧ್ಯಾಹ್ನ 3.30ರಿಂದ ಸಂಜೆ 7ರವರೆಗೆ ನಡೆಸಿದ್ದ ಪರೀಕ್ಷೆಯ ಪ್ರಶ್ನೆಗಳು ಕಠಿಣವಾಗಿದ್ದವು' ಎಂದು ವಿದ್ಯಾರ್ಥಿ ಡಾ.ಅಶೋಕ್‌ಕುಮಾರ್ ದೂರುತ್ತಾರೆ.

7ನೇ ಪುಟ ನೋಡಿ

ಮುಖ್ಯಾಂಶಗಳು

- ಒಂದೇ ಪರೀಕ್ಷೆಗೆ ಎರಡು ಪಾಳಿ, ಎರಡು ಪ್ರಶ್ನೆಪತ್ರಿಕೆ
- ಪರೀಕ್ಷಾ ಕೇಂದ್ರಗಳ ಹಂಚಿಕೆಯಲ್ಲೂ ಲೋಪ
- ಬೆಳಿಗ್ಗೆ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳೇ ಟಾಪರ್ಸ್

4 ಬಾರಿ ಪರೀಕ್ಷಾ ದಿನಾಂಕ ಬದಲಾವಣೆ

ನೀಟ್–ಪಿಜಿ ಪರೀಕ್ಷೆಯ ದಿನಾಂಕವನ್ನು ನಾಲ್ಕು ಬಾರಿ ಬದಲಾವಣೆ ಮಾಡಲಾಗಿತ್ತು. ಮೊದಲು ಮಾರ್ಚ್ 5ಕ್ಕೆ ನಿಗದಿ ಮಾಡಲಾಗಿತ್ತು. ನಂತರ ಜುಲೈ 7ಕ್ಕೆ ಮುಂದೂಡಲಾಯಿತು.

ಜೂನ್ ಮೊದಲ ವಾರ ಮತ್ತೊಂದು ಪ್ರಕಟಣೆ ಹೊರಡಿಸಿದ ಎನ್‌ಬಿಇಎಂಎಸ್ 14 ದಿನ ಮುಂಚಿತವಾಗಿ ಅಂದರೆ ಜೂನ್ 23ಕ್ಕೆ ಪರೀಕ್ಷೆ ನಿಗದಿ ಮಾಡಿತು. ಆದರೆ, ಜೂನ್ 22ರ ತಡರಾತ್ರಿ ಪ್ರಕಟಣೆ ನೀಡಿ, ಪರೀಕ್ಷೆ ರದ್ದು ಮಾಡಿತ್ತು. ದೂರದ ಕೇಂದ್ರಗಳು, ಹೊರ ರಾಜ್ಯಗಳಿಗೆ ಪರೀಕ್ಷೆ ಬರೆಯಲು ಒಂದು ದಿನ ಮೊದಲೇ ತೆರಳಿದ್ದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸಿದ್ದರು. ಅಂತಿಮವಾಗಿ ಆ.11ರಂದು ಪರೀಕ್ಷೆ ನಡೆಸಲಾಗಿತ್ತು.

371–ಜೆ ಸಮರ್ಪಕ ಅನುಷ್ಠಾನಕ್ಕೆ ಆಗ್ರಹ

ಬೆಂಗಳೂರು: ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸಿರುವ ಸಂವಿಧಾನದ 371–ಜೆ ವಿಧಿಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿ ಅಹಿಂದ ಚಿಂತಕರ ವೇದಿಕೆ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ವೇದಿಕೆಯ ಸೈಬಣ್ಣ ಜಮಾದಾರ ಮಾತನಾಡಿ, 'ಕಲ್ಯಾಣ ಕರ್ನಾಟಕ ಹೊರತುಪಡಿಸಿ ಉಳಿದ 24 ಜಿಲ್ಲೆಗಳಲ್ಲಿ ನೇಮಕಾತಿ ಮತ್ತು ಬಡ್ತಿಯಲ್ಲಿ ಕಲ್ಯಾಣ ಕರ್ನಾಟಕದವರಿಗೆ ಶೇಕಡ 8ರಷ್ಟು ಮೀಸಲಾತಿ ನೀಡಬೇಕು. ಕಲ್ಯಾಣ ಕರ್ನಾಟಕದಲ್ಲಿ ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು' ಎಂದು ಆಗ್ರಹಿಸಿದರು.

'ಕಲ್ಯಾಣ ಕರ್ನಾಟಕ ಭಾಗದ ಖಾಸಗಿ ಕಾರ್ಖಾನೆ, ಕಂಪನಿ ಮತ್ತು ಕೈಗಾರಿಕೆಗಳಲ್ಲಿ ನೇಮಕಾತಿಯಲ್ಲಿ ಶೇ 80ರಷ್ಟು ಮೀಸಲಾತಿಯನ್ನು ಒದಗಿಸಬೇಕು. 371–ಜೆ ವಿಧಿಯಡಿ ಕೇಂದ್ರ ಸರ್ಕಾರದಿಂದ ₹ 3,000 ಕೋಟಿ ಅನುದಾನ ಬಿಡುಗಡೆಗೊಳಿಸಬೇಕು. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅವ್ಯವಹಾರದ ಕುರಿತು ಸಿಬಿಐ ತನಿಖೆ ನಡೆಸಬೇಕು. ಬಡ್ತಿಯಲ್ಲಿ ಈ ಭಾಗದ ನೌಕರರಿಗೆ ಆಗುತ್ತಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸಬೇಕು' ಎಂದು ಒತ್ತಾಯಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-62/1175/2024–25 ದಿನಾಂಕ: 27.08.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ. ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಲಕ್ಷ್ಮಣರಾವ್.ವೈ.ವಿ	ಪೂರ್ವ	ವರ್ತೂರು	ಕಾಚ ಮಾರನಹಳ್ಳಿ	21/2ರ ಪೈಕಿ	0–01	ವ್ಯವಸಾಯ	ವಸತಿ
2					34/1ರ ಪೈಕಿ	0–10		
					ಒಟ್ಟು	0–11		

ಷರಾ: ಈ ಜಮೀನುಗಳಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಡೆಪ್ಯುಟಿ ಇನ್ಸ್ಪೆಕ್ಟರ್ ಜನರಲ್ ಕಚೇರಿ
ಸೆಕ್ಟರ್ ಹೆಡ್ ಕ್ವಾರ್ಟರ್ (ಬೆಂಗಳೂರು), I.T.B. ಪೊಲೀಸ್ ಫೋರ್ಸ್
ಗೃಹ ವ್ಯವಹಾರಗಳ ಸಚಿವಾಲಯ, ಭಾರತ ಸರ್ಕಾರ
ಸೂದ್ರಹಳ್ಳಿ– ಗ್ರಾಮ, ಜಂಗಮಕೋಟೆ, ಅಂಚೆ ಕಚೇರಿ, ಶಿಡ್ಲಘಟ್ಟ ತಾಲ್ಲೂಕು.
ಚಿಕ್ಕಬಳ್ಳಾಪುರ– ಜಿಲ್ಲೆ, ಕರ್ನಾಟಕ, ಪಿನ್–562102

ಹರಾಜು ಸೂಚನೆ

ಸೆಕ್ಟರ್ ಹೆಡ್ ಕ್ವಾರ್ಟರ್ (ಬೆಂಗಳೂರು) ದ ವಾಹನಗಳ ಕೆಳಗಿನ ಖಂಡಿಸಿದ ವಸ್ತುಗಳನ್ನು ದಿನಾಂಕ– 30.08.2024 ರಂದು 10 00 ಗಂಟೆಯಿಂದ ಸೂದ್ರಹಳ್ಳಿ– ಗ್ರಾಮ, ಜಂಗಮಕೋಟೆ– ಅಂಚೆ ಕಛೇರಿ, ಶಿಡ್ಲಘಟ್ಟ ತಾಲ್ಲೂಕು, ಕರ್ನಾಟಕ, ಚಿಕ್ಕಬಳ್ಳಾಪುರದಲ್ಲಿ ಸಾರ್ವಜನಿಕ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು.–562102

1. ಟೈರ್ ಗಾತ್ರ 205/65 R–15– 10 ಸಂಖ್ಯೆಗಳು
2. ಬ್ರಂಟ್ ಆಯಿಲ್– 33.500 ಲೀ
3. ಏರ್ ಫಿಲ್ಟರ್ ಅಸ್ಸಿ– 03 ಸಂ
4. ಎಂಜಿನ್ ಆಯಿಲ್ ಫಿಲ್ಟರ್– 05 ಸಂಖ್ಯೆಗಳು
5. ರಿಯರ್ ಬ್ರೇಕ್ ಶೂ ಅಸ್ಸಿ– 01 ಸಂ
6. ಬ್ಲೇಡ್‌ನೊಂದಿಗೆ ವೈಪರ್ ಆರ್ಮ್ ಅಸಿಸ್ಟ್– 01 ಸಂ

ಎ. ಆಸಕ್ತ ಬಿಡ್ಡಾರರು ಹರಾಜಿನಲ್ಲಿ ಭಾಗವಹಿಸಲು ಸಮಯಕ್ಕೆ ತಲುಪಬೇಕು. 09:30 ಗಂಟೆಗಳ ನಂತರ ಪ್ರವೇಶವನ್ನು ನಿರ್ಬಂಧಿಸಲಾಗುತ್ತದೆ. ಬಿಡ್ಡಾರರು. ರೂ. 1,000/– (ಒಂದು ಸಾವಿರ ರೂಪಾಯಿಗಳು ಮಾತ್ರ) ಹೇಳಲಾದ ಅಂಗಡಿಯ ಹರಾಜಿನಲ್ಲಿ ಭಾಗವಹಿಸಲು ಶ್ರದ್ಧೆಯಿಂದ ಹಣ.

ಬಿ. ಯಶಸ್ವಿ ಬಿಡ್ಡಾರರನ್ನು ಹೊರತುಪಡಿಸಿ. ಎಲ್ಲಾ ಬಿಡ್ಡಾರರ. ಅರ್ನೆಸ್ಟ್ ಹಣವನ್ನು ಹರಾಜು ಮುಗಿದ ತಕ್ಷಣ ಮರುಪಾವತಿಸಲಾಗುತ್ತದೆ.

ಸಿ. ಅತಿ ಹೆಚ್ಚು ಬಿಡ್ ಮಾಡಿದವರು ಬೆಂಗಳೂರಿನಲ್ಲಿ (ಕರ್ನಾಟಕ) ಅನ್ವಯವಾಗುವಂತೆ ಬಿಡ್ ಮತ್ತು ಮಾರಾಟ ತೆರಿಗೆಯ ಪೂರ್ಣ 'ಮೊತ್ತವನ್ನು ಠೇವಣಿ ಮಾಡಬೇಕಾಗುತ್ತದೆ. ಮಾರಾಟ ತೆರಿಗೆ ಕಚೇರಿ ಬೆಂಗಳೂರು (ಕರ್ನಾಟಕ) ನಲ್ಲಿ ಠೇವಣಿ ಇಡಬೇಕು. ಅತಿ ಹೆಚ್ಚು ಬಿಡ್ ಮಾಡಿದವರ ಪರವಾಗಿ ಹರಾಜನ್ನು ಮುಚ್ಚಲಾಗುತ್ತದೆ, ಅವರ ಬಿಡ್ ಅನ್ನು ಸ್ವೀಕರಿಸಲಾಗುತ್ತದೆ 24 ಗಂಟೆಗಳ ಒಳಗೆ ಹರಾಜು ಅಂಗಡಿಯನ್ನು ತೆಗೆದುಕೊಳ್ಳಬೇಕಾಗುತ್ತದೆ.

ಡಿ. ಉಪ ಇನ್ಸ್‌ಪೆಕ್ಟರ್ ಜನರಲ್, ಎಸ್‌ಎಚ್‌ಕ್ಯು (ಬಿಜಿಎಲ್‌ಆರ್), ಐಟಿಬಿ ಪೊಲೀಸರು ಯಾವುದೇ ಕಾರಣವನ್ನು ನೀಡದೆ ಯಾವುದೇ ಸಮಯದಲ್ಲಿ ಹರಾಜನ್ನು ರದ್ದುಗೊಳಿಸುವ ಎಲ್ಲಾ ಹಕ್ಕುಗಳನ್ನು ಹೊಂದಿದ್ದಾರೆ.

ಇ. ಸಂಪರ್ಕ ಸಂಖ್ಯೆಗಳು:– 9406300419, 8979075735

ಕ್ವಾರ್ಟರ್ ಮಾಸ್ಟರ್
CBC 19112/11/0115/2425 ಎಸ್‌ಎಚ್‌ಕ್ಯು (ಬಿಜಿಎಲ್‌ಆರ್), ಐಟಿಬಿ ಪೊಲೀಸರು

ಕನಕಪುರ ಯೋಜನಾ ಪ್ರಾಧಿಕಾರ
ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ,
ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–29762005, 29762006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./ಭೂ.ಉ.ಬ./07/2024–25/1169 ದಿನಾಂಕ : 21–08–2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ, ಈ ಕೆಳಕಂಡ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರೂ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಸರ್ಕಾರದಿಂದ ಅನುಮೋದನೆ ಯಾಗಿರುವ ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
01	ಮೆ॥ ಸಿರಿಗಂಧ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತದ ಪರವಾಗಿ ಶ್ರೀ. ಕರಿಯಪ್ಪ ಟಿ. ಹೆಚ್. (Preseident) ಮತ್ತು ಇತರರು	ಹಾರೋಹಳ್ಳಿ	ಹಾರೋಹಳ್ಳಿ	ಕಗ್ಗಲಹಳ್ಳಿ	54/5	2–04	ಕೈಗಾರಿಕೆ	ವಸತಿ
02					55/1	0–39		
03					60/1	1–15		
04					60/2	1–14		
05					60/3	1–14		
06					61/2	2–32		
07					61/3	2–33.08		
08					62/2	0–19		
09					62/3	0–11		
10					62/5	0–21		
11					62/6	0–11		
12					62/8	0–18		
13					62/9	1–12		
14					62/10	0–11		
15					62/11	0–22.12		
16					62/12	1–24		
17					63/6	0–14		
18					63/7	0–13		
					ಒಟ್ಟು	19–08.04		

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ನಮ್ಮ ಗೃಹ ನಿರ್ಮಾಣ ಸಹಕಾರ ಸಂಘವು ತನ್ನ ಸದಸ್ಯರಿಗೆ ನ್ಯಾಯಯುತ ದರದಲ್ಲಿ ನಿವೇಶನಗಳನ್ನು ಅಭಿವೃದ್ಧಿಪಡಿಸಿ ವಿತರಿಸಲು ಸ್ಥಾಪನೆಯಾದ ಸಾರ್ವಜನಿಕ ಸಂಸ್ಥೆಯಾಗಿರುತ್ತದೆ. ನಮ್ಮ ಸಹಕಾರ ಸಂಘದ ವತಿಯಿಂದ ವಸತಿಹೀನರಿಗೆ ಹಾಗೂ ಮಧ್ಯಮ ವರ್ಗದ ನಮ್ಮ ಸದಸ್ಯರಿಗೆ ನಿವೇಶನಗಳನ್ನು ವಿತರಿಸಲಾಗುವುದರಿಂದ ಇಂತಹವರಿಗೆ ತಮ್ಮ ಸ್ವಂತ ಮನೆಗಳನ್ನು ಹೊಂದಲು ಅವಕಾಶವಾಗುತ್ತದೆ. ಉದ್ದೇಶಿತ ಬಡಾವಣೆಯಲ್ಲಿ ಅನುಮೋದಿತ ವಸತಿ ವಿನ್ಯಾಸದ ಪ್ರಕಾರ ಬಡಾವಣೆಯನ್ನು ನಿರ್ಮಿಸುವುದರಿಂದ ಸ್ಥಳೀಯವಾಗಿ ಸಾರ್ವಜನಿಕರಿಗೆ ಯೋಜನಾ ಬದ್ಧವಾದ ವಿನ್ಯಾಸದ ರಚನೆಯಿಂದ ನಿರ್ಮಿಸುವ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಹಾಗೂ ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ. ಇದಲ್ಲದೇ ಈ ಬಡಾವಣೆಯ ನಿರ್ಮಾಣದಿಂದ ಮನೆಗಳು ನಿರ್ಮಾಣವಾಗುವುದರಿಂದ ಈ ಪ್ರದೇಶ ಸುತ್ತಮುತ್ತಲೂ ಆರ್ಥಿಕ ಚಟುವಟಿಕೆಗಳು ಅಭಿವೃದ್ಧಿಯಾಗಲು ಕಾರಣವಾಗುತ್ತದೆ ಎಂಬುದಾಗಿ ತಿಳಿಸುತ್ತಾ, ಕೈಗಾರಿಕಾ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ಸದಸ್ಯ ಕಾರ್ಯದರ್ಶಿಗಳು,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/282/ಮಣಿಪಾಲ್/2024–25

ಬಿಬಿಎಂಪಿ ಕಚೇರಿಗೆ ಹೋಗದೆಯೇ ನಕ್ಷೆ ಲಭ್ಯ; ಎರಡು ವಲಯಗಳಲ್ಲಿ ಯಶಸ್ವಿ

ಸೆ.2ರಿಂದ ಕಟ್ಟಡಗಳಿಗೆ 'ನಂಬಿಕೆ ನಕ್ಷೆ'

ಮುಖ್ಯಾಂಶಗಳು
- ವಸತಿ ಕಟ್ಟಡಗಳಿಗೆ ಆನ್‌ಲೈನ್‌ನಲ್ಲೇ ನಕ್ಷೆ
- ಕೆಎಸ್‌ಆರ್‌ಎಸ್‌ಎಸಿ-ಯಿಂದ ಬಫರ್ ಝೋನ್ ಪರಿಶೀಲನೆ
- ಆಟೊ ಡಿಸಿಆರ್ ಮೂಲಕ ವರದಿ ಸಿದ್ಧ

ಎಂಜಿನಿಯರ್‌ಗಳ ನೋಂದಣಿ

'ನಂಬಿಕೆ ನಕ್ಷೆ' ಯೋಜನೆಯಲ್ಲಿ ನಕ್ಷೆ ಅನುಮೋದನೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ, ದಾಖಲೆಗಳ ಪ್ರಾಥಮಿಕ ಪರಿಶೀಲನೆ ನಡೆಸಲು ಬಿಬಿಎಂಪಿಯಿಂದ ಅನುಮತಿ ಪಡೆದಿರುವ ಎಂಜಿನಿಯರ್‌ಗಳು/ ಆರ್ಕಿಟೆಕ್ಟ್‌ಗಳ ವಿವರವನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅವರ ಮೂಲಕ ನಾಗರಿಕರು ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು. ನಕ್ಷೆ ಮಂಜೂರಾದ ಮೇಲೆ ಶುಲ್ಕವನ್ನೂ ಆನ್‌ಲೈನ್‌ನಲ್ಲೇ ಪಾವತಿಸಬೇಕಾಗುತ್ತದೆ. ನಂತರ ನಕ್ಷೆ ಲಭ್ಯವಾಗುತ್ತದೆ' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಅಧಿಕಾರಿಗಳು ತಿಳಿಸಿದರು.

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ಕಚೇರಿಗೆ ಹೋಗದೆ ಕಟ್ಟಡ ನಕ್ಷೆ ಪಡೆಯುವ 'ನಂಬಿಕೆ ನಕ್ಷೆ- ನಿಮ್ಮ ಮನೆ ನಕ್ಷೆ ನಿಮ್ಮ ಮನೆ ಬಾಗಿಲಿಗೆ' ಯೋಜನೆಯ ಪ್ರಾಯೋಗಿಕ ಅನುಷ್ಠಾನ ಎರಡು ವಲಯಗಳಲ್ಲಿ ಯಶಸ್ವಿಯಾಗಿದ್ದು, ಸೆಪ್ಟೆಂಬರ್ 2ರಿಂದ ಎಲ್ಲ ವಲಯಗಳಲ್ಲೂ ಜಾರಿಯಾಗಲಿದೆ.

'ಬ್ರ್ಯಾಂಡ್ ಬೆಂಗಳೂರು' ಪರಿಕಲ್ಪನೆಯಡಿ ಜಾರಿಗೆ ತಂದಿರುವ ಈ ಯೋಜನೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮಾರ್ಚ್ 11ರಂದು ಚಾಲನೆ ನೀಡಿದ್ದರು. ರಾಜರಾಜೇಶ್ವರಿ ನಗರ ಹಾಗೂ ದಾಸರಹಳ್ಳಿ ವಲಯಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರಲಾಗಿತ್ತು.

ಪ್ರಾಯೋಗಿಕ ಅವಧಿಯಲ್ಲಿ ಒಟ್ಟಾರೆ 302 ಅರ್ಜಿಗಳು ಸಲ್ಲಿಕೆಯಾಗಿದ್ದವು. ಇದರಲ್ಲಿ 148 ನಕ್ಷೆಗಳಿಗೆ ಅನುಮೋದನೆ ದೊರೆತಿದೆ. ರಾಜರಾಜೇಶ್ವರಿನಗರ ವಲಯದಲ್ಲಿ 273 ಅರ್ಜಿ ಸಲ್ಲಿಕೆಯಾಗಿದ್ದು, 133 ಅನುಮೋದನೆಯಾಗಿದ್ದರೆ, ದಾಸರಹಳ್ಳಿಯಲ್ಲಿ 29 ಅರ್ಜಿಗಳಲ್ಲಿ 15 ನಕ್ಷೆಗೆ ಸಮ್ಮತಿ ದೊರೆತಿದೆ.

'ಆನ್‌ಲೈನ್‌ನಲ್ಲೇ ಎಲ್ಲ ಪ್ರಕ್ರಿಯೆಗಳು ಮುಗಿದು, 15 ದಿನದಲ್ಲಿ ಕಟ್ಟಡ ನಕ್ಷೆ ವಿತರಿಸುವ ಯೋಜನೆಗೆ ಉತ್ತಮ ಸ್ಪಂದನೆ ದೊರೆತಿದೆ. ನಮ್ಮ ತಂತ್ರಾಂಶ ಆರಂಭದಲ್ಲಿ ಕೆಲವು ಅಡೆತಡೆಗಳನ್ನು ಎದುರಿಸಿತು. ನಂತರ ಯಾವುದೇ ಸಮಸ್ಯೆ ಇಲ್ಲದೆ ಕಾರ್ಯನಿರ್ವಹಿಸುತ್ತಿದೆ' ಎಂದು ಬಿಬಿಎಂಪಿ ನಗರ ಯೋಜನೆ ವಿಭಾಗದ ಹಿರಿಯ ಅಧಿಕಾರಿಗಳು ತಿಳಿಸಿದರು.

'ಎರಡು ವಲಯಗಳಲ್ಲಿ 'ನಂಬಿಕೆ ನಕ್ಷೆ' ಯಶಸ್ಸು ಕಂಡಿರುವುದರಿಂದ ಎಲ್ಲ ವಲಯದಲ್ಲೂ ಅನುಷ್ಠಾನಗೊಳಿಸಲು ಉಪ ಮುಖ್ಯಮಂತ್ರಿಯವರು ಸೂಚಿಸಿದ್ದಾರೆ. ಸೆ. 2ರಿಂದ ನಾಗರಿಕರು ಮನೆ ನಕ್ಷೆಗಾಗಿ ಆನ್‌ಲೈನ್‌ನಲ್ಲೇ ಅರ್ಜಿ ಸಲ್ಲಿಸಬೇಕಾಗುತ್ತದೆ' ಎಂದರು. 'ನಂಬಿಕೆ ನಕ್ಷೆ' ಯೋಜನೆಯಡಿ 50 x 80 ಅಡಿ ಅಳತೆಯವರೆಗಿನ ಕಟ್ಟಡಗಳಿಗೆ ಸ್ವಯಂಚಾಲಿತವಾಗಿ 15 ದಿನಗಳಲ್ಲಿ ನಕ್ಷೆಗೆ ಮಂಜೂರಾತಿ ಸಿಗಲಿದೆ. ಅಧಿಕಾರಿಗಳು ಸಕಾರಣ ನೀಡಿ ಅರ್ಜಿಯನ್ನು ತಿರಸ್ಕರಿಸದೆ ಅಥವಾ ಅರ್ಜಿಯನ್ನು ಪರಿಶೀಲಿಸದಿದ್ದರೂ 15 ದಿನಗಳಲ್ಲಿ ಸ್ವಯಂಚಾಲಿತವಾಗಿ ನಕ್ಷೆ ಮಂಜೂರಾಗುತ್ತದೆ.

ಪ್ರಕ್ರಿಯೆ ಹೇಗೆ?

ಬಿಬಿಎಂಪಿಯಿಂದ ಅನುಮತಿ ಪಡೆದಿರುವ ಆರ್ಕಿಟೆಕ್ಟ್‌ಗಳು ಅಥವಾ ಎಂಜಿನಿಯರ್‌ಗಳು, ಮಾಲೀಕರು ಒದಗಿಸುವ ದಾಖಲೆ ಮತ್ತು ಕಟ್ಟಡ ನಕ್ಷೆಯನ್ನು ಬಿಬಿಎಂಪಿ ವೆಬ್‌ಸೈಟ್‌ನಲ್ಲಿ (https://bpas.bbmpgov.in/BPAMSClient4/Default.aspx? TAV-1) ಅಪ್‌ಲೋಡ್ ಮಾಡುತ್ತಾರೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ (ಕೆಎಸ್‌ಆರ್‌ಎಸ್‌ಎಸಿ) ಆನ್‌ಲೈನ್‌ನಲ್ಲೇ ಪರಿಶೀಲಿಸಿ, ಕೆರೆ, ಸರ್ಕಾರಿ ಪ್ರದೇಶಗಳ ಯಾವುದೇ ಬಫರ್ ಝೋನ್‌ನಲ್ಲಿ ಈ ಕಟ್ಟಡ ಬರುವುದಿಲ್ಲ ಎಂಬುದನ್ನು ಸ್ಪಷ್ಟೀಕರಿಸುತ್ತದೆ. ಆಟೊ ಡಿಸಿಆರ್ ಮೂಲಕ ವರದಿ ಸಿದ್ಧಗೊಂಡು, ತಾತ್ಕಾಲಿಕ ನಕ್ಷೆ ಹಾಗೂ ಅನುಮತಿ ಪತ್ರವನ್ನು ಒಂದೆರಡು ದಿನದಲ್ಲಿ ನೀಡಲಾಗುತ್ತದೆ.

ನಂತರ ಕಂದಾಯ ಅಧಿಕಾರಿಗಳು, ನಗರ ಯೋಜನೆ ಅಧಿಕಾರಿಗಳು ದಾಖಲೆಗಳನ್ನು ಪರಿಶೀಲಿಸಿ ನಕ್ಷೆ ಮಂಜೂರು ಮಾಡುತ್ತಾರೆ. ದಾಖಲೆಗಳಲ್ಲಿ ಯಾವುದಾದರೂ ಸಮಸ್ಯೆ ಅಥವಾ ತಪ್ಪಿದ್ದರೆ ಬಿಬಿಎಂಪಿ ಕಾಯ್ದೆಯಂತೆ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. 'ತಾತ್ಕಾಲಿಕ ನಕ್ಷೆ'ಯನ್ನು ರದ್ದುಗೊಳಿಸಿ, ಕಟ್ಟಡ ನಿರ್ಮಿಸದಂತೆ ನಿರ್ಬಂಧಿಸಲಾಗುತ್ತದೆ. 15 ದಿನದಲ್ಲಿ ಎಲ್ಲ ಪ್ರಕ್ರಿಯೆಗಳೂ ಮುಗಿಯಲಿವೆ.

'ಬದಲಾವಣೆ ಬಗ್ಗೆ ತೇಜಸ್ವಿ ಹೆಚ್ಚು ಮಾತು'

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ಶ್ರೀ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಸಮಗ್ರ ಕೃತಿ ಜಗತ್ತು' ಹದಿನಾಲ್ಕು ಸಂಪುಟಗಳನ್ನು ಬೆಂಗಳೂರಿನಲ್ಲಿ ಬುಧವಾರ ಲೋಕಾರ್ಪಣೆ ಮಾಡಿದರು. ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ತೇಜಸ್ವಿ ಅವರ ಪುತ್ರಿ ಸುಶ್ಮಿತಾ ಇದ್ದರು

ಬೆಂಗಳೂರು: 'ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು ಒಬ್ಬ ಸಾಹಿತ್ಯದ ಬಗ್ಗೆ ಮಾತನಾಡುವುದಕ್ಕಿಂತ ಸಮಾಜದಲ್ಲಿ ಆಗಬೇಕಾದ ಬದಲಾವಣೆ ಕುರಿತು ಹೆಚ್ಚು ಮಾತನಾಡುತ್ತಿದ್ದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮುಖ್ಯಮಂತ್ರಿ ಗೃಹ ಕಚೇರಿಯಲ್ಲಿ ಮುನಿಸ್ವಾಮಿ ಅಂಡ್ ಸನ್ಸ್ , ಎಂ.ಚಂದ್ರಶೇಖರ್ ಪ್ರತಿಷ್ಠಾನ ಬೆಂಗಳೂರು ಹಾಗೂ ಪೂರ್ಣಚಂದ್ರ ಸಾಂಸ್ಕೃತಿಕ ಅಧ್ಯಯನ ಕೇಂದ್ರದ ವತಿಯಿಂದ ಬುಧವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 'ಶ್ರೀ ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಮಗ್ರ ಕೃತಿ ಜಗತ್ತು'-ಹದಿನಾಲ್ಕು ಸಂಪುಟಗಳನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

'ತೇಜಸ್ವಿಗೆ ಮೈಸೂರಿನಲ್ಲಿ ರಾಮದಾಸ್ ಎಂಬ ಪ್ರಾಧ್ಯಾಪಕ ಸ್ನೇಹಿತರಿದ್ದರು. ಅವರ ಮನೆಗೆ ತೇಜಸ್ವಿ ಬಂದಾಗಲೆಲ್ಲಾ ನಾನೂ ಹೋಗುತ್ತಿದ್ದೆ. ಹಲವು ಬಾರಿ ದೇವನೂರ ಮಹಾದೇವ ಬರುತ್ತಿದ್ದರು. ಸಾಮಾಜಿಕ ಬದಲಾವಣೆ ಬಗ್ಗೆ ಅಲ್ಲಿ ಚರ್ಚೆಯಾಗುತ್ತಿತ್ತು. ತೇಜಸ್ವಿ ಅವರ ಮಾತು ಕೇಳಲು ನಾನು ಉತ್ಸುಕನಾಗಿರುತ್ತಿದ್ದೆ' ಎಂದು ನೆನಪಿಸಿಕೊಂಡರು.

'ತಮ್ಮ ತೋಟಕ್ಕೆ ಬಂದು ಒಂದು ದಿನ ಕಳೆಯಿರಿ ಎಂದು ತೇಜಸ್ವಿ ಹಲವು ಬಾರಿ ಹೇಳಿದ್ದರು. ಅದು ಸಾಧ್ಯವೇ ಆಗಲಿಲ್ಲ. ಅವರ ಕಾಲಾನಂತರದಲ್ಲಿ ಅವರ ಮನೆಗೆ ಹೋಗಿ ಊಟ ಮಾಡಿ ಬಂದೆ' ಎಂದು ಸ್ಮರಿಸಿದರು.

ಕಾರ್ಯಕ್ರಮದಲ್ಲಿ ಕುವೆಂಪು ವಿಚಾರ ವೇದಿಕೆಯ ಅಧ್ಯಕ್ಷ ಎಂ.ಸಿ ನರೇಂದ್ರ, ಪ್ರೊ.ರವಿವರ್ಮ ಕುಮಾರ್, ಸಮಗ್ರ ಸಂಪುಟದ ಸಂಪಾದಕ ಕೆ.ಸಿ. ಶಿವಾರೆಡ್ಡಿ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೆ ಪಿ. ಕೃಷ್ಣ ಇದ್ದರು.

ಬಿಲ್ ಪಾವತಿಗೆ ಐಎಫ್‌ಎಂಎಸ್ ತಂತ್ರಾಂಶ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಸುದ್ದಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೈಗೊಂಡಿರುವ ಕಾಮಗಾರಿ ಬಿಲ್ ಸಲ್ಲಿಕೆ ಹಾಗೂ ಅನುಮೋದನೆಯಲ್ಲಿ ಸರಳೀಕರಣಗೊಳಿಸಿ, ಪಾರದರ್ಶಕತೆ ತರಲು ಬಿಲ್ ಪಾವತಿ ಪ್ರಕ್ರಿಯೆಯನ್ನು ಪೂರ್ಣ ಪ್ರಮಾಣದಲ್ಲಿ ಐಎಫ್‌ಎಂಎಸ್ ತಂತ್ರಾಂಶದಲ್ಲೇ ನಿರ್ವಹಿಸಲು ತೀರ್ಮಾನಿಸಲಾಗಿದೆ.

ಪ್ರಸ್ತುತ ಪಾಲಿಕೆಯಲ್ಲಿ ಬಿಲ್ ಸಲ್ಲಿಕೆ ಹಾಗೂ ಅನುಮೋದನೆ ಭೌತಿಕ ಕಡತದ ಮೂಲಕ ಆಗುತ್ತಿದೆ. ಇದರಿಂದಾಗಿ ವಿಳಂಬವಾಗಿ ಬಿಲ್ ಪಾವತಿಯಾಗುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಗುತ್ತಿಗೆದಾರರ ಸಂಘದ ಮನವಿಯಂತೆ ಬಿಲ್ ಪಾವತಿ ವಿಧಾನವನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವ ದೃಷ್ಟಿಯಿಂದ ಬಿಲ್ ದಾಖಲೆಗಳು ಹಾಗೂ ಕಡತಗಳನ್ನು ಐಎಫ್‌ಎಂಎಸ್ ತಂತ್ರಾಂಶದಲ್ಲಿ ಅಳವಡಿಸಲಾಗುವುದು ಎಂದು ಹಣಕಾಸು ವಿಭಾಗದ ವಿಶೇಷ ಆಯುಕ್ತ ಶಿವಾನಂದ್ ಕಲಕೇರಿ ತಿಳಿಸಿದ್ದಾರೆ.

ಗುತ್ತಿಗೆದಾರರು ತಮ್ಮ ಲಾಗಿನ್ ಮೂಲಕ ಐಎಫ್‌ಎಂಎಸ್ ತಂತ್ರಾಂಶದಲ್ಲಿ ಸೂಕ್ತ ದಾಖಲಾತಿಗಳನ್ನು ದಾಖಲಿಸಬಹುದು. ಗುತ್ತಿಗೆದಾರರಿಗೆ ಸಾಧ್ಯವಾಗದೇ ಇದ್ದರೆ, ಅಧಿಕಾರಿಗಳಿಂದ ದಾಖಲಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಈ ಸಂಬಂಧ ಅಧಿಕಾರಿಗಳಿಗೆ ಆನ್‌ಲೈನ್ ತರಬೇತಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಗುತ್ತಿಗೆದಾರರಿಗೂ ಸಹ ತರಬೇತಿಯನ್ನು ನೀಡಲಾಗುವುದು. ಬಿಲ್ ಪಾವತಿಯ ಪ್ರಕ್ರಿಯೆ ಕುರಿತು ಮಾರ್ಗಸೂಚಿಗಳನ್ನೂ ಜಾರಿಗೆ ತರಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಐಎಫ್‌ಎಂಎಸ್ ತಂತ್ರಾಂಶದಲ್ಲೇ ಬಿಲ್‌ಗಳ ಪೂರ್ಣ ಪ್ರಕ್ರಿಯೆ ಆರಂಭಿಸಲು ಜುಲೈ 6ರಂದೇ ಆದೇಶ ಹೊರಡಿಸಲಾಗಿತ್ತು. ಆದರೆ ಅದನ್ನು ಅನುಷ್ಠಾನ ಮಾಡಿರಲಿಲ್ಲ. ಬಿಬಿಎಂಪಿ ಗುತ್ತಿಗೆದಾರರು ಸೋಮವಾರದಿಂದ ಪ್ರತಿಭಟನೆ ನಡೆಸಲು ಉದ್ದೇಶಿಸಿರುವುದರಿಂದ ಗುರುವಾರ ರಾತ್ರಿ ಹಳೆಯ ಆದೇಶವನ್ನೇ ಉಲ್ಲೇಖಿಸಿ, 'ಅನುಷ್ಠಾನ ಮಾಡಲಾಗುತ್ತದೆ' ಎಂದು ಪ್ರಕಟಣೆ ಹೊರಡಿಸಲಾಗಿದೆ.

ನಗರದಲ್ಲಿ ಇಂದು

ಸಂಸ್ಥಾಪಕರ ದಿನ: ಅತಿಥಿ: ಟಿ.ಎಂ. ಕೊಟ್ರೇಶ್, ಅಧ್ಯಕ್ಷತೆ: ಟಿ. ಸೋಮಶೇಖರ್, ಭಾರತಿ ತುಮ್ಮಲಾ, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಅಕಾಡೆಮಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್‌ನ ಆವರಣ, ಹೆಣ್ಣೂರು, ಬೆಳಿಗ್ಗೆ 9.30

'ತರು ಸಂಸ್ಕೃತಿ–2024' ಅಂತರ್ ಕಾಲೇಜು ಸಾಂಸ್ಕೃತಿಕ ಉತ್ಸವ: ಅತಿಥಿಗಳು: ಶಿವರಾಜ್ ಕುಮಾರ್, ಬಿ. ಅಜನೀಶ್ ಲೋಕನಾಥ್, ಹರಿಣಿ ಶ್ರೀಕಾಂತ್, ಸತ್ಯಜೀತ ಸಂಜು, ಶಾಲಿನಿ ಪರಮೇಶ್, ಆಯೋಜನೆ: ವಿ.ವಿ. ಪುರ ಜೈನ್ ಕಾಲೇಜು, ಸ್ಥಳ: ಕುವೆಂಪು ಕಲಾಕ್ಷೇತ್ರ, ಕೆ.ಆರ್. ರಸ್ತೆ, ಶಂಕರಪುರ, ಬೆಳಿಗ್ಗೆ 10

ರಾಷ್ಟ್ರೀಯ ನೇತ್ರದಾನ ಜಾಗೃತಿ:

ಅತಿಥಿಗಳು: ಎಂ.ಎನ್. ಅನುಚೇತ್, ಅಲೆಕ್ಸಾಂಡರ್ ಅಲ್‌ಡ್ರಿನ್, ಆಯೋಜನೆ: ಶಂಕರ್ ಕಣ್ಣಿನ ಆಸ್ಪತ್ರೆ, ಸ್ಥಳ: ಸೌಥ್ ಯುನೈಟೆಡ್ ಫುಟ್‌ಬಾಲ್ ಕ್ಲಬ್, ಹಲಸೂರು, ಬೆಳಿಗ್ಗೆ 10

'ಎಂಎಸ್‌ಎಂಇ' ಸಮಾವೇಶ: ಅತಿಥಿಗಳು: ಶೋಭಾ ಕರಂದ್ಲಾಜೆ, ಶರಣಬಸಪ್ಪ ದರ್ಶನಾಪುರ, ಎಂ.ಜಿ. ರಾಜಗೋಪಾಲ್, ಶಿವಕುಮಾರ್ ಆರ್., ಅಧ್ಯಕ್ಷತೆ: ರಮೇಶಚಂದ್ರ ಲಹೋಟಿ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಪ್ರಿನ್ಸೆಸ್ ಶ್ರೈನ್, ಅರಮನೆ ಮೈದಾನ, ಬೆಳಿಗ್ಗೆ 10.30

ಭರತನಾಟ್ಯ ಪ್ರದರ್ಶನ: ಸಿ. ಸಹನಾ, ಆಯೋಜನೆ: ಭಾರತೀಯ ಸಾಂಸ್ಕೃತಿಕ ಸಂಬಂಧಗಳ ಪರಿಷತ್ತು, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ಸಿ. ಸಹನಾ

ಶ್ರಾವಣ ಜಾನಪದ ಸಂಭ್ರಮ, ಚಿಣ್ಣರ ಜಾನಪದ ಸಾಂಸ್ಕೃತಿಕ ಹಬ್ಬ: ಉದ್ಘಾಟನೆ: ಕಡಬಗೆರೆ ಎಸ್. ಮುನಿರಾಜು, ಅತಿಥಿಗಳು: ಮಂಜುನಾಥ್, ನಾಗರಾಜ್, ಆಯೋಜನೆ: ಶ್ರೀನಿವಾಸ ಮಂಜುನಾಥ್ ಫೌಂಡೇಷನ್, ಸ್ಥಳ: ಸರ್ಕಾರಿ ಪ್ರೌಢಶಾಲೆ ಆವರಣ, ಬಾಗಲಗುಂಟೆ, ಮಧ್ಯಾಹ್ನ 1

ಏಳು ದಿನಗಳ ಪುಸ್ತಕ ಪ್ರದರ್ಶನ ಮಾರಾಟದ ಸಮಾರೋಪ ಸಮಾರಂಭ: ಅತಿಥಿಗಳು: ಎಂ. ವೀರಪ್ಪ ಮೊಯಿಲಿ, ಕೆ.ಜಿ. ರಾಘವನ್, ವಿವೇಕ್ ಸುಬ್ಬಾರೆಡ್ಡಿ, ಟಿ.ಜಿ. ರವಿ, ಹರೀಶ್ ಎಂ.ಟಿ., ಆಯೋಜನೆ: ವಕೀಲರ ಸಂಘ, ಭಾರತೀಯ ವಿದ್ಯಾಭವನ, ಸ್ಥಳ: ಮೊದಲನೆಯ ಮಹಡಿ, ಹೈಕೋರ್ಟ್ ಸಭಾಂಗಣ–1, ಮಧ್ಯಾಹ್ನ 1.45

ಶ್ರೀಧರ್ ಅಯ್ಯರ್ 60ರ ಸಂಭ್ರಮ, ಭಾವ ಶ್ರಾವಣ: ಅತಿಥಿಗಳು: ಎಲ್.ಎ. ರವಿಸುಬ್ರಮಣ್ಯ, ಕಾ.ವೆಂ. ಶ್ರೀನಿವಾಸಮೂರ್ತಿ, ಸತೀಶ್ ಹಂಪಿಹೊಳಿ, ಜೆ.ಎಸ್. ಅನಿಲ್ ಕುಮಾರ್, ಶೈಲೇಶ್ ಪಟ್ಟವರ್ಧನ್, ಕೆ.ಎನ್. ಜಯಸಿಂಹ, ಪ್ರವೀಣ್ ಶೆಟ್ಟಿ, ಆಯೋಜನೆ: ಸಂಗೀತ ಧಾಮ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಬೆಂಗಳೂರು ಪೌರಾಣಿಕ ಯಕ್ಷ ಹಬ್ಬ: 'ಗದಾ ಯುದ್ಧ-ರಕ್ತರಾತ್ರಿ' ಯಕ್ಷಗಾನ ಪ್ರದರ್ಶನ: ಆಯೋಜನೆ: ಮಹಾಗಣಪತಿ ಯಕ್ಷಗಾನ ಮಂಡಳಿ, ಸ್ಥಳ: ಕುಕ್ಕೆ ಸುಬ್ರಹ್ಮಣ್ಯ ಮಠ, ಅಕ್ಷಯನಗರ, ಸಂಜೆ 5.30



ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ. nagaradalli_indu@prajavani.co.in

ಬೆಂಗಳೂರು ರೇಸ್

ಡಿಫ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸೆಂಟ್ ಲೆಗರ್ ಶುಕ್ರವಾರ ಮುಕ್ತಾಯವಾಗಲಿರುವ ಬೆಂಗಳೂರು ಬೇಸಿಗೆ ರೇಸ್‌ಗಳ ಪ್ರದಾನ ಆಕರ್ಷಣೆಯಾಗಿದ್ದು, ಡಿಫ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12:05ಕ್ಕೆ ಪ್ರಾರಂಭವಾಗಲಿರುವ ದಿನದ ಹನ್ನೆರಡು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಲಿವ್ ದಿ ಡ್ರೀಮ್ 7, ಅಕ್ವಾಸ್ಟಿಕ್ 3, ಕಾರ್ಟರ್ 1
2ನೇ ರೇಸ್: ಸದರ್ನ್ ಪವರ್ 2, ಮೆಮೋರಬಲ್ ಟೈಮ್ 1, ಪೆರಿಡಾಟ್ 4
3ನೇ ರೇಸ್: ಬಾಲ್ಟಿಮೋರ್ 2, ಸ್ಪ್ರಿಂಗ್‌ಸ್ಟೀನ್ 1, ಮೈ ಸಾಲಿಟೇರ್ 10
4ನೇ ರೇಸ್: ಮೆಸ್ಕಾಲಿಟೊ 5, ಮಿಸ್ಟರ್ ಬ್ರೌನ್ 6, ಮಾರ್ಥ 9
5ನೇ ರೇಸ್: ಮಾಂಟೆರಿಯೊ 10, ಲಾ ಮೆಕ್ವಿನ್ 1, ಇನ್‌ಸ್ಟ್ರಕ್ಟರ್ 6
6ನೇ ರೇಸ್: ಬ್ರೀಝ್ ಬ್ಲಸ್ಟರ್ 1, ಸ್ಟಾರ್ ಕೊಮೆಟ್ 2, ಅಗೆರಾ 5
7ನೇ ರೇಸ್: ಮಾರ್ಟಿನೊ 8, ದಾಂಟೆರಾಸ್ 2, ವಿನ್ ವಿನ್ 4
8ನೇ ರೇಸ್: ಬಾರ್ನ್ ಡ್ಯಾನ್ಸರ್ 4, ಇಂಡಿಯನ್ ಬ್ಲೂಸ್ 1, ಮ್ಯಾಕ್ರನ್ 3
9ನೇ ರೇಸ್: ಡಿಫ್ 1, ಸೂಪರ್ ನ್ಯಾಚುರಲ್ 2
10ನೇ ರೇಸ್: ಗಲಹಡ್ 5, ಪ್ರಾಣ 1, ವಿವಾಲ್ಡೊ 6
11ನೇ ರೇಸ್: ಜೂರಿ 7, ಅರಲಿನ 1, ಬೋರ್ಬನೇರ್ 5
12ನೇ ರೇಸ್: ಹೈ ಸ್ಪೀಡ್ ಡೈವ್ 3, ಇಸಾಬೆಲ್ 1, ಎಲ್ ಅಸೆಸಿನೊ 2

ಉತ್ತಮ ಬೆಟ್: ಹೈ ಸ್ಪೀಡ್ ಡೈವ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
8,9,10,11,12	4,5,6	7,8,9	10,11,12

ಎನ್‌ಕೌಂಟರ್: ಮೂವರು ನಕ್ಸಲರ ಹತ್ಯೆ

ನಾರಾಯಣಪುರ (ಪಿಟಿಐ): ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ಭದ್ರತಾ ಪಡೆಗಳ ಜೊತೆ ಗುರುವಾರ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಮಹಿಳಾ ನಕ್ಸಲರು ಮೃತಪಟ್ಟಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ನಾರಾಯಣಪುರ ಹಾಗೂ ಕಂಕೇರ್ ಜಿಲ್ಲೆಯ ಅಬ್ಬುಜಮಾಡ್ ಪ್ರದೇಶದಲ್ಲಿ ಬೆಳಿಗ್ಗೆ 8 ಗಂಟೆಗೆ ಭದ್ರತಾ ಪಡೆಗಳ ಜಂಟಿ ತಂಡ ಹಾಗೂ ನಕ್ಸಲರ ನಡುವೆ ಗುಂಡಿನ ಚಕಮಕಿ ನಡೆಯಿತು. ವಿಶೇಷ ಟಾಸ್ಕ್‌ಫೋರ್ಸ್ (ಎಸ್‌ಟಿಎಫ್), ಜಿಲ್ಲಾ ಮೀಸಲು ಪೊಲೀಸ್ ಪಡೆ (ಡಿಆರ್‌ಜಿ) ಹಾಗೂ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಯೋಧರು ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದರು ಎಂದರು.

ಸಮವಸ್ತ್ರ ಧರಿಸಿದ್ದ ಮೂವರು ಮಹಿಳಾ ನಕ್ಸಲರ ಮೃತದೇಹಗಳು ಪತ್ತೆಯಾಗಿವೆ. ಸ್ಥಳದಿಂದ ಭಾರಿ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

'ಸ್ಥಳದಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದೆ. ಈ ವರ್ಷ ರಾಜ್ಯದ ವಿವಿಧೆಡೆ ಭದ್ರತಾ ಪಡೆಗಳು ನಡೆಸಿದ ಕಾರ್ಯಾಚರಣೆಯಲ್ಲಿ 145 ಮಂದಿ ನಕ್ಸಲರು ಮೃತಪಟ್ಟಿದ್ದಾರೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ರಾಜ್ಯಪಾಲರ ನಡೆ ಖಂಡಿಸಿ ಪ್ರತಿಭಟನೆ

ಸಿಪಿಐ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಪಾಲರ ಮೂಲಕ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ಆರೋಪಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ (ಕೆಆರ್‌ಡಿಎಸ್‌ಎಸ್) ಸದಸ್ಯರು ಹಾಗೂ ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಕಾರ್ಯಕರ್ತರು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಕೆಆರ್‌ಡಿಎಸ್‌ಎಸ್‌ನ ಜಿಲ್ಲಾ ಸಂಚಾಲಕ ಕ್ಯಾಲಸನಹಳ್ಳಿ ಶ್ರೀನಿವಾಸ ಮಾತನಾಡಿ, 'ರಾಜ್ಯಪಾಲರು ಸಾಂವಿಧಾನಿಕ ಪ್ರತಿನಿಧಿಯಾಗಿ ಕೆಲಸ ಮಾಡುವ ಬದಲು ಕೇಂದ್ರ ಸರ್ಕಾರದ ಕೈಗೊಂಬೆ ರೀತಿ ನಡೆದುಕೊಳ್ಳುತ್ತಿದ್ದಾರೆ. ರಾಜ್ಯಪಾಲರು ದೇಶದ ರಾಷ್ಟ್ರಪತಿಗಳ ಪ್ರತಿನಿಧಿಯಾಗಿದ್ದು, ಸಂವಿಧಾನದ ಪ್ರತಿನಿಧಿಯಾಗಿ ಕೆಲಸ ಮಾಡಬೇಕು. ಆದರೆ, ಬಿಜೆಪಿ ಪ್ರತಿನಿಧಿಯಂತೆ ಕೆಲಸ ಮಾಡುತ್ತಿರುವುದು ಖಂಡನೀಯ' ಎಂದು ಹೇಳಿದರು.

ಸಿಪಿಐ ಜಿಲ್ಲಾ ಕಾರ್ಯದರ್ಶಿ ಎಂ. ಸತ್ಯಾನಂದ ಮಾತನಾಡಿ, 'ಜನತಂತ್ರ ವ್ಯವಸ್ಥೆಯಲ್ಲಿ ಬಹುಮತದಿಂದ ಆಯ್ಕೆಯಾದ ಸರ್ಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನ ಮಾಡುತ್ತಿರುವ ಬಿಜೆಪಿಯ ಕುಟಿಲ ನೀತಿ ಬಹಿರಂಗವಾಗಿದೆ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ರಾಜ್ಯಪಾಲರು ಒತ್ತಡಕ್ಕೆ ಮಣಿದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದಾರೆ ಎಂಬುದು ಸ್ಪಷ್ಟವಾಗಿ ಕಂಡು ಬರುತ್ತಿದೆ. ಇದು ರಾಜಕೀಯ ಪ್ರೇರಿತ ತೀರ್ಮಾನ' ಎಂದು ದೂರಿದರು.

'ರಾಜ್ಯಪಾಲರ ಹುದ್ದೆ ರದ್ದುಗೊಳಿಸಿ, ಒಕ್ಕೂಟ ವ್ಯವಸ್ಥೆ ಉಳಿಸಿ' ಎಂಬ ಘೋಷಣೆಗಳನ್ನು ಪ್ರತಿಭಟನಕಾರರು ಕೂಗಿದರು.

ಈಜಿಪುರ ಮೇಲ್ಸೇತುವೆ: ಬಿಬಿಎಂಪಿ ಎಂಜಿನಿಯರ್– ಗುತ್ತಿಗೆದಾರರ ಮಧ್ಯೆ ತಿಕ್ಕಾಟ

‘ಬಾಡಿಗೆ’ ಕದನದಿಂದ ಕಾಮಗಾರಿ ವಿಳಂಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಳು ವರ್ಷದಿಂದ ಸಮಸ್ಯೆಯ ಸುಳಿಯಲ್ಲೇ ಇರುವ ಈಜಿಪುರ ‘ಎಲಿವೇಟೆಡ್ ಕಾರಿಡಾರ್’ ಕಾಮಗಾರಿ ಮತ್ತೆ ವಿಳಂಬವಾಗುತ್ತಿದೆ. ‘ಬಾಡಿಗೆ’ ಕೊಡುವ ವಿಚಾರದಲ್ಲಿ ಬಿಬಿಎಂಪಿ ಎಂಜಿನಿಯರ್‌ಗಳು ಹಾಗೂ ಹೊಸ ಗುತ್ತಿಗೆದಾರರ ಮಧ್ಯೆ ತಿಕ್ಕಾಟ ನಡೆದಿರುವುದು ಕಾಮಗಾರಿಯನ್ನು ಮತ್ತಷ್ಟು ನಿಧಾನಗೊಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 22ರಂದು ನಗರ ಪ್ರದಕ್ಷಿಣೆ ಸಂದರ್ಭದಲ್ಲಿ ‘ವೇಗವಾಗಿ ಕಾಮಗಾರಿ ನಡೆಸಿ, ಇಲ್ಲದಿದ್ದರೆ ಗುತ್ತಿಗೆದಾರರನ್ನು ಬದಲಿಸಿ’ ಎಂದು ಕಟ್ಟಪ್ಪಣೆ ಮಾಡಿದ್ದರು. ಆನಂತರ, ಬಿಬಿಎಂಪಿ ಎಂಜಿನಿಯರ್‌ಗಳು, ಗುತ್ತಿಗೆದಾರರು ಕೆಲಸ ಮಾಡಲು ಆರಂಭಿಸಿದರು.

ನಂತರದ ದಿನಗಳಲ್ಲಿ ‘ಕಾಸ್ಟಿಂಗ್ ಯಾರ್ಡ್’ ಸಮಸ್ಯೆ ಹೆಚ್ಚಾಗಿ, ಪರಸ್ಪರ ದೋಷಾರೋಪದಲ್ಲೇ ತೊಡಗಿದ್ದಾರೆ. ಈ ಹಿಂದಿನ ಗುತ್ತಿಗೆದಾರರಾದ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆ ‘ಕಾಸ್ಟಿಂಗ್ ಯಾರ್ಡ್‌’ನಲ್ಲಿ ಎಲಿಮೆಂಟ್‌ಗಳನ್ನು ನಿರ್ಮಿಸಿತ್ತು. ಅದನ್ನು ಬಳಸಲು ಹೊಸ ಗುತ್ತಿಗೆದಾರರಾದ ಬಿಎಸ್‌ಸಿಪಿಎಲ್ ಸಂಸ್ಥೆಗೆ ಅವಕಾಶ ಮಾಡಿಕೊಡಲಾಗಿತ್ತು. ಆದರೆ, ಹಿಂದಿನ ಗುತ್ತಿಗೆದಾರರು ‘ಕಾಸ್ಟಿಂಗ್ ಯಾರ್ಡ್‌’ಗೆ ಬಾಡಿಗೆ ನೀಡಿರಲಿಲ್ಲ. ₹1.92 ಕೋಟಿ ಬಾಕಿ ಇದ್ದು, ಇದನ್ನು ಬಿಬಿಎಂಪಿಯವರು ಪಾವತಿಸಲಿ ಎಂಬುದು ಹೊಸ ಗುತ್ತಿಗೆದಾರರ ವಾದ. ಹೊಸ ಗುತ್ತಿಗೆದಾರರದ್ದೇ ಬಾಡಿಗೆ ನೀಡುವ ಜವಾಬ್ದಾರಿ ಎಂಬುದು ಪಾಲಿಕೆ ಅಧಿಕಾರಿಗಳ ಪ್ರತಿವಾದ. ಇಬ್ಬರೂ ಪರಸ್ಪರ ಪತ್ರಗಳಲ್ಲಿ ಇಂದಿಗೂ ಗುದ್ದಾಟ ನಡೆಸುತ್ತಿದ್ದಾರೆ.

‘ಗುತ್ತಿಗೆದಾರರು ಆರಂಭದಿಂದಲೇ ಕಾಮಗಾರಿಯನ್ನು ವೇಗವಾಗಿ ನಡೆಸಿದ್ದರೆ ಶೇ 50ರಷ್ಟು ಕೆಲಸ ಈ ವೇಳೆಗೆ ಮುಗಿಯಬೇಕಿತ್ತು. ಈವರೆಗೆ ಶೇ 10ರಷ್ಟು ಕೆಲಸ ಮಾತ್ರ ಮುಗಿದಿದೆ. ಮುಂಗಡ ಹಣ ನೀಡುವುದು ಸ್ವಲ್ಪ ತಡವಾಗಿತ್ತು. ನಂತರ ಅವರು ನೀಡಿರುವ ಇನ್ನೊಂದು ಬಿಲ್ ಪಾವತಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ’ ಎಂದು ಬಿಬಿಎಂಪಿ ಕೇಂದ್ರ ಯೋಜನಾ ವಿಭಾಗದ ಎಂಜಿನಿಯರ್ ತಿಳಿಸಿದರು.

₹250 ಕೋಟಿ ಈಜಿಪುರ ಎಲಿವೇಟೆಡ್ ಕಾರಿಡಾರ್ ನಿರ್ಮಾಣದ ಒಟ್ಟು ವೆಚ್ಚ	17 ನವೆಂಬರ್ 2023 ಅರ್ಧಕ್ಕೆ ನಿಂತ ಕಾಮಗಾರಿ ಮರು ಆರಂಭಕ್ಕೆ ಕಾರ್ಯಾದೇಶ	20 ತಿಂಗಳು ಕಾಮಗಾರಿ ಮುಗಿಸಲು ನೀಡಲಾಗಿರುವ ಗಡುವು


ಈಜಿಪುರ ಮೇಲ್ಸೇತುವೆ ನಿರ್ಮಾಣಕ್ಕೆ ಎಲಿಮೆಂಟ್ ಅಳವಡಿಸಲಾಗುತ್ತಿದೆ

‘ವೇಗ ನೀಡಲು ತಾಕೀತು’

‘ಕೆಲವು ಅಡಚಣೆಗಳಿಂದ ಈಜಿಪುರ ಮೇಲ್ಸೇತುವೆ ಕಾಮಗಾರಿ ನಿಧಾನಗತಿಯಲ್ಲಿದೆ. ಕಾಮಗಾರಿಗೆ ವೇಗ ನೀಡುವಂತೆ ಬಿಬಿಎಂಪಿ ಎಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಮೇಲ್ಸೇತುವೆ ಕಾಮಗಾರಿ ನಿಗದಿಯಾದ ಸಮಯಕ್ಕಿಂತ ಕೆಲವು ತಿಂಗಳು ವಿಳಂಬವಾಗಬಹುದು. ಆದರೆ, ಇನ್ನು ಮುಂದೆ ಯಾವುದೇ ರೀತಿಯಲ್ಲೂ ನಿಧಾನವಾಗಬಾರದು ಎಂದು ಎಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರಿಗೆ ಬಿಬಿಎಂಪಿ ಮುಖ್ಯ ಆಯುಕ್ತರ ಮುಂದೆಯೇ ಸೂಚನೆ ನೀಡಲಾಗಿದೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ನಾಲ್ಕು ವರ್ಷ ನಿಂತಿದ್ದ ಈಜಿಪುರ ಮೇಲ್ಸೇತುವೆ ಕಾಮಗಾರಿಯನ್ನು ಮುಂದುವರಿಸುವ ಬಗ್ಗೆ ತಾಂತ್ರಿಕ ಸಲಹೆಯನ್ನು ಭಾರತೀಯ ವಿಜ್ಞಾನ ಸಂಸ್ಥೆಯಿಂದ ಪಡೆದುಕೊಳ್ಳಲು ಸೂಚಿಸಲಾಗಿತ್ತು. ಅದರ ವೆಚ್ಚವನ್ನು ಗುತ್ತಿಗೆದಾರರು ಪಾವತಿಸಿದ್ದರು. ಈ ವರದಿಯನ್ನು ಬಿಬಿಎಂಪಿ ಮೇ 27ರಂದು ನೀಡಿದೆ. ವರದಿ ನಮ್ಮ ಕೈಸೇರಿದ ನಂತರವಷ್ಟೇ ನಾವು ಕೆಲಸ ಮಾಡಲು ಸಾಧ್ಯವಾಯಿತು. ಅದಕ್ಕೂ ಮೊದಲಿನ ಆರು ತಿಂಗಳು ಏನೂ ಕೆಲಸ ಮಾಡಲು ಅವಕಾಶ ಇರಲಿಲ್ಲ. ಅಲ್ಲದೆ, ಮುಂಗಡ ಬಿಟ್ಟರೆ, ನಂತರದ ಬಿಲ್‌ಗಳನ್ನು ಪಾವತಿ ಮಾಡಿಲ್ಲ’ ಎಂದು ಗುತ್ತಿಗೆದಾರರು ಮಾಹಿತಿ ನೀಡಿದರು.

‘ಕೋಲ್ಕತ್ತಗೆ ಹೋಗಿ ಬೇರಿಂಗ್‌ಗಳನ್ನು ತಂದಿದ್ದೇವೆ. ಅದನ್ನು ಬಿಬಿಎಂಪಿ ಎಂಜಿನಿಯರ್‌ಗಳೇ ಪರಿಶೀಲಿಸಿ, ಸಮ್ಮತಿ ನೀಡಿದ್ದರು. ಅದಕ್ಕೆ ಪಾವತಿಸಲಾಗಿರುವ ಶೇ 4ರಷ್ಟು ಮೊತ್ತವನ್ನು ಬಿಲ್‌ನಲ್ಲಿ ದಾಖಲಿಸಲಾಗಿದೆ. ಅದನ್ನು ಕೊಡುವುದಿಲ್ಲ ಎನ್ನುತ್ತಿದ್ದಾರೆ’ ಎಂದು ಗುತ್ತಿಗೆದಾರರು ದೂರಿದರು.

‘ಕಾಸ್ಟಿಂಗ್ ಯಾರ್ಡ್‌ಗೆ ನೀಡಬೇಕಾಗಿದ್ದ ಬಾಡಿಗೆಯನ್ನು ಗುತ್ತಿಗೆದಾರರು ಚೆಕ್ ಮೂಲಕ ಇದೀಗ ಪಾವತಿಸಿದ್ದಾರೆ. ಸಚಿವ ರಾಮಲಿಂಗಾರೆಡ್ಡಿ ಅವರೂ ನಮ್ಮೊಂದಿಗೆ ಸಭೆ ನಡೆಸಿ, ಸಹಕಾರ ನೀಡುವಂತೆ ಸೂಚಿಸಿದ್ದಾರೆ. ಅದರಂತೆ ನಾವೆಲ್ಲ ನೆರವು ನೀಡಿದ್ದೇವೆ’ ಎಂದು ಕಾಸ್ಟಿಂಗ್ ಯಾರ್ಡ್ ಸ್ಥಳದ ಮಾಲೀಕ ವಿಜಯಬಾಬು ರೆಡ್ಡಿ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಅಹಲ್ಯಾಬಾಯಿ ಹೋಳ್ಕರ್ ಜಯಂತಿ ಸಾವಿರ ಕಾಲೇಜುಗಳಲ್ಲಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಹಲ್ಯಾಬಾಯಿ ಹೋಳ್ಕರ್ ಅವರ 300ನೇ ಜಯಂತಿ ಪ್ರಯುಕ್ತ ಅಹಲ್ಯಾಬಾಯಿ ಹೋಳ್ಕರ್ 300ನೇ ಜಯಂತಿ ಸಮಿತಿಯ ಕರ್ನಾಟಕ ದಕ್ಷಿಣ ಪ್ರಾಂತವು ಸಾವಿರ ಕಾಲೇಜುಗಳಲ್ಲಿ ಉಪನ್ಯಾಸ ಸೇರಿ ವಿವಿಧ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ದಕ್ಷಿಣ ಪ್ರಾಂತ ಸಹ ಸಂಚಾಲಕಿ ಶೋಭಾ ಎಚ್‌.ಜಿ, ‘ಅಹಲ್ಯಾಬಾಯಿ ಅವರು ಸಮಾಜದ ಏಳ್ಗೆಗೆ ಶ್ರಮಿಸಿದ್ದರು. ಅವರ ಬಗ್ಗೆ ಜನರಿಗೆ ತಿಳಿಸಲು ಸೆಪ್ಟೆಂಬರ್‌ನಿಂದ ನವೆಂಬರ್‌ವರೆಗೆ ರಾಜ್ಯದ ವಿವಿಧೆಡೆ ಬೀದಿ ನಾಟಕ, ಕಥೆ, ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಬೈಕ್ ರ‍್ಯಾಲಿ, ಗಿಡ ನೆಡುವುದು, ದೇವಸ್ಥಾನಗಳ ಜೀರ್ಣೋದ್ಧಾರ, ಉಪನ್ಯಾಸ, ಸಾಧಕರಿಗೆ ಗೌರವ ಸಮರ್ಪಣೆ, ವಿದ್ಯಾರ್ಥಿ ವೇತನವಿತರಣೆಸೇರಿವಿವಿಧಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ’ ಎಂದರು.

ಸಮಿತಿಯ ದಕ್ಷಿಣ ಪ್ರಾಂತ ಸಹ ಸಂಚಾಲಕಿ ಛಾಯಾ ಪ್ರಭು, ಅಹಲ್ಯಾಬಾಯಿ ಅವರ ಸಮಾಜಮುಖಿ ಕಾರ್ಯಗಳನ್ನು ಪ್ರತಿಯೊಬ್ಬರೂ ಮುಂದುವರಿಸಿಕೊಂಡು ಹೋಗಬೇಕಿದೆ ಎಂದು ಹೇಳಿದರು.

‘ಸಿ.ಎ ನಿವೇಶನ ಹಂಚಿಕೆಯಲ್ಲಿ ಅಕ್ರಮ’

ಸರ್ಕಾರಕ್ಕೆ ₹1,000 ಕೋಟಿ ನಷ್ಟ: ಛಲವಾದಿ ನಾರಾಯಣಸ್ವಾಮಿ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಲೋಕಸಭಾ ಚುನಾವಣೆಗೂ ಮುನ್ನ 12 ಜಿಲ್ಲೆಗಳ ಕೈಗಾರಿಕಾ ಪ್ರದೇಶಗಳಲ್ಲಿ ಸಿ.ಎ (ನಾಗರಿಕ ಸೌಲಭ್ಯ) ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಇದರಲ್ಲಿ ವ್ಯಾಪಕ ಅಕ್ರಮ ನಡೆದಿದೆ ಎಂದು ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದ್ದಾರೆ.

‘ಈ ಅಕ್ರಮದಿಂದ ಸರ್ಕಾರಕ್ಕೆ ಸುಮಾರು ₹1,000 ಕೋಟಿ ನಷ್ಟವಾಗಿದೆ’ ಎಂದು ಛಲವಾದಿ ನಾರಾಯಣಸ್ವಾಮಿ ಬುಧವಾರ ಸುದ್ದಿಗೋಷ್ಠಿಯಲ್ಲಿ ದೂರಿದರು. ಇದಕ್ಕೆ ಪೂರಕ ದಾಖಲೆಗಳನ್ನೂ ಅವರು ಬಿಡುಗಡೆ ಮಾಡಿದರು.

‘12 ಜಿಲ್ಲೆಗಳಲ್ಲಿ ಒಟ್ಟು 193 ಸಿ.ಎ ನಿವೇಶನಗಳಿದ್ದವು. ಇವುಗಳ ಒಟ್ಟು ವಿಸ್ತೀರ್ಣ 377.69 ಎಕರೆ. ಇದಕ್ಕಾಗಿ 283 ಅರ್ಜಿಗಳು ಬಂದಿದ್ದವು. 30 ದಿನಗಳ ಕಾಲಾವಕಾಶ ನೀಡಿದ್ದರೆ ಇನ್ನಷ್ಟು ಅರ್ಜಿಗಳು ಬರುತ್ತಿದ್ದವು. ಆದರೆ, ಈ ಸಂಬಂಧ ಅಧಿಸೂಚನೆ ಹೊರಡಿಸಿದ್ದೇ ಜನರ ಗಮನಕ್ಕೆ ಬರಲಿಲ್ಲ. ಎಲ್ಲವನ್ನೂ ಗುಟ್ಟಾಗಿ ಮಾಡಿದ್ದಾರೆ. ಹಿಂದೆಲ್ಲ ಆನ್‌ಲೈನ್ ಮೂಲಕ ಈ ಪ್ರಕ್ರಿಯೆ ನಡೆಯುತ್ತಿತ್ತು. ಈ ಬಾರಿ ಆನ್‌ಲೈನ್ ಬಳಕೆ ಮಾಡಲಿಲ್ಲ. 14 ದಿನಗಳಲ್ಲಿ ಅರ್ಜಿ ಸ್ವೀಕರಿಸಿ, 15 ನೇ ದಿನ ಪರಿಶೀಲಿಸಿ, 16 ನೇ ದಿನವೇ ಮಂಜೂರಾತಿ ಮಾಡಲಾಗಿದೆ’ ಎಂದು ಹೇಳಿದರು.

ಮುಖ್ಯಾಂಶಗಳು

- ಕೆಐಎಡಿಬಿಯಲ್ಲಿ ನಡೆದಿರುವ ಅಕ್ರಮ
- ಪ್ರಭಾವಿಗಳಿಗೆ ಮಾತ್ರ ನಿವೇಶನ
- ಪೂರಕ ದಾಖಲೆಗಳ ಬಿಡುಗಡೆ

‘ಅಪಾರ್ಟ್‌ಮೆಂಟ್, ಸ್ಟಾರ್ ಹೋಟೆಲ್‌ಗೂ ಸಿ.ಎ ನಿವೇಶನಗಳ ಹಂಚಿಕೆ’

ವಿಜಯಪುರದ ಹಲಗನಿಯ ಈಶ್ವರ ಸಂಗಪ್ಪ ಬದ್ರಿ ಅವರ ‘ತ್ರೀಸ್ಟಾರ್ ಹೋಟೆಲ್‌’ಗೆ ಸಿ.ಎ ನಿವೇಶನ ಕೊಡಲಾಗಿದೆ. ಇದು ವಾಣಿಜ್ಯ ಉದ್ದೇಶದ್ದಾಗಿದ್ದು, ನಿವೇಶನ ಹರಾಜು ಮಾಡಬೇಕಿತ್ತು. ವಾಣಿಜ್ಯ ಉದ್ದೇಶದ ಜಮೀನು 2.5 ಎಕರೆಗೆ ದುಪ್ಪಟ್ಟು ದರ ಕನಿಷ್ಠ ₹12.5 ಕೋಟಿಗೆ ನಿಗದಿ ಮಾಡಬೇಕಿತ್ತು. ಇದರಿಂದ ಸರ್ಕಾರಕ್ಕೆ ಹೆಚ್ಚಿನ ಆದಾಯ ಸಿಗುತ್ತಿತ್ತು ಎಂದು ಛಲವಾದಿ ನಾರಾಯಣಸ್ವಾಮಿ ಹೇಳಿದರು.

ಬಿಡದಿಯಲ್ಲಿ ಸುನಿತಾ ರಾಜಶೇಖರ್ ಎಂಬುವರಿಗೆ ಅಪಾರ್ಟ್‌ಮೆಂಟ್ ನಿರ್ಮಿಸಲು ಸಿ.ಎ ನಿವೇಶನ ಮಂಜೂರು ಮಾಡಲಾಗಿದೆ. ಅಪಾರ್ಟ್‌ಮೆಂಟ್ ನಿರ್ಮಾಣ ಸಿ.ಎ ಸೌಲಭ್ಯದಡಿ ಬರುವುದೇ ಅಥವಾ ವಾಣಿಜ್ಯ ಉದ್ದೇಶದಡಿ ಬರುತ್ತದೆಯೆ ಎಂಬುದನ್ನು ಸಾರ್ವಜನಿಕರಿಗೆ ಸರ್ಕಾರ ಸ್ಪಷ್ಟಪಡಿಸಬೇಕು. ಹಾರೋಹಳ್ಳಿಯಲ್ಲಿ ಸ್ಕಿಲ್ ಡೆವಲಪ್‌ಮೆಂಟ್ ಸಂಸ್ಥೆಗೆ 2.5 ಎಕರೆ ಕೊಟ್ಟಿದ್ದಾರೆ. ಪರಿಶಿಷ್ಟರ ಅರ್ಜಿದಾರರಿಗೆ ಕೇವಲ ಕಾಲು ಎಕರೆ ಜಾಗ ಕೊಟ್ಟಿರುವ ಉದಾಹರಣೆಯೂ ಇದೆ ಎಂದರು.

ವಿಜಯಪುರ ಮತ್ತು ಬಾಗಲಕೋಟೆಯಲ್ಲಿ ಒಬ್ಬರೇ ಅರ್ಜಿದಾರರಿಗೆ ತಲಾ ಮೂರು ಸಿ.ಎ ನಿವೇಶನಗಳನ್ನು ನೀಡಲಾಗಿದೆ. ಇವರು ಪ್ರಭಾವಿ ಆಗಿರುವುದರಿಂದಲೇ ನಿವೇಶನಗಳನ್ನು ವಿತರಿಸಲಾಗಿದೆ ಎಂದು ಆರೋಪಿಸಿದರು.

7 ರಾಜ್ಯಗಳಲ್ಲಿ ಎನ್‌ಐಎ ಶೋಧ

ನವದೆಹಲಿ(ಪಿಟಿಐ): ದೇಶದ ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ರಹಸ್ಯ ಮಾಹಿತಿಯು ಪಾಕಿಸ್ತಾನ ಮೂಲದ ಬೇಹುಗಾರಿಕೆ ಜಾಲವೊಂದರ ಮೂಲಕ ಸೋರಿಕೆಯಾದ ಪ್ರಕರಣ ಕುರಿತು ತನಿಖೆ ನಡೆಸುತ್ತಿರುವ ಎನ್‌ಐಎ, ಈ ಸಂಬಂಧ ಕರ್ನಾಟಕ ಸೇರಿ ಏಳು ರಾಜ್ಯಗಳಲ್ಲಿ ಶೋಧ ನಡೆಸಲಾಗಿದೆ ಎಂದು ಗುರುವಾರ ಪ್ರಕಟಣೆಯಲ್ಲಿ ತಿಳಿಸಿದೆ.

ಬೇಹುಗಾರಿಕೆ ಚಟುವಟಿಕೆ ನಡೆಸುವುದಕ್ಕಾಗಿ ಪಾಕಿಸ್ತಾನದಿಂದ ಹಣ ಪಡೆದಿದ್ದ ಶಂಕಿತ ವ್ಯಕ್ತಿಗಳಿಗೆ ಸೇರಿದ ಸ್ಥಳಗಳಲ್ಲಿ ಎನ್‌ಐಎ ತಂಡಗಳು ಬುಧವಾರ ಶೋಧ ಕಾರ್ಯ ನಡೆಸಿವೆ ಎಂದು ಪ್ರಕಟಣೆ ತಿಳಿಸಿದೆ.

ಗುಜರಾತ್, ಕೇರಳ, ತೆಲಂಗಾಣ, ಉತ್ತರ ಪ್ರದೇಶ, ಬಿಹಾರ ಹಾಗೂ ಹರಿಯಾಣ ರಾಜ್ಯಗಳಲ್ಲಿ ಶೋಧ ನಡೆಸಿ, 22 ಮೊಬೈಲ್ ಫೋನ್‌ಗಳು, ಕೆಲ ಸೂಕ್ಷ್ಮ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ.

ಭಾರತ ವಿರುದ್ಧದ ಸಂಚಿನ ಭಾಗವಾಗಿ, ನೌಕಾಪಡೆಗೆ ಸಂಬಂಧಿಸಿದ ಮಹತ್ವದ ಹಾಗೂ ಸೂಕ್ಷ್ಮ ಮಾಹಿತಿ ಸೋರಿಕೆ ಮಾಡಲಾಗಿತ್ತು ಎಂಬ ಆರೋಪದಡಿ 2021ರ ಜನವರಿಯಲ್ಲಿ ಆಂಧ್ರಪ್ರದೇಶದ ಪೊಲೀಸ್ ಇಲಾಖೆ ಪ್ರಕರಣ ದಾಖಲಿಸಿತ್ತು.

ನಂತರ, 2023ರ ಜುಲೈನಲ್ಲಿ ಎನ್‌ಐಎ ಈ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿತು. ಪಾಕಿಸ್ತಾನ ಪ್ರಜೆ ಎಂದು ಗುರುತಿಸಲಾದ ಮೀರ್ ಬಲಾಜ್ ಖಾನ್ ಹಾಗೂ ಮತ್ತೊಬ್ಬನ ವಿರುದ್ಧ ಎನ್‌ಐಎ, ಕಳೆದ ಜುಲೈ 19ರಂದು ಆರೋಪಪಟ್ಟಿ ಸಲ್ಲಿಸಿತ್ತು. ಮೀರ್ ಖಾನ್ ಸದ್ಯ ತಲೆಮರೆಸಿಕೊಂಡಿದ್ದಾನೆ.

ಖಾನ್ ಹಾಗೂ ಬಂಧಿತ ಮತ್ತೊಬ್ಬ ಆರೋಪಿ ಆಕಾಶ್ ಸೋಳಂಕಿ, ಈ ಬೇಹುಗಾರಿಕೆ ಜಾಲದಲ್ಲಿ ಶಾಮೀಲಾಗಿದ್ದಾರೆ ಎಂಬುದು ಎನ್‌ಐಎ ತನಿಖೆಯಿಂದ ತಿಳಿದುಬಂದಿತ್ತು. ನಂತರ, ಕಳೆದ ನವೆಂಬರ್ 6ರಂದು ಇತರ ಇಬ್ಬರು ಆರೋಪಿಗಳಾದ ಮನಮೋಹನ್ ಸುರೇಂದ್ರ ಪಾಂಡಾ ಹಾಗೂ ಅಲ್ವೆನ್ ಎಂಬುವವರ ವಿರುದ್ಧ ಎನ್‌ಐಎ ಪೂರಕ ಆರೋಪಪಟ್ಟಿ ಸಲ್ಲಿಸಿತ್ತು.

‘ಪಾಂಡಾನನ್ನು ಬಂಧಿಸಲಾಗಿದ್ದರೆ, ಪಾಕಿಸ್ತಾನ ಗುಪ್ತಚರ ಸಂಸ್ಥೆ ಪರ ಕೆಲಸ ಮಾಡುತ್ತಿದ್ದ ಅಲ್ವೆನ್ ತಲೆಮರೆಸಿಕೊಂಡಿದ್ದಾನೆ’ ಎಂದು ಎನ್‌ಐಎ ಪ್ರಕಟಣೆಯಲ್ಲಿ ತಿಳಿಸಿದೆ.

ಮೇನಲ್ಲಿ, ಮತ್ತೊಬ್ಬ ಆರೋಪಿ ಅಮಾನ್ ಸಲೀಮ್ ಶೇಖ್ ವಿರುದ್ಧ ಎನ್‌ಐಎ 2ನೇ ಪೂರಕ ಆರೋಪಪಟ್ಟಿ ಸಲ್ಲಿಸಿದೆ.

ಯತ್ನಾಳ ವಿರುದ್ಧದ ಮಾನನಷ್ಟ ಮೊಕದ್ದಮೆ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರ ಕ್ಷೇತ್ರದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಸಕ್ಕರೆ ಮತ್ತು ಜವಳಿ ಸಚಿವ ಶಿವಾನಂದ ಎಸ್.ಪಾಟೀಲ್ ದಾಖಲಿಸಿದ್ದ ಮಾನನಷ್ಟ ಮೊಕದ್ದಮೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಯತ್ನಾಳ ಸಲ್ಲಿಸಿದ್ದ ಅರ್ಜಿಯನ್ನು,'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಯತ್ನಾಳ ಪರ ವಕೀಲ ವೆಂಕಟೇಶ್ ಪಿ.ದಳವಾಯಿ, 'ದೂರಿನಲ್ಲಿ ತಿಳಿಸಿರುವಂತೆ ನಮ್ಮ ಅರ್ಜಿದಾರರು ಸಚಿವ ಶಿವಾನಂದ ಪಾಟೀಲರ ಬಗ್ಗೆ ವೈಯಕ್ತಿಕ ನಿಂದನೆ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ. ಆದರೆ, ಬಾಗಲಕೋಟೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾದ್ದವರು ಸಂಯುಕ್ತಾ ಪಾಟೀಲ. ಹೀಗಾಗಿ, ಭಾರತೀಯ ದಂಡ ಸಂಹಿತೆ–1860ರ ಕಲಂ 171 ಜಿ ಮತ್ತು ಜನಪ್ರತಿನಿಧಿ ಕಾಯ್ದೆ–1950ರ ಕಲಂ 123 (4) ಅನ್ನು ಯತ್ನಾಳ ಅವರಿಗೆ ಅನ್ವಯಿಸಿ ಪ್ರಕರಣ ನಡೆಸುವುದು ಕಾನೂನಿನ ದುರ್ಬಳಕೆ ಆಗುತ್ತದೆ. ಆದ್ದರಿಂದ, ಅರ್ಜಿದಾರರ ವಿರುದ್ಧದ ಮಾನನಷ್ಟ ಮೊಕದ್ದಮೆ ರದ್ದುಪಡಿಸಬೇಕು' ಎಂದು ಕೋರಿದರು.ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣಾ ನ್ಯಾಯಾಲಯದಲ್ಲಿನ ಮೊಕ ದ್ದಮೆಯನ್ನು ರದ್ದುಗೊಳಿಸಿ ಆದೇಶಿಸಿತು.

ಪ್ರಕರಣವೇನು?: 'ಇತ್ತೀಚಿನ ಲೋಕಸಭೆ ಚುನಾವಣಾ ರ್‍ಯಾಲಿ ಸಂದರ್ಭದಲ್ಲಿ ಯತ್ನಾಳ ನನ್ನ ವಿರುದ್ಧ ಮಾನಹಾನಿ ಹೇಳಿಕೆ ನೀಡಿದ್ದಾರೆ' ಎಂದು ಆರೋಪಿಸಿ ಶಿವಾನಂದ ಪಾಟೀಲ್ ಅವರು, ಯತ್ನಾಳ್ ವಿರುದ್ಧ ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು. ಇದನ್ನು ವಿಚಾರಣೆಗೆ ಪರಿಗಣಿಸಿದ್ದ ವಿಚಾರಣಾ ನ್ಯಾಯಾಲಯ ಯತ್ನಾಳ ಅವರಿಗೆ ಷೋಕಾಸ್ ನೋಟಿಸ್ ಜಾರಿಗೊಳಿಸುವಂತೆ 2024ರ ಜುಲೈ 16ರಂದು ಆದೇಶಿಸಿತ್ತು.

'ದೋಷಾರೋಪ ನಿಗದಿ ಮುಂದೂಡಿಕೆ'

ಬೆಂಗಳೂರು: 'ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತ ಪ್ರಕರಣದಲ್ಲಿನ ಸಂತ್ರಸ್ತೆಗೆ ಬೆದರಿಕೆ ಹಾಕಿದ್ದಾರೆ' ಎಂಬ ಆರೋಪದಡಿಯ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿದಂತೆ ಕುಣಿಗಲ್ ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿ ಹಂಗರಹಳ್ಳಿಯ ಶ್ರೀವಿದ್ಯಾ ಚೌಡೇಶ್ವರಿ ದೇವಸ್ಥಾನದ (ಶ್ರೀ ಮಠ) ಬಾಲ ಮಂಜುನಾಥ ಸ್ವಾಮೀಜಿ (36) ವಿರುದ್ಧ ದೋಷಾರೋಪ ನಿಗದಿಪಡಿಸುವ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಯನ್ನು ಹೈಕೋರ್ಟ್ ಮುಂದೂಡಿ ಆದೇಶಿಸಿದೆ.

ಈ ಸಂಬಂಧ ಎನ್.ಮಂಜುನಾಥ ಅಲಿಯಾಸ್ ಬಾಲ ಮಂಜುನಾಥ (36) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ಹೈರಾಣಾಗಿರುವ ಸ್ಥಳೀಯ ನಾಗರಿಕರ ಆಕ್ರೋಶ

ಕಾಮಗಾರಿ ನಿಧಾನ, ರಸ್ತೆ ಅಧ್ವಾನ

ಯುಜಿಡಿಗಾಗಿ ಪೈಪ್ ಅಳವಡಿಸುತ್ತಿರುವುದು

ಕಾಮಗಾರಿಯಿಂದಾಗಿ ವಾಹನ ಸಂಚಾರಕ್ಕೆ ತೊಂದರೆಯಾಗಿದೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮಳೆ ಬಂದಾಗ ಕೆಸರುಗದ್ದೆಯಂತಾಗುತ್ತದೆ. ಬಿಸಿಲಿನಲ್ಲಿ ದೂಳುಮಯ. ಪಾದಚಾರಿಗಳಿಗೆ, ವಾಹನ ಸವಾರರಿಗೆ ನಿತ್ಯ ನರಕ ದರ್ಶನ..!

ಇದು ಮಾಗಡಿ -ಕೆಂಗೇರಿ ಹೊರವರ್ತುಲ ರಸ್ತೆಯ ಮರಿಯಪ್ಪನ ಪಾಳ್ಯ ಬಳಿಯ ಶನೇಶ್ವರಸ್ವಾಮಿ ದೇವಸ್ಥಾನದಿಂದ ಅಮೃತಾನಂದ ಆಶ್ರಮವರೆಗಿನ ರಸ್ತೆ ಸ್ಥಿತಿ–ಗತಿ.

ಈ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ನಡೆಯುತ್ತಿದೆ. ರಸ್ತೆಯ ಎರಡು ಬದಿಗಳಲ್ಲೂ ಒಳಚರಂಡಿ ಕಾಮಗಾರಿ ನಡೆಯುತ್ತಿದೆ. ಮಣ್ಣನ್ನು ಅಗೆದು ರಸ್ತೆಯಲ್ಲಿ ಗುಡ್ಡೆ ಹಾಕಿರುವುದರಿಂದ ಕಷ್ಟಪಟ್ಟು ಓಡಾಡುವಂತಾಗಿದೆ ಎಂದು ನಾಗರಿಕರು ಹೇಳಿದರು.

'ಗಾಳಿ ಬೀಸಿದಾಗ ರಸ್ತೆಯಲ್ಲಿನ ದೂಳು ಮನೆ, ಕಿಟಕಿ, ಬಾಗಿಲಲ್ಲಿ ತುಂಬಿ ಕೊಳ್ಳುತ್ತದೆ. ನಿತ್ಯ ಸ್ವಚ್ಛ ಮಾಡುವುದೇ ಕೆಲಸವಾಗಿದೆ' ಎಂದು ಸ್ಥಳೀಯ ನಿವಾಸಿ ಆಶಾ ಬೇಸರ ವ್ಯಕ್ತಪಡಿಸಿದರು.

'ಕಾಮಗಾರಿ ಪ್ರಾರಂಭವಾಗಿ ನಾಲ್ಕು ತಿಂಗಳಾಗಿದೆ. ವಾಹನ ನಿಲುಗಡೆ ಮಾಡಲು ಸಾಧ್ಯವಿಲ್ಲ. ಇದರಿಂದ ಗ್ರಾಹಕರು ಬರುತ್ತಿಲ್ಲ, ವ್ಯಾಪಾರವಿಲ್ಲ. ಹೀಗಾಗಿ ವ್ಯಾಪಾರಕ್ಕಾಗಿ ಮಾಡಿರುವ ಬ್ಯಾಂಕ್, ಕೈ ಸಾಲ ತೀರಿಸಲು ಕಷ್ಟ ಆಗುತ್ತಿದೆ. ಕಾಮಗಾರಿ ವಿಳಂಬವಾದರೆ ಮತ್ತಷ್ಟು ಸಂಕಷ್ಟ ಅನುಭವಿಸಬೇಕಾಗುತ್ತದೆ' ಎನ್ನುತ್ತಾರೆ ಅಯೋಧ್ಯ ಡೀ ನೈಟ್ ಹೋಟೆಲ್ ಮಾಲೀಕ ನಿರಂಜನ್ ಬಾರಿಕ್.

'ರಸ್ತೆ ಅಧ್ವಾನವಾಗಿರುವುದರಿಂದ ಜನರು ಇಲ್ಲಿ ಓಡಾಡುವುದು ಕಡಿಮೆಯಾಗಿದೆ. ವ್ಯಾಪಾರವಿಲ್ಲದೆ ಜೀವನ ನಡೆಸಲು ಸಾಧ್ಯವಾಗುತ್ತಿಲ್ಲ' ಎಂದು ಪಾನಿಪುರಿ ವ್ಯಾಪಾರಿ ನಾಗರತ್ನ ಹೇಳಿದರು. ಒಳಚರಂಡಿ ಹಾಗೂ ವೈಟ್ ಟಾಪಿಂಗ್ ಕಾಮಗಾರಿಯನ್ನು ಶೀಘ್ರ ಮುಗಿಸಲು ನಾಗರಿಕರು ಆಗ್ರಹಿಸಿದ್ದಾರೆ.

> **'ವಾರದಲ್ಲಿ ಕಾಮಗಾರಿ ಆರಂಭ'**
>
> 'ನಿತ್ಯ ನಾಲ್ಕು ಬಾರಿ ರಸ್ತೆಗೆ ನೀರು ಹಾಕಿ ದೂಳು ನಿಯಂತ್ರಿಸಲಾಗುತ್ತಿದೆ. ಸ್ಥಳೀಯ ನಿವಾಸಿಗಳ ಸಲಹೆ ಮೇರೆಗೆ ಸಂಜೆ ನಂತರ ಕಾಮಗಾರಿ ನಿಲ್ಲಿಸಲಾಗುತ್ತಿದೆ. ಹಗಲು– ರಾತ್ರಿ ಕಾಮಗಾರಿ ಕೈಗೊಂಡರೆ, ಒಂದು ವಾರದೊಳಗೆ ಒಳಚರಂಡಿ ಪೈಪ್‌ಗಳನ್ನು ಅಳವಡಿಸಿ, ವೈಟ್ ಟ್ಯಾಪಿಂಗ್ ಕಾಮಗಾರಿ ಪ್ರಾರಂಭಿಸಲಾಗುವುದು' ಎಂದು ಕಾಮಗಾರಿ ಗುತ್ತಿಗೆ ಪಡೆದಿರುವ ಅಪ್ಪಾಜಿ ಬಿಲ್ಡರ್ಸ್‌ನ ಶಂಕರೇಗೌಡ ಹೊಸಮನಿ ತಿಳಿಸಿದರು.

> **ಯುಜಿಡಿ ಕಾಮಗಾರಿ ಮತ್ತು ಕಾವೇರಿ ನೀರಿನ ಕೊಳವೆ ಅಳವಡಿಕೆ ಕಾರ್ಯ ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ. ನಂತರ ವೈಟ್ ಟಾಪಿಂಗ್ ಆರಂಭವಾಗುತ್ತದೆ**
>
> **ಮಹಮದ್ ಅಜ್ಮಲ್**
> ಕಾರ್ಯಪಾಲಕ ಎಂಜಿನಿಯರ್, ಬಿಬಿಎಂಪಿ

ಸುದ್ದಿ 2 ನಿಮಿಷ

ಐವರ ಸ್ಥಳಾಂತರ ಬಾಕಿ

ಬೆಂಗಳೂರು : ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳ ಪೈಕಿ ನಟ ದರ್ಶನ್ ಸೇರಿ ಐವರು ವಿಚಾರಣಾಧೀನ ಕೈದಿಗಳನ್ನು ಬೇರೆ ಜಿಲ್ಲೆಗಳ ಕಾರಾಗೃಹಕ್ಕೆ ಗುರುವಾರ ಸ್ಥಳಾಂತರ ಮಾಡಲಾಗಿದೆ.ಉಳಿದ ಐವರನ್ನು ಶುಕ್ರವಾರ ಸ್ಥಳಾಂತರ ಮಾಡಲಾಗುವುದು ಎಂದು ಕಾರಾಗೃಹಗಳ ಹಾಗೂ ಸುಧಾರಣಾ ಇಲಾಖೆ ಮೂಲಗಳು ತಿಳಿಸಿವೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಶೇಷ ಆತಿಥ್ಯ ಪಡೆದ ಕಾರಣಕ್ಕೆ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಗಳನ್ನು ಸ್ಥಳಾಂತರಿಸಲು ನ್ಯಾಯಾಲಯ ಅನುಮತಿ ನೀಡಿತ್ತು.

'ಹೈಲೈಫ್' ಪ್ರದರ್ಶನ

ಬೆಂಗಳೂರು: ನಗರದ ಲಲಿತ್ ಅಶೋಕ್ ಹೋಟೆಲ್‌ನಲ್ಲಿ ಈಗಾಗಲೇ ಆರಂಭಗೊಂಡಿರುವ ಹೈಲೈಫ್ ಪ್ರದರ್ಶನ ಶುಕ್ರವಾರವೂ ನಡೆಯಲಿದೆ.

ಹೈಲೈಫ್, ಪ್ಯಾಷನ್ ಮತ್ತು ಲೈಫ್ ಸ್ಟೈಲ್ ಉಡುಪು ಹಾಗೂ ಇತರೆ ಉತ್ಪನ್ನಗಳಿಗೆ ಜನಪ್ರಿಯವಾಗಿದೆ. ಪ್ರದರ್ಶನದಲ್ಲಿ ಗ್ರಾಹಕರಿಗೆ ಒಪ್ಪುವಂತಹ ಉಡುಪುಗಳು ಲಭ್ಯವಿವೆ. ಫ್ಯಾಷನ್ ಪ್ರಿಯರಿಗೆ ವಿಶಿಷ್ಟ ವಸ್ತ್ರಾಭರಣಗಳ ಸಂಗ್ರಹವಿದೆ. ಗ್ರಾಹಕರು ಪ್ರದರ್ಶನಕ್ಕೆ ಭೇಟಿ ನೀಡಿ ಖರೀದಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವಧು-ವರರು ಧರಿಸುವ ಬಟ್ಟೆಗಳು ಮತ್ತು ಅಪರೂಪದ ಆಭರಣಗಳ ಸಂಗ್ರಹ ಕೂಡ ಇದೆ ತಿಳಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Accounts & Finance

WALK-IN INTERVIEW
HIRING - AUDIT & ASSURANCE EXECUTIVE - 02 Nos.
A well established and leading CA Firm is Looking to hire qualified & experienced personnel.
- CA inter cleared, Articleship completed.
- CA IPCC Articleship completed with 2 years experience in CA firm.
WALK-IN INTERVIEW: 11 am to 5.00 pm.
Email your resume to: prasad.spc@gmail.com
No. 41/1, Trisha Mansion, 3rd Floor, Nanjappa Road, Shanthinagar, Bangalore - 560027.
For details Contact: 9845542486 / 8867245446

Wanted

WANTED FEMALE Office Assistant- any Degree, Good Communication Skills English & Hindi for Pvt Ltd Company in Rajajinagar Contact :9108458798/ 9845579620

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Flat

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Sites

Bannerghatta Road

SALE 20,000 Sq.Ft. East Facing Vacant Plot, BBMP A Khatha,Clear titles suitable for Apartment, 43Ft Wide Road, 500Mtrs from HulimavuMetro Station Bannerghatta Main Road @ Rs.5000/- Per Sq.Ft. Call Verna Developers, Barton Centre, MG Road, Bangalore. 9916310226/ 9620253180

Vijayanagar

VIJAYNAGAR 7500 sqft commercial Site North, West, South 3 side road. Clear titles. Contact. 9481455837.

RENTAL PROPERTIES

Accommodation Available

Commercial

COMMERCIAL SPACE for Rent 2000sqft. 1st Main, Seshadripuram Opp Indian Bank. Brokers Excuse. 9036813906.

COMMERCIAL PROPERTY Suitable for Banks, Storage Spaces, Office Spaces, Garements, PG Accomodation etc. Ground Floor and First Floor. Available Each Floor 1300sqft MEI Road Yeshwantpura. Contact No : 9743610556

PERSONAL

Change of Name

WE, AYYAPPA Chavadi and Shruthi R V residing at E840 Brigade golden triangle Bangalore 560049, have changed our son name as Manan Ayyappa Chavadi from Shivaansh Ayyappa Chavadi, sworn before Advocate & Notary Anand Kumar J. Date 26.08.2024

MY DAUGHTER, Aiza Rameen A, born on 1st Mar 2019 residing at No. 45, 5th cross, Dinnur, Bangalore 560032, shall henceforth be known as AIZA RAMEEN Allah Bakash (Father)

CHANGE OF NAME
I, BENITA JEBARUPA Residing at 68, 1st Main, R.J Garden, Marathahalli, Outer Ring Road, Chinnappanahalli, Bengaluru-560037 have changed my name to BENITA JEBARUPA VIJAYAKUMAR vide affidavit dated 29.08.2024 before Notary Bhagya Kumari N, Bengaluru. Henceforth I shall be called BENITA JEBARUPA VIJAYAKUMAR only.

Lost

DOCUMENT LOST
I, KL Thyagaraja Shetty No. 454, 11th B Cross JP Nagar, 1st Phase, Bangalore-560078 Lost Original Absolute Sale Deed Document No/ Identification: 4792/92-93, While transit If found please Contact:
Ph : 9743526200 9141246669

CONNECT

DOCUMENT LOST
I, Jayakumar V. Residing at, # 446, Near Indiranagar Club, 9th Main, 2nd Cross, Indiranagar, Bangalore-560038, have lost my Original Sale Deed Document No. / Identification No. 354/74-75 while in transit. If found please contact: 7975526210, 6361434320.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
*Conditions apply
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | 080-45557163/164

ಕೊಲೆಗೆ ಜೈಲಿನಿಂದಲೇ ಸಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಬಂಧನದಲ್ಲಿರುವ ರೌಡಿ ಶೀಟರ್‌ಗಳು ಎಂಟು ತಿಂಗಳ ಅವಧಿಯಲ್ಲಿ ಜೈಲಿನಲ್ಲೇ ಕುಳಿತು ಎರಡು ಕೊಲೆಗಳಿಗೆ ಸಂಚು ರೂಪಿಸಿದ್ದು ಮತ್ತು ಹಣ ನೀಡುವಂತೆ ಬೆದರಿಕೆ ಕರೆ ಮಾಡಿರುವ ಬಗ್ಗೆ 'ಪ್ರಜಾವಾಣಿ'ಗೆ ದಾಖಲೆ ಲಭ್ಯವಾಗಿದೆ.

ಆರೋಪಿಗಳು ಈ ಕೃತ್ಯವೆಸಗಲು ಮೊಬೈಲ್ ಫೋನ್ ಬಳಸಿದ್ದಾರೆ. ಕೊಲೆ ಪ್ರಕರಣದಲ್ಲಿ ರೌಡಿಗಳು ಇನ್‌ಸ್ಟಾಗ್ರಾಂನಲ್ಲಿ ಸಂದೇಶ ಕಳುಹಿಸಿರುವುದು ಮತ್ತು ಇಂಟರ್‌ನೆಟ್ ಕರೆ ಮಾಡಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಎರಡು ಪ್ರಕರಣಗಳಲ್ಲಿ ರೌಡಿಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಕಾರಾಗೃಹ ಪರಿಶೀಲನೆಗಾಗಿ ಶನಿವಾರ (ಆಗಸ್ಟ್ 24) ಹೋಗಿದ್ದ ಸಿಸಿಬಿ ಅಧಿಕಾರಿಗಳು, ಸಿಬ್ಬಂದಿಯನ್ನು ಅರ್ಧ ಗಂಟೆ ಹೊರಗಡೆ ಕಾಯಿಸಲಾಗಿತ್ತು. ಆ ಸಂದರ್ಭದಲ್ಲೇ ಜೈಲು ಸಿಬ್ಬಂದಿ ವಸ್ತುಗಳನ್ನು ಸಾಗಿಸಿದ್ದಾರೆ ಎಂದು ಸಿಸಿಬಿ ಅಧಿಕಾರಿಗಳು ಹೇಳಿದ್ದಾರೆ.

ಕಳೆದ ಏಪ್ರಿಲ್‌ನಲ್ಲಿ ಜೈಲು ಅಧಿಕಾರಿಗಳು ಇಬ್ಬರು ಕೈದಿಗಳಿಂದ ₹10,000 ನಗದು ಮತ್ತು ಉಕ್ಕಿನ ಮೂರು ಚಾಕುಗಳನ್ನು ವಶಪಡಿಸಿಕೊಂಡಿದ್ದರು. ಮಾದಕವಸ್ತು ಮತ್ತು ಮೊಬೈಲ್ ಫೋನ್ ಕಳ್ಳಸಾಗಣೆ ಮಾಡುವ ಪ್ರಯತ್ನಗಳನ್ನು ಜೈಲು ಅಧಿಕಾರಿಗಳು ಈ ವರ್ಷ ಎರಡು ಬಾರಿ ವಿಫಲಗೊಳಿಸಿದ್ದಾರೆ.

ಚಾಕಿನಿಂದ ಇರಿದು ಯುವಕನ ಕೊಲೆ

(ನೆಲಮಂಗಲ ವರದಿ): ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಸೊಂಡೇಕೊಪ್ಪದ ರಸ್ತೆಯಲ್ಲಿ ಬುಧವಾರ ರಾತ್ರಿ ದಾರಿ ಬಿಡುವ ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಯುವಕನೊಬ್ಬನನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

ಸೊಂಡೇಕೊಪ್ಪದ ನಿವಾಸಿ ರೆಹಮಾನ್ ಅಲಿಯಾಸ್ ರಿಯಾನ್(18) ಕೊಲೆಯಾದ ಯುವಕ. ಆರೋಪಿ ರೇಣುಕಾಪ್ರಸಾದ್(30) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

'ರೆಹಮಾನ್ ಅವರು ಬುಧವಾರ ರಾತ್ರಿ 9.30ರ ಸುಮಾರಿಗೆ ಬೈಕ್‌ನಲ್ಲಿ ಊರಿಗೆ ತೆರಳುತ್ತಿದ್ದರು. ಮದ್ಯ ಸೇವಿಸಿದ್ದ ಆರೋಪಿ ರಸ್ತೆ ಮಧ್ಯದಲ್ಲೇ ಕಾರು ನಿಲ್ಲಿಸಿಕೊಂಡಿದ್ದ. ಬೈಕ್ ಸವಾರ ದಾರಿ ಬಿಡುವಂತೆ ಮನವಿ ಮಾಡಿದ್ದಕ್ಕೆ ಸಿಟ್ಟಿಗೆದ್ದ ಆರೋಪಿ ಗಲಾಟೆ ನಡೆಸಿದ್ದಾನೆ. ಗಲಾಟೆ ವಿಕೋಪಕ್ಕೆ ತಿರುಗಿ ಚಾಕುವಿನಿಂದ ಇರಿದು ರೆಹಮಾನ್‌ನನ್ನು ಕೊಲೆ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಶಾಲೆಗೆ ಹುಸಿ ಬಾಂಬ್ ಬೆದರಿಕೆ

ಬೆಂಗಳೂರು: ನಾಗವಾರದ ಮಾನ್ಯತಾ ಟೆಕ್‌ಪಾರ್ಕ್ ಬಳಿಯ ಇಂಡಿಯನ್ ಪಬ್ಲಿಕ್ ಶಾಲೆಗೆ ಗುರುವಾರ ಮುಂಜಾನೆ ಬಾಂಬ್ ಬೆದರಿಕೆಯ ಇ–ಮೇಲ್ ಬಂದು ಕೆಲ ಸಮಯ ಆತಂಕ ತಂದೊಡ್ಡಿತ್ತು.

ಪೊಲೀಸರು ಪರಿಶೀಲನೆ ನಡೆಸಿದ ಮೇಲೆ ಹುಸಿ ಬಾಂಬ್ ಬೆದರಿಕೆ ಸಂದೇಶ ಎಂದು ಗೊತ್ತಾಗಿ ಶಾಲಾ ಆಡಳಿತ ಮಂಡಳಿ ಸದಸ್ಯರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ನಿಟ್ಟುಸಿರು ಬಿಟ್ಟರು.

ಶಾಲಾ ಆಡಳಿತಾಧಿಕಾರಿ ಪದ್ಮಿನಿ ರಾಘವೇಂದ್ರ ಅವರು ನಿತ್ಯದಂತೆಯೇ ಗುರುವಾರ ಬೆಳಿಗ್ಗೆಯೂ ಶಾಲೆಗೆ ಬಂದಿದ್ದರು. ಇ–ಮೇಲ್ ಪರಿಶೀಲಿಸುತ್ತಿದ್ದ ವೇಳೆ ಫಾದರ್ ಕೊಡಾಚಿ ಹೆಸರಿನ coldghost456@gmail.com ಐ.ಡಿಯಿಂದ ಬಾಂಬ್ ಬೆದರಿಕೆ ಇ–ಮೇಲ್ ಬಂದಿತ್ತು. 'ಶಾಲೆಯ ಸುತ್ತಲೂ ಐದು ಬಾಂಬ್‌ಗಳನ್ನು ಇಡಲಾಗಿದೆ. ಮಧ್ಯಾಹ್ನ 1.30ರ ಸುಮಾರಿಗೆ ಎಲ್ಲ ಬಾಂಬ್‌ಗಳು ಸ್ಫೋಟವಾಗಲಿವೆ' ಎಂದು ಬರೆಯಲಾಗಿತ್ತು. ಇದನ್ನು ಓದಿ ಗಾಬರಿಗೊಂಡು ಅವರು ಪೊಲೀಸರಿಗೆ ಮಾಹಿತಿ ನೀಡಿದ್ದರು.

'ಬಾಂಬ್ ಪತ್ತೆದಳ, ಬಾಂಬ್ ನಿಷ್ಕ್ರಿಯ ದಳ, ಶ್ವಾನದಳದೊಂದಿಗೆ ತಕ್ಷಣವೇ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಲಾಯಿತು. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಇದೊಂದು ಹುಸಿ ಸಂದೇಶವೆಂದು ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ಈ ಸಂಬಂಧ ಗೋವಿಂದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಿಂದೆಯೂ ನಗರದ ಹಲವು ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆಯ ಇ–ಮೇಲ್ ಬಂದಿದ್ದವು.

ದ್ವಿಚಕ್ರ ವಾಹನ ಕಳ್ಳತನ: ಆರೋಪಿ ಬಂಧನ

ಬೆಂಗಳೂರು: ರಸ್ತೆ ಬದಿ ಹಾಗೂ ಮನೆಯ ಎದುರು ರಾತ್ರಿ ವೇಳೆ ನಿಲುಗಡೆಗೊಳಿಸಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ. ಸೋರಹುಣಸೆಯ ಕಿರಣ್(20) ಬಂಧಿತ ಆರೋಪಿ. ಆರೋಪಿಯಿಂದ ₹9 ಲಕ್ಷ ಮೌಲ್ಯದ 12 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಾಮಾ ಲೇಔಟ್‌ನಲ್ಲಿ ವಾಸವಿರುವ ವ್ಯಕ್ತಿಯೊಬ್ಬರು ದ್ವಿಚಕ್ರ ವಾಹನ ಕಳ್ಳತನದ ಸಂಬಂಧ ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ವರ್ತೂರಿನ ಮತ್ಸಂದ್ರ ರಸ್ತೆಯಲ್ಲಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

'ಬೆಂಗಳೂರು ನಗರ, ಗ್ರಾಮಾಂತರ ಹಾಗೂ ಕೊಳ್ಳೇಗಾಲದಲ್ಲಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ. ಕಳ್ಳತನ ಮಾಡಿದ್ದ ದ್ವಿಚಕ್ರ ವಾಹನಗಳನ್ನು ವರ್ತೂರಿನ ಸೋರಹುಣಸೆಯ ನೀಲಗಿರಿ ತೋಪಿನಲ್ಲಿ ನಿಲುಗಡೆ ಮಾಡಿದ್ದ. ಅಲ್ಲಿಂದ ಎಲ್ಲ ವಾಹನಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು. ಆರೋಪಿ ಬಂಧನದಿಂದ ಬೈಯಪ್ಪನಹಳ್ಳಿ, ಎಚ್‌ಎಸ್‌ಆರ್ ಲೇಔಟ್, ತಿಲಕ್ ನಗರ, ಮಡಿವಾಳ, ಪರಪ್ಪನ ಅಗ್ರಹಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸರ್ಜಾಪುರ, ಕೊಳ್ಳೆಗಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

20 ಗ್ರಾಂ. ಚಿನ್ನಾಭರಣ ಜಪ್ತಿ: ಇದೇ ಪೊಲೀಸ್ ಠಾಣಾ ವ್ಯಾಪ್ತಿಯ ಸಾಯಿ ರೆಸಿಡೆನ್ಸಿಯಲ್ಲಿ ಮನೆಯೊಂದರಲ್ಲಿ ಚಿನ್ನಾಭರಣ ಕಳವು ಮಾಡಿದ್ದ ಆರೋಪಿ ಕೋಗಿಲು ನಿವಾಸಿ ಅಜಿತ್‌ದಾಸ್‌ನನ್ನು ಪೊಲೀಸರು ಬಂಧಿಸಿದ್ದಾರೆ.

'ಅಸ್ಸಾಂನ ಅಜಿತ್‌ರಾವ್ ಕೋಗಿಲಿನಲ್ಲಿ ಬಾಡಿಗೆ ಮನೆ ಪಡೆದು ನೆಲೆಸಿದ್ದ. ಮನೆ ಮಾಲೀಕರು ಸಂಬಂಧಿಕರ ಮನೆಗೆ ತೆರಳಿದ್ದ ವೇಳೆ ಬಾಲ್ಕನಿಯಲ್ಲಿರುವ ಸ್ಲೈಡ್ ಡೋರ್ ಒಡೆದು ಒಳಪ್ರವೇಶಿಸಿ 20 ಗ್ರಾಂ. ಚಿನ್ನಾಭರಣ ಕಳವು ಮಾಡಿದ್ದ. ಬಂಧಿತ ಆರೋಪಿಯಿಂದ ₹1.20 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಎನ್‌ಟಿಟಿಎಫ್- ಐಎಚ್‌ಕೆ ಜರ್ಮನಿ ಜೊತೆಗೆ ಒಪ್ಪಂದ

ಜರ್ಮನಿಯಲ್ಲಿ ಅಪ್ರೆಂಟಿಸ್‌ಶಿಪ್‌ಗೆ ಅವಕಾಶ

ಪ್ರಜಾವಾಣಿ ವಾರ್ತೆ

ಎನ್‌ಟಿಟಿಎಫ್ ತರಬೇತಿ ಕೇಂದ್ರದಲ್ಲಿ ಬುಧವಾರ ಆರಂಭವಾದ ಜರ್ಮನ್ ಆಸ್ಬಿಲ್ಡಂಗ್ (ತರಬೇತಿ) ಕಾರ್ಯಕ್ರಮದಲ್ಲಿ ಜರ್ಮನ್ ದೂತವಾಸದ ಅಧಿಕಾರಿಗಳು ಮತ್ತು ಎನ್‌ಟಿಟಿಎಫ್ ಮುಖ್ಯಸ್ಥರು ಭಾಗವಹಿಸಿದ್ದರು

ಬೆಂಗಳೂರು: ಭಾರತೀಯ ವಿದ್ಯಾರ್ಥಿಗಳಿಗೆ ಜರ್ಮನಿಯಲ್ಲಿ ದೀರ್ಘಾವಧಿ ಅಪ್ರೆಂಟಿಸ್‌ಶಿಪ್ (ಶಿಷ್ಯವೃತ್ತಿ) ಮಾಡಲು ನೆಟ್ಟೂರ್ ಟೆಕ್ನಿಕಲ್ ಟ್ರೈನಿಂಗ್ ಫೌಂಡೇಷನ್ (ಎನ್‌ಟಿಟಿಎಫ್) ಮ್ಯಾಜಿಕ್ ಬಿಲಿಯನ್ ಮತ್ತು ಐಎಚ್‌ಕೆ–ಜರ್ಮನಿ ಜೊತೆಗೆ ಒಪ್ಪಂದ ಮಾಡಿಕೊಂಡಿದೆ.

ಎನ್‌ಟಿಟಿಎಫ್ ತರಬೇತಿ ಕೇಂದ್ರದಲ್ಲಿ ಜರ್ಮನ್ ಅಸ್ಬಿಲ್ಡಂಗ್ (ತರಬೇತಿ) ಕಾರ್ಯಕ್ರಮವನ್ನು ಬುಧವಾರ ಬೆಂಗಳೂರಿನಲ್ಲಿ ಜರ್ಮನಿಯ ಡೆಪ್ಯೂಟಿ ಕಾನ್ಸುಲರ್ ಎಂ.ಎಸ್. ಆನೆಟ್ ಬೇಸ್ಲರ್ ಉದ್ಘಾಟಿಸಿದರು.

ಅಪ್ರೆಂಟಿಸ್‌ಶಿಪ್‌ಗಿಂತ ಹೆಚ್ಚಾಗಿ ಇದು ವಿಶ್ವ ದರ್ಜೆಯ ಶಿಕ್ಷಣ ಮತ್ತು ಅತ್ಯಾಧುನಿಕ ಜರ್ಮನ್ ಕೈಗಾರಿಕೆಗಳಲ್ಲಿ ವೃತ್ತಿಜೀವನದ ಪ್ರವೇಶಾವಕಾಶ ಕಲ್ಪಿಸುವ ವೇದಿಕೆ ಎಂದು ಆನೆಟ್ ಬೇಸ್ಲರ್ ತಿಳಿಸಿದರು.

ಅಪ್ರೆಂಟಿಸ್‌ಗಳು ಜರ್ಮನ್ ಕಂಪನಿಗಳಲ್ಲಿ ತರಬೇತಿ ಪಡೆಯಲಿದ್ದಾರೆ. ಆಟೋಮೋಟಿವ್ ಮೆಕಾಟ್ರಾನಿಕ್ಸ್, ಪ್ಲಾಂಟ್ ಮೆಕ್ಯಾನಿಕ್ಸ್, ಎಲೆಕ್ಟ್ರಾನಿಕ್ಸ್, ಕಾರ್ ಟೆಕ್ನಾಲಜಿ ಮತ್ತು ಕಟ್ಟಿಂಗ್ ಮಷಿನ್ ಟೆಕ್ನಾಲಜಿಯಂತಹ ಬೇಡಿಕೆಯ ಕ್ಷೇತ್ರಗಳಲ್ಲಿ ಕೌಶಲ ಕರಗತ ಮಾಡಿಕೊಳ್ಳಲಿದ್ದಾರೆ ಎಂದು ವಿವರಿಸಿದರು.

ಎನ್‌ಟಿಟಿಎಫ್‌ನ 100 ವಿದ್ಯಾರ್ಥಿ ಗಳನ್ನು ಈ ತರಬೇತಿಗೆ ಪಟ್ಟಿ ಮಾಡಲಾಗಿದೆ. ಅದರಲ್ಲಿ 70 ವಿದ್ಯಾರ್ಥಿ ಗಳಿಗೆ ಜರ್ಮನ್ ಕಂಪನಿಗಳಿಂದ ಆಹ್ವಾನ ಬಂದಿದೆ. ಹತ್ತು ತಿಂಗಳು ಇಲ್ಲಿನ ಕ್ಯಾಂಪಸ್‌ನಲ್ಲಿ ಎ1, ಎ2 ಮತ್ತು ಬಿ1 ಹಂತದ ತರಬೇತಿ ನೀಡಲಾಗುತ್ತದೆ. ಅಷ್ಟು ಹೊತ್ತಿಗೆ ವಿದ್ಯಾರ್ಥಿಗಳು ಜರ್ಮನ್ ಭಾಷೆ ಮತ್ತು ಸಂಸ್ಕೃತಿಯಲ್ಲಿ ಪರಿಣತಿ ಸಾಧಿಸಿರುತ್ತಾರೆ. ಇದೇ ಸಮಯದಲ್ಲಿ ಎಲ್ಲ ದಾಖಲೆಗಳು ಮತ್ತು ವೀಸಾ ಸಿದ್ಧಪಡಿಸಲಾಗುತ್ತದೆ. 2025ರ ಜೂನ್‌ನಿಂದ ಸೆಪ್ಟೆಂಬರ್ ಒಳಗೆ ಜರ್ಮನಿಗೆ ತೆರಳಲಿದ್ದಾರೆ ಎಂದು ಎನ್‌ಟಿಟಿಎಫ್ ಮುಖ್ಯಸ್ಥರಾದ ಆರ್. ರಾಜಗೋಪಾಲನ್, ಬಿ.ವಿ. ಸುದರ್ಶನ್ ಮಾಹಿತಿ ನೀಡಿದರು.

ಮೂರರಿಂದ ಮೂರೂವರೆ ವರ್ಷಗಳ ಈ ಅಪ್ರೆಂಟಿಸ್‌ಶಿಪ್ ಅವಧಿಯಲ್ಲಿ ತಿಂಗಳಿಗೆ 1500 ಯೂರೊವರೆಗೆ (ಸುಮಾರು ₹1.40 ಲಕ್ಷ) ಶಿಷ್ಯವೇತನ ನೀಡಲಾಗುತ್ತದೆ. 2100 ಯೂರೊ (₹ 1.95 ಲಕ್ಷ) ಕನಿಷ್ಠ ವೇತನದ ಖಾತ್ರಿಯೊಂದಿಗೆ ಯೂರೋಪ್‌ನಲ್ಲಿ ವೃತ್ತಿಜೀವನ ಆರಂಭಿಸುವ ಅವಕಾಶ ಸಿಗಲಿದೆ ಎಂದು ತಿಳಿಸಿದರು.

ನೋಯ್ಡಾದ ಮ್ಯಾಜಿಕ್ ಬಿಲಿಯನ್ ಸಂಸ್ಥಾಪಕ ಬಸಾಬ್ ಬ್ಯಾನರ್ಜಿ ಉಪಸ್ಥಿತರಿದ್ದರು.

ಕಬ್ಬನ್ ಉದ್ಯಾನದ ಬಳಿ ಮೆಟ್ರೊ ವಾಕ್ ವೇ ಮೇಲೆ ಗುರುವಾರ ಮರದ ಕೊಂಬೆ ಮುರಿದು ಬಿದ್ದಿತ್ತು

ಮುರಿದು ಬಿದ್ದ ಕೊಂಬೆ ಮೆಟ್ರೊ ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬನ್ ಪಾರ್ಕ್ ಬಳಿ ಗುರುವಾರ ಮರದ ಕೊಂಬೆ ಮುರಿದು ಮೆಟ್ರೊ ವಾಕ್ ವೇ ಮೇಲೆ ಬಿದ್ದಿದ್ದರಿಂದ ಮೆಟ್ರೊ ನೇರಳೆ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಸುಮಾರು 15 ನಿಮಿಷ ಸ್ಥಗಿತಗೊಂಡಿತು.

ಕಬ್ಬನ್ ಪಾರ್ಕ್ ನಿಲ್ದಾಣದಿಂದ ಎಂ. ಜಿ. ರಸ್ತೆ ಕಡೆಗೆ ಇರುವ ಅಪ್ ರ‍್ಯಾಂಪ್‌ನಲ್ಲಿ ಸುರಂಗ ಮಾರ್ಗದಿಂದ ಹೊರ ಬರುವಲ್ಲಿ ಗುರುವಾರ ಸಂಜೆ 4.51ಕ್ಕೆ ಕೊಂಬೆ ಬಿದ್ದಿದ್ದರಿಂದ ಸಂಚಾರಕ್ಕೆ ಅಡ್ಡಿ ಉಂಟಾಯಿತು. ನಮ್ಮ ಮೆಟ್ರೊ ಸಿಬ್ಬಂದಿ ಕೊಂಬೆ ತೆರವುಗೊಳಿಸಿದರು. ಸಂಜೆ 5.05ಕ್ಕೆ ಮೆಟ್ರೊ ಸಂಚಾರ ಪುನಃ ಆರಂಭಗೊಂಡಿತು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ

ಯಲಹಂಕ: ದೊಡ್ಡಬ್ಯಾಲಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಆರ್.ವಿಜಯಕುಮಾರ್ ಮತ್ತು ಉಪಾಧ್ಯಕ್ಷ ರಾಗಿ ಎಂ.ಕೆ.ಮಹೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಕ್ಕಾಗಿ ಗುರುವಾರ ಚುನಾವಣಾ ಪ್ರಕ್ರಿಯೆ ನಡೆಯಿತು. ಈ ಹಿಂದೆ ಎರಡು ಬಾರಿ ದೊಡ್ಡಬ್ಯಾಲಕೆರೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿದ್ದ ವಿಜಯಕುಮಾರ್ ಅವರು, ಮೂರನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾದರು.

ಶಾಸಕ ಎಸ್.ಆರ್.ವಿಶ್ವನಾಥ್, ಸಿಂಗನಾಯಕನಹಳ್ಳಿ ರೈತರಸೇವಾ ಸಹಕಾರ ಬ್ಯಾಂಕಿನ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಬ್ಯಾಲಕೆರೆ ವೆಂಕಟೇಶ್, ಕೆ.ಸಿ.ಬಾಬು, ಬಿ.ಆರ್.ಲೋಕೇಶ್, ಸಂಘದ ನಿರ್ದೇಶಕರಾದ ಮಂಜಣ್ಣ, ಬಿ.ಕೆ.ಶಿವರಾಜ್, ಎ.ರಾಜಣ್ಣ, ಲಕ್ಷ್ಮಣ, ಪಾರಿಜಾತ ಚಂದ್ರಪ್ಪ, ಶಾಂತಾ, ರತ್ನಮ್ಮ, ಆಂಜಿನಮ್ಮ, ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಮಹಿಳೆಯರ ಸುರಕ್ಷತೆ ಸಹಿತ ವಿವಿಧ ಮಾಹಿತಿಗಳನ್ನು ಸುಲಭದಲ್ಲಿ ನೀಡುವ ಮೊಬೈಲ್ ಆ್ಯಪ್

8.31 ಲಕ್ಷ ಪ್ರಯಾಣಿಕರ ಸ್ಪಂದನೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಮಹಿಳೆಯರ ಸುರಕ್ಷತೆಗಾಗಿ ಬಿಎಂಟಿಸಿ ಅನುಷ್ಠಾನ ಗೊಳಿಸಿರುವ 'ನಮ್ಮ ಬಿಎಂಟಿಸಿ' ಮೊಬೈಲ್ ಆ್ಯಪ್‌ಗೆ ಉತ್ತಮ ಸ್ಪಂದನೆ ದೊರಕಿದ್ದು, 8.31 ಲಕ್ಷ ಪ್ರಯಾಣಿಕರು ಈವರೆಗೆ ಆ್ಯಪ್ ಡೌನ್‌ಲೋಡ್ ಮಾಡಿಕೊಂಡಿದ್ದಾರೆ.

ಬಿಎಂಟಿಸಿ ಬಸ್‌ಗಳಲ್ಲಿ ಮಹಿಳೆಯರ ಸುರಕ್ಷತೆಗಾಗಿ ಕ್ಯಾಮೆರಾ ಕಣ್ಗಾವಲು ವ್ಯವಸ್ಥೆ, ಬಸ್ ನಿಲ್ದಾಣ, ತಂಗುದಾಣಗಳ, ಪ್ರಯಾಣಿಕರ ಮಾಹಿತಿಗಳನ್ನು ನೀಡುವ 'ನಮ್ಮ ಬಿಎಂಟಿಸಿ' ಮೊಬೈಲ್ ಅಪ್ಲಿಕೇಶನ್ ಅನ್ನು ಕೇಂದ್ರ ಸರ್ಕಾರದ ನಿರ್ಭಯ ಯೋಜನೆಯ ನೆರವಿನೊಂದಿಗೆ 2023ರ ಸೆಪ್ಟೆಂಬರ್‌ನಲ್ಲಿ ಪರಿಚಯಿಸ ಲಾಗಿತ್ತು. ಈ ಆ್ಯಪ್ ಮೂಲಕವೇ ಬಸ್ ಟ್ರ್ಯಾಕಿಂಗ್ ವ್ಯವಸ್ಥೆಯನ್ನೂ ಕಲ್ಪಿಸಲಾಗಿತ್ತು.

ತುರ್ತು ಸಂದರ್ಭದಲ್ಲಿ ನೆರವು ಪಡೆಯಲು, ಆ್ಯಪ್ ಮೂಲಕ ಪ್ಯಾನಿಕ್/ಎಸ್‌ಒಎಸ್ ಬಟನ್ ಒತ್ತಿದರೆ ಮಹಿಳಾ ಪ್ರಯಾಣಿಕರು ಸಂಚರಿಸುವ ಮಾರ್ಗ-ದುದ್ದಕ್ಕೂ ಚಲನವಲನದ ಮೇಲೆ ನಿಗಾ (ಟ್ರ್ಯಾಕಿಂಗ್) ಇಡಲಾಗುತ್ತದೆ. ಬಸ್ ಒಳಗಿನ ಚಟುವಟಿಕೆ ಯನ್ನು ಗಮನಿಸಲು ಆನ್-ಬೋರ್ಡ್ ಕ್ಯಾಮೆರಾ ಗಳನ್ನು ಒಳಗೊಂಡಿದೆ.

'ಬಿಎಂಟಿಸಿ ಸಂಸ್ಥೆಯು 6,500 ಬಸ್‌ಗಳನ್ನು ಹೊಂದಿದ್ದು, ಅದರಲ್ಲಿ 5,000 ಬಸ್‌ಗಳಲ್ಲಿ ವಾಹನ ಟ್ರ್ಯಾಕಿಂಗ್ ಸಾಧನ, ಪ್ಯಾನಿಕ್ ಬಟನ್, 10 ಸಾವಿರ ಸಿಸಿಟಿವಿ ಕ್ಯಾಮೆರಾ, 5 ಸಾವಿರ ಎಎನ್‌ವಿಆರ್ ಕಣ್ಗಾವಲು ಕ್ಯಾಮೆರಾ, 500 ಸಾರ್ವಜನಿಕ ಮಾಹಿತಿ ಸಿಸ್ಟಂ ಅಳವಡಿಸಲಾಗಿದೆ. ಅವುಗಳ ಜತೆ 'ನಮ್ಮ ಬಿಎಂಟಿಸಿ' ಆ್ಯಪ್ ಅನ್ನು ಜೋಡಿಸಲಾಗಿದೆ' ಎಂದು ಬಿಎಂಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ಬಾಕಿ ಉಳಿದಿರುವ 1,500 ಬಸ್‌ಗಳಲ್ಲಿ ಶೀಘ್ರದಲ್ಲಿಯೇ ಈ ಸುರಕ್ಷತಾ ವ್ಯವಸ್ಥೆ ಅಳವಡಿಸಲಾಗುವುದು ಎಂದು ತಿಳಿಸಿದರು.

ಆ್ಯಂಡ್ರಾಯ್ಡ್ ಪ್ಲ್ಯಾಟ್‌ಫಾರ್ಮ್ ಮತ್ತು ಐಒಎಸ್ ಪ್ಲ್ಯಾಟ್‌ಫಾರ್ಮ್ ಮೂಲಕ ಈ ಮೊಬೈಲ್ ಅಪ್ಲಿಕೇಶನ್ ಅನ್ನು ಎಂಸಿಟಿ ಕಾರ್ಡ್ಸ್ ಮತ್ತು ಟೆಕ್ನಾಲಜೀಸ್ ಸಂಸ್ಥೆ ಅಭಿವೃದ್ಧಿ ಪಡಿಸಿದೆ ಎಂದು ವಿವರ ನೀಡಿದರು.

ಉಪಯೋಗ: ಈ ಆ್ಯಪ್ ಅಳವಡಿಸಿ ಕೊಂಡರೆ ಜಿಯೊ ಲೊಕೇಶನ್ ಹಾಗೂ ಟೆಕ್ಸ್ಟ್ ಸರ್ಚ್ ಮೂಲಕ ಹತ್ತಿರದ ಬಸ್ ನಿಲ್ದಾಣಗಳನ್ನು ಹುಡುಕಬಹುದು. ಬಸ್ ಆಗಮನದ ಅಂದಾಜು ಸಮಯ, ತಲುಪಬೇಕಿರುವ ಸ್ಥಳದವರೆಗಿನ ಪ್ರಯಾಣದ ಅವಧಿಯ ವಿವರ, ಆಗಮನ, ನಿರ್ಗಮನದ ವೇಳಾಪಟ್ಟಿ, ಮಹಿಳೆಯರ ಸುರಕ್ಷತೆಗಾಗಿ ಎಸ್‌ಒಎಸ್ ಬಟನ್, ಸಂಚರಿಸುತ್ತಿರುವ ಸ್ಥಳದ ಮಾಹಿತಿಯನ್ನು ಹಂಚಿಕೊಳ್ಳುವ ಅವಕಾಶ, ಬಸ್ ನಿಲ್ದಾಣದ ಸುತ್ತಮುತ್ತ ಇರುವ ಎಟಿಎಂ, ರೆಸ್ಟೋರೆಂಟ್, ಆಸ್ಪತ್ರೆ, ಪೊಲೀಸ್ ಠಾಣೆ, ಪಾರ್ಕಿಂಗ್ ಸ್ಥಳಗಳ ವಿವರಗಳು ಸುಲಭದಲ್ಲಿ ದೊರಕಲಿವೆ.

ಜೊತೆಗೆ ಪ್ರಯಾಣಿಕರು ಪ್ರತಿಕ್ರಿಯೆಯನ್ನು ದಾಖಲಿಸಲು ಅವಕಾಶ ನೀಡಲಾಗಿದೆ.

ಯಾರೂ ದೂರು ನೀಡಿಲ್ಲ: ಬಹಳಷ್ಟು ಮಹಿಳೆಯರು ಈ ಆ್ಯಪ್ ಡೌನ್‌ಲೋಡ್ ಮಾಡಿ, ಪರೀಕ್ಷಿಸಿ ನೋಡಿದ್ದಾರೆ. ಪ್ರತಿದಿನ ಇಂಥ ನೂರಾರು ಮಾಹಿತಿಗಳು ಕಂಟ್ರೋಲ್ ರೂಂಗೆ ಬರುತ್ತಿದೆ. ಆದರೆ, ಇಲ್ಲಿಯವರೆಗೆ ಯಾವುದೇ ದೂರು ದಾಖಲಾಗಿಲ್ಲ' ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ಜನಸ್ನೇಹಿ ಆ್ಯಪ್'

'ನಮ್ಮ ಬಿಎಂಟಿಸಿ' ಮೊಬೈಲ್ ಆ್ಯಪ್ ಜನಸ್ನೇಹಿ ಆಗಿರುವುದರಿಂದ ಮಹಿಳೆಯರು ಸ್ಪಂದಿಸಿದ್ದಾರೆ. ಸುರಕ್ಷತೆಯು ಆ್ಯಪ್‌ನ ಪ್ರಮುಖ ಉದ್ದೇಶವಾಗಿದ್ದರೂ ಬಸ್ ನಿಲ್ದಾಣ, ಕ್ರಮಿಸಬೇಕಿರುವ ದೂರ, ಸಮಯ ಸಹಿತ ವಿವಿಧ ಮಾಹಿತಿಗಳು ಈ ಆ್ಯಪ್ ಮೂಲಕ ಬೆರಳ ತುದಿಯಲ್ಲೇ ಸಿಗುವುದರಿಂದ 'ನಮ್ಮ ಬಿಎಂಟಿಸಿ' ಆ್ಯಪ್ ಅನ್ನು ಎಲ್ಲರೂ ಡೌನ್‌ಲೋಡ್ ಮಾಡಿಕೊಳ್ಳುತ್ತಿದ್ದಾರೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್ ಆರ್. ತಿಳಿಸಿದರು.

ಅಂಕಿ ಅಂಶ

55.5 ಲಕ್ಷ — 'ನಮ್ಮ ಬಿಎಂಟಿಸಿ' ಸರ್ಚ್ ಮಾಡಿದವರು

7.56 ಲಕ್ಷ — ಆ್ಯಂಡ್ರಾಯ್ಡ್ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡವರು

75 ಸಾವಿರ — ಐಫೋನ್ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಂಡವರು

ಶಾಸಕರಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮನವಿ

'ದಿನದಿಂದ ದಿನಕ್ಕೆ ತೀರಾ ದುರ್ಬಲ ಸ್ಥಿತಿ ತಲುಪುತ್ತಿರುವ ಸರ್ಕಾರಿ ಶಾಲೆಗಳ ಸಬಲೀಕರಣವಾಗದ ಹೊರತು, ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಉದ್ದೇಶ ಸಫಲವಾಗುವುದಿಲ್ಲ'

ಸರ್ಕಾರಿ ಶಾಲೆಗಳನ್ನು ದತ್ತು ಪಡೆಯಲು ಕೋರಿಕೆ

ಬೆಂಗಳೂರು: 'ಎಲ್ಲ ಶಾಸಕರು ತಾವು ಪ್ರತಿನಿಧಿಸುವ ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ತಲಾ ಐದು ಸರ್ಕಾರಿ ಶಾಲೆಗಳನ್ನು ದತ್ತು ಪಡೆದು, ಅವುಗಳನ್ನು ಸಬಲೀಕರಣಗೊಳಿಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮನವಿ ಮಾಡಿದೆ.



ಪುರುಷೋತ್ತಮ ಬಿಳಿಮಲೆ

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ವಿಧಾನಸಭೆಯ ಅಧ್ಯಕ್ಷ ಯು.ಟಿ. ಖಾದರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು ಹಾಗೂ ಎಲ್ಲ ಶಾಸಕರಿಗೆ ಪತ್ರ ಬರೆದಿದ್ದಾರೆ. ದತ್ತು ಪಡೆದ ಶಾಲೆಗಳನ್ನು ಸಬಲೀಕರಣಗೊಳಿಸಿ, ಮಾದರಿ ಶಾಲೆಯನ್ನಾಗಿ ರೂಪಿಸಬೇಕು ಎಂದು ಅವರು ತಿಳಿಸಿದ್ದಾರೆ.

'ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳನ್ನು ಬಲಗೊಳಿಸಿ, ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಸಬಲೀಕರಣಗೊಳಿಸಲು ಪ್ರಾಧಿಕಾರವು ರಾಜ್ಯ ಸರ್ಕಾರಕ್ಕೆ ಸಲಹೆ ನೀಡುತ್ತಾ ಬಂದಿದೆ. ಆದರೂ ಒಂದೂವರೆ ದಶಕದಿಂದ ರಾಜ್ಯದಲ್ಲಿ ಸರ್ಕಾರಿ ಶಾಲೆಗಳು ದುರ್ಬಲಗೊಳ್ಳುತ್ತಿದ್ದು, ಶಿಕ್ಷಣದ ಖಾಸಗೀಕರಣ ಹಾಗೂ ವ್ಯಾಪಾರೀಕರಣ ನಾಗಲೋಟದಲ್ಲಿ ಸಾಗುತ್ತಿದೆ' ಎಂದು ಅವರು ಹೇಳಿದ್ದಾರೆ.

'ಸರ್ಕಾರಿ ಶಾಲೆಗಳು ಉಳಿದರೆ ಮಾತ್ರ ಕನ್ನಡ ಭಾಷೆ ಹಾಗೂ ಸಂಸ್ಕೃತಿ ಉಳಿಯಬಲ್ಲದು. ಶಾಲೆಗಳನ್ನು ದತ್ತು ಪಡೆದು, ಸಬಲೀಕರಣಗೊಳಿಸುವ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಶಾಸಕರು ಪ್ರಾಧಿಕಾರವನ್ನು ಸಂಪರ್ಕಿಸಬಹುದು' ಎಂದು ಅವರು ಹೇಳಿದ್ದಾರೆ.

ರಾಮಕೃಷ್ಣ ಹೆಗಡೆ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಸಿ.ಎಂ.ಇಬ್ರಾಹಿಂ ಅಭಿಮತ • 'ಕಾಯಕ ಶ್ರೀ' ಪ್ರಶಸ್ತಿ ಪ್ರದಾನ

'ರಾಜ್ಯದಲ್ಲಿ ತೃತೀಯ ಶಕ್ತಿಗೆ ಅವಕಾಶವಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸ್ತುತ ರಾಜ್ಯ ರಾಜಕೀಯ ದಲ್ಲಿ ತೃತೀಯ ಶಕ್ತಿಗೆ ಅವಕಾಶ ಇದೆ. ಜನತಾ ಪರಿವಾರದ ನಾಯಕರು ಮತ್ತೆ ಒಂದಾದರೆ ಅದು ಸಾಧ್ಯವಾಗುತ್ತದೆ ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹೇಳಿದರು.

ಜನತಾ ಪಕ್ಷದ ವತಿಯಿಂದ ನಗರದಲ್ಲಿ ಗುರುವಾರ ಆಯೋಜಿಸಿದ್ದ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರ 97ನೇ ಜನ್ಮದಿನಾಚರಣೆ ಕಾರ್ಯ-ಕ್ರಮದಲ್ಲಿ ಅವರು ಮಾತನಾಡಿದರು.

'ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷ ಬೇಡವಾದರೆ ಎಲ್ಲಿಗೆ ಹೋಗಬೇಕು? ಯಾವುದನ್ನು ಆಯ್ಕೆ ಮಾಡಿಕೊಳ್ಳ ಬೇಕು? ಎಂಬುದಕ್ಕೆ ಉತ್ತರವಿಲ್ಲ. ಈ ನಿಟ್ಟಿನಲ್ಲಿ ರೈತಸಂಘ, ದಿಂಗಾಲೇಶ್ವರ ಸ್ವಾಮೀಜಿ, ವೀರೇಂದ್ರ ಹೆಗ್ಗಡೆ ಸೇರಿದಂತೆ ವಿಚಾರವಾದಿ ಸ್ವಾಮೀಜಿಗಳ ಜತೆ ಚರ್ಚೆ ನಡೆಸಿದ್ದೇನೆ. ತೃತೀಯ ಶಕ್ತಿಯಿಂದ ಮಾತ್ರ ದಲಿತರು ಮತ್ತು ಅಲ್ಪಸಂಖ್ಯಾತ ರಿಗೆ ಮರ್ಯಾದೆ ಸಿಗುವುದು. ದಕ್ಷಿಣ ಭಾರತದಲ್ಲಿ ಪ್ರಾದೇಶಿಕ ಪಕ್ಷಗಳೇ ಅಧಿಕಾರ ನಡೆಸುತ್ತಿರುವುದು. ನಾನು ಆಶಾವಾದಿ, ಬದಲಾವಣೆ ಸಾಧ್ಯ ಎಂಬ ನಂಬಿಕೆ ಇದೆ' ಎಂದರು.



ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ಆಯೋಜಿಸಿದ್ದ ರಾಮಕೃಷ್ಣ ಹೆಗಡೆ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಹೆಗಡೆ ಭಾವಚಿತ್ರಕ್ಕೆ ಅವರ ಮಗಳು ಸಮತಾ ಪುಷ್ಪನಮನ ಸಲ್ಲಿಸಿದರು. ಗುರುರಾಜ ಕರಜಗಿ , ಆರ್‌.ವಿ.ದೇಶಪಾಂಡೆ, ಬಿ.ಎಲ್‌.ಶಂಕರ್, ಎಂ.ಪಿ.ನಾಡಗೌಡ, ಭಾಸ್ಕರ್ ರಾವ್ ಇದ್ದರು —ಪ್ರಜಾವಾಣಿ ಚಿತ್ರ

'ನಾನು ಮೊದಲ ಬಾರಿ ಚುನಾವಣೆಗೆ ಸ್ಪರ್ಧಿಸಿದಾಗ ₹4 ಸಾವಿರ ಖರ್ಚಾಗಿತ್ತು. ಈಗ ಮಹಾತ್ಮ ಗಾಂಧಿ ಸ್ಪರ್ಧಿಸಿದರೂ ₹10 ಕೋಟಿ ಖರ್ಚು ಮಾಡಬೇಕಾದ ಪರಿಸ್ಥಿತಿ ಇದೆ. ಶೇಕಡ 70–80 ರಷ್ಟು ಜನರು ಮತ ಕೇಳಲು ಬಂದವರ ಬಳಿಯೇ ಹಣ ಕೇಳುತ್ತಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಕೆಲವು ರಾಜಕಾರಣಿಗಳು ಸೇಡಿನ ರಾಜಕೀಯ ಮಾಡುತ್ತಾರೆ. ಆದರೆ, ಹೆಗಡೆ ಅವರು ಎಂದೂ ಸೇಡಿನ ರಾಜಕೀಯ ಮಾಡಲಿಲ್ಲ. ಕಾರ್ಯಕರ್ತ ರಿಗೆ ಸೂಕ್ತ ಸ್ಥಾನ ನೀಡಿ, ಗೌರವ ಕೊಡುತ್ತಿದ್ದರು ಎಂದು ಅವರು ಹೇಳಿದರು.

ರಾಮಕೃಷ್ಣ ಹೆಗಡೆ, ವೀರೇಂದ್ರ ಪಾಟೀಲ, ಜೆ.ಎಚ್.ಪಟೇಲ್ ಅವರ ರಾಜಕೀಯ ಇತಿಹಾಸ ಕುರಿತು ಪುಸ್ತಕ ಬರೆಯುತ್ತಿದ್ದು, ಜನವರಿಯಲ್ಲಿ ಬಿಡುಗಡೆ ಯಾಗಲಿದೆ ಎಂದರು.

ಮಾಜಿ ಸಚಿವ ಬಿ.ಸೋಮಶೇಖರ್, ಲೀಲಾದೇವಿ ಆರ್. ಪ್ರಸಾದ್ ಹಾಗೂ ಪರಿಷತ್ ಮಾಜಿ ಸದಸ್ಯ ಎಂ.ಪಿ. ನಾಡಗೌಡ, ಹೆಗಡೆ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದರು.

ಇದೇ ವೇಳೆ ಇಬ್ರಾಹಿಂ, ನಾಡಗೌಡ, ಲೀಲಾದೇವಿ, ಬಿಜೆಪಿ ಮುಖಂಡ ಭಾಸ್ಕರ್ ರಾವ್, ಬಿ. ಸೋಮಶೇಖರ್ ಅವರಿಗೆ 'ಮೌಲ್ಯಾಧಾರಿತ ಕಾಯಕಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೈ ಪ್ರಕಾಶ್ ಬಂಧು, ಉಪಾಧ್ಯಕ್ಷ ಅನುಜ್ ಜಿ ಶರ್ಮ, ಮುಖಂಡರಾದ ಆರ್.ವಿ.ಹರೀಶ್, ರಾಬಿನ್ ಮ್ಯಾಥ್ಯೂ ಉಪಸ್ಥಿತರಿದ್ದರು.

'ಪ್ರಧಾನಿಯಾಗುವ ಅರ್ಹತೆ ಇತ್ತು'

ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಅವರಿಗೆ ಪ್ರಧಾನಿಯಾಗುವ ಅರ್ಹತೆ ಇತ್ತು. ಆದರೆ, ಅಧಿಕಾರಕ್ಕಾಗಿ ಅವರು ಕೀಳು ಮಟ್ಟದ ರಾಜಕೀಯ ಮಾಡಲಿಲ್ಲ ಎಂದು ಶಿಕ್ಷಣ ತಜ್ಞ ಗುರುರಾಜ ಕರಜಗಿ ಹೇಳಿದರು.

ರಾಷ್ಟ್ರೀಯ ನವ ನಿರ್ಮಾಣ ವೇದಿಕೆ ಏರ್ಪಡಿಸಿದ್ದ 'ರಾಮಕೃಷ್ಣ ಹೆಗಡೆ–98' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವಿ.ಪಿ. ಸಿಂಗ್ ಅವರ ಜತೆ ಭಿನ್ನಾಭಿಪ್ರಾಯ ಇದ್ದರೂ ತೋರಿಸಿಕೊಳ್ಳದೇ ಅವರಿಗೆ ಬೆಂಬಲವಾಗಿದ್ದರು. ದೂರವಾಣಿ ಕದ್ದಾಲಿಕೆ ಆರೋಪ ಕೇಳಿ ಬಂದಾಗ ರಾಜೀನಾಮೆ ನೀಡುವ ಮೂಲಕ ತಾನು ಅಧಿಕಾರಕ್ಕೆ ಅಂಟಿಕೊಂಡವನಲ್ಲ ಎಂಬುದನ್ನು ಸಾಬೀತುಪಡಿ-ಸಿದರು' ಎಂದರು.

ತುರ್ತುಸ್ಥಿತಿ ಪರಿಸ್ಥಿತಿಯಲ್ಲಿ ಜೈಲಿಗೆ ಹೋಗಿ ಬಂದ ಬಳಿಕ ಹೆಗಡೆ ಗಡ್ಡ ಬಿಡಲು ಆರಂಭಿಸಿದರು. ಓದು, ಚರ್ಚೆ, ಬುದ್ಧಿಜೀವಿಗಳೊಂದಿಗೆ ಬೆರೆಯಲು ಶುರು ಮಾಡಿದರು. ಉತ್ತಮ ಹಾಸ್ಯ ಪ್ರಜ್ಞೆ ಹೊಂದಿದ್ದ ಅವರು ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಕೆಲಸ ಮಾಡುತ್ತಿದ್ದರು ಎಂದು ಹೇಳಿದರು.

ಶ್ರೀಪಾದ ಭಟ್ ನಿರ್ದೇಶನದ ಮಂಟೇಸ್ವಾಮಿ ಕಾವ್ಯ ಪ್ರಯೋಗ ನಿಜವರಿತು ನುಡಿವವ 'ಶರಣ' ಪ್ರದರ್ಶಿಸಲಾಯಿತು. ಕಲಾವಿದರಾದ ಶಾಲೋಮ್ ಸನ್ನುತಾ, ಅನುಷ್ ಶೆಟ್ಟಿ, ಮುನ್ನ ಮೈಸೂರು, ರೋಹಿತ್ ಶ್ರೀಧರ್ ಭಾಗವಹಿಸಿದ್ದರು.

ಮುಖ್ಯಮಂತ್ರಿಯವರ ಸಲಹೆಗಾರ ಬಿ.ಆರ್. ಪಾಟೀಲ, ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ, ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್.ಶಂಕರ್, ಕಾರ್ಮಿಕ ನಾಯಕ ಆರ್.ವಿ.ಹರೀಶ್ ಹಾಜರಿದ್ದರು.

ಕಾರ್ಕಳ ಅತ್ಯಾಚಾರ ಪ್ರಕರಣ: ಮತ್ತಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಉಡುಪಿ: ಕಾರ್ಕಳದಲ್ಲಿ ಯುವತಿ ಮೇಲೆ ನಡೆದ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿ ಮತ್ತಿಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ಗೋವಿಂದಪಲ್ಲಿ ನಿವಾಸಿ ಗಿರಿರಾಜು ಜಗಾಧಾಬಿ (31), ಉಡುಪಿ ಜಿಲ್ಲೆ ಕಾಪು ತಾಲ್ಲೂಕಿನ ಶಂಕರಪುರದ ಜಾನ್ ನೊರೋನ್ಹಾ (30) ಬಂಧಿತ ಆರೋಪಿಗಳು.

ಇವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದು, ನ್ಯಾಯಾಲಯವು ಪೊಲೀಸ್ ವಶಕ್ಕೆ ನೀಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ಅಲ್ತಾಫ್, ಕ್ಸೇವಿಯರ್ ರಿಚರ್ಡ್ ಕ್ವಾಡ್ರಸ್ ಮತ್ತು ಅಭಯ್ ಎಂಬುವವರನ್ನು ಪೊಲೀಸರು ಈ ಹಿಂದೆ ಬಂಧಿಸಿದ್ದರು.

ನೀರು ಪೂರೈಕೆಯಲ್ಲಿ ವ್ಯತ್ಯಾಸ ಕ್ರಮ ಜರುಗಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ನಮ್ಮ ಕ್ಷೇತ್ರದ ಪಾಲಿನ 20 ಎಂಎಲ್‌ಡಿ ನೀರನ್ನು ಯಲಹಂಕ ಕ್ಷೇತ್ರಕ್ಕೆ ಹರಿಸಿ, ಈ ಕ್ಷೇತ್ರದಲ್ಲಿ ನೀರಿನ ಹಾಹಾಕಾರಕ್ಕೆ ಕಾರಣವಾಗಿರುವ ಅಧಿಕಾರಿಯ ವಿರುದ್ಧ ಕೂಡಲೇ ಕ್ರಮ ಜರುಗಿಸಬೇಕು' ಎಂದು ಶಾಸಕ ಎಸ್. ಮುನಿರಾಜು ಆಗ್ರಹಿಸಿದರು.

ಹೆಗ್ಗನಹಳ್ಳಿಯಲ್ಲಿರುವ ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ 48 ಎಂಎಲ್ ನೆಲಮಟ್ಟದ ಜಲಸಂಗ್ರಹಾರಕ್ಕೆ ಬುಧವಾರ ಜಲ ಮಂಡಳಿ ಅಧಿಕಾರಿಗಳೊಂದಿಗೆ ಭೇಟಿ ನೀಡಿ, ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

'ಪ್ರಧಾನ ಎಂಜಿನಿಯರ್ ಸುರೇಶ್ ಅವರು, ಹೆಗ್ಗನಹಳ್ಳಿಯ ಜಲಸಂಗ್ರಹಾರಕ್ಕೆ ಬರಬೇಕಾದ ನೀರನ್ನು, ಸಿಂಗಾಪುರದ ಜಲಸಂಗ್ರಹಾರಕ್ಕೆ ಹರಿಸಿದ್ದಾರೆ. ಇದರಿಂದಾಗಿ ಹೆಗ್ಗನಹಳ್ಳಿಯ ಜನರಿಗೆ ಅನ್ಯಾಯ ಎಸಗಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹೆಗ್ಗನಹಳ್ಳಿಯಲ್ಲಿರುವ ಜಲಮಂಡಳಿಯ ನೆಲಮಟ್ಟದ ಜಲಸಂಗ್ರಹಾರಕ್ಕೆ ಶಾಸಕ ಎಸ್‌.ಮುನಿರಾಜು ಅವರು ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು

ಜಲಮಂಡಳಿ ಪಶ್ಚಿಮ ವಿಭಾಗದ ಮುಖ್ಯ ಎಂಜಿನಿಯರ್ ಪರಮೇಶ್ವರಪ್ಪ ಮಾತನಾಡಿ, 'ನೀರು ಪೂರೈಕೆಯಲ್ಲಿ ದಾಸರಹಳ್ಳಿ ಕ್ಷೇತ್ರಕ್ಕೆ ಆಗುತ್ತಿರುವ ವ್ಯತ್ಯಾಸವನ್ನು ಪರಿಶೀಲಿಸಿದ್ದೇವೆ. ಈ ಸಮಸ್ಯೆಯನ್ನು ಒಂದು ವಾರದೊಳಗೆ ಬಗೆಹರಿಸಲಾಗುತ್ತದೆ. ಮುಂದಿನ ದಿನಗಳಲ್ಲಿ ಕಾವೇರಿ 5ನೇ ಹಂತ ಬರಲಿದ್ದು, ನೀರಿನ ಸಮಸ್ಯೆ ಸಂಪೂರ್ಣ ಬಗೆಹರಿಯಲಿದೆ' ಎಂದು ಭರವಸೆ ನೀಡಿದರು.

ಉದ್ಯಮಿ ಜಯಸುಧಾ 'ಸ್ವಾವಲಂಬನೆ' ಯಶೋಗಾಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ದಿನದ ಬದುಕು ದೂಡಬೇಕಾದ ಅನಿವಾರ್ಯತೆ. ಇನ್ನೊಂದೆಡೆ ಬೆಳೆದು ನಿಂತ ಮೂವರು ಮಕ್ಕಳಿಗೆ ಭವಿಷ್ಯ ಕಟ್ಟಿಕೊಡಬೇಕಾದ ಹೊಣೆಗಾರಿಕೆ. ಕುಟುಂಬದ ದೈನಂದಿನ ಅಗತ್ಯಗಳಿಗೆ ಹಣ ಒದಗಿಸಲು ಒದ್ದಾಡುತ್ತಿದ್ದ ಹೆಣ್ಣುಮಗಳೀಗ ನಾಲ್ಕಾರು ಮಂದಿಗೆ ಕೆಲಸ ನೀಡಿರುವ ಉದ್ಯಮಿ...

ಕೋಲಾರದ ಜಯಸುಧಾ ಅವರು ಉದ್ಯಮಿಯಾಗಿ ಬದುಕು ಕಟ್ಟಿಕೊಂಡ ಬಗೆ ಸ್ಫೂರ್ತಿದಾಯಕವಾದುದು. ದಿನಗೂಲಿ ಎಂದು ಕಷ್ಟಪಡುತ್ತಿದ್ದ ಜಯಸುಧಾಗೆ ಸರ್ಕಾರದ 'ಸ್ವಾವಲಂಬನೆ' ಯೋಜನೆಯ ಮಾತು ಕಿವಿಗೆ ಬಿದ್ದಿತ್ತು. ತಮ್ಮೂರಿನ ಸ್ವಸಹಾಯ ಗುಂಪನ್ನು ಎಡತಾಕಿದ ಅವರು, ಉದ್ಯಮಿಯಾಗುವ ಕನಸು ಕಂಡರು. ಕರ್ನಾಟಕ ಜೀವನೋಪಾಯ ಇಲಾಖೆಯ ಸ್ವಾವಲಂಬನೆ ಕಾರ್ಯಕ್ರಮದ ಅಡಿಯಲ್ಲಿ ತರಬೇತಿ ಮತ್ತು ಆರ್ಥಿಕ ನೆರವು ಪಡೆದ ಅವರು, ಉದ್ಯಮ ಆರಂಭಿಸಿಯೇಬಿಟ್ಟರು.

ತಾವೇ ರೂಪಿಸಿದ ಅಡುಗೆ ಸಾಮಗ್ರಿಗಳನ್ನು ಪೊಟ್ಟಣಕ್ಕೆ ತುಂಬಿ ಮಾರಾಟ ಮಾಡಲಾರಂಭಿಸಿ-ದರು. ಒಂದೆರಡು ಉತ್ಪನ್ನಗಳಿಂದ ಆರಂಭವಾದ ಉದ್ಯಮ, ಹತ್ತಾರು ಉತ್ಪನ್ನಗಳಿಗೆ ವಿಸ್ತರಿಸಿತು. ರಾಗಿ, ಸಿರಿಧಾನ್ಯ ಹಾಗೂ ಮಿಶ್ರಧಾನ್ಯಗಳ ಹಿಟ್ಟು... ಹೀಗೆ ಅವರ ಉತ್ಪನ್ನಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ವೈಯಕ್ತಿಕ ಆರೋಗ್ಯ ನಿರ್ವಹಣೆಯ ಉತ್ಪನ್ನಗಳನ್ನೂ ತಯಾರಿಸಿ ಮಾರಾಟ ಮಾಡುವ ಜಯಸುಧಾ ಅವರ ಉದ್ಯಮದ ವಾರ್ಷಿಕ ವಹಿವಾಟು ಈಗ ಎರಡು ಲಕ್ಷ ರೂಪಾಯಿ ದಾಟುತ್ತದೆ.

ಜೀವನೋಪಾಯ ಇಲಾಖೆಯು ಬೆಂಗಳೂರಿನಲ್ಲಿ ಗುರುವಾರ ಆಯೋಜಿಸಿದ್ದ 'ಗ್ರಾಮೀಣ ಪ್ರದೇಶದ ಉದ್ಯಮಶೀಲ ಮಹಿಳೆಯರ ರಾಷ್ಟ್ರೀಯ ಸಮಾವೇಶ'ದಲ್ಲಿ ಜಯಸುಧಾ ಅವರು ತೆರೆದಿಟ್ಟ ಯಶೋಗಾಥೆಯ ವಿವರಗಳಿವು. ಅವರೊಬ್ಬರೇ ಅಲ್ಲ, ಅಂತಹ 150 ಮಹಿಳಾ ಉದ್ಯಮಿಗಳು ಸ್ವಾವಲಂಬಿ ಕಾರ್ಯಕ್ರಮದ ಮೂಲಕ ತಾವು ಉದ್ಯಮಿಗಳಾದ ಬಗೆಯನ್ನು ಸಮಾವೇಶದಲ್ಲಿ ವಿವರಿಸಿದರು. ಅವರೆಲ್ಲರನ್ನೂ ಗೌರವಿಸಲಾಯಿತು.

ಸ್ವಾವಲಂಬನೆ ಕಾರ್ಯಕ್ರಮದ ಅಡಿಯಲ್ಲಿ ಮಹಿಳಾ ಉದ್ಯಮಿಗಳಿಗೆ ಅನುದಾನ ಮತ್ತು ಸಾಲದ ರೂಪದಲ್ಲಿ ಆರ್ಥಿಕ ನೆರವು ನೀಡಲಾಗುತ್ತದೆ. ಜತೆಗೆ ಲೆಕ್ಕಪತ್ರ ನಿರ್ವಹಣೆ, ವ್ಯಾಪಾರ–ವಹಿವಾಟಿನ ರೂಪುರೇಷೆಗಳು, ಬ್ರ್ಯಾಂಡಿಂಗ್, ಮಾರಾಟ ಮತ್ತು ಮಾರಾಟಕ್ಕೆ ಸಾಮಾಜಿಕ ಜಾಲತಾಣಗಳ ಬಳಕೆ ಬಗ್ಗೆ ಮಾರ್ಗದರ್ಶನ ನೀಡಲಾಗುತ್ತದೆ.

'ಜಿಲ್ಲಾಮಟ್ಟಕ್ಕೆ ವಿಸ್ತರಣೆ'

'ಸ್ವಾವಲಂಬನೆ ಕಾರ್ಯಕ್ರಮ ವನ್ನು ಜಿಲ್ಲಾಮಟ್ಟಕ್ಕೆ ವಿಸ್ತರಿಸಲಾಗುತ್ತದೆ' ಎಂದು ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ ಹೇಳಿದರು.

ಸಮಾವೇಶ ಉದ್ಘಾಟಿಸಿ ಮಾತನಾಡಿ, 'ಆರಂಭದಲ್ಲಿ 150 ಮಹಿಳಾ ಸ್ವಸಹಾಯ ಗುಂಪುಗಳಿಗೆ ಈ ಯೋಜನೆ ತಲುಪಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಆದರೆ ಗುರಿಯನ್ನೂ ಮೀರಿ ಯೋಜನೆ ಯಶಸ್ವಿಯಾಗಿದೆ. 40,000 ಮಹಿಳೆಯರು ಅರ್ಜಿ ಸಲ್ಲಿಸಿದ್ದಾರೆ' ಎಂದರು.

ಯೋಜನೆ ಅಡಿ ತಯಾರಿಸಲಾದ ಉತ್ಪನ್ನಗಳ ಮಾರಾಟಕ್ಕೆ 'ಸಂಜೀವಿನಿ' ಎಂಬ ಇ–ಮಾರುಕಟ್ಟೆ ಪೋರ್ಟಲ್ ಅನ್ನು ಶೀಘ್ರವೇ ಆರಂಭಿಸಲಾಗುತ್ತದೆ ಎಂದು ಅವರು ಹೇಳಿದರು.

ಸಜ್ಜನರ ಸಲ್ಲಾಪ ಕಾರ್ಯಕ್ರಮದಲ್ಲಿ ಹಂ.ಪ.ನಾಗರಾಜಯ್ಯ ಅಭಿಮತ

'ಅಕಾಡೆಮಿ: ಹೆಚ್ಚಿನ ಅನುದಾನ ಅಗತ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾಂಸ್ಕೃತಿಕ ಅಕಾಡೆಮಿ ಗಳಿಗೆ ಆರ್ಥಿಕ ಬೆಂಬಲ ಇಲ್ಲದಿದ್ದರೆ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರವು ಎಲ್ಲ ಅಕಾಡೆಮಿಗಳಿಗೆ ವರ್ಷಕ್ಕೆ ಕನಿಷ್ಠ ₹5 ಕೋಟಿಯಾದರೂ ಅನುದಾನ ಒದಗಿಸಬೇಕು' ಎಂದು ಸಾಹಿತಿ ಹಂ.ಪ.ನಾಗರಾಜಯ್ಯ ತಿಳಿಸಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ನಗರದಲ್ಲಿ ಗುರುವಾರ ಹಮ್ಮಿಕೊಂಡ 'ಕಳತಾವೂರ್ ಮಳಾವ್–01 (ಸಜ್ಜನರ ಸಲ್ಲಾಪ–01) ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಭಾಗವಹಿಸಿ, ಮಾತನಾಡಿದರು.

'ಹಿಂದೆ ಕೆರೆಗಳೆಲ್ಲ ಬತ್ತಿ ಹೋಗಿದ್ದರೂ ಸರ್ಕಾರದ ಆರ್ಥಿಕ ಸ್ಥಿತಿ ಉತ್ತಮವಾಗಿತ್ತು. ಈಗ ಆರ್ಥಿಕ ಸ್ಥಿತಿ ಬತ್ತಿ ಹೋಗಿದ್ದು, ನದಿಗಳು ತುಂಬಿ ಹರಿಯುತ್ತಿವೆ. ಇದರಿಂದಾಗಿ ಹೆಚ್ಚಿನ ಅನುದಾನ ಅಕಾಡೆಮಿಗಳಿಗೆ ದೊರೆಯು ತ್ತಿಲ್ಲ. ವಾರ್ಷಿಕ ₹ 30 ಲಕ್ಷ ಅನುದಾನ ನೀಡಿದರೆ ಕೆಲಸ ಮಾಡಲು ಸಾಧ್ಯ ವಾಗುವುದಿಲ್ಲ. ಅರ್ಧದಷ್ಟು ಹಣ ಸಿಬ್ಬಂದಿ ವೆಚ್ಚಕ್ಕೇ ಹೋಗಲಿದೆ. ಹೊಸ ದಾಗಿ ಕಾರ್ಯಕಾರಿ ಸಮಿತಿ ನೇಮಕ ಗೊಂಡ ಬಳಿಕ ಎಲ್ಲ ಅಕಾಡೆಮಿಗಳಿಗೆ ₹5 ಕೋಟಿ ಅನುದಾನ ಒದಗಿಸಿದರೆ ಕೆಲಸ ಮಾಡಲು ಸಾಧ್ಯವಾಗುತ್ತದೆ. ಈ ಬಗ್ಗೆ ಎಲ್ಲ ಅಕಾಡೆಮಿಗಳ ಅಧ್ಯಕ್ಷರನ್ನು ಒಳಗೊಂಡ ನಿಯೋಗವು ಮುಖ್ಯ-ಮಂತ್ರಿಯವರಿಗೆ ಮನವಿ ಸಲ್ಲಿಸಬೇಕು' ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಹಂ.ಪ. ನಾಗರಾಜಯ್ಯ ಮಾತನಾಡಿದರು.ಎ.ಆರ್. ಗೋವಿಂದಸ್ವಾಮಿ ಮತ್ತು ಎನ್‌.ಆರ್‌.ನಾಯಕ್ ಇದ್ದರು — ಪ್ರಜಾವಾಣಿ ಚಿತ್ರ

'ಬಂಜಾರ ಭಾಷಿಕರು ದೇಶದ ಉದ್ದಗಲಕ್ಕೂ ಹರಡಿದ್ದಾರೆ. ಅವರು ಪ್ರಾದೇಶಿಕ, ಸಾಂಸ್ಕೃತಿಕ ಲಕ್ಷಣವನ್ನು ಮೈಗೂಡಿಸಿಕೊಂಡಿದ್ದಾರೆ. ಬಂಜಾರರಿಗೆ ಸಂಬಂಧಿಸಿದಂತೆ ವಸ್ತು ಸಂಗ್ರಹಾಲಯ ನಿರ್ಮಿಸಬೇಕಿದೆ. ಬಂಜಾರ ಇತಿಹಾಸ ಓದಿದರೆ ರೋಮಾಂಚನವಾಗುತ್ತದೆ' ಎಂದು ಹೇಳಿದರು.

ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಎ.ಆರ್. ಗೋವಿಂದಸ್ವಾಮಿ ಮಾತನಾಡಿ, 'ಬಂಜಾರ ಸಂಸ್ಕೃತಿ ಮತ್ತು ಭಾಷೆಗೆ ಸಂಬಂಧಿಸಿದಂತೆ ಅಕಾಡೆಮಿಯು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಹಚ್ಚೆ, ತೊಗಲುಗೊಂಬೆ ಕಲೆ ಕಲಿಸುವಿಕೆಯ ಕಾರ್ಯಾಗಾರದ ಜತೆಗೆ ಕಸೂತಿ, ಮಾಲೆಗಳ ನಿರ್ಮಾಣದ ಬಗ್ಗೆ ತರಬೇತಿಯನ್ನೂ ಒದಗಿಸಲಾಗುವುದು' ಎಂದು ತಿಳಿಸಿದರು.

ಅಕಾಡೆಮಿ ರಿಜಿಸ್ಟ್ರಾರ್ ಬಿ. ನೀಲಮ್ಮ, ಕರ್ನಾಟಕ ಪ್ರದೇಶ (ಬಂಜಾರ) ಸೇವಾ ಸಂಘದ ಅಧ್ಯಕ್ಷ ಎನ್.ಆರ್. ನಾಯಕ್ ಉಪಸ್ಥಿತರಿದ್ದರು.

ದೇಶದ ವಿವಿಧ ಸಮೂಹ ಸಾರಿಗೆ ಮಾಲೀಕರು, ಆಪರೇಟರ್‌ಗಳಿಗೆ ವೇದಿಕೆ ಒದಗಿಸಿದ 'ಪ್ರವಾಸ್ 4.0'

ಅತ್ಯಾಧುನಿಕ ವಾಹನಗಳ ಆಕರ್ಷಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಧುನಿಕ ವಾಹನಗಳು, ಅವುಗಳ ಬಿಡಿಭಾಗಗಳ ಆಕರ್ಷಕ ಪ್ರದರ್ಶನವು ನೋಡುಗರ ಮನಸೂರೆಗೊಂಡಿತು.

ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಬಸ್ ಆ್ಯಂಡ್ ಕಾರ್ ಆಪರೇಟರ್ಸ್ ಕಾನ್ಫೆಡರೇಶನ್ ಆಫ್ ಇಂಡಿಯಾ (ಬಿಒಸಿಐ) ಹಮ್ಮಿಕೊಂಡಿರುವ 'ಪ್ರವಾಸ್ 4.0' ಕಾರ್ಯಕ್ರಮ ಈ ವಾಹನಗಳ ಪ್ರದರ್ಶನಕ್ಕೆ ವೇದಿಕೆಯಾಯಿತು.

ದೇಶದ 28 ರಾಜ್ಯಗಳು ಮತ್ತು ಎಂಟು ಕೇಂದ್ರಾಡಳಿತ ಪ್ರದೇಶಗಳ ಸಮೂಹ ಸಾರಿಗೆ ಮಾಲೀಕರು ಮತ್ತು ಆಪರೇಟರ್‌ಗಳು ಭಾಗಿಯಾಗಿದ್ದರು. 2 ಗಂಟೆ ಚಾರ್ಜ್ ಮಾಡಿದರೆ 350 ಕಿ.ಮೀ. ಸಂಚರಿಸುವ ಸ್ಲೀಪರ್ ಬಸ್‌ನಿಂದ ಆರಂಭವಾಗಿ, ವಿದ್ಯುತ್ ಚಾಲಿತ ಸರಕು ಸಾಗಣೆ ವಾಹನದವರೆಗೆ ವಿವಿಧ ವಾಹನಗಳು ಪ್ರದರ್ಶನದಲ್ಲಿದ್ದವು. ಡೀಸೆಲ್, ಪೆಟ್ರೋಲ್ ಕಾರುಗಳು ಗಮನ ಸೆಳೆದವು.

₹ 13,500ದಿಂದ ₹ 1.5 ಲಕ್ಷದ ವರೆಗಿನ ಮೌಲ್ಯದ ಬಸ್ ಸೀಟುಗಳು ಆಕರ್ಷಕವಾಗಿದ್ದವು. ವಿವಿಧ ವಿನ್ಯಾಸದ ಸೈಡ್ ಮಿರರ್‌ಗಳು (ಕನ್ನಡಿ), ಬಸ್ ಬಾಗಿಲು, ಎಂಜಿನ್, ಚಾಸಿಗಳು ವಾಹನಗಳಷ್ಟೇ ಆಕರ್ಷಣೆಗೆ ಒಳಗಾದವು. ನಗರದೊಳಗಿನ ಹಸಿರು ಸಮೂಹ ಸಾರಿಗೆಗಾಗಿ ಹೊಚ್ಚ ಹೊಸ ಟಾಟಾ ಅಲ್ಟ್ರಾ ಇವಿ 7ಎಂ ವಾಹನವನ್ನು ಟಾಟಾ ಮೋಟಾರ್ಸ್ ಅನಾವರಣಗೊಳಿಸಿತು. ಸುರಕ್ಷಿತ, ಸ್ಮಾರ್ಟ್ ಮತ್ತು ಸುಸ್ಥಿರ ಸಮೂಹ ಸಾರಿಗೆಗಳಾದ ಟಾಟಾ ಮ್ಯಾಗ್ನಾ ಇವಿ, ಟಾಟಾ ಮ್ಯಾಜಿಕ್ ಬೈ-ಫ್ಯೂಯಲ್, ಟಾಟಾ ಅಲ್ಟ್ರಾ ಪ್ರೈಮ್ ಸಿಎನ್‌ಜಿ, ಟಾಟಾ ವಿಂಗರ್ 9 ಎಸ್, ಟಾಟಾ ಸಿಟಿರೈಡ್ ಪ್ರೈಮ್ ಮತ್ತು ಟಾಟಾ ಎಲ್‌ಪಿಓ 1822 ಉತ್ಪನ್ನಗಳನ್ನು ಪ್ರದರ್ಶಿಸಿತು. 'ಇ-ಇಕಾ' ಬಸ್, ಸರಕು ಸಾಗಣೆ ವಾಹನಗಳು ಅಚ್ಚರಿಗೊಳಪಡಿಸಿದವು.

ಇವಲ್ಲದೇ ವೋಲ್ವೊ, ಐಶರ್, ರೆಡ್‌ಬಸ್, ಅಭಿಬಸ್, ವೀರಾ, ಪ್ರಕಾಶ್, ಎಬರ್‌ಸ್ಪೇಚರ್, ಬಾಶ್, ಟ್ರಾನ್ಸ್ ಎಸಿಎನ್‌ಆರ್, ಸ್ಪೆರೋಸ್ ಮದರ್‌ಸನ್, ದಾಮೋದರ್ ಕೋಚ್ ಕ್ರಾಫ್ಟ್ಸ್, ಮಾರುತಿ ಸುಜುಕಿ, ಬಿಟ್ಲಾ ಸಾಫ್ಟ್‌ವೇರ್‌ನಂಥ ಕಂಪನಿಗಳು ಪಾಲ್ಗೊಂಡಿದ್ದವು. ನಿಪ್ಪಾನ್ ಪೇಂಟ್, ಜೆಬಿಎಂ ಗ್ರೂಪ್, ಇಕಾ ಮೊಬಿಲಿಟಿ, ರೆಪೊಸ್ ಎನರ್ಜಿ, ಅಶೋಕ್ ಲೇಲ್ಯಾಂಡ್, ಫ್ಯೂಚರ್, ಆಟೋಮೆಟಿಕ್ ಗ್ಲೋಬಲ್ ವೆಂಚರ್ಸ್, ರಮೇಶ್ ಟೂರ್ಸ್ ಆ್ಯಂಡ್ ಟ್ರಾವೆಲ್ಸ್, ಔಡಿ, ಬಿಎಂಡಬ್ಲ್ಯು, ಡೆಯಟ್‌ಶೆ ಮೋಟರೆನ್, ಮರ್ಸಿಡಿಸ್-ಬೆಂಝ್, ಕಿಯಾ, ರಿನೊ ಕಂಪನಿಗಳು, ಐಡಿಯಲ್ ಇನ್ಶೂರೆನ್ಸ್ ಸಹಿತ ವಿವಿಧ ವಿಮಾ ಕಂಪನಿಗಳು ಭಾಗವಹಿಸಿದ್ದವು.

ಬಸ್, ಕಾರ್ ಆಪರೇಟರ್‌ಗಳಾದ ಇಂಟರ್‌ಸಿಟಿ, ಇಂಟ್ರಾಸಿಟಿ, ಶಾಲಾ ಬಸ್, ನೌಕರರ ಸಾರಿಗೆ, ಪ್ರವಾಸಿ ಆಪರೇಟರ್‌ಗಳು, ಪ್ರವಾಸಿ ಕ್ಯಾಬ್‌ಗಳು, ಮ್ಯಾಕ್ಸಿ ಕ್ಯಾಬ್‌ಗಳು, ಪಿಪಿ-ಎಸ್‌ಪಿವಿ, ಕ್ರಿಟಿಕಲ್ ಕೇರ್ ಸಂಸ್ಥೆಗಳು ಭಾಗವಹಿಸಿದ್ದವು. 'ಪ್ರವಾಸ್ 4.0' ಪ್ರದರ್ಶನ-ಸಮ್ಮೇಳನ ಶನಿವಾರದವರೆಗೆ ನಡೆಯಲಿದೆ. ವಿವಿಧ ರಾಜ್ಯಗಳ ಸಾರಿಗೆ ಸಚಿವರು, ಸಾರಿಗೆ ಸಂಸ್ಥೆಗಳ ಪ್ರಮುಖರು ಭಾಗವಹಿಸಲಿದ್ದಾರೆ. ಸಾರಿಗೆಗೆ ಸಂಬಂಧಿಸಿದಂತೆ ವಿವಿಧ ವಿಚಾರಗಳನ್ನು ಹಂಚಿಕೊಳ್ಳಲಿದ್ದಾರೆ.

1. ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಬಸ್ ಆ್ಯಂಡ್ ಕಾರ್ ಆಪರೇಟರ್ಸ್ ಕಾನ್ಫೆಡರೇಶನ್ ಆಫ್ ಇಂಡಿಯಾ (ಬಿಒಸಿಐ) ಹಮ್ಮಿಕೊಂಡಿರುವ 'ಪ್ರವಾಸ್ 4.0' ಕಾರ್ಯಕ್ರಮವನ್ನು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಗುರುವಾರ ಉದ್ಘಾಟಿಸಿದರು. ಟಾಟಾ ಮೋಟಾರ್ಸ್ ವಾಣಿಜ್ಯ ಪ್ರಯಾಣಿಕರ ವಾಹನ ವ್ಯವಹಾರಗಳ ಮುಖ್ಯಸ್ಥ ಆನಂದ್ ಎಸ್., ವಿವಿಧ ಕಂಪನಿಗಳ ಮುಖ್ಯಸ್ಥರು ಭಾಗವಹಿಸಿದ್ದರು 2. 'ಪ್ರವಾಸ್ 4.0' ಕಾರ್ಯಕ್ರಮದಲ್ಲಿ ಇ-ಇಕಾ ಬಸ್ ಪ್ರದರ್ಶಿಸಲಾಯಿತು

ಸಾರಿಗೆ ವ್ಯವಸ್ಥೆಯಲ್ಲಿ ಶೇ 92ರಷ್ಟು ಖಾಸಗಿ: ಶಿವಕುಮಾರ್

ಬೆಂಗಳೂರು: ದೇಶದ ಸಾರಿಗೆ ವ್ಯವಸ್ಥೆಯಲ್ಲಿ ಸರ್ಕಾರಿ ವಾಹನಗಳ ಪಾಲು ಶೇ 8ರಷ್ಟು ಮಾತ್ರ ಇದೆ. ಶೇ 92ರಷ್ಟು ಖಾಸಗಿ ವಾಹನಗಳು ಸಾರ್ವಜನಿಕರಿಗೆ ಸಾರಿಗೆ ಸೇವೆ ನೀಡುತ್ತಿವೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

'ಪ್ರವಾಸ್ 4.0' ಕಾರ್ಯಕ್ರಮವನ್ನು ಗುರುವಾರ ಉದ್ಘಾಟಿಸಿ ಮಾತನಾಡಿದ ಅವರು, 'ಉದ್ಯೋಗ ಸೃಷ್ಟಿ ಮತ್ತು ಸರ್ಕಾರಕ್ಕೆ ಆದಾಯ ತರುವ ಪ್ರಮುಖ ಕ್ಷೇತ್ರ ಸಾರಿಗೆ. ಈ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಶೀಘ್ರದಲ್ಲಿಯೇ ಸಭೆ ಕರೆದು ಚರ್ಚಿಸಲಾಗುವುದು' ಎಂದು ಭರವಸೆ ನೀಡಿದರು.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ವರ್ಚುವಲ್ ಮೂಲಕ ಮಾತನಾಡಿ, 'ಜಾಗತಿಕವಾಗಿ ಪರಿಸರ ಸಂರಕ್ಷಣೆ ಹಾಗೂ ಭವಿಷ್ಯದ ದೃಷ್ಟಿಯಿಂದ ಹಸಿರು ಇಂಧನ ಬಳಕೆಗೆ ಆದ್ಯತೆ ನೀಡಬೇಕಿದೆ' ಎಂದು ಹೇಳಿದರು.

ಎಲೆಕ್ಟ್ರಿಕ್, ಎಥೆನಾಲ್, ಸಿಎನ್‌ಜಿ ಮೂಲಕ ಸಂಚರಿಸುವ ವಾಹನಗಳ ಬಳಕೆ ಹೆಚ್ಚಿಸಬೇಕು. ಭವಿಷ್ಯದಲ್ಲಿ ಅಂತಹ ವಾಹನಗಳಿಗೆ ಹೆಚ್ಚಿನ ಬೇಡಿಕೆ ಬರಲಿದೆ. ಅದಕ್ಕಾಗಿಯೇ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ರಾಷ್ಟ್ರೀಯ ಹೆದ್ದಾರಿಗಳ ಎರಡೂ ಬದಿಯಲ್ಲಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ಯೋಜನೆ ರೂಪಿಸಿದೆ ಎಂದರು.

ಉತ್ತರಪ್ರದೇಶ ಸಾರಿಗೆ ಸಚಿವ ದಯಾಶಂಕರ್ ಸಿಂಗ್, ಅರುಣಾಚಲ ಪ್ರದೇಶ ಸಾರಿಗೆ ಸಚಿವ ಒಜಿಂಗ್ ತಾಸಿಂಗ್, ಬಿಒಸಿಐ ಅಧ್ಯಕ್ಷ ಪ್ರಸನ್ನ ಪಟವರ್ಧನ್, ಮಾಜಿ ಸಚಿವ ಅಭಯಚಂದ್ರ ಜೈನ್, ಸಾರಿಗೆ ಕ್ಷೇತ್ರದ ಪ್ರಮುಖರಾದ ವಿಜಯ ಸಂಕೇಶ್ವರ, ಜಿ.ಆರ್.ಷಣ್ಮುಗಪ್ಪ, ಪ್ರಸನ್ನ, ರಾಧಾಕೃಷ್ಣ ಹೊಳ್ಳ ಭಾಗವಹಿಸಿದ್ದರು.

ಸುದ್ದಿ 2 ನಿಮಿಷ

ಪ್ರಜಾಪ್ರಭುತ್ವ ದಿನ: ಗಿಡ ನೆಡುವ ಕಾರ್ಯಕ್ರಮ

ಬೆಂಗಳೂರು: ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ ನೆನಪಿನಲ್ಲಿ ಮಕ್ಕಳಿಂದ ಒಂದೊಂದು ಗಿಡ ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸಲಹೆ ನೀಡಿದರು.

ಪ್ರಜಾಪ್ರಭುತ್ವ ದಿನಾಚರಣೆ ಕುರಿತು ವಿಧಾನ ಸೌಧದಲ್ಲಿ ಗುರುವಾರ ನಡೆದ ಸಭೆಯಲ್ಲಿ ಅವರು ಈ ವಿಷಯ ತಿಳಿಸಿದರು.

ಬೀದರ್‌ನಿಂದ ಚಾಮರಾಜನಗರದವರೆಗೆ ಮಾನವ ಸರಪಳಿ ಮೂಲಕ ಆಚರಿಸಲ್ಪಡುವ ಈ ದಿನದಂದು ವಿದ್ಯಾರ್ಥಿ ಸಮೂಹ, ಸಂಘಟನೆಗಳು ಮತ್ತು ಜನಸಾಮಾನ್ಯರು ಭಾಗವಹಿಸುವಂತೆ ಮಾಡಬೇಕು. ಕಾರ್ಯಕ್ರಮದ ಯಶಸ್ಸಿಗೆ ಜಿಲ್ಲಾ ಮಟ್ಟದ ಅಧಿಕಾರಿಗಳು ಜವಾಬ್ದಾರಿ ವಹಿಸಲಿದ್ದು, ಸ್ಥಳೀಯ ಮತ್ತು ನಗರ ಪಂಚಾಯಿತಿಗಳು ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಬೇಕು ಎಂದು ಮಹದೇವಪ್ಪ ಸೂಚನೆ ನೀಡಿದರು.

ಸಭೆಯಲ್ಲಿ ಪೌರಾಡಳಿತ ಸಚಿವ ರಹೀಂಖಾನ್, ಶಿಕ್ಷಣ ಸಚಿವ ಮಧು ಬಂಗಾರಪ್ಪ ಮತ್ತು ವಿವಿಧ ಇಲಾಖೆಗಳ ಅಧಿಕಾರಿಗಳ ಭಾಗವಹಿಸಿದ್ದರು.

ಜಿಂದಾಲ್‌ಗೆ ಭೂಮಿ: ಸಂಪುಟ ನಿರ್ಣಯ ತಡೆಗೆ ಮನವಿ

ಬೆಂಗಳೂರು: ಜಿಂದಾಲ್ ಸ್ಟೀಲ್ ಕಂಪನಿಗೆ ಅತ್ಯಂತ ಕನಿಷ್ಠ ದರದಲ್ಲಿ 3,667 ಎಕರೆ ಭೂಮಿ ಮಾರಾಟ ಮಾಡುವ ಸಚಿವ ಸಂಪುಟ ಸಭೆಯ ನಿರ್ಣಯಕ್ಕೆ ತಡೆ ನೀಡಬೇಕು ಎಂದು ಸಾಮಾಜಿಕ ಕಾರ್ಯಕರ್ತ ಕೆ.ಎ.ಪೌಲ್, ರಾಜ್ಯಪಾಲರಿಗೆ ಮನವಿ ಮಾಡಿದ್ದಾರೆ.

ಪ್ರತಿ ಎಕರೆಗೆ ₹1,22,200 ರಂತೆ ಜಮೀನಿಗೆ ಕ್ರಯಪತ್ರ ಮಾಡಿ ಕೊಡಲು ಸಂಪುಟ ಒಪ್ಪಿಗೆ ನೀಡಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ಭಾರಿ ನಷ್ಟ ಆಗಲಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

'ಸಂಪುಟದ ನಿರ್ಣಯಕ್ಕೆ ತಡೆ ನೀಡಬೇಕು ಎಂದು ಮುಖ್ಯಮಂತ್ರಿಯವರಿಗೂ ಈಗಾಗಲೇ ಮನವಿ ಪತ್ರ ಸಲ್ಲಿಸಿದ್ದೇನೆ. ಇಡೀ ಪ್ರಕರಣದ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರಿಂದ ನ್ಯಾಯಾಂಗ ತನಿಖೆಗೆ ಆದೇಶ ನೀಡಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಸುಧಾ, ಮಯೂರ ಓದಿರಿ

ಜರ್ಮನಿಗೆ ಶಿವರಾಮು

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವಾರ್ತಾ ತಜ್ಞ ಕೆ. ಶಿವರಾಮು ಅವರು ಆಗಸ್ಟ್ 31 ರಿಂದ ಸೆಪ್ಟೆಂಬರ್ 7ರವರೆಗೆ ಜರ್ಮನಿಯ ಗೋಟಿನ್‌ಜನ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, 'ಗ್ರಾಮೀಣ-ನಗರ ಸಂಪರ್ಕದಲ್ಲಿರುವ ರೈತರ ಮನೋಭಾವ, ಸಮಯ ಪಾಲನೆ ಮತ್ತು ಸಾಮಾಜಿಕ, ಆರ್ಥಿಕ ಬದಲಾವಣೆ' ಎಂಬ ಸಂಶೋಧನಾ ಪ್ರಬಂಧ ಮಂಡಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಗರದ ಹಲವೆಡೆ ಬಿರುಸಿನ ಮಳೆ; ಎಲ್ಲೆಲ್ಲೂ ನೀರು

1. ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತದಲ್ಲಿ ನಿಂತ ಮಳೆ ನೀರಿನಲ್ಲೇ ವಾಹನಗಳು ಸಂಚರಿಸಿದವು ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್
2. ಬೆಂಗಳೂರಿನ ಗುರುವಾರ ಸುರಿದ ಬಿರುಸಿನ ಮಳೆಗೆ ಕಬ್ಬನ್ ಉದ್ಯಾನದಲ್ಲಿ ರಕ್ಷಣೆ ಪಡೆದ ನಾಗರಿಕರು
3. ರಾಜಭವನದ ರಸ್ತೆಯ ಮಿನ್ಸ್ಕ್ ಸ್ಕ್ವೇರ್ ಬಳಿ ನೀರಿನಲ್ಲೇ ಸಾಗಿದ ವಾಹನಗಳು ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್.ಜಿ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ಪ್ರದೇಶಗಳಲ್ಲಿ ಗುರುವಾರ ಮಧ್ಯಾಹ್ನದಿಂದ ಸಂಜೆಯವರೆಗೆ ಬಿರುಸಿನ ಮಳೆಯಾಯಿತು. ರಸ್ತೆಗಳಲ್ಲಿ ನೀರು ನಿಂತು, ವಾಹನ ಸವಾರರು ಸಂಚರಿಸಲು ಪರದಾಡಿದರು.

ಮಧ್ಯಾಹ್ನ ಆರಂಭವಾದ ಮಳೆ ಸಂಜೆಯವರೆಗೂ ಸುರಿಯಿತು. ನಗರದ 118 ವಾರ್ಡ್‌ಗಳಲ್ಲಿ ಮಳೆಯಾಯಿತು.

ಲೌರಿ ಮೆಮೋರಿಯಲ್ ಸ್ಕೂಲ್ ಜಂಕ್ಷನ್‌ನಿಂದ ವೈಟ್‌ಫೀಲ್ಡ್ ಕಡೆ ರಸ್ತೆ, ಕಮಾಂಡ್ ಆಸ್ಪತ್ರೆಯಿಂದ ವಿಮಾನ ನಿಲ್ದಾಣ ರಸ್ತೆ, ಪಣತ್ತೂರು ರೈಲ್ವೆ ಸೇತುವೆಯಿಂದ ವರ್ತೂರು ಮುಖ್ಯರಸ್ತೆ, ಕಾಡುಬೀಸನಹಳ್ಳಿಯಿಂದ ಮಾರತ್‌ಹಳ್ಳಿ, ಕಸ್ತೂರಿನಗರ ವರ್ತುಲ ರಸ್ತೆ, ಬೆಳ್ಳಂದೂರು ಕೋಡಿಯಿಂದ ಸಕ್ರಾ ಆಸ್ಪತ್ರೆ, ಆರ್.ಟಿ. ನಗರ, ಜಯಮಹಲ್ ಪ್ಯಾಲೇಸ್, ಎಂ.ಜಿ. ರಸ್ತೆಯ ಅನಿಲ್ ಕುಂಬ್ಳೆ ವೃತ್ತ, ಕಸ್ತೂರಬಾ ರಸ್ತೆ, ಕಂಠೀರವ ಕ್ರೀಡಾಂಗಣದ ಸುತ್ತಮುತ್ತಲಿನ ರಸ್ತೆ, ಎಸ್‌ಜೆಪಿ ರಸ್ತೆಯಿಂದ ಟೌನ್‌ಹಾಲ್, ಹೆಬ್ಬಾಳ ಜಂಕ್ಷನ್ ಸುತ್ತಮುತ್ತಲ ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಮೈಸೂರು ರಸ್ತೆ ಮೇಲ್ಸೇತುವೆ, ಸಿರ್ಸಿ ಮೇಲ್ಸೇತುವೆಗಳಲ್ಲಿ ನೀರು ನಿಂತು, ದಟ್ಟಣೆ ಉಂಟಾಯಿತು. ದ್ವಿಚಕ್ರ ವಾಹನ ಸವಾರರು ಪರದಾಡಿದರು. ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ 3.5 ಸೆಂ.ಮೀ, ಮಾರತ್‌ಹಳ್ಳಿಯಲ್ಲಿ 3.3 ಸೆಂ.ಮೀ, ದೊಡ್ಡನೆಕ್ಕುಂದಿಯಲ್ಲಿ 3 ಸೆಂ.ಮೀ, ಕೋನೇನ ಅಗ್ರಹಾರದಲ್ಲಿ 2.8 ಸೆಂ.ಮೀ, ಚಾಮರಾಜಪೇಟೆಯಲ್ಲಿ 2.4 ಸೆಂ.ಮೀ, ಕೋರಮಂಗಲದಲ್ಲಿ 2.2 ಸೆಂ.ಮೀ, ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿ 2.1 ಸೆಂ.ಮೀ, ಪುಲಕೇಶಿನಗರ, ಕಾಟನ್‌ಪೇಟೆ, ನಾಗಪುರ, ಎಚ್‌ಎಸ್‌ಆರ್ ಲೇಔಟ್, ಹಂಪಿನಗರ, ಬಸವೇಶ್ವರನಗರಗಳಲ್ಲಿ ತಲಾ 2 ಸೆಂ.ಮೀ ಮಳೆಯಾಯಿತು.

'ಕೌನ್ಸಿಲ್‌ಗೆ ಅಧಿಕಾರವಿಲ್ಲದ ಜಿಬಿಜಿ ಅನಗತ್ಯ'

'ಸಿವಿಕ್– ಬೆಂಗಳೂರು' ಸಂವಾದದಲ್ಲಿ ತಜ್ಞರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗರಿಕರು, ಕೌನ್ಸಿಲ್‌ಗೆ ಆರ್ಥಿಕ ನಿರ್ಧಾರ ಸೇರಿದಂತೆ ಯಾವುದೇ ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಇಲ್ಲದ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' (ಜಿಬಿಜಿ) ನಗರಕ್ಕೆ ಅನಗತ್ಯ' ಎಂದು 'ಸಿವಿಕ್- ಬೆಂಗಳೂರು' ಆಯೋಜಿಸಿದ್ದ ಸಂವಾದದಲ್ಲಿ ತಜ್ಞರು ಅಭಿಪ್ರಾಯಪಟ್ಟರು.

'ಗ್ರೇಟರ್ ಬೆಂಗಳೂರು' ಎಂಬ ಪರಿಕಲ್ಪನೆಗಿಂತ ಜನರು 'ಉತ್ತಮ ಬೆಂಗಳೂರು' ಬಯಸಿದ್ದಾರೆ. ಜಂಟಿ ಸದನ ಸಮಿತಿ ಮೂಲಕ 'ಜಿಬಿಜಿ' ಮಸೂದೆಯನ್ನು ಪುನರ್‌ವಿಮರ್ಶಿಸಲು ನಿರ್ಧರಿಸಲಾಗಿದೆ. ಈ ಸಂದರ್ಭದಲ್ಲಿ ನಾಗರಿಕರು ಮತ್ತು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳ ಅಭಿಪ್ರಾಯವನ್ನೂ ಆಲಿಸಬೇಕು ಎಂದು ಸೋಮವಾರ ನಡೆದ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' ಸಂವಾದದಲ್ಲಿ ಮನವಿ ಮಾಡಲಾಯಿತು.

ಮಾಜಿ ಐಎಎಸ್ ಅಧಿಕಾರಿ ಟಿ.ಆರ್. ರಘುನಂದನ್ ಮಾತನಾಡಿ, 'ಜಿಬಿಜಿಯಲ್ಲಿ ರಚನೆಯಾಗುವ ಪ್ರಾಧಿಕಾರಕ್ಕೆ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿರುತ್ತಾರೆ. ಅವರ ಜೊತೆ ಶಾಸಕರಿರುತ್ತಾರೆ. ಪಾಲಿಕೆಯ ಎಲ್ಲ ಅಧಿಕಾರವನ್ನೂ ಅವರೇ ನಡೆಸುತ್ತಾರೆ. ಆದ್ದರಿಂದ ಪಾಲಿಕೆಗೆ ಸ್ವಾತಂತ್ರ್ಯವೇ ಇಲ್ಲದಂತಾಗುತ್ತದೆ' ಎಂದರು.

'ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ, ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣವಾಗಬೇಕು. ಇದನ್ನು ಜಾರಿಗೆತರುವಲ್ಲಿ ಕರ್ನಾಟಕ ಮುಂಚೂಣಿಯಲ್ಲಿತ್ತು. ಆದರೆ, ಸುಪ್ರೀಂ ಕೋರ್ಟ್ ಆದೇಶವಿದ್ದರೂ ಸ್ಥಳೀಯ ಸಂಸ್ಥೆಗಳಿಗೆ ನಿಯಮಿತವಾಗಿ ಚುನಾವಣೆಯನ್ನೂ ನಡೆಸುತ್ತಿಲ್ಲ. ಭ್ರಷ್ಟಾಚಾರದಿಂದ ತುಂಬಿರುವ ರಾಜಕೀಯ ಆಕಾಂಕ್ಷೆಗಳು ಅಧಿಕಾರ ವಿಕೇಂದ್ರಕರಣಕ್ಕೆ ಅಡ್ಡಿಯಾಗುತ್ತಿವೆ' ಎಂದು ಹೇಳಿದರು.

ನಗರ ಮತ್ತು ಪ್ರಾಂತೀಯ ಯೋಜಕರಾದ ಡಾ. ಅಂಜಲಿ ಮೋಹನ್ ಮಾತನಾಡಿ, 'ಪ್ರಾಧಿಕಾರದ ವ್ಯಾಪ್ತಿ ಎಷ್ಟಿರುತ್ತದೆ ಎಂಬುದನ್ನು ಜಿಬಿಜಿ ಮಸೂದೆಯಲ್ಲಿ ತಿಳಿಸಿಲ್ಲ. ಹಲವು ಪಾಲಿಕೆಗಳನ್ನು ಸೃಷ್ಟಿಸುವುದರಿಂದ ಸಂಪನ್ಮೂಲ ಹಂಚಿಕೆಯಲ್ಲಿ ಸಮಸ್ಯೆಗಳು ಉದ್ಭವಿಸುತ್ತವೆ' ಎಂದರು.

'ಯಾವುದೇ ಕಾನೂನು ಅಥವಾ ನಿಯಮಗಳನ್ನು ಜಾರಿಗೆ ತಂದಾಗ ಅವು ನಾಗರಿಕರ ಜೀವನವನ್ನು ಉತ್ತಮಗೊಳಿಸಬೇಕು. ನಗರದಲ್ಲಿ ನೀರು, ವಸತಿ, ಸುಗಮ ಸಂಚಾರಗಳಂತಹ ಮೂಲ ಸೌಕರ್ಯಗಳು ಅಗತ್ಯ. ಆದರೆ, ಜಿಬಿಜಿ ಮಸೂದೆಯಲ್ಲಿ ಇಂತಹ ಯಾವುದೇ ಸೌಕರ್ಯಗಳನ್ನು ನೀಡುವ ಸ್ಪಷ್ಟ ಆಲೋಚನೆ ಇಲ್ಲ. ಆಡಳಿತದಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆ ಅಥವಾ ಪಾರದರ್ಶಕತೆಯಲ್ಲಿ ಮಸೂದೆ ಯಾವುದೇ ರೀತಿಯ ಅಂಕಗಳಿಸುವುದಿಲ್ಲ' ಎಂದು ಜನಾಗ್ರಹದ ಆಡಳಿತ ವಿಭಾಗದ ಮುಖ್ಯಸ್ಥ ಸಂತೋಷ್ ನರಗುಂದ ಅಭಿಪ್ರಾಯಪಟ್ಟರು.

ಸಿಟಿಜನ್ಸ್ ಅಜೆಂಡಾ ಫಾರ್ ಬೆಂಗಳೂರಿನ ಕಾರ್ಯಕರ್ತ ಸಂದೀಪ್ ಅನಿರುದ್ಧನ್ ಮಾತನಾಡಿ, 'ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯಾದ ನಂತರದ 32 ವರ್ಷಗಳಲ್ಲೂ ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣವಾಗಿಲ್ಲ. ಚುನಾವಣೆ ನಡೆಸುವಲ್ಲಿ ವಿಳಂಬ, ಆಗಾಗ್ಗೆ ಹೊಸ ಮಸೂದೆ ತರುವುದರಿಂದ ಜನರಿಗೆ ಸಮಸ್ಯೆಗಳೇ ಉಂಟಾಗುತ್ತಿವೆ. ತಮಗೆ ಏನು ಬೇಕು ಎಂಬುದನ್ನು ನಾಗರಿಕರೇ ನಿರ್ಧರಿಸುವಂತಹ ವ್ಯವಸ್ಥೆ ಜಾರಿಯಾಗಬೇಕು' ಎಂದರು.

'ನಗರ ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರ ನೀಡಬೇಕು. ಯಾವುದೇ ಕಾರಣಕ್ಕೂ ಚುನಾವಣೆಗಳು ವಿಳಂಬವಾಗಬಾರದು. ಆಡಳಿತದಲ್ಲಿ ನಾಗರಿಕರ ಪಾಲ್ಗೊಳ್ಳುವಿಕೆ ಅತ್ಯಂತ ಅಗತ್ಯ' ಎಂದು ಸಿವಿಕ್-ಬೆಂಗಳೂರಿನ ಅಧ್ಯಕ್ಷ ಪ್ರೊ. ಡಿ. ಜೀವನ್ ಕುಮಾರ್ ಹೇಳಿದರು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' ಸಂವಾದ ಕಾರ್ಯಕ್ರಮದಲ್ಲಿ ಟಿ.ಆರ್. ರಘುನಂದನ್ (ಎಡಗಡೆಯವರು) ಮಾತನಾಡಿದರು. ಡಿ. ಜೀವನ್ ಕುಮಾರ್, ಅಂಜಲಿ ಮೋಹನ್ ಮತ್ತು ಸಂತೋಷ್ ನರಗುಂದ ಇದ್ದರು ಪ್ರಜಾವಾಣಿ ಚಿತ್ರ

ಸೂಚನೆ

ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್ ತನ್ನ 20ನೇ ವಾರ್ಷಿಕ ಸರ್ವ ಸದಸ್ಯರ ಸಭೆಯನ್ನು ಭಾನುವಾರ 22/09/2024 ರಂದು 10.30 AM IST ಕ್ಕೆ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆಸುತ್ತಿದೆ. ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳ ಪ್ರಕಾರ ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020, 17/2020, 20/2020 ಮತ್ತು MCA ಮತ್ತು ಭಾರತ ಸರ್ಕಾರದ ಇತರ ಸಂಬಂಧಿತ ಸುತ್ತೋಲೆಗಳಿಗೆ ಅನುಸಾರವಾಗಿ ಸಾಮಾನ್ಯ ಸಭೆಯ ಸೂಚನೆಯನ್ನು www.suvidha.co.in ನಲ್ಲಿ ಪ್ರದರ್ಶಿಸಲಾಗುತ್ತದೆ.

ಈ ಸೂಚನೆಯಲ್ಲಿರುವ ಕಾರ್ಯಕ್ರಮವನ್ನು www.rights2Vote.in ಮೂಲಕ ಇ-ವೋಟಿಂಗ್ ವಿಧಾನದ ಮೂಲಕ ಮತದಾನ ನಡೆಸಲಾಗುವುದು.

ಸೂಚನೆ ರವಾನೆಯ ನಂತರ ಷೇರುಗಳನ್ನು ಸ್ವಾಧೀನಪಡಿಸಿಕೊಂಡಿರುವ ಮತ್ತು ಕಂಪನಿಯ ಸದಸ್ಯರಾಗುವ ವ್ಯಕ್ತಿಗಳು cs@suvidha.co.in ನಲ್ಲಿ ಕಂಪನಿಯ ಕಾರ್ಯದರ್ಶಿಯನ್ನು ಸಂಪರ್ಕಿಸುವ ಮೂಲಕ ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಬಹುದು.

14.09.2024 ರಂದು ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಮತದಾನದ ಹಕ್ಕುಗಳನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಷೇರುದಾರರು ಇ-ವೋಟಿಂಗ್ ಮೂಲಕ ಮಾತ್ರ ಮತ ಚಲಾಯಿಸಬಹುದು. ಇ-ವೋಟಿಂಗ್ 18/09/2024 ರಂದು 9.00 AM ಕ್ಕೆ ತೆರೆಯುತ್ತದೆ ಮತ್ತು 21/09/2024 ರಂದು 5.00 PM IST ಕ್ಕೆ ಕೊನೆಗೊಳ್ಳುತ್ತದೆ ಮತ್ತು AGM ಸಮಯದಲ್ಲಿ ಪುನಃ ಚಾಲ್ತಿಯಲ್ಲಿರುತ್ತದೆ.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/–
ಡಾ.ನಿಲಿಮಾ ಕಡಂಬಿ
ನಿರ್ದೇಶಕರು
ಸ್ಥಳ: ಬೆಂಗಳೂರು ಡಿಐಎನ್: 01553825

ನೈಋತ್ಯ ರೈಲ್ವೆ

ಇ-ಟೆಂಡರು ಸೂಚನೆ ಸಂ.: ECN-08-2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
[I] ತಳಕಲ್–ವಾಡಿ ಹೊಸ ಬಿಜಿ ಲೈನ್‌ನ ನಾನ್-ಇಪಿಸಿ ವಿಭಾಗದಲ್ಲಿ 11 ಕೆವಿ ಹೆಚ್‌ಟಿ, 440 ವೋಲ್ಟ್ ಮತ್ತು 230 ವೋಲ್ಟ್ ಎಲ್‌ಟಿ ಮತ್ತು 33 ಕೆವಿ ಹೆಚ್‌ಟಿ ಓವರ್‌ಹೆಡ್ ಪವರ್ ಲೈನ್ ಕ್ರಾಸಿಂಗ್‌ಗಳನ್ನು ಯುಜಿ ಕೇಬಲ್‌ನಿಂದ ಮಾರ್ಪಡಿಸುವುದು. [II] ಬುಧಗುಂಪ ಮತ್ತು ಚಿಕ್ಕಬೆನಕಲ್, ಕರಜಗಿ ರೈಲ್ವೆ ಸ್ಟೇಷನ್‌ನ ಸ್ಟೇಷನ್ ಬಿಲ್ಡಿಂಗ್ & ಸರ್ವೀಸ್ ಬಿಲ್ಡಿಂಗ್‌ಗಳ ವಿದ್ಯುದೀಕರಣ, ಕುಡತಿನಿಯಲ್ಲಿ ಎಲ್‌ಸಿ 102 ಗೆ ಬದಲು ಆರ್‌ಓಬಿ ಗೆ ಬೇಕಾದ ಹೆಚ್‌ಟಿ 11ಕೆವಿ ಮತ್ತು ಎಲ್‌ಟಿ ಪವರ್‌ಲೈನ್ ಕ್ರಾಸಿಂಗ್‌ಗಳ ಸ್ಥಳಾಂತರ/ಮಾರ್ಪಾಡು ಹಾಗೂ ಲೈಟಿಂಗ್ ವ್ಯವಸ್ಥೆಗಳು. [III] ಉಗರ್‌ಖುರ್ದ ನಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆ ಮತ್ತು ರಾಯಭಾಗ ಮತ್ತು ಕುಡಚಿಯಲ್ಲಿ ಕವರ್ಡ್ ಪ್ಲಾಟ್‌ಫಾರ್ಮ್ ಮತ್ತು ಎಫ್‌ಓಬಿಗಳ ವಿದ್ಯುದೀಕರಣ. [IV] ಸಾಂಬ್ರೆ, ಸುಳೆಭಾವಿ, ಪಚ್ಚಾಪುರ, ಚಿಕ್ಕೋಡಿ ರೋಡ್, ಚಿಂಚಿಳಿ, ಕುಡಚಿ, ಶೇಡಬಾಳ & ವಿಜಯನಗರಗಳಲ್ಲಿ ಟ್ರ್ಯಾಕ್ ಮಶೀನ್ ಸೈಡಿಂಗ್‌ಗೆ ಬೇಕಾದ ವಿದ್ಯುತ್ ಪೂರೈಕೆ ವ್ಯವಸ್ಥೆ. [V] ಇಂಡಿ ರೋಡ್‌ನಲ್ಲಿ ಎಲ್‌ಸಿ 88ಗೆ ಬದಲು ಆರ್‌ಓಬಿಗೆ ಬೇಕಾದ ವಿದ್ಯುತ್ ಪೂರೈಕೆ ಮತ್ತು ಲೈಟಿಂಗ್ ವ್ಯವಸ್ಥೆಗಳು.	ರೂ. 2,34,66,478/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 16.09.2024, 11:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ನಿರ್ಮಾಣ
PUB/373/AAF/PRB/SWR/2024-25 ಬೆಂಗಳೂರು ದಂಡು
South Western Railway - SWR | SWRRLY | SWRRLY

PUBLIC NOTICE

Notice is hereby given that we are conducting a due diligence, on behalf of our clients, concerning the Schedule Property described in Item No. 1 to 4 below.

If anybody has any charge, lien, interest or title or claim or agreement on the Schedule Property Item Nos. 1 to 4 listed below, they should come forth with copies of documents in support of such claim and produce the same to the undersigned within 7 (seven) days from the date of publication of this notice. In the event no such legally tenable claim is received within the above period, our clients shall proceed as if no such claims exist or that they have been waived or abandoned.

SCHEDULE PROPERTY

Item No. 1 : All that piece and parcel of the Site bearing No. 45, BBMP PID No. 72-38-45 out of Sy. Nos. 57 to 82 of Domlur Village, Kasaba Hobli, Bangalore in the layout approved by the Bangalore Development Authority, BDA Khatha No. BAP/KA/P/45/97-98, situated at Domlur Village, Kasaba Hobli, Bangalore North Taluk measuring East to West 40' Feet and North to South 60' Feet totally measuring 2,400 Sq. Feet and bounded on the
East by : Road, West by : Site No. 46, North by : Private Property, South by : Road.

Item No. 2 : All that piece and parcel of the Site bearing No. 46, BBMP PID No. 72-38-46 out of Sy. Nos. 57 to 82 of Domlur Village, Kasaba Hobli, Bangalore in the layout approved by the Bangalore Development Authority, BDA Khatha No. BAP/KA/P/46/97-98, situated at Domlur Village, Kasaba Hobli, Bangalore North Taluk measuring East to West 40' Feet and North to South 60' Feet totally measuring 2,400 Sq. Feet and bounded on the
East by : Site No. 45, West by : Site No. 47, North by : Private Property, South by : Road.

Item No. 3 : All that piece and parcel of the Site bearing No. 47, BBMP PID No. 72-38-47 out of Sy. Nos. 57 to 82 of Domlur Village, Kasaba Hobli, Bangalore in the layout approved by the Bangalore Development Authority, BDA Khatha No. BAP/KA/P/47/97-98, situated at Domlur Village, Kasaba Hobli, Bangalore North Taluk measuring East to West 40' Feet and North to South 60' Feet totally measuring 2,400 Sq. Feet and bounded on the
East by : Site No. 46, West by : Site No. 48, North by : Private Property, South by : Road.

Item No. 4 : All that piece and parcel of the Site bearing No. 48, BBMP PID No. 72-38-48 out of Sy. Nos. 57 to 82 of Domlur Village, Kasaba Hobli, Bangalore in the layout approved by the Bangalore Development Authority, BDA Khatha No. BAP/KA/P/48/97-98, situated at Domlur Village, Kasaba Hobli, Bangalore North Taluk, measuring East to West 40' Feet and North to South 60' Feet totally measuring 2,400 Sq. Feet and bounded on the
East by : Site No. 47, West by : Site No. 49, North by : Private Property, South by : Road.

Signed Mr. Varun Pai, Advocate
AKS LAW ASSOCIATES
301, Sunrise Chambers,
Ulsoor Rd, Bengaluru 560042
August 30, 2024, Bengaluru

ಕರ್ನಾಟಕ ಸರ್ಕಾರ (ಸಹಕಾರ ಇಲಾಖೆ)
ನಮೂನೆ-8 ಮತ್ತು 9 ನಿಯಮ 17(2)(ಡಿ)
ಇಪಿ ಸಂಖ್ಯೆ: ಕ.ರಾ.ಸೌ.ಸಂ.ಸ.ನಿ/ಸ.ಸಂ.ಸ.ನಿ/ವ.ಅ./139/2023-24

1. ಶಿವಶ್ರೀ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ., ತುಮಕೂರು ಸಹಕಾರಿಯ ಸುಸ್ತಿದಾರರಾದ (1) ಲೀಲಾವತಮ್ಮ ಅಲಿಯಾಸ್ ಲೀಲಾವತಿ ನಾಗರಾಜ್, ಕೋಂ ಟಿ. ನಾಗರಾಜ್, ನಂ.64/2, ಗುರುಮೂರ್ತಪ್ಪ ಗಾರ್ಡನ್, ಸಾರಕ್ಕಿ ಮುಖ್ಯರಸ್ತೆ, ಶಾಕಾಂಬರಿನಗರ, 1ನೇ ಹಂತ, ಜೆ.ಪಿ.ನಗರ, ಬೆಂಗಳೂರು-560078, (2) ಅನಿತ ಎನ್.ರಾಜ್ ಬಿನ್ ಟಿ.ನಾಗರಾಜ್ ನಿಂದ ಬಾಕಿಯಾಗಿರುವ ಬಾಕಿ ಮೊತ್ತ ದಿನಾಂಕ: 05.06.2023ಕ್ಕೆ ಒಟ್ಟು ರೂ. 2,59,54,857/- ರೂಪಾಯಿಗಳ ಸಂದಾಯದ ಬಗ್ಗೆ ಈ ಕೆಳಗೆ ನಮೂದಿಸಲಾದ ಸ್ಥಿರ ಸ್ವತ್ತುಗಳ ಜಪ್ತಿಯನ್ನು 2024ನೇ ಇಸವಿ ಸೆಪ್ಟೆಂಬರ್ ತಿಂಗಳ 13ನೇ ದಿನಾಂಕ ಶುಕ್ರವಾರದಂದು ಬಹಿರಂಗ ಹರಾಜು ಮೂಲಕವಾಗಿ ಅಥವಾ ಹರಾಜನ್ನು ಮುಂದೂಡಲಾದ ದಿನಾಂಕದಂದು ಸ್ವತ್ತುಗಳು ಇರುವ ಸ್ಥಳದಲ್ಲಿ ಬಹಿರಂಗ ಹರಾಜನ್ನು ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ಸದರಿ ಹರಾಜು ಹಗಲು 11-00 ಗಂಟೆಗೆ ಪ್ರಾರಂಭವಾಗಿ ಅತ್ಯಧಿಕ ಬಿಡ್ ಕೂಗುವುವವರಿಗೆ ಸ್ವತ್ತನ್ನು ಮೂರು ಸಲಕ್ಕಾಗಿ ಖಾಯಂ ಮಾಡಿ ಕೊಡಲಾಗುವುದು.
2. ಬಿಡ್ಡುದಾರರು ಹರಾಜಿನ ಮೊಬಲಗಿನ ಪೈಕಿ ಅದರ ಶೇಕಡಾ 25ಕ್ಕೆ ಸಮನಾದ ಮೊಬಲಗನ್ನು ಹರಾಜಿನ ಸಮಯದಲ್ಲಿ ಠೇವಣಿ ಇಡತಕ್ಕದ್ದು ಮತ್ತು ಬಿಡ್ಡು ಹಣದ ಉಳಿದ ಮೊಬಲಗನ್ನು ಮಾರಾಟದ ದಿನಾಂಕದಿಂದ 45 ದಿವಸಗಳೊಳಗಾಗಿ ಸಂದಾಯ ಮಾಡಲು ತಪ್ಪಿದರೆ ಅವರು ಇಟ್ಟಿದ್ದ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಗುರಿಯಾಗತಕ್ಕದ್ದು.
3. ಮೇಲೆ ಹೇಳಿದ ಪ್ರಕಾರ ನಿಗದಿತ ಸಮಯದೊಳಗೆ ಹಣವನ್ನು ಠೇವಣಿ ಇಡದಿದ್ದರೆ ಅಥವಾ ಅಂಥ ಪ್ರಕಾರ ಮೊಬಲಗಿನ ಪೈಕಿ ಉಳಿದ ಮೊಬಲಗನ್ನು ಸಂದಾಯ ಮಾಡದಿದ್ದರೆ ಪ್ರಥಮ ಬಿಡ್ಡುದಾರರನ ಸಂಬಂಧದಲ್ಲಿ ಆದ ವೆಚ್ಚ ಅಥವಾ ನಷ್ಟ ಒಳಗೊಂಡಂತೆ, ಆ ಸ್ವತ್ತಿನ ಮರು ಮಾರಾಟಕ್ಕಾಗಿ ಹೊಸ ಅಸೂಚನೆಯನ್ನು ಪ್ರಕಟಿಸಿದ ನಂತರ ಭೂಮಿಗಳನ್ನು ಪುನಃ ಮಾರಾಟ ಮಾಡಲಾಗುವುದು.
4. ಮಾರಾಟದ ಕಾಲದಲ್ಲಿ ಬಿಡ್ಡು ಮಾಡುವವರು ತಾವು ತಮ್ಮ ಪರವಾಗಿಯೇ ಬಿಡ್ಡು ಮಾಡುತ್ತಾರೋ ಅಥವಾ ಅನ್ಯ ವ್ಯಕ್ತಿಯ ಪರವಾಗಿ ಬಿಡ್ಡು ಮಾಡುತ್ತಾರೋ ಎಂಬುದನ್ನು ತಿಳಿಸಬೇಕೆಂದು ಕೋರಬಹುದು. ಅನ್ಯ ವ್ಯಕ್ತಿಯ ಪರವಾಗಿ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಆ ಅನ್ಯ ವ್ಯಕ್ತಿಯು ಸ್ವತಃ ಸಹಿ ಮಾಡಿದ ಅಧಿಕಾರ ಪತ್ರವನ್ನು ಹಾಜರು ಮಾಡುವಂತೆ ಕೋರಬಹುದು. ಈ ಪ್ರಕಾರ ಹಾಜರು ಪಡಿಸದೇ ಇದ್ದರೆ ಅವರ ಬಿಡ್ಡನ್ನು ತಿರಸ್ಕರಿಸಬಹುದು.
5. ಸುಸ್ತಿದಾರನಾಗಲೀ ಅಥವಾ ಅವರ ಪರವಾಗಲಿ ಯಾವೊಬ್ಬ ಏಜೆಂಟನಾಗಲೀ ಅಥವಾ ಜಪ್ತಿ ಮಾಡಲಾದ ಸ್ವತ್ತುಗಳ ಸಂಬಂಧದಲ್ಲಿ ಹಿತಾಸಕ್ತಿಯುಳ್ಳ ಕ್ಲೇಮುದಾರನಾಗಲಿ ಅಥವಾ ಯಾರೊಬ್ಬರು ಬಡ್ಡಿ ಮತ್ತು ಇತರ ಖರ್ಚುಗಳ ಸಹಿತ ಪೂರಾ ಮೊಬಲಗನ್ನು ಸಂದಾಯ ಮಾಡಿದರೆ ಹರಾಜನ್ನು ನಿಲ್ಲಿಸತಕ್ಕದ್ದು. ಪರಂತು, ಹಾಗೆ ಸಂದಾಯ ಮಾಡುವುದು ಹರಾಜು ಮಾಡಲು ನಿಗದಿಪಡಿಸಿದ ದಿನಾಂಕದ ಹಿಂದಿನ ದಿನದ ಸೂರ್ಯಾಸ್ತಕ್ಕೆ ಮುಂಚೆಯಾಗಿರತಕ್ಕದ್ದು.
6. ಹರಾಜು ಉಪ ವಿಭಾಗೀಯ ಸಹಕಾರಿಯ ರಿಜಿಸ್ಟ್ರಾರರು ಅದನ್ನು ಖಾಯಂ ಮಾಡುವವರಿಗೆ ಖಾಯಂ ಆಗತಕ್ಕದ್ದಲ್ಲ. ಮಾರಾಟವು ಮುಕ್ತಾಯದ ನಂತರ ಅದರ ಮೇಲಣ ಸ್ಟಾಂಪು ಶುಲ್ಕವನ್ನು ಪಾವತಿ ಮಾಡಿದಲ್ಲಿ ಸದರಿ ಉಪ ವಿಭಾಗದ ಸಹಾಯಕ ರಿಜಿಸ್ಟ್ರಾರನು ಸಹಿ ಹಾಗೂ ಮೊಹರು ಹಾಕಿರುವ ಮಾರಾಟದ ಪ್ರಮಾಣಪತ್ರವನ್ನು ಅವನಿಗೆ ನೀಡತಕ್ಕದ್ದು.
7. ಭೂಮಿಗಳ ವಿವರಣೆಯಲ್ಲಿ ಅಥವಾ ಅವುಗಳ ಅಂದಾಜು ವಿಸ್ತೀರ್ಣ ವಿಷಯದಲ್ಲಿ ತಪ್ಪುಗಳೇನಾದರೂ ಇದ್ದಲ್ಲಿ ಅವುಗಳ ಬಗ್ಗೆ ಸರ್ಕಾರವು ಜವಾಬ್ದಾರಿಯಾಗಿರುವುದಿಲ್ಲ ಎಂಬುದನ್ನು ಗಮನಿಸಬೇಕು.

1. ತಾಲ್ಲೂಕು, ಗ್ರಾಮ: ನಂ.64/2, ಗುರುಮೂರ್ತಪ್ಪ ಗಾರ್ಡನ್, ಸಾರಕ್ಕಿ ಮುಖ್ಯರಸ್ತೆ, ಶಾಕಾಂಬರಿನಗರ, 1ನೇ ಹಂತ, ಜೆ.ಪಿ.ನಗರ, ಬೆಂಗಳೂರು-560078,
2. ಸುಸ್ತಿದಾರನ ಹೆಸರು: ಲೀಲಾವತಮ್ಮ ಅಲಿಯಾಸ್ ಲೀಲಾವತಿ ನಾಗರಾಜ್, ಕೋಂ ಟಿ. ನಾಗರಾಜ್
3. ಸುಸ್ತಿದಾರನಿಗೆ ಸೇರಿದ ಸ್ಥಿರ ಸ್ವತ್ತುಗಳ ವಿವರ, ಭೂಮಿಯ ಸ.ನಂ., ಅಂದಾಜು ವಿಸ್ತೀರ್ಣ: ಷೆಡ್ಯೂಲ್ ಸ್ವತ್ತಿನ ವಿವರ: ನಗರ ಮತ್ತು ಬಡಾವಣೆ: ಬೆಂಗಳೂರು ಮಹಾನಗರ, ಸಾರಕ್ಕಿ ಗ್ರಾಮ, ವಾರ್ಡ್ ನಂ.57, ಶಾಕಾಂಬರಿ ನಗರ, ಗುರುಮೂರ್ತಪ್ಪ ಗಾರ್ಡನ್, 5ನೇ ಕ್ರಾಸ್, ಖಾತಾ ಸಂಖ್ಯೆ: 64/2, ಪಿ.ಐ.ಡಿ. ನಂ. 57-64/2-5, ಸ್ವತ್ತಿನ ವಿಸ್ತೀರ್ಣ: ಪೂರ್ವ-ಪಶ್ಚಿಮ: 50 ಅಡಿಗಳು, ಉತ್ತರ- ದಕ್ಷಿಣ: 100 ಅಡಿಗಳು, ಈ ನಿವೇಶನಕ್ಕೆ ಚಕ್ಕುಬಂದಿ: ಪೂರ್ವಕ್ಕೆ: ಸೈಟು ನಂ. 64/2/8, ಪಶ್ಚಿಮಕ್ಕೆ: ಸರ್ವೆ ನಂ. 64/2, ಉತ್ತರಕ್ಕೆ: ಸೈಟು ನಂ. 64/2/16, ದಕ್ಷಿಣಕ್ಕೆ: ರಸ್ತೆ.
4. ತೀರ್ಪು ಮೊಬಲಗು: ರೂ. 2,17,72,799/–
5. ಸ್ವತ್ತುಗಳ ಮೇಲೆ ಯಾವುದಾದರೂ ಋಣಗಳು ಇದ್ದ ಪಕ್ಷಕ್ಕೆ ಅವುಗಳ ವಿವರ: ಸಹಕಾರಿಯ ಸಾಲದ ಋಣಭಾರ ಇರುತ್ತದೆ.

ಷರಾ: ಈ ನೋಟೀಸನ್ನು ಮಾರಾಟದ ಮೂವತ್ತು ದಿನಗಳ ಮುಂಚಿತವಾಗಿಯಾದರೂ ಸಹಾಯಕ ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ತಾಲ್ಲೂಕು ಕಛೇರಿಯಲ್ಲಿ ಸೂಚನಾ ಫಲಕದಲ್ಲಿ ಪ್ರಕಟಿಸಿ ಮತ್ತು ಮಾರಾಟದ ದಿನಾಂಕಕ್ಕೆ ಮುಂಚೆ ನಿರಂತರ ಮೂರು ದಿನಗಳ ಸದರೀ ಗ್ರಾಮದಲ್ಲಿ ಡಂಗೂರ ಸಾರುವ ಮೂಲಕ ಪ್ರಕಟಿಸತಕ್ಕದ್ದು.

ಸಹಿ/– (ಪ್ರೇಮಾನಂದ ಬಿ.ಪಿ.)
ವಸೂಲಾತಿ ಅಧಿಕಾರಿಗಳು (ನಿ-441), ಹಾಗೂ
ಸಹಕಾರ ಸಂಘಗಳ ಸಹಾಯಕ ನಿಬಂಧಕರು,
ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.
ಸ್ಥಳ: ಬೆಂಗಳೂರು
ದಿನಾಂಕ: 26-07-2024

ಪ್ರಕಾಶನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್.
ನಂ.113, 9ನೇ ಮುಖ್ಯ ರಸ್ತೆ, 7ನೇ ಅಡ್ಡ ರಸ್ತೆ, ಪ್ರಕಾಶನಗರ, ಬೆಂಗಳೂರು-560021

2023-24ನೇ ಸಾಲಿನ 50ನೇ ವಾರ್ಷಿಕ ಮಹಾಸಭೆಯ ನೋಟೀಸ್

ಮೇಲ್ಕಂಡ ಸಂಘದ 2023-24ನೇ ಸಾಲಿನ 50ನೇ ವಾರ್ಷಿಕ ಸರ್ವಸದಸ್ಯರ ಸಾಮಾನ್ಯ ಸಭೆಯನ್ನು ರಾಜ್ಯ ಸರ್ಕಾರದ ಆದೇಶದ ಮೇರೆಗೆ ದಿನಾಂಕ: 01.9.2024ರ ಭಾನುವಾರ ಬೆಳಿಗ್ಗೆ 9.30 ಘಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ. ಜಿ. ಚಂದ್ರಕುಮಾರ್ ರವರ ಅಧ್ಯಕ್ಷತೆಯಲ್ಲಿ ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010 ಇಲ್ಲಿ ಏರ್ಪಡಿಸಲಾಗಿದೆ. ಈ ಮಹಾಸಭೆಯ ನೋಟೀಸನ್ನು ಈಗಾಗಲೇ ಸಂಘದ ಎಲ್ಲಾ ಸದಸ್ಯರಿಗೆ ಅಂಚೆ ಮೂಲಕ ಕಳುಹಿಸಲಾಗಿದೆ, ಸದಸ್ಯರಿಗೆ ಅಂಚೆ ತಲುಪದಿದ್ದಲ್ಲಿ ಈ ಪ್ರಕಟಣೆಯನ್ನು ಆಹ್ವಾನ ಪತ್ರಿಕೆ ಎಂದು ಪರಿಗಣಿಸಿ ತಪ್ಪದೇ ಹಾಜರಾಗಲು ಕೋರಿದೆ.

ಕಾರ್ಯಕಾರಿ ಸಮಿತಿ ಅಪ್ಪಣೆ ಮೇರೆಗೆ
ಸಹಿ/– ಎಸ್. ಆದಿಶೇಷ
ಕಾರ್ಯದರ್ಶಿ

ಸ್ಥಾಪನೆ: 2009-10 ದೂರವಾಣಿ: 080-23469678

ಮಾಧವನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್ (ರಿ)
ಕೇಂದ್ರ ಕಛೇರಿ ನಂ. 14, 3ನೇ ಅಡ್ಡ ರಸ್ತೆ, ನೆಹರುನಗರ, ಶೇಷಾದ್ರಿಪುರಂ ಬೆಂಗಳೂರು-560 020

15ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆ

ಸಂಘದ 2023-24ನೇ ಸಾಲಿನ 15ನೇ ಸರ್ವಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 01-09-2024ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ 'ಬಿ.ವಿ.ಎಸ್. ಸಂಘ" (ಬ್ರಾಹ್ಮಣ ವಿದ್ಯಾರ್ಥಿ ಸಹಾಯಕ ಸಂಘ) ಶೇಷಾದ್ರಿಪುರಂ ಕಾಲೇಜು ಹಿಂಬಾಗದ ರಸ್ತೆ, ನಂ.35, ಎನ್.ಎಸ್.ಐಯ್ಯಂಗಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560020 ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಬಿ. ಸಿ. ಸುರೇಂದ್ರರವರ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ. ಸರ್ವಸದಸ್ಯರ ಸಭೆಯ ಆಹ್ವಾನ ಪತ್ರಿಕೆಯನ್ನು ಈಗಾಗಲೇ ಅಂಚೆ ಮೂಲಕ ಕಳುಹಿಸಲಾಗಿದ್ದು ತಲುಪದಿದ್ದಲ್ಲಿ ಈ ಪ್ರಕಟಣೆಯನ್ನೇ ಆಹ್ವಾನ ಪತ್ರಿಕೆ ಎಂದು ಭಾವಿಸಿ, ಸಭೆಗೆ ಹಾಜರಾಗಬೇಕಾಗಿ ಮಾನ್ಯ ಸದಸ್ಯರಲ್ಲಿ ವಿನಂತಿ.

ಸ್ಥಳ: ಬೆಂಗಳೂರು
ದಿನಾಂಕ: 30-08-2024
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
(ಗಜೇಂದ್ರ ಬಿ.) ಕಾರ್ಯದರ್ಶಿ

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಭಾರತ ಸರ್ಕಾರದ ಅಧೀನ ಸಂಸ್ಥೆ-ಅಣುಶಕ್ತಿ ಇಲಾಖೆ
ಸಿಐಎನ್: U15100MH1950GOI008187 ವೆಬ್‌ಸೈಟ್: www.irel.co.in
ಐಎಸ್‌ಒ 9001:2015, ಐಎಸ್‌ಒ 14001:2015

ಆಸಕ್ತಿ ವ್ಯಕ್ತಪಡಿಸುವಿಕೆ
ಟೆಂಡರ್ ನಂ.: ಐಆರ್‌ಇಎಲ್/ಸಿಒ/ ಎಂಕೆಟಿಜಿ/ ಟಿಎಸ್‌ಪಿ/ ಡಿಸ್ಟ್/ಇಒಐ/03/2024
ಟ್ರೈಸೋಡಿಯಂ ಫಾಸ್ಫೇಟ್ (ಟಿಎಸ್‌ಪಿ) ಮಾರಾಟ ಮತ್ತು ವಿತರಣೆಗಾಗಿ ಅಧಿಕೃತ ಡೀಲರ್ಸ್ ನೇಮಕಾತಿಗಾಗಿ

ಅವರವರ ಪ್ರದೇಶಗಳಲ್ಲಿ/ರಾಜ್ಯಗಳಲ್ಲಿ ಟ್ರೈಸೋಡಿಯಂ ಫಾಸ್ಫೇಟ್ (ಟಿಎಸ್‌ಪಿ) ಮಾರಾಟ ಮತ್ತು ವಿತರಣೆಗಾಗಿ ಅಧಿಕೃತ ಡೀಲರ್‌ಗಳ ಆಯ್ಕೆಗಾಗಿ ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ) ಆಹ್ವಾನಿಸಲಾಗಿದೆ (ಮಹಾರಾಷ್ಟ್ರ, ಗುಜರಾತ್ ಮತ್ತು ಚತ್ತೀಸಗಢ್ ಹೊರತುಪಡಿಸಿ). ವಿವರಗಳ ದಸ್ತಾವೇಜುಗಳನ್ನು www.irel.co.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಆಸಕ್ತಿಯುಳ್ಳ ಪಕ್ಷಗಾರರು, ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲಾಗಿರುವ ಇಒಐ ಪ್ರಕಟಣೆಯಲ್ಲಿನ ಸೂಚನೆಗಳ ಪ್ರಕಾರ, ಜನರಲ್ ಮ್ಯಾನೇಜರ್ (ಮಾರ್ಕೆಟಿಂಗ್) ಇವರ ಹೆಸರಿಗೆ, ತಮ್ಮ ಪ್ರಸ್ತಾವಣೆಯನ್ನು ಒಂದು ಲಕೋಟೆಯಲ್ಲಿ ಮೊಹರು ಹಾಕಿ, 16/09/2024 ರಂದು 15.00 ಗಂಟೆಯೊಳಗೆ ತಲುಪುವಂತೆ ರವಾನಿಸಬೇಕು.
ಸದರಿ ಟೆಂಡರ್‌ಗೆ ಯಾವುದೇ ತಿದ್ದುಪಡಿ/ವಿಸ್ತರಣೆ ಉಂಟಾದಲ್ಲಿ, ಅಂತಹುದನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
CBC 48129/12/0003/2425

ಸಂಘ ಪರಿವಾರದ ಚಾಣಕ್ಯ ವಿ.ವಿಗೆ ಭೂಮಿ– ₹137 ಕೋಟಿ ನಷ್ಟ: ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿಕೆ

‘ಕೈಗಾರಿಕಾ ಜಮೀನು ಬಳಕೆ ಆಗದಿದ್ದರೆ ವಾಪಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘ ಪರಿವಾರಕ್ಕೆ ಸೇರಿದ ಚಾಣಕ್ಯ ವಿಶ್ವವಿದ್ಯಾಲಯ ಮತ್ತು ರಾಷ್ಟ್ರೋತ್ಥಾನ ಪರಿಷತ್‌ಗೆ ನೀಡಿರುವ ಕೈಗಾರಿಕಾ ಜಮೀನು ಬಳಕೆ ಮಾಡಿಕೊಳ್ಳುವಲ್ಲಿ ವಿಫಲರಾದರೆ ಮುಲಾಜಿಲ್ಲದೇ ಆ ಸಂಸ್ಥೆಗಳ ಜಮೀನು ವಾಪಸ್ ಪಡೆಯಲಾಗುವುದು ಎಂದು ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರ ರಾಹುಲ್ ಖರ್ಗೆ ನೇತೃತ್ವದ ಸಿದ್ಧಾರ್ಥ ಟ್ರಸ್ಟ್‌ಗೆ ಸಿ.ಎ ನಿವೇಶನ ಹಂಚಿಕೆ ಮಾಡಿರುವುದು ಸಮರ್ಥಿಸಿಕೊಳ್ಳಲು ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸಂಘಪರಿವಾರದ ಸಂಸ್ಥೆಗಳು ಮತ್ತು ಬಿಜೆಪಿ ವಿರುದ್ಧ ಹರಿಹಾಯ್ದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಕೈಗಾರಿಕಾ ಶೆಡ್‌ಗೆ ಕ್ರಯ ಪತ್ರಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಹೈಕೋರ್ಟ್ ನೀಡಿರುವ ಆದೇಶದಂತೆ ನಿಯಮಗಳನ್ನು ಪೂರೈಸದೇ ಇದ್ದರೆ ಕ್ರಯಪತ್ರ ನೀಡುವುದಿಲ್ಲ. ಜಮೀನು ಹಿಂದಕ್ಕೆ ಪಡೆಯಲಾಗುವುದು. ಮಾಜಿ ಸಚಿವ ಮುರುಗೇಶ ನಿರಾಣಿ ಅವರು ಕೈಗಾರಿಕಾ ಉದ್ದೇಶಕ್ಕೆ ಪಡೆದಿರುವ ಜಮೀನು ಬಳಸಿಕೊಳ್ಳದೇ ಇದ್ದರೆ ಆ ಜಮೀನುಗಳನ್ನೂ ಹಿಂದಕ್ಕೆ ಪಡೆಯಲು

ಎಂ.ಬಿ. ಪಾಟೀಲ

ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪಾಟೀಲ ಹೇಳಿದರು.

‘ಖರ್ಗೆ ಅವರ ಕುಟುಂಬದ ಟ್ರಸ್ಟ್‌ಗೆ ಸಿ.ಎ ನಿವೇಶನ ಹಂಚಿಕೆಯನ್ನು ನಾರಾಯಣಸ್ವಾಮಿ ಮತ್ತು ಲಹರ್ ಸಿಂಗ್ ಪ್ರಶ್ನಿಸಿರುವುದರಿಂದ, ಇವರಿಬ್ಬರೂ (ಬಿಜೆಪಿ) ಹಠ ಹಿಡಿದಿರುವುದು ಬಿಚ್ಚಿಡುತ್ತೇನೆ. ಇದಕ್ಕೆ ಪ್ರಶ್ನೆಯೇ ಇಲ್ಲ. ಇವತ್ತಿನದ್ದು ಮೊದಲ ಕಂತು’ ಎಂದು ಎಚ್ಚರಿಕೆ ನೀಡಿದರು.

ಚಾಣಕ್ಯ ವಿಶ್ವವಿದ್ಯಾಲಯಕ್ಕೆ ದೇವನಹಳ್ಳಿಯ ಹೈಟೆಕ್ ಏರೋಸ್ಪೇಸ್ ಮತ್ತು ಡಿಫೆನ್ಸ್ ಪಾರ್ಕ್‌ನಲ್ಲಿ ಬಿಜೆಪಿ ಸರ್ಕಾರ 116 ಎಕರೆ ಜಮೀನು ನೀಡಿತ್ತು. ಆ ವಿಶ್ವವಿದ್ಯಾಲಯಕ್ಕೂ ಏರೋಸ್ಪೇಸ್ ಮತ್ತು ಡಿಫೆನ್ಸ್ ಕ್ಷೇತ್ರದಲ್ಲಿ ಯಾವ ಅನುಭವ ಇತ್ತು? ಆ ಜಮೀನಿನ ಬೆಲೆ ₹187 ಕೋಟಿ. ಬಿಜೆಪಿ ಸರ್ಕಾರದ ಸಚಿವ ಸಂಪುಟ ಸಭೆ ಕೇವಲ ₹50 ಕೋಟಿ ಮಾತ್ರ ನಿಗದಿ ಮಾಡಿ ಜಮೀನು ಕೊಟ್ಟಿತ್ತು. ಇದರಿಂದ ಸರ್ಕಾರಕ್ಕೆ ₹137 ಕೋಟಿ ನಷ್ಟ ಆಗಿದೆ. ಅದನ್ನು ಬಿಜೆಪಿ ಸರ್ಕಾರ ತುಂಬಿಸಿಕೊಡಬೇಕಿತ್ತು. ಆದರೆ, ಬಿಜೆಪಿ ಸರ್ಕಾರ ಆ ಹಣ ಕೊಡದೇ ಬಿಟ್ಟು ಹೋಗಿದೆ. ಹಣ ಪಡೆಯುವ ವಿಚಾರವಾಗಿ ಕಾನೂನು ಅಭಿಪ್ರಾಯ ಪಡೆಯಲಾಗುವುದು ಎಂದು ಪಾಟೀಲ ಹೇಳಿದರು.

ಚಾಣಕ್ಯ ವಿಶ್ವವಿದ್ಯಾಲಯಕ್ಕೆ 116 ಎಕರೆ ಜಮೀನಿನ ಅಗತ್ಯ ಇದೆಯೋ ಎಂಬ ಕುರಿತು ಮೌಲ್ಯಮಾಪನ ಮಾಡಲಾಗುವುದು. 2025ರ ಜೂನ್ ಒಳಗೆ 116 ಎಕರೆಯಲ್ಲಿ ಶೇ 51ರಷ್ಟು ಜಮೀನು ಬಳಸಿಕೊಂಡಿರಬೇಕು. ಇಲ್ಲವಾದರೆ ಜಮೀನನ್ನು ವಾಪಸ್ ಪಡೆದುಕೊಳ್ಳಲಾಗುವುದು ಎಂದರು.

ರಾಷ್ಟ್ರೋತ್ಥಾನ ಪರಿಷತ್ತಿಗೆ ನೀಡಿರುವ 5 ಎಕರೆ ಜಮೀನನ್ನು 2026ರೊಳಗೆ ನಿಗದಿತ ಉದ್ದೇಶಕ್ಕೆ ಬಳಸಿಕೊಳ್ಳಬೇಕು. ಅಷ್ಟರಲ್ಲಿ ಬಳಸಿಕೊಳ್ಳದಿದ್ದರೆ, ಅದನ್ನೂ ವಾಪಸ್ ಪಡೆದುಕೊಳ್ಳುತ್ತೇವೆ. ಮಾಜಿ ಸಚಿವ ಮುರುಗೇಶ ನಿರಾಣಿ ಅವರು ಮಂಡ್ಯ ಜಿಲ್ಲೆಯ ಬೂಕನ ಕೆರೆಯಲ್ಲಿ ಸಕ್ಕರೆ ಕಾರ್ಖಾನೆಗೆಂದು 200 ಎಕರೆ ಜಮೀನು ಪಡೆದಿದ್ದು, ಅದರಲ್ಲಿ 112 ಎಕರೆ ಜಮೀನು ರದ್ದುಪಡಿಸುವ ಪತ್ರಕ್ಕೆ ಒಪ್ಪಿದ್ದರು. ಅವರು 2012 ರಲ್ಲಿ ಬಾಗಲಕೋಟೆ ನವನಗರದಲ್ಲಿ ಕೈಗಾರಿಕಾ ಪ್ರದೇಶದಲ್ಲಿ ತಮಗೆ ತಾವೇ 25 ಎಕರೆ ಜಮೀನು ಪಡೆದುಕೊಂಡು ಅಲ್ಲಿ ತೇಜಸ್ ಇಂಟರ್‌ನ್ಯಾಷನಲ್ ಸ್ಕೂಲ್ ಕಟ್ಟಿದರು. ಅವರು ಎರಡನೇ ಬಾರಿ ಕೈಗಾರಿಕಾ ಸಚಿವರಾದ ಮೇಲೆ ಇದೇ ಶಾಲೆಗೆ 6.17 ಎಕರೆ ಹಂಚಿಕೆ ಮಾಡಿಕೊಂಡಿದ್ದಾರೆ ಎಂದರು.

‘ಮಲ್ಲಿಕಾರ್ಜುನ ಖರ್ಗೆ ಕುಟುಂಬದ ಟ್ರಸ್ಟ್‌ಗೆ ಅರ್ಹತೆ ಆಧಾರದಲ್ಲೇ ನಿವೇಶನ ನೀಡಲಾಗಿದೆ. ರಾಹುಲ್ ಖರ್ಗೆ ಎಂಜಿನಿಯರಿಂಗ್ ಮಾಡಿದ್ದಾರೆ. ನಿವೇಶನ ನೀಡಿಕೆಯಲ್ಲಿ ಅವರಿಗೆ ರಿಯಾಯ್ತಿ ಕೊಟ್ಟಿಲ್ಲ. ನಿಯಮ ಉಲ್ಲಂಘನೆ ಆಗಿಲ್ಲ’ ಎಂದು ಹೇಳಿದರು.

‘ನಾರಾಯಣಸ್ವಾಮಿ ಶೆಡ್ ಗಿರಾಕಿ’

ವಿಧಾನ ಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ‘ಶೆಡ್ ಗಿರಾಕಿ’ ಎಂದು ಎಂ.ಬಿ.ಪಾಟೀಲ ಹೇಳಿದರು.

ನಾರಾಯಣಸ್ವಾಮಿ ಮೈಸೂರು ಸಮೀಪದ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿ ಎರಡು ಎಕರೆ 8,029 ಚದರ ಮೀಟರ್ ಜಮೀನು ಪಡೆದುಕೊಂಡಿದ್ದರು. ಬೃಂದಾವನ ಸಾಫ್ಟ್‌ವೇರ್ ಟೆಕ್ನಾಲಜಿ ಎಂಬ ಉದ್ಯಮ ಸ್ಥಾಪಿಸುವುದಾಗಿ ಹೇಳಿಕೊಂಡಿದ್ದರು. ಆ ಬಳಿಕ ಗಾರ್ಮೆಂಟ್ ಉದ್ಯಮ ಸ್ಥಾಪಿಸುವುದಾಗಿ ಹೇಳಿಕೊಂಡರು. ಆದರೆ ಅಲ್ಲಿ ಶೆಡ್ ನಿರ್ಮಿಸಿ ಬಾಡಿಗೆ ಕೊಡುವುದಾಗಿ ಬೋರ್ಡ್ ಹಾಕಿಕೊಂಡಿದ್ದಾರೆ ಎಂದರು.

‘ಶೆಡ್ ಕಟ್ಟುವ ಯೋಗ್ಯತೆಯೂ ಇಲ್ಲದ ಈ ವ್ಯಕ್ತಿ ಮಲ್ಲಿಕಾರ್ಜುನ ಖರ್ಗೆ ಕುಟುಂಬದ ಬಗ್ಗೆ ಮಾತನಾಡುವ ಯೋಗ್ಯತೆ ಇದೆಯೆ’ ಎಂದು ಪ್ರಶ್ನಿಸಿದರು.

‘ನೀವು (ಲಹರ್ ಸಿಂಗ್ ಮತ್ತು ನಾರಾಯಣಸ್ವಾಮಿ) ನಮ್ಮನ್ನು ಪ್ರಶ್ನಿಸಿದ್ದೀರಿ ಅನುಭವಿಸಿ, ನಿಮ್ಮನ್ನು ಸುಮ್ಮನೆ ಬಿಡುವುದಿಲ್ಲ. ನಾರಾಯಣಸ್ವಾಮಿಗೆ ರಾಜಕೀಯ ಜನ್ಮಕೊಟ್ಟಿದ್ದೇ ಮಲ್ಲಿಕಾರ್ಜುನ ಖರ್ಗೆ. ಈಗ ಖರ್ಗೆ ಅವರನ್ನೇ ಪ್ರಶ್ನಿಸುವ ಭಂಡತನ ಬೆಳೆಸಿಕೊಂಡಿದ್ದಾರೆ. ದಲಿತರ ವಿರುದ್ಧ ದಲಿತರನ್ನು ಎತ್ತಿ ಕಟ್ಟುವ ಹುನ್ನಾರ ಬಿಜೆಪಿ ಮಾಡಿದೆ’ ಎಂದು ಕಿಡಿಕಾರಿದರು.

ಇದೆ ಸಂದರ್ಭದಲ್ಲಿ ಅವರು ನಾರಾಯಣ ಸ್ವಾಮಿ ಅವರ ನಿವೇಶನದಲ್ಲಿ ಗೋದಾಮಿನ ಶೆಡ್ ಚಿತ್ರಗಳನ್ನು ಪ್ರದರ್ಶಿಸಿದರು.

ಹೌದು ಸ್ವಾಮಿ ಶೆಡ್ ಗಿರಾಕಿನೇ: ಛಲವಾದಿ

‘ಹೌದು ಸ್ವಾಮಿ, ನಾನು ಶೆಡ್ ಗಿರಾಕಿನೇ. ನಿಮ್ಮಂತೆ ದೊಡ್ಡ ಗಿರಾಕಿ ಅಲ್ಲ. ಲೂಟಿ ಮಾಡಿ ಕೋಟ್ಯಧಿಪತಿ ಆದವನಲ್ಲ. ಕೋಟ್ಯಧಿಪತಿ ಆಗಿದ್ದರೆ ದೊಡ್ಡದಾಗಿ ಕಟ್ಟಬಹುದಿತ್ತು. ದೂರಿನಿಂದ ಬಂದ ಮನುಷ್ಯ. ಶ್ರೀಮಂತಿಕೆ ಇಲ್ಲ. ಹೀಗಾಗಿಯೇ ಶೆಡ್ ಕಟ್ಟಿದ್ದೇನೆ’ ಎಂದು ವಿಧಾನಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಹೇಳಿದರು.

2006 ರಲ್ಲಿ ಬಿಜೆಪಿ ಅವಧಿಯಲ್ಲಿ ಇತರ ಸಾಮಾನ್ಯರಂತೆ ಕೈಗಾರಿಕಾ ನಿವೇಶನಕ್ಕೆ ಬೃಂದಾವನ ಸಾಫ್ಟ್‌ವೇರ್ ಹೆಸರಿನಲ್ಲಿ ಅರ್ಜಿ ಹಾಕಿದ್ದೆ. ಯಾವುದೇ ಪ್ರಭಾವ ಇಲ್ಲದೇ ಜಮೀನು ಸಿಕ್ಕಿತ್ತು. ಆಗ ನಾನು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆಗಿದ್ದೆ. ಆಗ ನನ್ನ ಕೈಗಾರಿಕಾ ಜಮೀನಿನಲ್ಲಿ ಕನಿಷ್ಠ ಸೌಲಭ್ಯವೂ ಇರಲಿಲ್ಲ. ಕೆಐಎಡಿಬಿ ನಿಯಮ ಪ್ರಕಾರ ಯೋಜನೆ ಬದಲಿಸುವ ಅವಕಾಶ ಇತ್ತು. ಬದಲಿಸಿಕೊಂಡೆ. ಗೋದಾಮಿಗಾಗಿ ಶೆಡ್ ಹಾಕಿದೆ. ಗೋದಾಮಿಗೆ ಶೆಡ್ ಹಾಕದೇ ಇನ್ನೇನು ಹಾಕಬೇಕು. ಗೋದಾಮು ಕಟ್ಟುವುದು ಅದನ್ನು ಬಾಡಿಗೆ ಕೊಡದೇ ಇನ್ನೇನು ಮಾಡಬೇಕು ಎಂದು ಪ್ರಶ್ನಿಸಿದರು.

‘ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ ನನ್ನ ನಿವೇಶನವನ್ನು ಹಿಂದಕ್ಕೆ ಪಡೆಯಲಾಯಿತು. ಆಗಲೂ ನಾನು ಕಾಂಗ್ರೆಸ್‌ನಲ್ಲಿ ಇದ್ದೆ. ಅಂದಿನ ಕೈಗಾರಿಕಾ ಸಚಿವ ದೇಶಪಾಂಡೆ ಅವರನ್ನು ಭೇಟಿ ಮಾಡಲು ಹೋದಾಗ ಮಾತನಾಡಿಸಲೇ ಇಲ್ಲ. ಕೊನೆಗೆ ಹೈಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದೆ’ ಎಂದರು.

ನ್ಯಾಯಾಲಯದ ಮೇಲಿನ ವಿಶ್ವಾಸ ಹೆಚ್ಚಾಗಿದೆ: ಡಿಕೆಶಿ

ಪ್ರಜಾವಾಣಿ ವಾರ್ತೆ

ಭ್ರಷ್ಟಾಚಾರದ ವಿರುದ್ಧದ ಸಮರ ಇಲ್ಲಿಗೇ ನಿಲ್ಲದು. ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ. ಹೈಕೋರ್ಟ್ ತೀರ್ಪನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ
ಬಸನಗೌಡ ಪಾಟೀಲ ಯತ್ನಾಳ್, ಬಿಜೆಪಿ ಶಾಸಕ

ಡಿ.ಕೆ. ಶಿವಕುಮಾರ್

ಬೆಂಗಳೂರು: ‘ಆದಾಯ ಮೀರಿ ಆಸ್ತಿ ಸಂಪಾದನೆ ಮಾಡಿದ್ದೇನೆ ಎಂಬ ಆರೋಪದ ತನಿಖೆಯನ್ನು ಸಿಬಿಐ ಬದಲು ಲೋಕಾಯುಕ್ತಕ್ಕೆ ವಹಿಸಿದ್ದ ರಾಜ್ಯ ಸರ್ಕಾರದ ತೀರ್ಮಾನವನ್ನು ರಾಜ್ಯ ಹೈಕೋರ್ಟ್ ಎತ್ತಿಹಿಡಿದಿದೆ. ನ್ಯಾಯಾಲಯದ ಮೇಲಿನ ವಿಶ್ವಾಸ ಹೆಚ್ಚಾಗಿದೆ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ನನ್ನ ವಿರುದ್ಧದ ಪ್ರಕರಣವನ್ನು ತನಿಖೆ ಮಾಡಬಾರದು ಎಂದು ರಾಜ್ಯ ಸರ್ಕಾರ ಹೇಳಿಲ್ಲ. ಸಿಬಿಐ ಬದಲು ಲೋಕಾಯುಕ್ತ ತನಿಖೆಗೆ ವಹಿಸಲು ತೀರ್ಮಾನ ಮಾಡಿತ್ತು. ಅರ್ಧ ತನಿಖೆ ಮುಗಿದಿದೆ ಎಂದು ಸಿಬಿಐ ಹೇಳಿತ್ತು. ನೋಟಿಸ್ ಕೊಟ್ಟಿದ್ದು ಬಿಟ್ಟರೆ ಏನೂ ಮಾಡಿಲ್ಲ. ಜಾರಿ ನಿರ್ದೇಶನಾಲಯದಿಂದಾಗಿ ತಿಹಾರ್ ಜೈಲಿಗೂ ಹೋಗಿ ಬಂದೆ. ಆ ಪ್ರಕರಣವೂ ವಜಾ ಆಯಿತು. ಅನಗತ್ಯ ತೊಂದರೆ ಕೊಡುವ ಕೆಲಸ ಕೊನೆಗೂ ಮುಗಿಯುತ್ತಾ ಬಂದಿದೆ. ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದು, ಬಿಡುವುದು ಸಿಬಿಐಗೆ ಬಿಟ್ಟದ್ದು. ಕಾನೂನು ಹೋರಾಟ ಮುಂದುವರಿಸುವೆ’ ಎಂದು ಹೇಳಿದರು.

ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸುವುದಾಗಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಹೇಳಿದ್ದಾರಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಯತ್ನಾಳ್‌ಗೂ ಇದಕ್ಕೂ ಏನು ಸಂಬಂಧ? ಸಿಬಿಐ ಸಹ ಒಂದು ಪೊಲೀಸ್ ಠಾಣೆ ಅಷ್ಟೆ. ಕೇಂದ್ರ ಸರ್ಕಾರ ಈ ಕುರಿತು ನಿರ್ಧಾರ ಮಾಡಬೇಕಷ್ಟೆ’ ಎಂದರು.

‘ನನ್ನನ್ನು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸಲು ಸಾಧ್ಯವಾಗದ ವಿರೋಧಿಗಳು ಮಾನಸಿಕವಾಗಿ ಕುಗ್ಗಿಸುವ ಕೆಲಸ ಮಾಡುತ್ತಲೇ ಇದ್ದಾರೆ. ಅಂತಹ ಪ್ರಯತ್ನಗಳನ್ನು ಕಾನೂನು ಹೋರಾಟದ ಮೂಲಕ ಎದುರಿಸುತ್ತೇವೆ’ ಎಂದು ಹೇಳಿದರು.

ಡಿಕೆಶಿ ವಿರುದ್ಧದ ಅರ್ಜಿ ವಜಾ

ಒಂದನೇ ಪುಟದಿಂದ...

‘ಕೇಂದ್ರ ಸರ್ಕಾರವು ಎಲ್ಲಿಯವರೆಗೆ ರಾಜ್ಯವೊಂದರಲ್ಲಿ ಸಿಬಿಐ ಅನ್ನು ಕಾರ್ಯ-ನಿರ್ವಹಣೆಗೆ ಹಚ್ಚಬಹುದು ಎಂಬುದು ಕಾನೂನಿನ ವಿಚಾರಕ್ಕೆ ಒಳಪಟ್ಟಿದೆ. ಈ ಪ್ರಕರಣದಲ್ಲಿನ ಕಾನೂನಿನ ವಿಚಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಸಂಬಂಧಿಸಿವೆ. ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಮತ್ತು ಸಿಬಿಐ ನಡುವೆ ಸಂಘರ್ಷ ಇದ್ದು ಪ್ರಕರಣವನ್ನು ಸಂವಿಧಾನದ 131ನೇ ವಿಧಿಯಡಿ ಸುಪ್ರೀಂ ಕೋರ್ಟ್ ನಿರ್ಧರಿಸುವುದೇ ಸೂಕ್ತವಾಗಿದೆ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

‘ಈ ಕಾರಣಗಳಿಂದ ಎರಡೂ ಅರ್ಜಿಗಳು ಅನೂರ್ಜಿತವಾಗಲಿದ್ದು, ಇವುಗಳನ್ನು ವಜಾಗೊಳಿಸಲಾಗಿದೆ. ಅದಾಗ್ಯೂ, ಅರ್ಜಿದಾರರು ಈ ಕುರಿತು ಸುಪ್ರೀಂ ಕೋರ್ಟ್‌ನಲ್ಲಿ ಸೂಕ್ತ ಪರಿಹಾರ ಕಂಡುಕೊಳ್ಳಬಹುದು’ ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.

ಪ್ರಕರಣವೇನು?: ಆದಾಯ ಮೀರಿ ಆಸ್ತಿ ಗಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಈ ಹಿಂದಿನ ಬಿಜೆಪಿ ಸರ್ಕಾರ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ 2019ರ ಸೆಪ್ಟೆಂಬರ್ 25ರಂದು ಅನುಮತಿ ನೀಡಿತ್ತು. ಈ ಅನುಮತಿಯನ್ನು ಈಗಿನ ಕಾಂಗ್ರೆಸ್ ಸರ್ಕಾರ 2023ರ ನವೆಂಬರ್ 23ರಂದು ಹಿಂಪಡೆದಿತ್ತು. ನಂತರ 2023ರ ಡಿಸೆಂಬರ್ 28ರಂದು ಲೋಕಾಯುಕ್ತ ತನಿಖೆಗೆ ವಹಿಸಿತ್ತು.

ಇದನ್ನು ಪ್ರಶ್ನಿಸಿ ಸಿಬಿಐ ಮತ್ತು ಬಸನಗೌಡ ಪಾಟೀಲ ಯತ್ನಾಳ್ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಕಳೆದ ಆಗಸ್ಟ್ 12ರಂದು ಅರ್ಜಿ ವಿಚಾರಣೆ ಪೂರ್ಣಗೊಳಿಸಿದ್ದ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠವು ತೀರ್ಪನ್ನು ಕಾಯ್ದಿರಿಸಿತ್ತು.

‘ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನ’

ಹಾಸನ: ‘ಸಂಪುಟ ಪುನರ್‌ರಚನೆ, ಕೆಪಿಸಿಸಿ ಅಧ್ಯಕ್ಷರ ಬದಲಾವಣೆ, ಬಡ್ತಿ ಎಲ್ಲವನ್ನೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ತಿಳಿಸಿದರು. ‘ಮುಂಬಡ್ತಿ ಸಿಗುತ್ತದೆ’ ಎಂಬ ಗೃಹ ಸಚಿವ ಡಾ.ಜಿ. ಪರಮೇಶ್ವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು ‘ರಾಹುಲ್ ಗಾಂಧಿಯವರು ಅವರಿಗೆ ಬಡ್ತಿ ಕೊಡುತ್ತೇವೆ ಎಂದರೆ ತಪ್ಪಿಸಲು ಆಗುತ್ತದೆಯೇ? ಅದರ ಬಗ್ಗೆ ಅವರನ್ನೇ ಕೇಳಿ’ ಎಂದರು.

ಕಾರ್ಯಾಗಾರದಲ್ಲಿ ವಿಜಯೇಂದ್ರ ಹೇಳಿಕೆ

ಮಹಿಳೆಯರ ಮೇಲಿನ ದೌರ್ಜನ್ಯ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ರಾಜ್ಯದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಅದನ್ನು ತಡೆಯದೇ ಸರ್ಕಾರ ಮೌನ ವಹಿಸಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದರು.

ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿದ ಅವರು, ಮಹಿಳಾ ದೌರ್ಜನ್ಯದ ಸಂದರ್ಭದಲ್ಲೂ ಸರ್ಕಾರ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ಹೇಳಿದರು.

‘ಈ ಸರ್ಕಾರದ ಬಗ್ಗೆ ಜನ ಬೇಸತ್ತು ಹೋಗಿದ್ದು ಹಿಡಿ ಶಾಪ ಹಾಕುತ್ತಿದ್ದಾರೆ. ಇದೊಂದು ಜನ ವಿರೋಧಿ ಸರ್ಕಾರ. ಇದರ ವಿರುದ್ಧ ನಿರಂತರ ಹೋರಾಟ ಅನಿವಾರ್ಯ. ಚುನಾವಣೆ ಬಂದಾಗ ಮಾತ್ರ ಹೋರಾಟ ಮಾಡಿದರೆ ಅದು ಜನತೆಗೆ ಮಾಡಿದ ಅವಮಾನ ಮತ್ತು ಅನ್ಯಾಯ. ರಾಜ್ಯದ ಚುಕ್ಕಾಣಿ ಹಿಡಿದವರು ಜನ ವಿರೋಧಿ ನೀತಿಗಳನ್ನು ಅನುಸರಿಸುತ್ತಾರೋ ಆಗ, ಜನರ ಪರವಾಗಿ ಹೋರಾಡುವುದು ನಮ್ಮ ಕರ್ತವ್ಯ’ ಎಂದರು.

ಬೆಂಗಳೂರಿನ ಮಲ್ಲೇಶ್ವರದ ಜಗನ್ನಾಥ ಭವನದಲ್ಲಿ ಗುರುವಾರ ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯಮಟ್ಟದ ಕಾರ್ಯಾಗಾರದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದ ಪದಾಧಿಕಾರಿಗಳು ಭಾಗವಹಿಸಿದರು — ಪ್ರಜಾವಾಣಿ ಚಿತ್ರ.

ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಅಧ್ಯಕ್ಷೆ ಕೆ.ಮಂಜುಳಾ ಮಾತನಾಡಿ, ಮಹಿಳೆಯರ ಮೇಲೆ ದೌರ್ಜನ್ಯ ನಡೆದಾಗ ನಿರ್ದಾಕ್ಷಿಣ್ಯ ಕ್ರಮ ಅಗತ್ಯ. ಆಗ ದುಷ್ಟರು, ದುರುಳರು, ಕ್ರಿಮಿನಲ್‌ಗಳು ಮನೆ ಸೇರಿಕೊಳ್ಳುತ್ತಾರೆ’ ಎಂದು ಹೇಳಿದರು.

ಸಭೆಯಲ್ಲಿ ಮಹಿಳಾ ಮೋರ್ಚಾ ರಾಜ್ಯ ಉಸ್ತುವಾರಿ ಸೋನಲ್ ಬೆನ್ ಪಟೇಲ್, ವಿಧಾನ ಪರಿಷತ್ ಸದಸ್ಯ ಪ್ರತಾಪಸಿಂಹ ನಾಯಕ್, ಡಾ. ಶೋಭಾ, ಮಹಿಳಾ ಮೋರ್ಚಾ ರಾಜ್ಯ ಮತ್ತು ಜಿಲ್ಲಾ ಪದಾಧಿಕಾರಿಗಳು ಹಾಜರಿದ್ದರು.

‘ರಾಜ್ಯಪಾಲರದ್ದು ವಿವೇಚನಾರಹಿತ ನಿರ್ಧಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಮುಡಾ ಪ್ರಕರಣದಲ್ಲಿ ಸಂಪುಟದ ಸಲಹೆಯನ್ನು ತಳ್ಳಿಹಾಕುವ ಮೂಲಕ ರಾಜ್ಯಪಾಲರು ಸಹಜ ನ್ಯಾಯ ತತ್ವದ ಪ್ರಾಮುಖ್ಯವನ್ನು ಬದಿಗೊತ್ತಿದ್ದಾರೆ. ಸರಿಯಾದ ರೀತಿಯಲ್ಲಿ ತಮ್ಮ ವಿವೇಚನೆ ಬಳಕೆ ಮಾಡಿಲ್ಲ’ ಎಂದು ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಪ್ರತಿಪಾದಿಸಿದರು.

ಪ್ರಕರಣದ ತನಿಖೆಗೆ ರಾಜ್ಯಪಾಲರು ನೀಡಿರುವ ಆದೇಶವನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲ್ಲಿಸಿರುವ ರಿಟ್ ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಸಿದ್ದರಾಮಯ್ಯ ಪರ ವಾದ ಮಂಡಿಸಿದ ಸಿಂಘ್ವಿ, ‘ದೂರುದಾರ ಟಿ.ಜೆ.ಅಬ್ರಹಾಂ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 17ಎ ಅಡಿ ಪೂರ್ವಾನುಮತಿ ಬೇಕಿಲ್ಲ ಎಂದಿದ್ದಾರೆ. ಮತ್ತೊಬ್ಬ ದೂರುದಾರ ಮೈಸೂರಿನ ಸ್ನೇಹಮಯಿ ಕೃಷ್ಣ ಅನುಮತಿ ಕೋರಿರುವ ವಿಚಾರವನ್ನು ನಮ್ಮ ಗಮನಕ್ಕೆ ತಂದಿಲ್ಲ. ಅಲ್ಲದೇ, ತನಿಖೆಗೆ ಮಂಜೂರಾತಿ ನೀಡುವಾಗ ರಾಜ್ಯಪಾಲರು ಸೂಕ್ತ ರೀತಿಯಲ್ಲಿ ತೀರ್ಮಾನ ಕೈಗೊಂಡಿಲ್ಲ. ಹೀಗಾಗಿ, ಮಂಜೂರಾತಿ ಆದೇಶವನ್ನು ವಜಾಗೊಳಿಸಬೇಕು’ ಎಂದರು.

ಅಭಿಷೇಕ್ ಮನು ಸಿಂಘ್ವಿ

‘ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಜನಾರ್ದನ ರೆಡ್ಡಿ, ಶಶಿಕಲಾ ಜೊಲ್ಲೆ ಮತ್ತು ಮುರುಗೇಶ್ ನಿರಾಣಿ ವಿರುದ್ಧದ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್ ಮಂಜೂರಾತಿ ಕೋರಿ ಸಲ್ಲಿಸಲಾಗಿರುವ ಮನವಿಗಳು ದೀರ್ಘಾವಧಿಯಿಂದ ನನೆಗುದಿಗೆ ಬಿದ್ದಿದ್ದರೂ ರಾಜ್ಯಪಾಲರು ಅವುಗಳ ಬಗ್ಗೆ ನಿರ್ಧಾರ ಕೈಗೊಂಡಿಲ್ಲ’ ಎಂದರು.

ರಾಜ್ಯಪಾಲರ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ಎಸ್.ತುಷಾರ್ ಮೆಹ್ತಾ, ‘ಇಡೀ ಪ್ರಕರಣವು ಶುದ್ಧ ಕಾನೂನಿನ ಪ್ರಶ್ನೆಯನ್ನು ಒಳಗೊಂಡಿರುವ ಕಾರಣ ಆಕ್ಷೇಪಣೆ ಸಲ್ಲಿಸುವ ಅವಶ್ಯ ಇಲ್ಲ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಮುಂಜೂರಾತಿ ನೀಡಿರುವುದರ ಕಡತ ಹಾಗೂ ಕಾನೂನಿಗೆ ಸಂಬಂಧಿಸಿದ ಲಿಖಿತ ವಾದಾಂಶಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಲಾಗುವುದು’ ಎಂದರು.

ದೂರುದಾರ ಪಿ.ಎಸ್.ಪ್ರದೀಪ್ ಕುಮಾರ್ ಪರ ವಾದಿಸಿದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ರಾಜ್ಯಪಾಲರ ಪ್ರಾಸಿಕ್ಯೂಷನ್ ಮಂಜೂರಾತಿ ಪ್ರಶ್ನಿಸಿರುವ ದಾವೆಯು ಶುದ್ಧ ಕಾನೂನಿನ ಪ್ರಶ್ನೆಯಾಗಿದೆ. ಹೀಗಾಗಿ, ಯಾವುದೇ ಆಕ್ಷೇಪಣೆ ಸಲ್ಲಿಸುವ ಅಂಶಗಳು ಬಾಕಿ ಉಳಿದಿಲ್ಲ. ಅರ್ಜಿದಾರರೇ ಎಲ್ಲಾ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಇಟ್ಟಿದ್ದಾರೆ’ ಎಂದರು.

ವಿಸ್ತೃತ ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ ಇದೇ 19ರಂದು ಮಾಡಿದ್ದ ಆದೇಶವನ್ನು ಇದೇ 31ರವರೆಗೆ ವಿಸ್ತರಿಸಿತು. ಅಲ್ಲಿಯವರೆಗೆ ಆಗಸ್ಟ್ 19ರ ಮಧ್ಯಂತರ ಆದೇಶ ಮುಂದುವರಿಯಲಿದೆ ಎಂದು ಆದೇಶಿಸಿತು.

ನೂರಾನಿ ಇನ್ನು ನೆನಪು ಮಾತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಹಿರಿಯ ವಕೀಲ, ಸಂವಿಧಾನ ತಜ್ಞ ಹಾಗೂ ರಾಜಕೀಯ ವಿಶ್ಲೇಷಕ ಅಬ್ದುಲ್ ಗಫೂರ್ ಮಜೀದ್ ನೂರಾನಿ (93) ಮುಂಬೈನಲ್ಲಿ ಗುರುವಾರ ನಿಧನರಾದರು. ಲೇಖಕರಾಗಿಯೂ ಎ.ಜಿ. ನೂರಾನಿ ಎಂದೇ ಹೆಚ್ಚು ಪರಿಚಿತರಾಗಿದ್ದ ಅವರು ಪ್ರಜಾಪ್ರಭುತ್ವ, ಸಾಂವಿಧಾನಿಕ ಮೌಲ್ಯಗಳು ಮತ್ತು ಮಾನವ ಹಕ್ಕುಗಳ ದೊಡ್ಡ ಪ್ರತಿಪಾದಕರಾಗಿದ್ದರು. ಕಾನೂನು ವಿಷಯದಲ್ಲಿ ಅಗಾಧ ಪಾಂಡಿತ್ಯ ಹೊಂದಿದ್ದರು.

ಮುಂಬೈನಲ್ಲಿ 1930ರಲ್ಲಿ ಜನಿಸಿದ ನೂರಾನಿ ಅವರು ಸರ್ಕಾರಿ ಶಾಲೆಯಲ್ಲಿ ವ್ಯಾಸಂಗ ಮಾಡಿ, ಮುಂಬೈನ ಸರ್ಕಾರಿ ಕಾನೂನು ಕಾಲೇಜಿನಲ್ಲಿ ಕಾನೂನು ಪದವಿ ಪಡೆದಿದ್ದರು. ಬಾಂಬೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲಿ ವಕೀಲರಾಗಿದ್ದರು. ಕಾಶ್ಮೀರದ ಶೇಖ್ ಅಬ್ದುಲ್ಲಾ ಅವರ ದೀರ್ಘಾವಧಿಯ ಬಂಧನದ ಪ್ರಕರಣದಲ್ಲಿ ವಾದ ಮಂಡಿಸಿದ್ದರು. ತಮಿಳುನಾಡು ಮಾಜಿ ಮುಖ್ಯಮಂತ್ರಿ ಕರುಣಾನಿಧಿ ಅವರ ಪ್ರಮುಖ ರಾಜಕೀಯ ಪ್ರತಿಸ್ಪರ್ಧಿಯಾಗಿದ್ದ ಜೆ.ಜಯಲಲಿತಾ ವಿರುದ್ಧವೂ ಅವರು ಬಾಂಬೆ ಹೈಕೋರ್ಟ್‌ನಲ್ಲಿ ವಾದಿಸಿದ್ದರು.

ಎ.ಜಿ. ನೂರಾನಿ

1960ರ ದಶಕದ ಆರಂಭದಲ್ಲಿ ದೇಶ-ವಿದೇಶಗಳ ಪತ್ರಿಕೆಗಳಿಗೆ ಬರೆಯಲು ಪ್ರಾರಂಭಿಸಿದ್ದ ಅವರು ಇದುವರೆಗೂ ಸಾವಿರಾರು ಲೇಖನಗಳನ್ನು ಬರೆದಿದ್ದಾರೆ. ವಿವಿಧ ಪತ್ರಿಕೆಗಳಿಗೆ ಅಂಕಣಗಳನ್ನು ಬರೆದಿದ್ದಾರೆ.

ಲೇಖಕರಾಗಿಯೂ ಗುರುತಿಸಿಕೊಂಡಿದ್ದ ನೂರಾನಿ ಅವರು ‘ದಿ ಕಾಶ್ಮೀರ್ ಕ್ವೆಶ್ಚನ್’, ‘ಮಿನಿಸ್ಟರ್ ಮಿಸ್ ಕಂಡಕ್ಟ್’, ‘ಬ್ರೆಝ್ನೇವ್ಸ್ ಪ್ಲ್ಯಾನ್ ಫಾರ್ ಏಷ್ಯನ್ ಸೆಕ್ಯೂರಿಟಿ’, ‘ದಿ ಪ್ರೆಸಿಡೆನ್ಶಿಯಲ್ ಸಿಸ್ಟಮ್’, ‘ದಿ ಟ್ರಯಲ್ ಆಫ್ ಭಗತ್ ಸಿಂಗ್’, ‘ಕಾನ್‌ಸ್ಟಿಟ್ಯೂಶನಲ್ ಕ್ವೆಶ್ಚನ್ಸ್ ಇನ್ ಇಂಡಿಯಾ’, ‘ದಿ ಆರ್‌ಎಸ್‌ಎಸ್ ಅಂಡ್ ಬಿಜೆಪಿ: ಎ ಡಿವಿಶನ್ ಆಫ್ ಲೇಬರ್’ ಮತ್ತು ‘ದಿ ಆರ್‌ಎಸ್‌ಎಸ್: ಎ ಮೆನೇಸ್ ಟು ಇಂಡಿಯಾ’, ‘ದಿ ಕಾಶ್ಮೀರ್ ಡಿಸ್ಪ್ಯೂಟ್’ (1947–2012), ‘ಆರ್ಟಿಕಲ್ 370: ಎ ಕಾನ್‌ಸ್ಟಿಟ್ಯೂಶನಲ್ ಹಿಸ್ಟರಿ ಆಫ್ ಜಮ್ಮು ಅಂಡ್ ಕಾಶ್ಮೀರ್’, ‘ಸಾವರ್ಕರ್ ಅಂಡ್ ಹಿಂದುತ್ವ: ದಿ ಗಾಡ್ಸೆ ಕನೆಕ್ಷನ್’ ಸೇರಿದಂತೆ ಹಲವು ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ.

ಬದ್ರುದ್ದೀನ್ ತ್ಯೆಯ್ಯಬ್ಜಿ ಮತ್ತು ಡಾ. ಝಾಕಿರ್ ಹುಸೇನ್ ಅವರ ಜೀವನಚರಿತ್ರೆಯನ್ನೂ ನೂರಾನಿ ರಚಿಸಿದ್ದಾರೆ. ಇವರ ಕೃತಿಗಳು ಸ್ವತಂತ್ರ ಭಾರತದಲ್ಲಿ ಪ್ರಕಟಗೊಂಡ ಮಹತ್ವದ ಕೃತಿಗಳ ಸಾಲಿನಲ್ಲಿ ಸೇರಿವೆ. ಅಲ್ಲದೆ, ರಾಜಕೀಯ ಮತ್ತು ಕಾನೂನು ಕುರಿತು ಪರಿಣಾಮಕಾರಿಯಾಗಿ ವಿಚಾರಗಳನ್ನು ಮಂಡಿಸುತ್ತಿದ್ದ ನೂರಾನಿ ಎಲ್ಲ ತಲೆಮಾರಿಗೂ ಮಾದರಿ ಚಿಂತಕರು ಎನಿಸಿಕೊಂಡಿದ್ದರು.

ಉಪಚುನಾವಣೆ: ದೆಹಲಿಯಲ್ಲಿ ಬಿಜೆಪಿ–ಜೆಡಿಎಸ್ ನಾಯಕರ ಸಭೆ

ನಾಯಕರ ಮುಂದೆ ಮೂರು ಆಯ್ಕೆ ಇರಿಸಿದ ‘ಸೈನಿಕ’

ಪ್ರಜಾವಾಣಿ ವಾರ್ತೆ

ನವದೆಹಲಿ: ಚನ್ನಪಟ್ಟಣ ವಿಧಾನಸಭಾ ಉಪಚುನಾವಣೆಗೆ ಬಿಜೆಪಿ–ಜೆಡಿಎಸ್‌ನ ಒಮ್ಮತದ ಅಭ್ಯರ್ಥಿಯನ್ನು ಕಣಕ್ಕಿಳಿಸುವ ಸಂಬಂಧ ಉಭಯ ಪಕ್ಷಗಳ ನಾಯಕರು ಗುರುವಾರ ರಾತ್ರಿ ಸಭೆ ನಡೆಸಿದರು.

ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಸಿ.ಪಿ.ಯೋಗೇಶ್ವರ ಅವರು ತಮ್ಮನ್ನೇ ಕಣಕ್ಕೆ ಇಳಿಸಬೇಕು ಎಂದು ಪಟ್ಟು ಹಿಡಿದಿದ್ದಾರೆ. ಎರಡು ದಿನಗಳಿಂದ ರಾಷ್ಟ್ರ ರಾಜಧಾನಿಯಲ್ಲಿ ಬೀಡು ಬಿಟ್ಟಿರುವ ಅವರು ಟಿಕೆಟ್‌ಗಾಗಿ ಲಾಬಿ ನಡೆಸಿದ್ದಾರೆ. ಈ ಬಗ್ಗೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ಮನವೊಲಿಸಬೇಕು ಎಂದು ಬೇಡಿಕೆ ಮುಂದಿಟ್ಟಿದ್ದಾರೆ.

ಈ ಕಾರಣಕ್ಕಾಗಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ನಿವಾಸದಲ್ಲಿ ಮೈತ್ರಿ ನಾಯಕರ ಸಭೆ ನಡೆಯಿತು. ಈ ಸಭೆಯಲ್ಲಿ ಜೋಶಿ, ಕುಮಾರಸ್ವಾಮಿ, ಬಿಜೆಪಿ ನಾಯಕರಾದ ಬಸವರಾಜ ಬೊಮ್ಮಾಯಿ, ಆರ್. ಅಶೋಕ, ಸಿ.ಎನ್. ಅಶ್ವತ್ಥನಾರಾಯಣ, ಸಿ.ಟಿ. ರವಿ ಹಾಗೂ ಅರವಿಂದ ಬೆಲ್ಲದ ಭಾಗಿಯಾಗಿದ್ದರು. ಈ ಸಲ ಯೋಗೇಶ್ವರ್‌ಗೆ ಅವಕಾಶ ನೀಡಬೇಕು ಎಂದು ಬಿಜೆಪಿಯ ಕೆಲವು ನಾಯಕರು ಮನವಿ ಮಾಡಿದರು. ಈ ಪ್ರಸ್ತಾಪಕ್ಕೆ ಕುಮಾರಸ್ವಾಮಿ ಒಪ್ಪಲಿಲ್ಲ.

ಯೋಗೇಶ್ವರ ಆಯ್ಕೆಗಳೇನು?

- ಈ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯನ್ನೇ ಕಣಕ್ಕಿಳಿಸಬೇಕು ಎಂದಾದರೆ ನಾನು ಆ ಪಕ್ಷದ ಅಭ್ಯರ್ಥಿಯಾಗುತ್ತೇನೆ.
- ಒಂದು ವೇಳೆ ಜೆಡಿಎಸ್ ಪಟ್ಟು ಸಡಿಲಿಸದಿದ್ದರೆ ಬಿಜೆಪಿ ಮೈತ್ರಿ ಮುರಿದುಕೊಳ್ಳಬೇಕು. ತ್ರಿಕೋನ ಸ್ಪರ್ಧೆ ನಡೆಯಲಿದೆ. ಆಗ ಯಾರ ಶಕ್ತಿ ಎಷ್ಟು ಎಂಬುದು ಗೊತ್ತಾಗಲಿದೆ. ನಾನು ಗೆದ್ದು ತೋರಿಸುತ್ತೇನೆ.
- ಒಂದು ವೇಳೆ ಟಿಕೆಟ್ ನೀಡದಿದ್ದರೆ ನಾನು ಬಿಎಸ್‌ಪಿಯಿಂದ ಸ್ಪರ್ಧಿಸುತ್ತೇನೆ. ಈ ಬಗ್ಗೆ ಬಿಎಸ್‌ಪಿ ನಾಯಕರ ಜತೆಗೆ ಚರ್ಚೆ ನಡೆಸಿದ್ದೇನೆ. ಅವರು ಬಿ–ಫಾರಂ ನೀಡಲು ಒಪ್ಪಿದ್ದಾರೆ.

‘ಉಪಚುನಾವಣೆಯ ವೇಳಾಪಟ್ಟಿ ಇನ್ನೂ ಪ್ರಕಟವಾಗಿಲ್ಲ. ಅಭ್ಯರ್ಥಿಯ ಆಖೈರುಗೊಳಿಸಲು ತರಾತುರಿ ಏಕೆ. ಬಿಜೆಪಿ ವರಿಷ್ಠರ ಜತೆಗೆ ಸಮಾಲೋಚಿಸಿ ಮುಂದಿನ ಹೆಜ್ಜೆ ಇಡೋಣ’ ಎಂದು ಕುಮಾರಸ್ವಾಮಿ ಹೇಳಿದರು.

‘ಈ ಕ್ಷೇತ್ರದಲ್ಲಿ ಜೆಡಿಎಸ್‌ಗೆ ತನ್ನದೇ ಆದ ಬಲ ಇದೆ. ಕ್ಷೇತ್ರದಲ್ಲಿ ಎರಡು ಸಲ ನಾನು ಗೆದ್ದಿದ್ದೇನೆ. ಒಂದು ಸಲ 3 ಸಾವಿರ ಮತಗಳಿಂದ ಸೋಲಾಗಿದೆ. ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸದೆ ನಿಲುವು ತಿಳಿಸಲು ಸಾಧ್ಯವಿಲ್ಲ. ಜತೆಗೆ, ಪಕ್ಷದ ವೇದಿಕೆಯಲ್ಲೂ ಚರ್ಚೆ ನಡೆಸಬೇಕಿದೆ’ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಸಭೆ ಬಳಿಕ ಮಾತನಾಡಿದ ಆರ್. ಅಶೋಕ, ‘ಜೆಡಿಎಸ್-ಬಿಜೆಪಿ ಒಟ್ಟಾಗಿ ಹೋದರೆ ಇಬ್ಬರಿಗೂ ಲಾಭ. ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಹೊರಡಬೇಕು ಎಂದು ಚರ್ಚಿಸಿದ್ದೇವೆ. ಟಿಕೆಟ್ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡಲಿದೆ. ಚುನಾವಣೆ ಗೆಲ್ಲಬೇಕು ಎನ್ನುವುದು ನಮ್ಮ ಉದ್ದೇಶ’ ಎಂದರು.

ಕಾಯ್ದೆ ತಿದ್ದುಪಡಿ ವಿರೋಧಿಸಿ ವಕ್ಫ್ ಮಂಡಳಿ ನಿರ್ಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಕ್ಫ್ ಕಾಯ್ದೆ ತಿದ್ದುಪಡಿ ಮಾಡುವ ಕೇಂದ್ರ ಸರ್ಕಾರದ ಪ್ರಸ್ತಾವಕ್ಕೆ ವಿರೋಧ ವ್ಯಕ್ತಪಡಿಸಿ, ರಾಜ್ಯ ವಕ್ಫ್ ಮಂಡಳಿ ಗುರುವಾರ ನಿರ್ಣಯ ಅಂಗೀಕರಿಸಿತು.

ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್, ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಅನ್ವರ್ ಬಾಷಾ ನೇತೃತ್ವದಲ್ಲಿ ನಡೆದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಕುರಿತು ಮನವಿ ಸಲ್ಲಿಸಿದ ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್ ನೇತೃತ್ವದ ನಿಯೋಗ, ಕಾಯ್ದೆಗೆ ತಿದ್ದುಪಡಿ ತರುವುದನ್ನು ವಿರೋಧಿಸಿರುವ ಮಂಡಳಿ ನಿರ್ಣಯ ಕುರಿತು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವಂತೆ ಕೋರಿತು.

ಈ ಕುರಿತು ಸುದ್ದಿಗಾರರಿಗೆ ಮಾಹಿತಿ ನೀಡಿದ ಸಚಿವ ಜಮೀರ್ ಅಹಮದ್ ಖಾನ್, ‘ವಕ್ಫ್ ಮಂಡಳಿ ಸ್ವಾಯತ್ತ ಸಂಸ್ಥೆ. ಹಾಗಾಗಿ, ಕೇಂದ್ರ ಸರ್ಕಾರ ರಚನೆ ಮಾಡಿರುವ ಜಂಟಿ ಸಲಹಾ ಸಮಿತಿಗೂ ಮಾಹಿತಿ ಕೊಡುವುದಿಲ್ಲ. ಕಾಯ್ದೆಯ ತಿದ್ದುಪಡಿ ಸಮುದಾಯದ ಹಿತಾಸಕ್ತಿಗೆ ವಿರುದ್ಧವಾಗಿದೆ. ಇದರ ಹಿಂದಿನ ಉದ್ದೇಶ ಬೇರೆ ಇದೆ. ಈ ಎಲ್ಲ ವಿಷಯವನ್ನು ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಲಾಗಿದೆ’ ಎಂದರು.

‘ಮುಂದಿನ ಅಧಿವೇಶನದಲ್ಲಿ ರಾಜ್ಯ ಸರ್ಕಾರದಿಂದ ಈ ಬಗ್ಗೆ ಖಂಡನಾ ನಿರ್ಣಯ ಕೈಗೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಮನವಿ ಮಾಡಿದ್ದೇವೆ’ ಎಂದರು. ಮಂಡಳಿ ಸದಸ್ಯರಾದ ಮೌಲನಾ ಶಾಫಿ ಸಾದಿ, ಜಿ.ಯಾಕೂಬ್ ಮತ್ತಿತರರು ಇದ್ದರು.

ಕೆಇಎ: ಸೀಟು ಹಂಚಿಕೆ ತಾತ್ಕಾಲಿಕ ಪಟ್ಟಿ ಪ್ರಕಟ

ಬೆಂಗಳೂರು: ವೈದ್ಯಕೀಯ, ದಂತ ವೈದ್ಯಕೀಯ, ಆಯುಷ್, ಎಂಜಿನಿಯರಿಂಗ್ ಸೇರಿದಂತೆ ಎಲ್ಲ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಮೊದಲ ಸುತ್ತಿನ ನೈಜ ಸೀಟು ಹಂಚಿಕೆಯ ತಾತ್ಕಾಲಿಕ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಫಲಿತಾಂಶ ಕುರಿತು ಆಕ್ಷೇಪ ಇದ್ದಲ್ಲಿ ಆ. 30ರ ಮಧ್ಯಾಹ್ನ 12ರ ಒಳಗೆ ಕೆಇಎ ಇ-ಮೇಲ್ keaauthority-ka@nic.inಗೆ ಕಳುಹಿಸಬಹುದು. ಆಕ್ಷೇಪಣೆಗಳನ್ನು ಪರಿಶೀಲಿಸಿದ ಬಳಿಕ ನೈಜ ಸೀಟು ಹಂಚಿಕೆ ಫಲಿತಾಂಶ ಪ್ರಕಟಿಸಲಾಗುತ್ತದೆ ಎಂದು ಪ್ರಾಧಿಕಾರ ಹೇಳಿದೆ.

ಕೆ–ಸೆಟ್ ಅರ್ಜಿ ಸಲ್ಲಿಕೆಗೆ ಸೆ.2ರವರೆಗೆ ಅವಕಾಶ: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಗೆ (ಕೆ–ಸೆಟ್-24) ಅರ್ಜಿ ಸಲ್ಲಿಸುವ ಅವಧಿಯನ್ನು ಸೆ.2 ರವರೆಗೆ ವಿಸ್ತರಿಸಲಾಗಿದೆ. ಶುಲ್ಕ ಪಾವತಿಗೆ ಸೆ.3 ಕೊನೆ ದಿನ.

ಶೇ 60ರಷ್ಟು ಪಾಲು ಕೊಡಿ: ಸಿ.ಎಂ

ಎಫ್‌ಕೆಸಿಸಿಐ ಮನವಿ

‘ಕೇಂದ್ರ ಸರ್ಕಾರವು ಎಂಎಸ್‌ಎಂಇಗಳಿಗೆ ಆರ್ಥಿಕ ನೆರವು ಹೆಚ್ಚಿಸಬೇಕು, ಜಿಎಸ್‌ಟಿ ಮತ್ತು ಇತರ ತೆರಿಗೆ ದರಗಳನ್ನು ಇಳಿಸಬೇಕು, ಸಾಮರ್ಥ್ಯ ವೃದ್ಧಿ ಮತ್ತು ಕೌಶಲ ಅಭಿವೃದ್ಧಿಗೆ ಅನುದಾನ ಒದಗಿಸಬೇಕು. ಈ ಸಂಬಂಧ ಕೇಂದ್ರಕ್ಕೆ ಶಿಫಾರಸು ಮಾಡಬೇಕು’ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಎಂ.ಜಿ.ರಾಜಗೋಪಾಲ್ ಆಯೋಗಕ್ಕೆ ಮನವಿ ಸಲ್ಲಿಸಿದರು.

‘ಎಲ್ಲದಕ್ಕೂ ಕೇಂದ್ರ ಬದ್ಧವಾಗಿರಬೇಕಿಲ್ಲ’

‘ತೆರಿಗೆ ಆದಾಯದಲ್ಲಿನ ಪಾಲಿಗೆ ಸಂಬಂಧಿಸಿದಂತೆ ಆಯೋಗವು ಮಾಡುವ ಶಿಫಾರಸಿಗೆ ಮಾತ್ರ ಕೇಂದ್ರ ಸರ್ಕಾರ ಬದ್ಧವಾಗಿರಬೇಕು. ಸಂಚಿತ ನಿಧಿಯಿಂದ ಅನುದಾನ ನೀಡುವಂತೆ ಮಾಡುವ ಶಿಫಾರಸನ್ನು ಕೇಂದ್ರ ಸರ್ಕಾರ ಪಾಲಿಸಲೇಬೇಕು ಎಂದೇನೂ ಇಲ್ಲ’ ಎಂದು ಅರವಿಂದ್ ಪನಗಡಿಯಾ ಹೇಳಿದರು.

ಕರ್ನಾಟಕಕ್ಕೆ ಸಹಾಯಾನುದಾನದ ರೂಪದಲ್ಲಿ ₹5,495 ಕೋಟಿ ನೀಡುವಂತೆ 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿತ್ತು. ಆದರೆ ಕೇಂದ್ರ ಸರ್ಕಾರ ಅದನ್ನು ಪಾಲಿಸಲಿಲ್ಲ. ನೀವು ಮಾಡುವ ಶಿಫಾರಸುಗಳನ್ನು ಕೇಂದ್ರ ಪಾಲಿಸುತ್ತದೆಯೇ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಅವರು ಉತ್ತರಿಸಿದರು.

ಒಂದನೇ ಪುಟದಿಂದ...

ತೆರಿಗೆ ಪಾಲಿನಲ್ಲಿ ರಾಜ್ಯಕ್ಕೆ ನಷ್ಟವಾದ ಕಾರಣ ಅಭಿವೃದ್ಧಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ ಎಂದು ಹಣಕಾಸು ಇಲಾಖೆಯ ಅಧಿಕಾರಿಗಳು ದತ್ತಾಂಶಗಳ ರೂಪದಲ್ಲಿ ಆಯೋಗಕ್ಕೆ ವಿವರಿಸಿದರು. ಈ ವಿವರ ಮತ್ತು ರಾಜ್ಯದ ಬೇಡಿಕೆಗಳನ್ನು ಒಳಗೊಂಡ ವರದಿಯನ್ನು ಮುಖ್ಯಮಂತ್ರಿ, ಆಯೋಗಕ್ಕೆ ಸಲ್ಲಿಸಿದರು.

ಆಯೋಗದ ಸದಸ್ಯರಾದ ಅಜಯ್ ನಾರಾಯಣ ಝಾ, ಅನ್ನಿ ಜಾರ್ಜ್ ಮ್ಯಾಥ್ಯೂ, ಮನೋಜ್ ಪಾಂಡಾ ಮತ್ತು ಸೌಮ್ಯಕಾಂತಿ ಘೋಷ್ ಸಭೆಯಲ್ಲಿ ಇದ್ದರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರು, ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿವಿಧ ಇಲಾಖೆಗಳ ಕಾರ್ಯದರ್ಶಿಗಳು ಇದ್ದರು.

ತಿಪಟೂರಿನಲ್ಲಿ ಪತ್ರಕರ್ತರ ಒಕ್ಕೂಟದ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಕಾರ್ಯನಿರತ ಪತ್ರಕರ್ತರ ಒಕ್ಕೂಟದ ‘ರಾಷ್ಟ್ರೀಯ ಮಂಡಳಿ ಸಮಾವೇಶ’ವು ತುಮಕೂರು ಜಿಲ್ಲೆಯ ತಿಪಟೂರಿನಲ್ಲಿ ಸೆಪ್ಟೆಂಬರ್ 2ರಂದು ನಡೆಯಲಿದೆ ಎಂದು ಒಕ್ಕೂಟದ ರಾಷ್ಟ್ರೀಯ ಘಟಕದ ಅಧ್ಯಕ್ಷ ಬಿ.ವಿ. ಮಲ್ಲಿಕಾರ್ಜುನಯ್ಯ ಅವರು ತಿಳಿಸಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕ, ತುಮಕೂರು ಜಿಲ್ಲಾ ಘಟಕ ಹಾಗೂ ತಿಪಟೂರು ತಾಲ್ಲೂಕು ಘಟಕಗಳು ಸಮಾವೇಶಕ್ಕೆ ಸಹಕಾರ ನೀಡುತ್ತಿವೆ. ಒಕ್ಕೂಟದ ರಾಜ್ಯ ಘಟಕಗಳಿಂದ 400ಕ್ಕೂ ಹೆಚ್ಚು ಪತ್ರಕರ್ತರು, ರೈತರು ವಿಚಾರ ಸಂಕಿರಣದಲ್ಲಿ ಭಾಗವಹಿಸಲಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಕಥೆ ಬಯಸಿದ ಪಾತ್ರ ಮಾಡುತ್ತೇನೆ’

ವಿನಯ್ ರಾಜ್‌ಕುಮಾರ್

ವಿನಯ್ ರಾಜ್‌ಕುಮಾರ್ ನಟನೆಯ ‘ಪೆಪೆ’ ಚಿತ್ರ ಇಂದು (ಆ.30) ತೆರೆ ಕಾಣುತ್ತಿದೆ. ಕೊಡಗಿನ ಕಾಡಿನಲ್ಲಿ ನಡೆಯುವ ಚಿತ್ರದ ಕಥೆ ಹಾಗೂ ತಮ್ಮ ಪಾತ್ರದ ಕುರಿತು ಅವರು ಮಾತನಾಡಿದ್ದಾರೆ.

ನಾಯಕನಾಗಿ ಆ್ಯಕ್ಷನ್ ಸಿನಿಮಾಗಳನ್ನು ಮಾಡಬೇಕೆಂಬ ಬಯಕೆ ಸಹಜ. ಆದರೆ ಮಾಮೂಲಿಯಾದ ಆ್ಯಕ್ಷನ್ ಇಷ್ಟವಿಲ್ಲ.

ವಿನಾಯಕ ಕೆ.ಎಸ್

●ಚಿತ್ರದಲ್ಲಿನ ನಿಮ್ಮ ಪಾತ್ರದ ಬಗ್ಗೆ...

ನನ್ನದು ‘ಪೆಪೆ’ ಎಂಬ ಪಾತ್ರ. ಕೊಡಗಿನ ಕಾಲ್ಪನಿಕ ಊರಾದ ಬದನಾಳುವಿನಲ್ಲಿನ ನಾಲ್ಕು ಕುಟುಂಬಗಳ ನಡುವೆ ನಡೆಯುವ ಕಥೆ. ಪಾತ್ರದ ಹೆಸರು ಪ್ರದೀಪ. ಆದರೆ ಎಲ್ಲರೂ ‘ಪೆಪೆ’ ಎಂದು ಕರೆಯುತ್ತಿರುತ್ತಾರೆ. ಬಹುಶಃ ನಿರ್ದೇಶಕರು ಫುಟ್ಬಾಲ್ ಆಟಗಾರ ಪೇಪೆಯಿಂದ ಸ್ಫೂರ್ತಿ ಪಡೆದು ಈ ಪಾತ್ರ ಬರೆದಿರಬಹುದು. ಈ ಪಾತ್ರಕ್ಕೆ ಎರಡು ಶೇಡ್ ಇದೆ.

●ನಂಜನಗೂಡಿನ ‘ಬದನವಾಳು’ ದುರಂತದ ಕಥೆಯನ್ನೇ ಈ ಚಿತ್ರ ಹೊಂದಿದೆಯಾ?

ಇದೊಂದು ಸಿನಿಮಾ. ಇಲ್ಲಿ ಯಾವುದೇ ನೈಜ ಘಟನೆಗಳಿಲ್ಲ. ನೇರವಾಗಿ ಯಾವ ವ್ಯಕ್ತಿಗೂ ಸಂಬಂಧಿಸಿಲ್ಲ. ಚಿತ್ರದಲ್ಲಿ ಸಾಕಷ್ಟು ವಿಷಯಗಳನ್ನು ಹೇಳಿದ್ದೇವೆ. ಜಾತಿ, ಸಂಘರ್ಷ, ಮಹಿಳೆ ಮೇಲಿನ ದೌರ್ಜನ್ಯ ಸೇರಿದಂತೆ ನಮ್ಮ ಸುತ್ತಲು ನಿತ್ಯ ನಡೆಯುವ ಸಂಗತಿಗಳಿವೆ. ಹಾಗಾಗಿ ಯಾವ ವಿಷಯ ಯಾರಿಗೆ ಬೇಕಾದರೂ ಕನೆಕ್ಟ್ ಆಗಬಹುದು. ಊರಿನ ನಾಲ್ಕು ಕುಟುಂಬಗಳ ನಡುವಿನ ಕಥೆ. ಆ ಕುಟುಂಬಗಳು ಒಂದೇ ಸಮುದಾಯಕ್ಕೆ ಸೇರಿರಬಹುದು ಅಥವಾ ಇಲ್ಲದಿರಬಹುದು. ಚಿತ್ರ ಬೇರೆಯದೇ ಕಥೆ ಹೇಳುತ್ತಿದೆ.

●ನೀವು ವಿಭಿನ್ನ ಕಥೆಗಳನ್ನು ಆಯ್ದುಕೊಳ್ಳಲು ಕಾರಣ?

ನಟನಾಗಿ ಎಲ್ಲ ರೀತಿಯ ಪಾತ್ರಗಳನ್ನು ಮಾಡಬೇಕು. ಹೊಸ ವಿಷಯಗಳನ್ನು ಆಯ್ದುಕೊಂಡಾಗ ನಾವು ಒಂದಷ್ಟು ಹೊಸತನ್ನು ಕಲಿಯುತ್ತೇವೆ. ಹೊಸ ಪರಿಸರ, ಜನರ ಜೊತೆ ಬೆರೆಯುತ್ತೇವೆ. ಈ ಚಿತ್ರ ಕೊಡಗಿನ ಕಾಡಿನಲ್ಲಿ ಹೆಚ್ಚು ಚಿತ್ರೀಕರಣವಾಗಿದ್ದು, ಅಲ್ಲಿನ ಜನರ ಒಡನಾಟ ದೊರೆಯಿತು. ‘ಪೆಪೆ’ ಕೂಡ ಮಾಮೂಲಿ ಆ್ಯಕ್ಷನ್ ಸಿನಿಮಾವಲ್ಲ. ಸಂಸ್ಕೃತಿ ಸೊಗಡಿನ ಜೊತೆಗೆ ಸಾಗುವ ಚಿತ್ರ. ನನಗೆ ವೈಯಕ್ತಿಕವಾಗಿ ರಾಮ್‌ಕಾಂ ಸಿನಿಮಾಗಳು ಇಷ್ಟ. ಆ್ಯಕ್ಷನ್ ಸಿನಿಮಾ ಮಾಡಬೇಕೆಂದಿತ್ತು. ಒಂದು ಕಥೆ ಗಿಟಾರ್ ಹಿಡಿದವನನ್ನು ಬಯಸಿದರೆ ಮತ್ತೊಂದು ಕಥೆ ಲಾಂಗು, ಮಚ್ಚು ಹಿಡಿದವನನ್ನು ಕೇಳುತ್ತದೆ.

●ಲಾಂಗು, ಮಚ್ಚಿನಿಂದ ಯುವಜನತೆಗೆ ತಪ್ಪು ಸಂದೇಶ ರವಾನೆಯಾಗುವುದಿಲ್ಲವೇ?

ಸಿನಿಮಾ ಯಾವತ್ತಿಗೂ ನಿಜ ಜೀವನವಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ರಕ್ತಸಿಕ್ತ ದೃಶ್ಯಗಳೊಂದಿಗೆ ಅಪರಾಧ ಮಾಡಿ ಎಂದು ಎಲ್ಲಿಯೂ ಹೇಳುವುದಿಲ್ಲ. ಅಪರಾಧ ಮಾಡಿದರೆ ಏನಾಗುತ್ತದೆ ಎಂಬ ಪರಿಣಾಮವನ್ನೇ ಹೇಳುತ್ತೇವೆ. ಹೀಗಾಗಿ ತಪ್ಪು ಸಂದೇಶ ರವಾನೆಯಾಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ಸಮಾಜದಲ್ಲಿ ನಡೆಯದೇ ಇರುವುದು, ನಾವು ನೋಡದೇ ಇರುವುದು ಯಾವುದನ್ನೂ ತೋರಿಸುವುದಿಲ್ಲ. ನಮ್ಮ ನಡುವೆ ನಡೆಯುತ್ತಿರುವುದನ್ನೇ ಕಾಲ್ಪನಿಕವಾಗಿ ತೋರಿಸುತ್ತೇವೆ.

●ಭಿನ್ನ ಪಾತ್ರಗಳಿಗೆ ಹೇಗೆ ಸಿದ್ಧರಾಗುತ್ತೀರಿ?

ನನಗೆ ಮೊದಲು ಕಥೆ ಇಷ್ಟವಾಗಬೇಕು. 4–5 ಸಲ ಕಥೆಯನ್ನು ಕೇಳುತ್ತೇನೆ. ಆಗ ಪಾತ್ರ ಅರ್ಧ ಅರ್ಥವಾಗಿರುತ್ತದೆ. ಸಹ ಕಲಾವಿದರು, ತಂಡಗಳ ಜೊತೆಗಿನ ಒಡನಾಟ, ಪಾತ್ರವಾಗಿ ಮಾನಸಿಕ ಸಿದ್ಧತೆ ಎಲ್ಲವೂ ಒಂದು ಹೊಸ ಪಾತ್ರಕ್ಕೆ ಒಗ್ಗಿಕೊಳ್ಳಲು ಸಹಕಾರಿ.

●ಉತ್ತಮ ಪ್ರತಿಕ್ರಿಯೆ ಗಳಿಸಿದರೂ ನಿಮ್ಮ ಸಿನಿಮಾ ನಿರೀಕ್ಷಿತ ಮಟ್ಟದಲ್ಲಿ ತಲುಪದಿರಲು ಏನು ಕಾರಣ?

ಒಂದೊಂದು ಸಿನಿಮಾಕ್ಕೆ ಒಂದೊಂದು ಕಾರಣ. ಇಂಥದ್ದೆ ಕಾರಣ ಎನ್ನಲು ಸಾಧ್ಯವಿಲ್ಲ. ಪ್ರತಿ ಸಲ ಈ ಸಿನಿಮಾ ಚೆನ್ನಾಗಿ ಆಗಬಹುದು ಎಂದಿರುತ್ತದೆ. ನಂತರ ಎಲ್ಲಿ ಎಡವಿದ್ದೇವೆ ಎಂದು ಆಲೋಚಿಸುತ್ತೇನೆ. ಬಿಡುಗಡೆ ದಿನಾಂಕ, ಪ್ರಚಾರ ಮೊದಲಾದವು ಕಾರಣವಾಗಬಹುದು. ಕೆಲವೊಮ್ಮೆ ನಾವು ಕಥೆ ಹೇಳಿದ ರೀತಿ ಪ್ರೇಕ್ಷಕರಿಗೆ ಇಷ್ಟವಾಗದೇ ಇರಬಹುದು. ನಿರೀಕ್ಷೆ ಇದ್ದ ಸಿನಿಮಾ ಜನರನ್ನು ತಲುಪುದಿದ್ದಾಗ ಬೇಸರ ಅನ್ನಿಸುತ್ತದೆ. ಜೊತೆಗೆ ಮುಂದಿನ ಸಿನಿಮಾಕ್ಕೆ ಇನ್ನಷ್ಟು ಶ್ರಮ ಹಾಕುವಂತೆ ಮಾಡುತ್ತದೆ. ‘ಪೇಪೆ’ ಎಲ್ಲ ರೀತಿಯಿಂದಲೂ ಭರವಸೆ ಮೂಡಿಸಿದೆ. ಈ ಸಿನಿಮಾವನ್ನು ಜನ ಹೇಗೆ ಸ್ವೀಕರಿಸಬಹುದೆಂದು ಕಾತುರವಿದೆ.

●ನಿಮ್ಮ ಮುಂದಿನ ಸಿನಿಮಾಗಳು?

ಸದ್ಯ ಯಾವುದೇ ಹೊಸ ಸಿನಿಮಾ ಒಪ್ಪಿಕೊಂಡಿಲ್ಲ. ‘ಗ್ರಾಮಾಯಣ’ ಇನ್ನೊಂದು 20 ದಿನದ ಚಿತ್ರೀಕರಣ ಬಾಕಿಯಿದೆ. ‘ಅಂದೊಂದಿತ್ತು ಕಾಲ’ ಚಿತ್ರ ಬಿಡುಗಡೆಗೆ ಸಿದ್ಧವಿದೆ. ❖

ಆರು ಚಿತ್ರಗಳು ತೆರೆಗೆ

ಪ್ರಮೋದ್ ಶೆಟ್ಟಿ, ದಿಗಂತ್

ಈ ವಾರ ‘ಪೆಪೆ’ ಸೇರಿದಂತೆ ಆರು ಚಿತ್ರಗಳು ತೆರೆ ಕಾಣುತ್ತಿವೆ.

ಲಾಫಿಂಗ್ ಬುದ್ಧ:

ನಟ ರಿಷಬ್ ಶೆಟ್ಟಿ ನಿರ್ಮಿಸಿ, ಪ್ರಮೋದ್ ಶೆಟ್ಟಿ ನಾಯಕನಾಗಿ ನಟಿಸಿರುವ ‘ಲಾಫಿಂಗ್ ಬುದ್ಧ’ ಪೊಲೀಸ್ ಪೇದೆಯೊಬ್ಬನ ಹಾಸ್ಯಮಯ ಕಥಾಹಂದರ ಹೊಂದಿರುವ ಚಿತ್ರ. ಪೊಲೀಸ್ ಪೇದೆ ಗೋವರ್ಧನನಾಗಿ ಪ್ರಮೋದ್ ಶೆಟ್ಟಿ ನಟಿಸಿದ್ದಾರೆ. ತನ್ನ ದಢೂತಿ ದೇಹದಿಂದ ತಮಾಷೆಗೆ ಒಳಗಾಗುವ ಗೋವರ್ಧನ, ಹಿರಿಯ ಅಧಿಕಾರಿಗಳಿಂದ ಟೀಕೆ, ನಿಂದನೆಗೆ ಗುರಿಯಾಗುತ್ತಾನೆ. ಬಳಿಕ ದೇಹ ಕರಗಿಸಲು ನಡೆಸುವ ಕಸರತ್ತೇ ಚಿತ್ರದ ಕಥೆ.

ಚಿತ್ರಕ್ಕೆ ಭರತ್ ರಾಜ್ ನಿರ್ದೇಶನವಿದೆ. ತೇಜು ಬೆಳವಾಡಿ ‘ಸತ್ಯವತಿ’ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ದಿಗಂತ್ ಮಂಚಾಲೆ ಕೂಡ ಪಾತ್ರವೊಂದನ್ನು ನಿಭಾಯಿಸಿದ್ದಾರೆ. ವಿಷ್ಣು ವಿಜಯ್ ಸಂಗೀತ, ಕೆ.ಎಸ್.ಚಂದ್ರಶೇಖರ್ ಅವರ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಅವರ ಸಂಕಲನ ಈ ಚಿತ್ರಕ್ಕಿದೆ.

ಕೇದಾರ್‌ನಾಥ್ ಕುರಿಫಾರಂ:

‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ಮಡೆನೂರ್ ಮನು ಅಭಿನಯದ ಈ ಚಿತ್ರವನ್ನು ಕೆ.ಎಂ. ನಟರಾಜ್ ಅವರು ನಿರ್ಮಿಸಿದ್ದು, ಶೀನು ಸಾಗರ್ ನಿರ್ದೇಶನವಿದೆ. ‘ದುನಿಯಾ’ ಸೂರಿ ಅವರ ನಿರ್ದೇಶನದ ಚಿತ್ರಗಳಲ್ಲಿ ನಟನಾಗಿ ಹಾಗೂ ಸಹಾಯಕ ನಿರ್ದೇಶಕನಾಗಿದ್ದ ಶೀನು ಸಾಗರ್ ಅವರ ಎರಡನೇ ಚಿತ್ರವಿದು. ಹಳ್ಳಿ ಸೊಗಡಿನ ಮನರಂಜನೆಯಿದೆ. ಶಿವಾನಿ ಚಿತ್ರದ ನಾಯಕಿ.

ದಿ ರೂಲರ್ಸ್:

ಸಂವಿಧಾನದ ಮಹತ್ವ ಸಾರುವ ಚಿತ್ರ ‘ದಿ ರೂಲರ್ಸ್’. ಎಮ್.ಸಂದೇಶ್ ಕಥೆ,ಚಿತ್ರಕಥೆ,ಸಂಭಾಷಣೆ ಬರೆದಿದ್ದಾರೆ. ಉದಯ್ ಭಾಸ್ಕರ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರಕ್ಕೆ ಅಶ್ವತ್ ಬಳಗೆರೆ ಬಂಡವಾಳ ಹೂಡಿದ್ದಾರೆ.

ಕರುಣ್ ಕೆ.ಜಿ.ಎಫ್ ಸಂಗೀತ ಸಂಯೋಜಿಸಿದ್ದು, ವಿಶಾಲ್, ರಿತಿಕಾ ಗೌಡ, ಪುನೀತ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದಾರೆ.

ಟೇಕ್ವಾಂಡೋ ಗರ್ಲ್:

ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ , ಅತ್ಯಾಚಾರದ ವಿರುದ್ಧ ಧ್ವನಿ ಎತ್ತುವ ‘ಟೇಕ್ವಾಂಡೋ ಗರ್ಲ್’ ಚಿತ್ರಕ್ಕೆ ರವೀಂದ್ರ ವಂಶಿ ನಿರ್ದೇಶನವಿದೆ. ‘ಒಂದು ಬಡ ಕುಟುಂಬದ ಹೆಣ್ಣು ಮಗಳು ಶಿಕ್ಷಣಕ್ಕಾಗಿ ಎಷ್ಟು ಕಷ್ಟಪಡುತ್ತಾಳೆ, ಟೇಕ್ವಾಂಡೋ ಸಮರ ಕಲೆ ಹೇಗೆ ಕಲಿಯುತ್ತಾಳೆ, ಈ ವಿದ್ಯೆಯ ಮುಖಾಂತರ ಸಮಾಜಕ್ಕೆ ಹೇಗೆ ಮಾದರಿಯಾಗುತ್ತಾಳೆ ಎನ್ನುವುದೇ ಈ ಚಿತ್ರದ ಕಥೆ. 5ನೇ ತರಗತಿಯಲ್ಲಿ ಓದುತ್ತಿರುವ ಋತು ಸ್ಪರ್ಶ 3ನೇ ವಯಸ್ಸಿನಿಂದ ಈ ಕಲೆಯನ್ನು ಅಭ್ಯಾಸ ಮಾಡಿದ್ದಾಳೆ. ಒಟ್ಟು ಎಂಟು ಪರೀಕ್ಷೆಗಳನ್ನು ಎದುರಿಸಿ ಈಗ ಬ್ಲಾಕ್ ಬೆಲ್ಟ್ ಪಡೆದು ನಾಲ್ಕು ಅಂತರರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿ ಟೇಕ್ವಾಂಡೋ ಪಟು ಆಗಿದ್ದಾಳೆ’ ಎಂದಿದ್ದಾರೆ ನಿರ್ದೇಶಕರು. ಚಿತ್ರಕ್ಕೆ ಎಂ.ಎಸ್. ತ್ಯಾಗರಾಜ್ ಸಂಗೀತ ನಿರ್ದೇಶನವಿದೆ.

ಮೈ ಹೀರೋ:

ಅವಿನಾಶ್ ವಿಜಯ್‌ಕುಮಾರ್ ನಿರ್ದೇಶನದ ಈ ಚಿತ್ರ ವರ್ಣಬೇಧ ಮತ್ತು ಜಾತೀಯತೆಯ ಕುರಿತಾಗಿನ ಕಥೆ ಹೊಂದಿದೆ. ಭಾರತ ಮತ್ತು ಅಮೆರಿಕದಲ್ಲಿ ಕಥೆ ನಡೆಯುತ್ತದೆ. ಎರಿಕ್ ರಾಬರ್ಟ್ಸ್, ಜೇಮ್ಸ್ ಜಿಯೋಯಾ, ಜಿಲಾಲಿ ರೆಜ್ ಕಲ್ಲಾ, ಅಂಕಿತಾ ಅಮರ್, ನಿರಂಜನ್ ದೇಶಪಾಂಡೆ, ತನುಜಾ ಕೃಷ್ಣಪ್ಪ, ಕ್ಷಿತಿಜ್ ಪವಾರ್, ಪ್ರಕಾಶ್ ಬೆಳವಾಡಿ, ದತ್ತಾತ್ರೇಯ, ಮಾಸ್ಟರ್ ವೇದಿಕ್ ಕುಶಾಲ್ ಮುಂತಾದವರು ಚಿತ್ರದಲ್ಲಿದ್ದಾರೆ. ಎ.ವಿ. ಫಿಲ್ಮ್ ಸ್ಟುಡಿಯೋಸ್ ನಿರ್ಮಾಣದ ಈ ಚಿತ್ರವನ್ನು ಪಿವಿಆರ್ ಸಿನಿಮಾಸ್ ಪ್ರಸ್ತುಪಡಿಸುತ್ತಿದೆ. ವೀನಸ್ ನಾಗರಾಜ್ ಮೂರ್ತಿ ಛಾಯಾಚಿತ್ರಗ್ರಹಣ, ಗಗನ್ ಬಡೇರಿಯಾ ಸಂಗೀತ, ವಿ. ಮನೋಹರ್ ಹಿನ್ನೆಲೆ ಸಂಗೀತವಿದೆ. ❖

ಸೆ. 13 ಕ್ಕೆ ಕಾಲಾಪತ್ಥರ್

ಧನ್ಯ ರಾಮಕುಮಾರ್

ವಿಕ್ಕಿ ವರುಣ್, ಧನ್ಯ ರಾಮಕುಮಾರ್ ಜೋಡಿಯಾಗಿ ನಟಿಸಿರುವ ‘ಕಾಲಾಪತ್ಥರ್’ ಚಿತ್ರ ಸೆ.13ಕ್ಕೆ ತೆರೆಗೆ ಬರಲಿದೆ. ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ.

ಭುವನ್ ಸುರೇಶ್ ಹಾಗೂ ನಾಗರಾಜ್ ಬಿಲ್ಲಿನಕೋಟೆ ಚಿತ್ರವನ್ನು ನಿರ್ಮಿಸಿದ್ದು, ವಿಕ್ಕಿ ವರುಣ್ ನಟನೆ ಜೊತೆಗೆ ಚಿತ್ರದ ನಿರ್ದೇಶನವನ್ನು ಮಾಡಿದ್ದಾರೆ. ‘ನಾನು ಕನ್ನಡ ಚಿತ್ರರಂಗಕ್ಕೆ ಬಂದು ಹದಿನೈದು ವರ್ಷಗಳಾಯಿತು. ಸೂರಿ ಅವರ ನಿರ್ದೇಶನದಲ್ಲಿ ನಾನು ನಾಯಕನಾಗಿ ನಟಿಸಿದ್ದ ‘ಕೆಂಡಸಂಪಿಗೆ’ ಚಿತ್ರ ಸೆಪ್ಟೆಂಬರ್‌ನಲ್ಲಿ ತೆರೆಕಂಡಿತ್ತು. ನನ್ನ ನಿರ್ದೇಶನದ ‘ಕಾಲಾಪತ್ಥರ್’ ಚಿತ್ರ ಕೂಡ ಸೆಪ್ಟೆಂಬರ್‌ನಲ್ಲೇ ಬಿಡುಗಡೆಯಾಗುತ್ತಿರುವುದು ಖುಷಿಯ ವಿಷಯ’ ಎಂದರು ವಿಕ್ಕಿ ವರುಣ್.

ಅನೂಪ್ ಸೀಳಿನ್ ಸಂಗೀತ ನೀಡಿರುವ ಈ ಚಿತ್ರದ ಐದು ಹಾಡುಗಳು ‘ಸೌಂಡ್ಸ್ ಆಫ್ ಕಾಲಾಪತ್ಥರ್’ ಗುಚ್ಛದಲ್ಲಿವೆ. ಹಾಡುಗಳನ್ನು ವಿ.ನಾಗೇಂದ್ರ ಪ್ರಸಾದ್ ಹಾಗೂ ಪ್ರಮೋದ್ ಮರವಂತೆ ರಚಿಸಿದ್ದಾರೆ. ಸಂದೀಪ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ❖

ತುಂಬಿದ ಘತ್ತರಗಿ ಬ್ಯಾರೇಜ್• ಮಹಾರಾಷ್ಟ್ರದಲ್ಲಿ ಮಳೆ: ಕೃಷ್ಣಾ ನದಿಯಲ್ಲಿ ಹೆಚ್ಚಿದ ಹರಿವು

ಭಾರಿ ಮಳೆ: ಜಲಾಶಯಗಳು ಭರ್ತಿ

ಪ್ರಜಾವಾಣಿ ವಾರ್ತೆ

ಮಂಗಳೂರು/ಮಡಿಕೇರಿ/ಚಿಕ್ಕೋಡಿ: ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಬುಧವಾರ ರಾತ್ರಿಯಿಂದ ಗುರುವಾರ ಬೆಳಿಗ್ಗೆಯವರೆಗೆ ಉತ್ತಮ ಮಳೆಯಾಗಿದೆ. ಗುರುವಾರವೂ ದಿನ ವಿಡೀ ಬಿಟ್ಟು ಬಿಟ್ಟು ಮಳೆ ಸುರಿಯಿತು.

ಕೊಡಗು ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಮಡಿಕೇರಿ ನಗರ ಸೇರಿದಂತೆ ಹಲವೆಡೆ ಗುರುವಾರ ದಿನವಿಡೀ ಮಳೆಯಾಯಿತು. ಮೈಸೂರಿನಲ್ಲೂ ಗುರುವಾರ ಆಗಾಗ್ಗೆ ಮಳೆಯಾಯಿತು.

ಮಹಾರಾಷ್ಟ್ರದ ಘಟ್ಟ ಪ್ರದೇಶ ಮತ್ತು ಜಿಲ್ಲೆಯ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಗುರುವಾರವೂ ಮಳೆ ಮುಂದುವರಿದಿದೆ. ತಾಲ್ಲೂಕಿನ ಕಲ್ಲೋಳ- ಯಡೂರ ಬ್ಯಾರೇಜ್ ಬಳಿ ಕೃಷ್ಣಾ ನದಿಗೆ 1.27 ಲಕ್ಷ ಕ್ಯುಸೆಕ್ ನೀರು ಹರಿದಿದೆ.

ಉಡುಪಿ ಜಿಲ್ಲೆಯ ಬೈಂದೂರು ಹಾಗೂ ಕುಂದಾಪುರ ತಾಲ್ಲೂಕಿನಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ, ಉಳ್ಳಾಲ ಮತ್ತು ಸುಳ್ಯ ತಾಲ್ಲೂಕುಗಳಲ್ಲಿ ಮಳೆಯ ತೀವ್ರತೆ ಜೋರಾಗಿತ್ತು.

ಉಡುಪಿ ಜಿಲ್ಲೆಯ ಕಾಲ್ತೋಡು-ವಿನಲ್ಲಿ 16 ಸೆಂ.ಮೀ, ಕಿರಿಮಂಜೇಶ್ವರ 14, ಕೆರ್ಗಾಲು, ಹೇರೂರು ಹಾಗೂ ಕಂಬದಕೋಣೆ, ಹಳ್ಳಿಹೊಳೆ ಮತ್ತು ಚಿತ್ತೂರಿನಲ್ಲಿ ತಲಾ 12, ಮರವಂತೆ, ಗೋಳಿಹೊಳೆ ಹಾಗೂ ಬಳ್ಕೂರಿನಲ್ಲಿ ತಲಾ 11ಸೆಂ.ಮೀ ಮಳೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಮಂಚಿ 15, ಇರಾ 13, ವಿಟ್ಲಪಡ್ನೂರಿನಲ್ಲಿ 12, ಬೊಳಿಯಾರು, ಬಾಳ್ತಿಲ, ಕೆಮ್ರಾಜೆ ಹಾಗೂ ಇಡ್ಕಿದುವಿನಲ್ಲಿ ತಲಾ 10 ಸೆಂ.ಮೀ ಮಳೆಯಾಗಿದೆ.

ಉಡುಪಿಯಲ್ಲಿ ರೆಡ್ ಅಲರ್ಟ್: ರಾಜ್ಯದ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇನ್ನೆರಡು ದಿನ ಗಾಳಿ ಹಾಗೂ ಸಿಡಿಲುಗಳೊಂದಿಗೆ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಉಡುಪಿ ಜಿಲ್ಲೆಗೆ ಇದೇ ಶುಕ್ರವಾರ ರೆಡ್ ಅಲರ್ಟ್ ಹಾಗೂ ಶನಿವಾರ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಕನ್ನಡ ಹಾಗೂ ಉತ್ತರ ಕನ್ನಡ ಜಿಲ್ಲೆಗಳಿಗೆ ಇದೇ ಶುಕ್ರವಾರ ಮತ್ತು ಶನಿವಾರ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಮಹಾರಾಷ್ಟ್ರದ ರಾಜಾಪೂರ ಬ್ಯಾರೇಜಿನಿಂದ ಕೃಷ್ಣಾ ನದಿಗೆ 99,917 ಕ್ಯುಸೆಕ್ ಹೊರ ಬಿಡಲಾಗುತ್ತಿದೆ. ದೂಧಗಂಗಾ ನದಿಯಲ್ಲೂ 26,400 ಕ್ಯುಸೆಕ್ ಹರಿವು ಇದೆ. ಕೊಯ್ನಾ ಅಣೆಕಟ್ಟೆಯಿಂದ 33,050 ಕ್ಯುಸೆಕ್ ನೀರನ್ನು ಗುರುವಾರ ಬೆಳಿಗ್ಗೆ 6ರಿಂದ ಬಿಡುಗಡೆ ಮಾಡಲಾಗುತ್ತಿದೆ. ಶುಕ್ರವಾರ ನಸುಕಿನ ವೇಳೆ ಈ ನೀರು ಕೂಡ ಜಿಲ್ಲೆ ಪ್ರವೇಶಿಸಲಿದೆ.

ಕೊಯ್ನಾ ಜಲಾಶಯದಿಂದ 2 ಲಕ್ಷ ಕ್ಯುಸೆಕ್ ನೀರು ಹರಿಸಿದರೆ ಜಿಲ್ಲೆಯ ಕೃಷ್ಣಾ ತೀರದಲ್ಲಿ ಪ್ರವಾಹ ಪರಿಸ್ಥಿತಿ ತಲೆದೋರುತ್ತದೆ. ಆದರೆ, ಈಗಾಗಲೇ ಕೃಷ್ಣಾ ನದಿಯಲ್ಲಿ 1.27 ಲಕ್ಷ ಕ್ಯುಸೆಕ್ ನೀರಿದ್ದು ನದಿ ಮಟ್ಟ ಏರಿಕೆಯಾಗಿದೆ. ಕೊಯ್ನಾದಿಂದ 1 ಲಕ್ಷ ಕ್ಯುಸೆಕ್ ಹರಿಸಿದರೂ ಪ್ರವಾಹ ತಲೆದೋರುವ ಆತಂಕ ಎದುರಾಗಿದೆ.

ಇನ್ನೊಂದೆಡೆ, ಬಾಗಲಕೋಟೆ ಜಿಲ್ಲೆಯ ಹಿಪ್ಪರಗಿ ಬ್ಯಾರೇಜಿನಲ್ಲಿ 1.14 ಲಕ್ಷ ಕ್ಯುಸೆಕ್ ಒಳ ಹರಿವು, 1.13 ಲಕ್ಷ ಕ್ಯುಸೆಕ್ ಹೊರ ಹರಿವು ಇದೆ.ಬ್ಯಾರೇಜ್‌ನ ಹಿನ್ನೀರು ಕೂಡ ಚಿಕ್ಕೋಡಿ ಉಪವಿಭಾಗ ವ್ಯಾಪ್ತಿಯಲ್ಲಿ ಯಥೇಚ್ಛವಾಗಿ ಸಂಗ್ರಹ ಆಗುತ್ತಿದೆ.

ಉಗಾರ– ಕುಡಚಿ ಸೇತುವೆ ಸೇರಿ 8 ಸೇತುವೆಗಳು ಜಲಾವೃತಗೊಂಡಿವೆ. ಕಲ್ಲೋಳ ಬಳಿ ಕೃಷ್ಣಾ ನದಿ ತೀರದಲ್ಲಿರುವ ದತ್ತ ಮಂದಿರ, ದೂಧಗಂಗಾ ನದಿ ತೀರದಲ್ಲಿರುವ ಕಾರದಗಾ ಗ್ರಾಮದ ಬಂಗಾಲಿ ಬಾಬಾ ದರ್ಗಾ ಜಲಾವೃತಗೊಂಡಿವೆ.

ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಕಾರದಗಾ ಗ್ರಾಮದ ಬಂಗಾಲಿ ಬಾಬಾ ದರ್ಗಾ ದೂಧಗಂಗಾ ನದಿಯಿಂದ ಗುರುವಾರ ಜಲಾವೃತಗೊಂಡಿತು

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.22	10,075	5,276
ಹಾರಂಗಿ	2,859	2,858.41	1,293	1,000
ಕಬಿನಿ	2,284.00	2,282.97	4,919	3,850
ಹೇಮಾವತಿ	2,922	2,921.95	13,771	13,725
ಲಿಂಗನಮಕ್ಕಿ	1,819	1,817.35	33,286	26,963
ಸೂಪಾ (ಮೀ)	564	560.19	17,741	12,137-
ಮಾಣಿ	595	589.2	629	-
ತುಂಗಭದ್ರಾ	1,633	1,629.03	30,919	10,302
ಮಲಪ್ರಭಾ	2,079.5	2,078.30	18,029	16,444
ಘಟಪ್ರಭಾ	2175	2,174.24	24,181	25,786
ಭದ್ರಾ*	186	181.08	10,933	942
ಆಲಮಟ್ಟಿ (ಮೀ)	519.6	519.31	1,71,625	172,932
ನಾರಾಯಣಪುರ (ಮೀ)	492.25	491.14	1,85,000	1,85,318

*ನೆಲಮಟ್ಟದಿಂದ

ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಹೆಚ್ಚುವರಿ ನೀರನ್ನು ಭೀಮಾ ನದಿಗೆ ಬಿಟ್ಟಿದ್ದರಿಂದ ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಘತ್ತರಗಿ ಗ್ರಾಮದ ಬಳಿಯ ಬ್ರಿಡ್ಜ್ ಕಮ್ ಬ್ಯಾರೇಜ್ ಗುರುವಾರ ಜಲಾವೃತವಾಗಿತ್ತು

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಘತ್ತರಗಿ, ಗಾಣಗಾಪುರ ಸೇತುವೆ ಜಲಾವೃತ

ಅಫಜಲಪುರ (ಕಲಬುರಗಿ ಜಿಲ್ಲೆ): ಮಹಾರಾಷ್ಟ್ರದ ಉಜನಿ, ವೀರ್ ಜಲಾಶಯದಿಂದ ಹೊರಬಿಟ್ಟ 1.45 ಲಕ್ಷ ಕ್ಯುಸೆಕ್ ನೀರಿನ ಪೈಕಿ 1.40 ಲಕ್ಷ ಕ್ಯುಸೆಕ್ ನೀರು ಬುಧವಾರ ರಾತ್ರಿ ಭೀಮಾ ಜಲಾಶಯ ತಲುಪಿದ್ದು, ಘತ್ತರಗಿ ಹಾಗೂ ದೇವಲ ಗಾಣಗಾಪುರದ ಬ್ರಿಡ್ಜ್ ಕಮ್ ಬ್ಯಾರೇಜ್ ಜಲಾವೃತವಾಗಿವೆ.

'ಬ್ಯಾರೇಜ್ ತಲುಪಿದಷ್ಟೇ ಪ್ರಮಾಣದ ನೀರನ್ನು ನದಿಗೆ ಬಿಟ್ಟಿದ್ದರಿಂದ ಗುರುವಾರ ಘತ್ತರಗಿ ಗ್ರಾಮದ ಸೇತುವೆ, ದೇವಲ ಗಾಣಗಾಪುರದ ಸೇತುವೆಗಳ ಮೇಲೆ ನೀರು ಬಂದಿದೆ. ಜೇವರ್ಗಿ ಮತ್ತು ಸಿಂದಗಿ ತಾಲ್ಲೂಕಿನ ಗ್ರಾಮಗಳ ಸಂಪರ್ಕ ಕಡಿತವಾಗಿದೆ' ಎಂದು ತಹಶೀಲ್ದಾರ್ ಸಂಜುಕುಮಾರ ದಾಸರ, ಭೀಮಾ ಏತ ನೀರಾವರಿ ಉಪ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಸಂತೋಷಕುಮಾರ ಸಜ್ಜನ್ ತಿಳಿಸಿದರು.

'ಮಣ್ಣೂರು ಎಲ್ಲಮ್ಮ ದೇವಿಯ ದೇವಸ್ಥಾನ ಸುತ್ತ ನೀರು ಆವರಿಸಿದ್ದು ಗೇಟ್ ಬಂದ್ ಮಾಡಲಾಗಿದೆ' ಎಂದರು.

ಗುರುವಾರ ಸಂಜೆ 6ರಿಂದ ಸೊನ್ನ ಭೀಮಾ ಬ್ಯಾರೇಜ್‌ನಿಂದ 70 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ.

ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯದಲ್ಲಿ ಗುರುವಾರ ಕಂಡುಬಂದ ಜಲರಾಶಿ

ತುಂಗಭದ್ರಾ ಬಹುತೇಕ ಭರ್ತಿ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದಲ್ಲಿ ಗುರುವಾರ ಬೆಳಿಗ್ಗೆ 9 ಗಂಟೆಗೆ 90.45 ಟಿಎಂಸಿ ಅಡಿ ನೀರು ಸಂಗ್ರಹವಾಗಿದ್ದು, ಮೊದಲ ಬೆಳೆಯ ನಿರೀಕ್ಷೆಯಲ್ಲಿದ್ದ ರೈತರು ಹರ್ಷಗೊಂಡಿದ್ದಾರೆ.

ಆಗಸ್ಟ್ 10ರ ರಾತ್ರಿ ಅಣೆಕಟ್ಟೆಯ 19ನೇ ಕ್ರಸ್ಟ್‌ಗೇಟ್ ನೀರಲ್ಲಿ ಕೊಚ್ಚಿ ಹೋದ ಬಳಿಕ 36 ಟಿಎಂಸಿ ಅಡಿ ನೀರು ಪೋಲು ಆಗಿತ್ತು. ವಾರದಲ್ಲಿ ತಾತ್ಕಾಲಿಕ ಗೇಟ್ ಅಳವಡಿಸಲಾಯಿತು. 12 ದಿನಗಳಲ್ಲಿ 20 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಗರಿಷ್ಠ 1,633 ಅಡಿ ಎತ್ತರದ ಅಣೆಕಟ್ಟೆಯಲ್ಲಿ ಸದ್ಯ ನೀರಿನ ಮಟ್ಟ 1629 ಅಡಿ ಇದೆ. ಒಳಹರಿವಿನ ಪ್ರಮಾಣ 30,919 ಕ್ಯುಸೆಕ್ ಇದೆ. ನಾಲ್ಕು ಅಡಿ ನೀರು ಬಂದರೆ (15 ಟಿಎಂಸಿ ಅಡಿ ನೀರು), ಅಣೆಕಟ್ಟು ಭರ್ತಿಯಾಗಲಿದೆ.

'ಮಲೆನಾಡು ಭಾಗದಲ್ಲಿ ಮಳೆ ಮುಂದುವರಿದಿದೆ. ಇನ್ನಷ್ಟು ನೀರು ಹರಿದು ಬರುವ ನಿರೀಕ್ಷೆ ಇದೆ. ಜಲಾಶಯದಲ್ಲಿ 98 ಟಿಎಂಸಿ ಅಡಿ ನೀರು ಸಂಗ್ರಹವಾದ ಕೂಡಲೇ ಕೆಲ ಕ್ರಸ್ಟ್‌ಗೇಟ್‌ಗಳನ್ನು ತೆರೆದು ನದಿಗೆ ನೀರು ಹರಿಸುವ ಸಾಧ್ಯತೆ ಇದೆ' ಎಂದು ತುಂಗಭದ್ರಾ ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.

ಈ ಬಾರಿ ಹಿಂಗಾರು ಮಳೆ ಸಹ ಉತ್ತಮವಾಗುವ ನಿರೀಕ್ಷೆಯಿದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಮತ್ತೆ ನೀರಿನ ಒಳಹರಿವು ಹೆಚ್ಚಾಗಿ, 90 ಟಿಎಂಸಿ ಅಡಿಗಿಂತ ಹೆಚ್ಚು ನೀರು ಜಲಾಶಯದಲ್ಲಿ ಸಂಗ್ರಹವಾಗುವ ನಿರೀಕ್ಷೆ ಇದೆ. ಇದರಿಂದ ಎರಡನೇ ಬೆಳೆಗೂ ನೀರು ಸಿಗಲಿದೆ.

11 ಜಿಲ್ಲೆಗಳಿಗೆ ಭಾರಿ ಮಳೆ: ಮುನ್ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಶುಕ್ರವಾರ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಕಲಬುರಗಿ, ಯಾದಗಿರಿ, ರಾಯಚೂರು, ಬೆಳಗಾವಿ ಹಾಗೂ ಕೊಡಗು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಒಳನಾಡಿನ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವವಿದೆ. ಕರಾವಳಿ ಉದ್ದಕ್ಕೂ 35ರಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ. ಮೀನುಗಾರರು ಎಚ್ಚರ ವಹಿಸಬೇಕು ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ನಿರಂತರ ಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ. ಶನಿವಾರವೂ ಕರಾವಳಿ ಸೇರಿ ರಾಜ್ಯ ವಿವಿಧೆಡೆ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು ತಲಾ ಐದು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಅಂಕ ಪ್ರಕಟಿಸದೇ ನೀಟ್-ಪಿಜಿ ಫಲಿತಾಂಶ

ಒಂದನೇ ಪುಟದಿಂದ...

ಕೆಲ ಪರೀಕ್ಷಾ ಕೇಂದ್ರಗಳಲ್ಲಿ ಬೆಳಕಿನ ವ್ಯವಸ್ಥೆಯೇ ಇರಲಿಲ್ಲ. ಬೆಳಿಗ್ಗೆ ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳೇ ಅರ್ಹತಾ ಪಟ್ಟಿಯಲ್ಲಿ ಉನ್ನತ ಸ್ಥಾನ ಪಡೆದಿದ್ದಾರೆ. ಎರಡನೇ ಪರೀಕ್ಷೆ-ಯಲ್ಲಿನ ವಿದ್ಯಾರ್ಥಿಗಳು ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಅರ್ಹತೆ ಹೊಂದಿದ್ದಾರೆ' ಎಂದು ವಿದ್ಯಾರ್ಥಿ ಡಾ.ಅಶೋಕ್ ಕುಮಾರ್ ದೂರುತ್ತಾರೆ.

ಕೇಂದ್ರಗಳ ಹಂಚಿಕೆಯಲ್ಲೂ ಲೋಪ: ನೀಟ್–ಪಿಜಿಗೆ ಅರ್ಜಿ ಸಲ್ಲಿಸುವಾಗ ಪ್ರತಿ ವಿದ್ಯಾರ್ಥಿಗೂ ನಾಲ್ಕು ಪರೀಕ್ಷಾ ಕೇಂದ್ರಗಳನ್ನು ನಮೂದಿಸಲು ಎನ್‌ಬಿಇಎಂಎಸ್ ಅವಕಾಶ ನೀಡಿತ್ತು. ನಾಲ್ಕರಲ್ಲಿ ಹೊರ ರಾಜ್ಯದ ಒಂದು ಕೇಂದ್ರ ಆಯ್ಕೆ ಮಾಡಿಕೊಳ್ಳುವುದು ಕಡ್ಡಾಯ ಮಾಡಲಾಗಿತ್ತು.

'ಹತ್ತಿರದ ಕೇಂದ್ರಗಳಿಗೆ ಮೊದಲ ಆದ್ಯತೆ ನೀಡಿ, ಕೊನೆಯ ಆದ್ಯತೆಯನ್ನು ಹೊರ ರಾಜ್ಯದ ಕೇಂದ್ರಕ್ಕೆ ಬಹುತೇಕ ವಿದ್ಯಾರ್ಥಿಗಳು ನೀಡಿದ್ದರು. ಆದರೆ, ಹಲವರಿಗೆ ಹೊರ ರಾಜ್ಯದ ಕೇಂದ್ರಗಳನ್ನು ನೀಡಿದ್ದರಿಂದ ಸಾಕಷ್ಟು ತೊಂದರೆ ಅನುಭವಿಸಿದೆವು. ಇದು ಫಲಿತಾಂಶದ ಮೇಲೂ ಪರಿಣಾಮ ಬೀರಿದೆ' ಎನ್ನುತ್ತಾರೆ ಡಾ.ಕಾರ್ತಿಕ್ ನಾಯಕ್.

ಬಳ್ಳಾರಿ ಜೈಲು ಸೇರಿದ ದರ್ಶನ್

ಒಂದನೇ ಪುಟದಿಂದ...

'ದರ್ಶನ್ ಧರಿಸಿದ್ದು ಪವರ್ ಗ್ಲಾಸ್': 'ಬಳ್ಳಾರಿ ಕಾರಾಗೃಹ ಪ್ರವೇಶಿಸುವ ಸಂದರ್ಭದಲ್ಲಿ ದರ್ಶನ್ ದೃಷ್ಟಿದೋಷಕ್ಕೆ ಸಂಬಂಧಿಸಿದಂತೆ ಪವರ್ ಗ್ಲಾಸ್ ಧರಿಸಿದ್ದರೇ ಹೊರತು ಕೂಲಿಂಗ್ ಗ್ಲಾಸ್ ಅಲ್ಲ. ಆರೋಗ್ಯಕ್ಕೆ ಸಂಬಂಧಿಸಿದ ಪರಿಕರಗಳನ್ನು ಬಳಸಲು ಕೈದಿಗೆ ಅಥವಾ ವಿಚಾರಣಾಧೀನ ಕೈದಿಗೆ ಅವಕಾಶವಿದೆ. ಅವರ ಕೈಗಳಿಗೆ ಕೋಳವನ್ನು ಹಾಕಿರಲಿಲ್ಲ. ಅದು ಅವರು ಧರಿಸಿದ್ದ ಬೆಳ್ಳಿಯ ಕಡಗ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ಸ್ಪಷ್ಟಪಡಿಸಿದರು.

ಇದಕ್ಕೂ ಮುನ್ನ ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಉತ್ತರ ವಲಯ ಡಿಐಜಿ ಟಿ.ಪಿ.ಶೇಷ ಅವರು, 'ಕೂಲಿಂಗ್ ಗ್ಲಾಸ್ ಧರಿಸಲು ಅವಕಾಶ ಕಲ್ಪಿಸಿದ ಮತ್ತು ನಿರ್ಲಕ್ಷ್ಯ ವಹಿಸಿದ ಅಧಿಕಾರಿ ಮತ್ತು ಸಿಬ್ಬಂದಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು' ಎಂದು ಡಿಜಿಪಿ ಮಾಲಿನಿ ಕೃಷ್ಣಮೂರ್ತಿಗೆ ಪತ್ರ ಬರೆದಿದ್ದರು.

ಸಮವಸ್ತ್ರ ಇರಲ್ಲ: ಕೈದಿಗಳ ಪರಿಕರಗಳನ್ನು ಕಾರಾಗೃಹದ ಪ್ರವೇಶದ್ವಾರದಲ್ಲೇ ತೆಗೆಸಿ, ಕೈದಿ ನಿರ್ಗಮಿಸುವ ವೇಳೆ ಮರಳಿಸಲಾಗುತ್ತದೆ. ಅದರಂತೆ, ದರ್ಶನ್ ಕೊರಳಲ್ಲಿದ್ದ ಸರ ಮತ್ತು ಕೈಯಲ್ಲಿದ್ದ ಕಡಗವನ್ನು ತೆಗೆಸಲಾಯಿತು.

'ಶಿಕ್ಷೆಗೆ ಗುರಿಯಾದ ಕೈದಿಗಳಿಗೆ ಮಾತ್ರ ಸಮವಸ್ತ್ರ ನೀಡಲಾಗುತ್ತದೆ. ವಿಚಾರಣಾಧೀನ ಕೈದಿಗಳು ಅವರ ಇಷ್ಟದ ಉಡುಗೆ ತೊಡಬಹುದು. ಆರಂಭದ ಒಂದು ವಾರ ಅವರ ಸಂಬಂಧಿಗಳಿಗೆ ನಿತ್ಯ ನೋಡಲು ಅವಕಾಶ ಇರುತ್ತದೆ. ದರ್ಶನ್ ಒಪ್ಪಿದರೆ ವಾರಕ್ಕೊಮ್ಮೆ ಅವರ ಸಂಬಂಧಿಗಳು, ಅವರ ಆಪ್ತರು ಭೇಟಿ ನೀಡಬಹುದು' ಎಂದು ಶೋಭಾರಾಣಿ ವಿ.ಜೆ ತಿಳಿಸಿದರು.

ಭದ್ರತಾ ದೃಷ್ಟಿ: ಮಾರ್ಗ ದಿಢೀರ್ ಬದಲು

ಒಂದನೇ ಪುಟದಿಂದ...

'ಆರಂಭದಲ್ಲಿ ಮೇಕ್ರಿ ವೃತ್ತ, ಯಶವಂತಪುರ, ದಾಸರಹಳ್ಳಿ, ನೆಲಮಂಗಲ, ತುಮಕೂರು, ಶಿರಾ, ಚಿತ್ರದುರ್ಗ ಮಾರ್ಗದಲ್ಲೇ ದರ್ಶನ್ ಅವರನ್ನು ಕರೆದೊಯ್ಯಲು ತೀರ್ಮಾನಿಸಲಾಗಿತ್ತು. ಹಿರಿಯ ಅಧಿಕಾರಿಗಳ ಸೂಚನೆ ಹಾಗೂ ಭದ್ರತಾ ದೃಷ್ಟಿಯಿಂದ ಮಾರ್ಗ ಬದಲಾವಣೆ ಮಾಡಲಾಯಿತು' ಎಂದು ಪೊಲೀಸರು ಹೇಳಿದರು.

ಪರಪ್ಪನ ಅಗ್ರಹಾರದಿಂದ ಮೇಕ್ರಿ ವೃತ್ತಕ್ಕೆ ವಾಹನ ಬಂದ ತಕ್ಷಣವೇ ದರ್ಶನ್ ಅವರನ್ನು ಕರೆದೊಯ್ಯುವ ಮಾರ್ಗವನ್ನು ದಿಢೀರ್ ಬದಲಾವಣೆ ಮಾಡಿಕೊಂಡು ಹೆಬ್ಬಾಳ ಮೇಲ್ಸೇತುವೆ, ಯಲಹಂಕ, ದೇವನಹಳ್ಳಿ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ ಹಾಗೂ ಆಂಧ್ರಪ್ರದೇಶದ ಅನಂತಪುರ ಮಾರ್ಗವಾಗಿ ಬಳ್ಳಾರಿ ಜೈಲಿಗೆ ಕರೆದೊಯ್ಯ-ಲಾಯಿತು.

'ಆರಂಭದಲ್ಲಿ ತೆರಳಲು ನಿರ್ಧರಿಸಿದ್ದ ಸಂಚಾರ ಮಾರ್ಗದ ವಿವರ ಮಾಧ್ಯಮಗಳಲ್ಲಿ ಪ್ರಕಟವಾಗಿತ್ತು. ಹೀಗಾಗಿ ಆ ಮಾರ್ಗದಲ್ಲಿ ಅಭಿಮಾನಿಗಳು ಜಮಾವಣೆ ಆಗುವ ಸಾಧ್ಯತೆಯಿತ್ತು. ಈ ಕಾರಣದಿಂದ ಮಾರ್ಗ ಬದಲಾವಣೆ ಮಾಡಿಕೊಂಡು ಎಲ್ಲಿಯೂ ನಿಲುಗಡೆ ಮಾಡದೆ ಬಳ್ಳಾರಿ ಕಾರಾಗೃಹಕ್ಕೆ ದರ್ಶನ್ ಅವರನ್ನು ಕರೆದೊಯ್ದು ಬಿಡಲಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಉಳಿದ ಆರೋಪಿಗಳನ್ನು ಪೂರ್ವ ನಿರ್ಧರಿತ ಮಾರ್ಗದಲ್ಲೇ ಕರೆದೊಯ್ಯಲಾಯಿತು.

ಜೈಲು ಸಿಬ್ಬಂದಿ ವಿಚಾರಣೆ: ಸಿಸಿಬಿ ಪೊಲೀಸರ ದಾಳಿಗೂ ಮುನ್ನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿಶೇಷ ಬ್ಯಾರಕ್‌ಗಳಿಂದ ರಟ್ಟಿನ ಪೆಟ್ಟಿಗೆಯಲ್ಲಿ ವಸ್ತುಗಳನಿಟ್ಟು ಸಾಗಣೆ ಮಾಡಿದ್ದ ಪ್ರಕರಣದಲ್ಲಿ ಜೈಲು ಸಿಬ್ಬಂದಿ ಕೆ.ಎಸ್.ಸುದರ್ಶನ್, ಪರಮೇಶ್ ನಾಯಕ್ ಲಮಾಣಿ, ರಾಯಮಾನೆ ಹಾಗೂ ಕೈದಿ ಮುಜೀಬ್‌ನನ್ನು ಗುರುವಾರವೂ ಪೊಲೀಸರು ವಿಚಾರಣೆಗೆ ಒಳಪಡಿಸಿದರು.

'ರಟ್ಟಿನ ಪೆಟ್ಟಿಗೆಯಲ್ಲಿ ಕೊಂಡೊಯ್ದ ವಸ್ತು ಯಾವುದು? ಅದನ್ನು ಯಾರಿಗೆ ತಲುಪಿಸಿದ್ದೀರಿ' ಎಂಬ ಪ್ರಶ್ನೆಗಳನ್ನು ಕೇಳಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ನಟನ ನಿಗಾವಣೆಗೆ ಜ್ಞಾಪನಾ ಪತ್ರ

ಒಂದನೇ ಪುಟದಿಂದ...

'ದರ್ಶನ್ ಭೇಟಿಗೆ ಅವರ ಪತ್ನಿ, ರಕ್ತಸಂಬಂಧಿ, ವಕಾಲತ್ತು ವಹಿಸಿದ ವಕೀಲರಿಗೆ ಮಾತ್ರ ಅವಕಾಶ ನೀಡಬೇಕು. ಚಿತ್ರರಂಗದ ಕಲಾವಿದರು, ಅಭಿಮಾನಿಗಳು, ರಾಜಕೀಯ ನಾಯಕರ ಭೇಟಿಗೆ ಅವಕಾಶ ನೀಡಬಾರದು. ಸಾಮಾನ್ಯ ಬಂದಿಯಂತೆಯೇ ಪರಿಗಣಿಸಿ, ಸೌಲಭ್ಯ ನೀಡಬೇಕು. ಬೇರೆ ಕೈದಿಗಳ ಜೊತೆಗೆ ದರ್ಶನ್ ಬೆರೆಯವಂತಿಲ್ಲ. ಇದರ ಮೇಲೆ ನಿಗಾವಹಿಸಲು ಅಧಿಕಾರಿಗಳು 'ದಿಢೀರ್ ಭೇಟಿ' (ಸರ್ಪ್ರೈಸ್ ವಿಸಿಟ್)' ಮಾಡಬೇಕು. ಕಾರಾಗೃಹ ಸುತ್ತಲೂ ಸೂಕ್ತ ಭದ್ರತೆ ಒದಗಿಸಬೇಕು' ಎಂದೂ ಸೂಚಿಸಿದ್ದಾರೆ.

ಶಿವಮೊಗ್ಗ ಕಾರಾಗೃಹಕ್ಕೆ ಸಹಚರರು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ ಆರೋಪಿ, ನಟ ದರ್ಶನ್ ಜೊತೆ ಸಹ ಆರೋಪಿಗಳಾದ ಜಗದೀಶ್, ಲಕ್ಷ್ಮಣ್‌ನನ್ನು ಗುರುವಾರ ಪರಪ್ಪನ ಅಗ್ರಹಾರ ಜೈಲಿನಿಂದ ಇಲ್ಲಿನ ಸೋಗಾನೆಯ ಕೇಂದ್ರ ಕಾರಾಗೃಹಕ್ಕೆ ಕರೆತರಲಾಯಿತು.

ಬೆಂಗಳೂರು ನಗರ ಸಶಸ್ತ್ರ ಮೀಸಲು ಪಡೆ (ಸಿಎಆರ್) ಬೆಂಗಾವಲಿನಲ್ಲಿ ಕರೆತರಲಾಯಿತು.

'ಕೇಂದ್ರ ಕಾರಾಗೃಹದ ಕಾವೇರಿ ವಿಭಾಗದಲ್ಲಿ ಇಬ್ಬರನ್ನು ಇತರೆ ಸಾಮಾನ್ಯ ಕೈದಿಗಳಂತೆಯೇ ಇಡಲಾಗಿದೆ. ಏಳು ದಿನ ಅವರನ್ನು ಪ್ರತ್ಯೇಕವಾಗಿ (ಕ್ವಾರಂಟೈನ್) ಇರಿಸಿ ನಿಗಾ ವಹಿಸಬೇಕಿದೆ' ಎಂದು ಕಾರಾಗೃಹದ ಮುಖ್ಯ ಅಧೀಕ್ಷಕಿ ಆರ್. ಅನಿತಾ ತಿಳಿಸಿದರು.

ಧಾರವಾಡ/ಬೆಳಗಾವಿ ವರದಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ಧನರಾಜ್‌ಗೆ ಗುರುವಾರ ಮಧ್ಯಾಹ್ನ 12.45ಕ್ಕೆ ಧಾರವಾಡ ಕೇಂದ್ರ ಕಾರಾಗೃಹಕ್ಕೆ ಪೊಲೀಸರು ಕರೆತಂದರು.

ಇನ್ನೊಬ್ಬ ಆರೋಪಿ ಪ್ರದೂಶ್‌ಗೆ ಬೆಳಗಾವಿ ಜಿಲ್ಲೆಯ ಹಿಂಡಲಗಾಗೆ ಕರೆತಂದರು. ಇಬ್ಬರ ಬಳಿಯಿದ್ದ ಚೀಲ, ಪರಿಕರಗಳನ್ನು ಪರಿಶೀಲಿಸಿದರು. ಔಷಧಿ ಹೊರತುಪಡಿಸಿ, ಉಳಿದ ಸಾಮಗ್ರಿಗಳನ್ನು ಒಯ್ಯಲು ಅವಕಾಶ ನೀಡಲಿಲ್ಲ.

ಆರೋಗ್ಯದಲ್ಲಿ ವ್ಯತ್ಯಾಸ– ಆರೋಪಿಗಳ ಸ್ಥಳಾಂತರ ವಿಳಂಬ: (ಮೈಸೂರು ವರದಿ) ಆರೋಗ್ಯದಲ್ಲಿ ವ್ಯತ್ಯಾಸವಾದ ಕಾರಣಕ್ಕೆ, ರೇಣುಕಸ್ವಾಮಿ ಕೊಲೆ ಪ್ರಕರಣದ ಮೂವರು ಆರೋಪಿಗಳನ್ನು ಶುಕ್ರವಾರ ಬೆಳಿಗ್ಗೆ ಅವರನ್ನು ಕರೆತರುವ ಸಾಧ್ಯತೆ ಇದೆ.

ದರ್ಶನ್‌ಗೆ ವಿಶೇಷ ಆತಿಥ್ಯ ಪ್ರಕರಣದ ಬಳಿಕ ಕೊಲೆ ಕೃತ್ಯದ ಆರೋಪಿಗಳಾದ ನಂದೀಶ್, ರಾಘವೇಂದ್ರ, ಪವನ್‌ರನ್ನು ಮೈಸೂರು ಕಾರಾಗೃಹಕ್ಕೆ ಸ್ಥಳಾಂತರಿಸಲು ಸರ್ಕಾರ ಆದೇಶಿಸಿತ್ತು.

ದರ್ಶನ್ ಭೇಟಿ: ಚಿಕ್ಕಣ್ಣ ವಿಚಾರಣೆ

ಪ್ರಜಾವಾಣಿ ವಾರ್ತೆ

ಚಿಕ್ಕಣ್ಣ

ಬೆಂಗಳೂರು: ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಸಾಕ್ಷಿದಾರರಾದ ನಟ ಚಿಕ್ಕಣ್ಣ ಅವರನ್ನು ಗುರುವಾರ ತನಿಖಾಧಿ-ಕಾರಿಗಳು ಮತ್ತೆ ಸುಮಾರು ಎರಡು ತಾಸು ವಿಚಾರಣೆಗೆ ಒಳಪಡಿಸಿ ಹೇಳಿಕೆ ದಾಖಲಿಸಿಕೊಂಡರು.

ಪ್ರಕರಣದ ಎರಡನೇ ಆರೋಪಿ, ನಟ ದರ್ಶನ್ ಅವರನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಇತ್ತೀಚೆಗೆ ಚಿಕ್ಕಣ್ಣ ಭೇಟಿ ಮಾಡಿದ್ದರು. ಭೇಟಿಯಾದ ಮಾಹಿತಿ ಸಿಕ್ಕಿದ ಬೆನ್ನಲ್ಲೇ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತನಿಖಾಧಿಕಾರಿ ಹೇಳಿದ್ದರು. ಗುರುವಾರ ವಿಚಾರಣೆಗೆ ಬರುವಂತೆ ನೋಟಿಸ್ ಜಾರಿ ಮಾಡಿದ್ದರು.

ಕೃತ್ಯಕ್ಕೂ ಮುನ್ನ ಆರೋಪಿ ವಿನಯ್ ಅವರ ಒಡೆತನದ ರಾಜರಾಜೇಶ್ವರಿ ನಗರದ ಸ್ಟೋನಿ ಬ್ರೂಕ್ ರೆಸ್ಟೋರೆಂಟ್‌ನಲ್ಲಿ ಆರೋಪಿಗಳು ಪಾರ್ಟಿ ನಡೆಸಿದ್ದರು. ಆ ಪಾರ್ಟಿಯಲ್ಲಿ ದರ್ಶನ್, ಪವಿತ್ರಾಗೌಡ ಜತೆಗೆ ನಟ ಚಿಕ್ಕಣ್ಣ ಕಾಣಿಸಿಕೊಂಡಿದ್ದರು. ಚಿಕ್ಕಣ್ಣ ಅವರನ್ನೂ ಕರೆದೊಯ್ದು ಸ್ಥಳ ಮಹಜರು ನಡೆಸಿದ್ದ ಪೊಲೀಸರು, ಈ ಪ್ರಕರಣದಲ್ಲಿ ಸಾಕ್ಷಿದಾರರನ್ನಾಗಿ ಪರಿಗಣಿಸಿ, ನ್ಯಾಯಾಧೀಶರ ಎದುರು ಸಿಆರ್‌ಪಿಸಿ ಕಲಂ 164ರ ಅಡಿ ಹೇಳಿಕೆ ದಾಖಲಿಸಲಾಗಿತ್ತು. ನಂತರ ಚಿಕ್ಕಣ್ಣ, ಆರೋಪಿಯನ್ನು ಭೇಟಿ ಮಾಡಿದ್ದರು ಎಂದು ಪೊಲೀಸರು ಹೇಳಿದರು.

'ದರ್ಶನ್ ಭೇಟಿ ವೇಳೆ ಏನೇನು ಮಾತುಕತೆ ನಡೆಯಿತು? ನಿಮಗೇನಾದರೂ ಆಮಿಷ ಒಡ್ಡಿದ್ದಾರೆಯೇ? ಅಥವಾ ಬೆದರಿಕೆ ಹಾಕಿದರೇ' ಎಂದು ಪೊಲೀಸರು ಪ್ರಶ್ನೆ ಕೇಳಿ ಹೇಳಿಕೆ ದಾಖಲಿಸಿಕೊಂಡಿದ್ದಾರೆ.

'ನ್ಯಾಯಾಧೀಶರ ಎದುರು ನಿಮ್ಮ ಹೇಳಿಕೆ ದಾಖಲಿಸಲಾಗಿದೆ. ಹೇಳಿಕೆ ತಿರುಚಿದರೆ ಸಮಸ್ಯೆ ಆಗಲಿದೆ ಎಂಬುದಾಗಿಯೂ ನಟನಿಗೆ ಎಚ್ಚರಿಕೆ ನೀಡಿದ್ದಾರೆ' ಎಂದು ಗೊತ್ತಾಗಿದೆ. ಆರೋಪಿಯನ್ನು ಭೇಟಿಯಾಗಬಾರದು ಎಂಬ ವಿಚಾರ ನನಗೆ ಗೊತ್ತಿರಲಿಲ್ಲ ಎಂಬುದಾಗಿ ತನಿಖಾಧಿಕಾರಿಗಳಿಗೆ ಚಿಕ್ಕಣ್ಣ ತಿಳಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಮತ್ತೆ ವಿಚಾರಣೆಗೆ ಬರುವಂತೆ ಪೊಲೀಸರು ಸೂಚನೆ ನೀಡಿಲ್ಲ. ನಾನು ಸಾಕ್ಷಿದಾರ ಆಗಿರುವುದರಿಂದ ಹೆಚ್ಚಿನ ಪ್ರತಿಕ್ರಿಯೆ ನೀಡುವುದಿಲ್ಲ' ಎಂದು ಚಿಕ್ಕಣ್ಣ, ಸುದ್ದಿಗಾರರಿಗೆ ತಿಳಿಸಿದರು.

ಪ್ರಶಸ್ತಿ ಪತ್ರದಲ್ಲಿ ಯೇಸು ಚಿತ್ರ: ಕಾಲೇಜಿಗೆ ನೋಟಿಸ್

ಚಾಮರಾಜನಗರ: ಜಿಲ್ಲೆಯ ಹನೂರು ತಾಲ್ಲೂಕಿನಲ್ಲಿ ಈಚೆಗೆ ನಡೆದ ತಾಲ್ಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಯೇಸು ಕ್ರಿಸ್ತರ ಭಾವಚಿ-ತ್ರವಿರುವ ಪ್ರಶಸ್ತಿ ಪತ್ರ ವಿತರಿಸಲಾಗಿದೆ. ಈ ಸಂಬಂಧ ಹನೂರಿನ ಕ್ರಿಸ್ತರಾಜ ಪದವಿಪೂರ್ವ ಕಾಲೇಜು ಹಾಗೂ ಮಾರ್ಟಳ್ಳಿಯ ಸೇಂಟ್ ಮೇರಿಸ್ ಸಂಯುಕ್ತ ಪದವಿಪೂರ್ವ ಕಾಲೇಜುಗಳಿಗೆ ಪದವಿಪೂರ್ವ ಶಿಕ್ಷಣ ಇಲಾಖೆ ನೋಟಿಸ್ ನೀಡಿದೆ.

ಪ್ರಶಸ್ತಿ ಪತ್ರದಲ್ಲಿ ಯೇಸು ಚಿತ್ರ ಬಳಕೆಗೆ ಸಾಮಾಜಿಕ ಜಾಲತಾಣಗಳಲ್ಲಿ ವಿರೋಧ ವ್ಯಕ್ತವಾಗಿತ್ತು. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಡಿಡಿಪಿಯು ಮಂಜುನಾಥ್ ಪ್ರಸನ್ನ ನೋಟಿಸ್ ನೀಡಿದ್ದಾರೆ.

'ಸರ್ಕಾರಿ ಕ್ರೀಡಾಕೂಟದ ಪ್ರಶಸ್ತಿ ಪ್ರಮಾಣ ಪತ್ರದಲ್ಲಿ ಕ್ರೈಸ್ತ ಧರ್ಮದ ದೇವರ ಭಾವಚಿತ್ರ ಮುದ್ರಿಸಿ ವಿತರಿಸಿರುವುದು ಸರ್ಕಾರದ ನಿಯಮಗಳ ಉಲ್ಲಂಘನೆಯಾಗಿದೆ. ಇದರಿಂದ ಇತರ ಧರ್ಮದವರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ. ಘಟನೆ ಸಂಬಂಧ 3 ದಿನಗಳೊಳಗೆ ಲಿಖಿತ ಉತ್ತರ ನೀಡಬೇಕು. ಇಲ್ಲವಾದಲ್ಲಿ ಕಾಲೇಜಿನ ಮಾನ್ಯತೆ ಹಿಂಪಡೆಯಲು ಶಿಫಾರಸು ಮಾಡಲಾಗುವುದು' ಎಂದು ನೋಟಿಸ್‌ನಲ್ಲಿ ವಿವರಿಸಿದ್ದಾರೆ.

ಬದಲಿ ಪ್ರಶಸ್ತಿ ಪತ್ರ: 'ವಿದ್ಯಾರ್ಥಿಗಳಿಗೆ ವಿತರಿಸಲಾಗಿದ್ದ ಪ್ರಶಸ್ತಿ ಪತ್ರಗಳನ್ನು ಹಿಂಪಡೆಯಲಾಗಿದೆ. ಸರ್ಕಾರದ ಲಾಂಛನ ಹಾಗೂ ಕ್ರೀಡಾಕೂಟದ ಲೋಗೊ ಇರುವ ಹೊಸ ಪ್ರಶಸ್ತಿ ಪತ್ರ ವಿತರಣೆಗೆ ಕ್ರಮ ಕೈಗೊಳ್ಳಲಾಗಿದೆ' ಎಂದು ಮಂಜುನಾಥ್ ಪ್ರಸನ್ನ ಮಾಹಿತಿ ನೀಡಿದರು.

ಪ್ರಜ್ವಲ್ ಪ್ರಕರಣ: ಗೋಪ್ಯ ವಿಚಾರಣೆಗೆ ಪ್ರಾಸಿಕ್ಯೂಷನ್ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರ ಜಾಮೀನು ಅರ್ಜಿಗಳನ್ನು ಸಂತ್ರಸ್ತೆಯರ ಖಾಸಗಿತನ ರಕ್ಷಿಸುವ ಉದ್ದೇಶದಿಂದ ಗೋಪ್ಯವಾಗಿ ವಿಚಾರಣೆನಡೆಸಬೇಕು' ಎಂದು ರಾಜ್ಯ ಪ್ರಾಸಿಕ್ಯೂಷನ್ ಹೈಕೋರ್ಟ್‌ಗೆ ಮನವಿ ಮಾಡಿದೆ.

ಹಾಸನ ಜಿಲ್ಲೆ ಹೊಳೆನರಸೀಪುರ ಠಾಣೆಯಲ್ಲಿ ದಾಖಲಾಗಿರುವ ಅತ್ಯಾಚಾರ ಮತ್ತು ನಗರದ ಸೈಬರ್ ಠಾಣೆಯಲ್ಲಿ ದಾಖಲಾಗಿರುವ ಪ್ರತ್ಯೇಕ ಪ್ರಕರಣಗಳಲ್ಲಿ ನಿರೀಕ್ಷಣಾ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಿಶೇಷ ಪ್ರಾಸಿಕ್ಯೂಟರ್ ಆದ ಹಿರಿಯ ವಕೀಲ ರವಿವರ್ಮ ಕುಮಾರ್, 'ಸಂತ್ರಸ್ತೆಯರ ಖಾಸಗಿತನ ರಕ್ಷಿಸುವ ಉದ್ದೇಶದಿಂದ ಜಾಮೀನು ಅರ್ಜಿಗಳನ್ನು ಗೋಪ್ಯ ವಿಚಾರಣೆಗೆ ಒಳಪಡಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿಗಳು, 'ಈ ಸಂಬಂಧ ಏನಿದ್ದರೂ ಮುಖ್ಯ ನ್ಯಾಯಮೂರ್ತಿಗಳು ಆದೇಶ ಹೊರಡಿಬೇಕು. ಮುಂದಿನ ವಿಚಾರಣೆಯಲ್ಲಿ ಈ ಅಂಶವನ್ನು ಪರಿಶೀಲಿಸೋಣ' ಎಂದು ತಿಳಿಸಿ ವಿಚಾರಣೆ ಮುಂದೂಡಿದರು. ಪ್ರಜ್ವಲ್ ಪರ ವಕೀಲ ಜಿ.ಅರುಣ್ ಇದ್ದರು.

ತಂಬಾಕಿಗಾಗಿ ತಲೆ ಜಜ್ಜಿಕೊಂಡ ಕೈದಿಗಳು...

ಪ್ರಜಾವಾಣಿ ವಾರ್ತೆ

ಕಾರವಾರ: ಇಲ್ಲಿನ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿಗಳು ಗುರುವಾರ ತಂಬಾಕು ಪೂರೈಕೆಗೆ ಬೇಡಿಕೆ ಇಟ್ಟು ಗಲಾಟೆ ಮಾಡಿದರು. ಕೈದಿಯೊಬ್ಬ ಕಲ್ಲಿನಿಂದ ತಲೆಗೆ ಜಜ್ಜಿಕೊಂಡು ಗಾಯ ಮಾಡಿಕೊಂಡಿದ್ದು ಅಲ್ಲದೇ, ಆತ ಬೀಸಿದ ಕಲ್ಲಿನ ಏಟಿಗೆ ಇನ್ನೊಬ್ಬ ಕೈದಿಗೆ ಗಾಯವಾಯಿತು.

ಕಾರಾಗೃಹದ ಒಂದನೇ ಬ್ಯಾರಕ್‌ನಲ್ಲಿದ್ದ ಮುಜಮ್ಮಿಲ್ ಮತ್ತು ಫರ್ಹಾನ್ ಚಬ್ಬಿ ಗಾಯಗೊಂಡವರು. ಇಬ್ಬರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಕಾರಾಗೃಹದಿಂದ ಹೊರಗಡೆ ತರುವಾಗ ಇಬ್ಬರೂ, 'ನಮಗೆ ಜೈಲರ್ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ' ಎಂದು ಆರೋಪಿಸಿದರು.

'ಬ್ಯಾರಕ್‌ನಲ್ಲಿದ್ದ ಟಿವಿ ದುರಸ್ತಿಗೆ ಮೊದಲು ಬೇಡಿಕೆಯಿಟ್ಟ ಕೈದಿಗಳು ಗಲಾಟೆ ಆರಂಭಿಸಿದರು. ನಂತರ ತಂಬಾಕು ಬೇಕೆಂದು ಕೂಗಾಡಿದರು. ತಂಬಾಕು ಕೊಡಿ ಎನ್ನುತ್ತ ಮುಜಮ್ಮಿಲ್ ಕಲ್ಲಿನಿಂದ ತಲೆ ಜಜ್ಜಿಕೊಂಡಿದ್ದು ಅಲ್ಲದೇ ಸಿಟ್ಟಿನಲ್ಲಿ ಗೋಡೆಗೂ ಕಲ್ಲು ಎಸೆದ. ಅದು ಗೋಡೆಗೆ ಬಡಿದು, ಸಮೀಪದಲ್ಲಿದ್ದ ಫರ್ಹಾನ್ ಹಣೆಗೆ ತಗುಲಿ ಆತನಿಗೆ ಗಾಯವಾಯಿತು' ಎಂದು ಕಾರಾಗೃಹ ಮೂಲಗಳು ತಿಳಿಸಿವೆ.

'ಜೈಲಿನ ಸಿಬ್ಬಂದಿ ಹಲ್ಲೆ ನಡೆಸಿದ್ದಾರೆಂದು ಕೈದಿಗಳು ಆರೋಪಿಸಿದ್ದಾರೆ. ಆದರೆ, ಸಿಸಿಟಿವಿ ದೃಶ್ಯಾವಳಿ ಪರಿಶೀಲಿಸಿದಾಗ ಅವರೇ ಕಲ್ಲಿನಿಂದ ಹಲ್ಲೆ ನಡೆಸಿಕೊಂಡಿದ್ದು ಸ್ಪಷ್ಟವಾಗಿದೆ.

ಗಲಾಟೆ ನಡೆಸಿ ಗಾಯಗೊಂಡ ಇಬ್ಬರು ಕೈದಿಗಳನ್ನು ಪೊಲೀಸರು ಜಿಲ್ಲಾಸ್ಪತ್ರೆಗೆ ಕರೆದೊಯ್ದರು

ಇಬ್ಬರ ವಿರುದ್ಧವೂ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಟಿ.ಜಯಕುಮಾರ್ ತಿಳಿಸಿದರು. ಕಾರಾಗೃಹದಲ್ಲಿ ಸದ್ಯ 142 ಪುರುಷ, ಮೂವರು ಮಹಿಳಾ ವಿಚಾರಣಾಧೀನ ಕೈದಿಗಳಿದ್ದಾರೆ.

'ನಟ ದರ್ಶನ್ ಚಹಾ ಪಾರ್ಟಿ ನಡೆಸಿದ ದೃಶ್ಯಗಳು ಹರಿದಾಡಿದ ಬಳಿಕ ಇಲ್ಲಿನ ಕಾರಾಗೃಹದಲ್ಲಿಯೂ ಬಿಗುಗೊಳಿಸಲಾಗಿದೆ. ಕೈದಿಗಳಿಗೆ ಅವರ ಸಂಬಂಧಿಕರು ಹೊರಗಿನ ಊಟ, ಕದ್ದುಮುಚ್ಚಿ ತಂಬಾಕು ಉತ್ಪನ್ನ ತಂದು ಕೊಡುವುದಕ್ಕೆ ಆಸ್ಪದ ನೀಡುತ್ತಿಲ್ಲ. ಇದರಿಂದ ಕೆಲ ಕೈದಿಗಳು ಗಲಾಟೆ ನಡೆಸಿರಬಹುದು' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ದೇಗುಲ ಬಳಿ ಗಣಿಗಾರಿಕೆ: ವಿವರಣೆ ಕೇಳಿದ ಎನ್‌ಜಿಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಳ್ಳಾರಿ ಜಿಲ್ಲೆಯ ಸಂಡೂರಿನ 1200 ವರ್ಷಗಳಷ್ಟು ಪುರಾತನವಾದ ಕುಮಾರಸ್ವಾಮಿ ದೇವಸ್ಥಾನದ ಸಮೀಪದಲ್ಲಿ ಗಣಿಗಾರಿಕೆ ನಡೆಸಲು ಕರ್ನಾಟಕ ಸರ್ಕಾರ ತಾತ್ವಿಕ ಅನುಮೋದನೆ ಕೋರಿರುವ ಪ್ರಕರಣದ ಸಂಬಂಧ ಕೇಂದ್ರ ಪರಿಸರ ಸಚಿವಾಲಯ ಹಾಗೂ ಕರ್ನಾಟಕ ಗಣಿ ಇಲಾಖೆಯಿಂದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ವಿವರಣೆ ಕೇಳಿದೆ.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ-ಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ಪ್ರಧಾನ ಪೀಠವು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಹಾಗೂ ಬಳ್ಳಾರಿ ಜಿಲ್ಲಾಧಿಕಾರಿಗೆ ನೋಟಿಸ್ ನೀಡಿದೆ.

ಕುಮಾರಸ್ವಾಮಿ ಬೆಟ್ಟದ ಬಳಿಯಲ್ಲಿ 70 ಎಕರೆಯಲ್ಲಿ ಗಣಿಗಾರಿಕೆ ನಡೆಸಲು ತಾತ್ವಿಕ ಅನುಮೋದನೆ ನೀಡುವಂತೆ ಕೇಂದ್ರ ಪರಿಸರ ಸಚಿವಾಲಯಕ್ಕೆ ಕರ್ನಾಟಕ ಅರಣ್ಯ ಇಲಾಖೆ ಮೇ 17ರಂದು ಪ್ರಸ್ತಾವ ಸಲ್ಲಿಸಿತ್ತು.

'ಈ ದೇವಸ್ಥಾನವು 7 ಅಥವಾ 8ನೇ ಶತಮಾನದ್ದು. ಭಾರತೀಯ ಪುರಾತತ್ವ ಸರ್ವೇಕ್ಷಣೆಯ ಅಡಿಯಲ್ಲಿ ಸಂರಕ್ಷಿತ ಸ್ಮಾರಕವಾಗಿದೆ. ಸಂರಕ್ಷಿತ ತಾಣಗಳ 2 ಕಿ.ಮೀ. ಸುತ್ತಮುತ್ತ ಗಣಿಗಾರಿಕೆ ನಡೆಸುವಂತಿಲ್ಲ ಎಂದು 1978ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ಗಣಿಗಾರಿಕೆಯಿಂದ ದೇವಸ್ಥಾನಕ್ಕೆ ಹಾನಿಯಾಗಲಿದೆ. ಈ ಯೋಜನೆಗೆ ಸ್ಥಳೀಯರು ವಿರೋಧ ವ್ಯಕ್ತಪಡಿಸಿ-ದ್ದಾರೆ. ಯೋಜನೆ ವಿರೋಧಿಸಿ ಅವರು 2023ರಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಇದರ ನಡುವೆಯೇ, ರಾಜ್ಯ ಸರ್ಕಾರವು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ರಾಜ್ಯದ ನಡೆ ಪರಿಸರ ಕಾಯ್ದೆಯ ಉಲ್ಲಂಘನೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಇಟಗಾ ಗ್ರಾಮದಲ್ಲಿ ಅನಧಿಕೃತವಾಗಿ ಸರ್ಕಾರಿ ಜಾಗದ ಹಕ್ಕು ವರ್ಗಾವಣೆ

ಒಂದೇ ಕುಟುಂಬದ ನಾಲ್ವರಿಗೆ 20 ಎಕರೆ ಜಮೀನು!

● ಮಲ್ಲಿಕಾರ್ಜುನ ಎಚ್.ಎಂ

ಚಿತ್ತಾಪುರ(ಕಲಬುರಗಿ ಜಿಲ್ಲೆ): ತಾಲ್ಲೂಕಿನ ಇಟಗಾ ಗ್ರಾಮದಲ್ಲಿ ಸರ್ಕಾರಕ್ಕೆ ಸೇರಿದ ಸರ್ವೆ ನಂ.152ರಲ್ಲಿನ 20 ಎಕರೆ 23 ಗುಂಟೆ ಜಮೀನಿನ ಪಹಣಿಯಲ್ಲಿ ಮೊಗಲಾ ಗ್ರಾಮದ ಒಂದೇ ಕುಟುಂಬದ ನಾಲ್ವರ ಹೆಸರನ್ನು ಸೇರಿಸಲಾಗಿದೆ. ಒಟ್ಟು 20 ಎಕರೆ 13 ಗುಂಟೆ ಜಮೀನನ್ನು ಅನಧಿಕೃತವಾಗಿ ವರ್ಗಾವಣೆ ಮಾಡಿರುವುದು ಬೆಳಕಿಗೆ ಬಂದಿದೆ.

1955–56ನೇ ಸಾಲಿನಿಂದ 1981–82ನೇ ಸಾಲಿನವರೆಗೆ ಸರ್ವೆ ನಂ.152ರಲ್ಲಿ 20 ಎಕರೆ 23 ಗುಂಟೆ ಜಮೀನಿನ ಪಹಣಿಯಲ್ಲಿ 'ಸರ್ಕಾರಿ ಖಾರೀಜ ಖಾತಾ' ಎಂದು ನಮೂದಾಗಿದೆ. 1993–94ರಲ್ಲಿ 152/1 ಎಂದು ವಿಭಜನೆ ಮಾಡಿ 15 ಎಕರೆ 26 ಗುಂಟೆ 'ಖಾರೀಜ ಖಾತಾ' ಎಂದು ಪಹಣಿ ಬೇರೆ ಮಾಡಲಾಗಿದೆ. ಅದೇ ವರ್ಷ ಪಹಣಿ ಬರೆಯುವಾಗ ಯಾವುದೇ ಆದೇಶವಿಲ್ಲದೆ ಒಂದೇ ಕುಟುಂಬದ ಮೂವರ ಹೆಸರಿಗೆ ತಲಾ 4 ಎಕರೆ 35 ಗುಂಟೆ ಜಮೀನು ವರ್ಗಾವಣೆ ಮಾಡಿ ಪಹಣಿಯಲ್ಲಿ ಹೆಸರು ನಮೂದಿಸಲಾಗಿದೆ.

ಸರ್ವೆ ನಂ.152/2ರಲ್ಲಿ 5 ಎಕರೆ 28 ಗುಂಟೆ ಜಮೀನನ್ನು ವರ್ಗಾವಣೆ ಆದೇಶವಿಲ್ಲದೆ ಮೊಗಲಾ ಗ್ರಾಮದ ಅದೇ ಕುಟುಂಬದ ಮತ್ತೊಬ್ಬರ ಹೆಸರನ್ನು ಪಹಣಿಯಲ್ಲಿ ಅನಧಿಕೃತವಾಗಿ ನಮೂದಿಸಲಾಗಿದೆ.

ಲೋಕಾಯುಕ್ತಕ್ಕೆ ನೀಡಿದ್ದ ದೂರಿನ ಹಿನ್ನೆಲೆಯಲ್ಲಿ 2015ರಲ್ಲಿ ಸರ್ಕಾರಿ ಭೂ ದಾಖಲೆ ಪತ್ರಗಳ ಪರಿಶೀಲನೆ ನಡೆಸಿದಾಗ ಅಕ್ರಮ ಬೆಳಕಿಗೆ ಬಂದಿದೆ. 2015ರಲ್ಲಿ ಅಂದಿನ ತಹಶೀಲ್ದಾರ್ ಅಕ್ರಮ ಪತ್ತೆ ಹಚ್ಚಿ, ಪತ್ರದ ಮೂಲಕ ಮೇಲಧಿಕಾರಿಗಳ ಗಮನಕ್ಕೆ ತಂದಿದ್ದರು. ಈ ಕುರಿತು 'ಪ್ರಜಾವಾಣಿ'ಗೆ ಅಧಿಕೃತ ಮಾಹಿತಿ ಲಭಿಸಿದೆ.

ಸೇಡಂ ಉಪ ವಿಭಾಗಾಧಿಕಾರಿಗೆ ವರದಿ ಸಲ್ಲಿಸಿದ ಅಂದಿನ ತಹಶೀಲ್ದಾರ್, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ತಿದ್ದುಪಡಿ ಕಾಯ್ದೆ ಕಲಂ 192(ಎ), 192(ಬಿ) ಮತ್ತು 192(ಡಿ) ಪ್ರಕಾರ ಹಾಗೂ ಐಪಿಸಿ (ಈಗ ಬಿಎನ್‌ಎಸ್‌ಎಸ್ ಸಂಹಿತೆ) ಸಂಹಿತೆಯಡಿ ಅಕ್ರಮದಲ್ಲಿ ಭಾಗಿಯಾದವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಹಾಗೂ ಈ ಜಮೀನಿನ ದಾಖಲೆಯಲ್ಲಿ 'ಕರ್ನಾಟಕ ಸರ್ಕಾರ' ಎಂದು ನಮೂದಿಸಲು ಆದೇಶ ಮಾಡುವಂತೆ 2015ರ ಮಾರ್ಚ್‌ನಲ್ಲಿ ಕೋರಿದ್ದಾರೆ.

2014 ಡಿಸೆಂಬರ್ 5ರಂದು ಲೋಕಾಯುಕ್ತರು ಪತ್ರ ಬರೆದು ಸ.ನಂ 152ರ ಸರ್ಕಾರಿ ಜಮೀನು ಕುರಿತು ತನಿಖೆ ನಡೆಸಿ ವರದಿ ನೀಡುವಂತೆ ಸೂಚಿಸಿದ್ದರು. ಅದರಂತೆ ತನಿಖೆ ನಡೆಸಿ ತಹಶೀಲ್ದಾರ್ ಅವರು ಉಪವಿಭಾಗಾ-ಧಿಕಾರಿಗೆ ವರದಿ ನೀಡಿದ್ದರು ಎಂದು ತಿಳಿದು ಬಂದಿದೆ.

ಕಂಪನಿಗೆ ಮಾರಾಟ: ಮೊಗಲಾ ಗ್ರಾಮದ ಒಂದೇ ಕುಟುಂಬದ ನಾಲ್ವರು ಇಟಗಾ ಗ್ರಾಮದಲ್ಲಿನ ಸರ್ಕಾರಿ ಸರ್ವೆ ನಂ.152/1ರಲ್ಲಿನ 12 ಎಕರೆ 6 ಗುಂಟೆ ಜಮೀನು ಮತ್ತು 152/2ರಲ್ಲಿನ 5 ಎಕರೆ 28 ಗುಂಟೆ ಸೇರಿ ಒಟ್ಟು ಒಟ್ಟು 17 ಎಕರೆ 34 ಗುಂಟೆ ಭೂಮಿಯನ್ನು ಓರಿಯೆಂಟ್ ಸಿಮೆಂಟ್ ಕಂಪನಿಗೆ ಮಾರಾಟ ಮಾಡಿರುವ ಬಗ್ಗೆ 2024–25ನೇ ಸಾಲಿನ ಪಹಣಿಯಲ್ಲಿ ಅಧಿಕೃತವಾಗಿ ನಮೂದಾಗಿದೆ.

ಹಾಸನ ನಗರಾಭಿವೃದ್ಧಿ ಪ್ರಾಧಿಕಾರ ಬಿ.ಎಂ.ರಸ್ತೆ, ಹಾಸನ.

ದೂರವಾಣಿ ಸಂಖ್ಯೆ: 268876, 266719,

ನಂ:ಹಾನಪ್ರಾ/ಎಸ್.ಎಂ.ಕೆ.ನಗರ/ಮೂ.ನಿ/ವಾ.ನಿ/ಇ-ಹರಾಜು/ಪ್ರಕಟಣೆ/01/2024-25

ದಿನಾಂಕ:28.08.2024

ಹಾಸನ ನಗರಾಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಎಸ್.ಎಂ.ಕೆ.ನಗರ (Airport enclave) ವಸತಿ ಬಡಾವಣೆಯಲ್ಲಿ ಮೂಲೆ ನಿವೇಶನಗಳು ಮತ್ತು ವಾಣಿಜ್ಯ ನಿವೇಶನಗಳ ಇ-ಹರಾಜು ಸಾರ್ವಜನಿಕ ಪ್ರಕಟಣೆ

ಇ-ಹರಾಜನ್ನು ಆರಂಭಿಸುವ ದಿನಾಂಕ:13.09.2024 ಭಾರತೀಯ ಕಾಲಮಾನ 17.00 ಗಂಟೆಯ ನಂತರ ಇ.ಎಂ.ಡಿ. ಮೊತ್ತದೊಂದಿಗೆ ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಕೊನೆಯ ದಿನಾಂಕ:19.10.2024ಭಾರತೀಯ ಕಾಲಮಾನ 17.00 ಗಂಟೆವರೆಗೆ ಕ್ರಮ ಸಂಖ್ಯೆ:01 ರಿಂದ 30 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:21.10.2024 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:31 ರಿಂದ 60 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:22.10.2024 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಕ್ರಮ ಸಂಖ್ಯೆ:61 ರಿಂದ 100 ರವರೆಗಿನ ನಿವೇಶನಗಳ ಇ-ಹರಾಜನ್ನು ಮುಕ್ತಾಯಗೊಳಿಸಲು ಕೊನೆಯ ದಿನಾಂಕ:23.10.2024 ಭಾರತೀಯ ಕಾಲಮಾನ 17.00ಗಂಟೆಗೆ (ಸಂಜೆ-5.00ಗಂಟೆ) (ಡೆಲ್ಟಾ ಟೈಮ್ 5.00 ನಿಮಿಷ) ಇ-ಹರಾಜಿನಲ್ಲಿ ಭಾಗವಹಿಸುವವರು, ಹರಾಜಿನಲ್ಲಿರುವ ನಿವೇಶನದ ಒಟ್ಟು ಮೌಲ್ಯ ರೂ.30.00 ಲಕ್ಷದವರೆಗೆ ಪಾವತಿ ಮಾಡಬೇಕಾದ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.50,000/- ಹಾಗೂ ರೂ.30.00 ಲಕ್ಷಕ್ಕಿಂತ ಮೇಲ್ಪಟ್ಟ ಮೌಲ್ಯದ ನಿವೇಶನಗಳಿಗೆ ಇ.ಎಂ.ಡಿ ಹಣ ಪ್ರತಿ ನಿವೇಶನಕ್ಕೆ ರೂ.1,00,000/- ಕನಿಷ್ಠ ಬಿಡ್ ಬದಲಾವಣೆ ಮೊತ್ತ ನಿವೇಶನಗಳಿಗೆ ರೂ.10000/-ಗಳು. ಇ-ಹರಾಜಿನಲ್ಲಿ ಭಾಗವಹಿಸಲು ಹೆಚ್ಚಿನ ಮಾಹಿತಿಗಾಗಿ ನಿವೇಶನಗಳ ವಿವರಕ್ಕೆ ಸಂಪರ್ಕಿಸಬೇಕಾದ ಅಂತರ್ಜಾಲ https://kppp.karnataka.gov.in

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮೂಲೆ ಮತ್ತು ವಾಣಿಜ್ಯ ನಿವೇಶನಗಳು (ಕ್ರ.ಸಂ. 01 ರಿಂದ 30)

ಕ್ರ.ಸಂ	ನಿವೇಶನ ಸಂಖ್ಯೆ ಮೂಲೆ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2250/-
1	1	S-E	(15.00+17.00)/2	(4.80+12.80)/2	140.80	3408750
2	22	S-E	(15.00+16.30)/2	(9.40+15.90)/2	197.97	4792854
3	46	S-W	(12.00+13.00)/2	(6.80+12.10)/2	118.13	2859927
4	1149	N-W	(15.50+8.60)/2	(28.30+27.50)/2	336.19	8139160
5	2002	S-W	(13.20+21.10)/2	(15.00+17.00)/2	274.40	6643224
6	2038	S-W	(11.30+17.60)/2	(12.00+13.60)/2	184.96	4477882
7	2371	S-W	(15+26.40)/2	(18.00+21.70)/2	410.90	9947889
8	2372	S-E	(7.40+15.00)/2	(12.00+14.40)/2	147.84	3579206
9	2463	N-E	(10.40+9.00)/2	(12.10+6.80)/2	91.67	2219331
10	2503	N-E	(13.90+12.00)/2	(19.10+12.30)/2	203.31	4922135
11	3750	S-E	(16.30+16.60)/2	(18.00+18.20)/2	297.75	7208528
12	3762	N-E	(19.40+16.60)/2	(18.20+18.00)/2	325.80	7887618
13	4448	S-E	(18.00+18.20)/2	(17.00+19.60)/2	331.23	8019078
14	4476	N-E	(19.80+16.60)/2	(18.30+18.00)/2	330.33	7997289
15	4931	N-W	(25.90+24.30)/2	(5.10+12.10)/2	215.86	5225971
16	5401	S-W	(10.30+2.50)/2	(53.40+52.80)/2	339.84	8227526
17	6312	N-E	(41.30+8.80)/2	(48.00+34.50)/2	1033.30	25016193
18	1987	N-E	12.00	9.20	110.40	2672784
19	2148	S-W	12.00	9.20	110.40	2672784
20	2579	N-E	(19.00+18.00)/2	(20.40+14.40)/2	321.90	7793199
21	4477	N-W	(15.90+13.70)/2	(15.20+15.00)/2	219.71	5319000

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ನಿವೇಶನಗಳ ವಿವರಗಳು (ಕ್ರ.ಸಂ. 22 ರಿಂದ 30)

ಕ್ರ.ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
22	6342	East	24.40	36.10	878.40	30717648
23	6343	East	24.40	35.95	875.96	30674985
24	6344	East	24.40	36.20	883.28	30888302
25	6346	East	24.40	36.00	878.40	30717648
26	6348	East	24.40	36.00	878.40	30717648
27	6349	East	24.40	36.00	878.40	30717648
28	6353	East	24.40	35.80	873.52	30546994
29	6354	East	24.40	35.80	873.52	30546994
30	6355	East	24.40	35.80	873.52	30546994

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ವಾಣಿಜ್ಯ ಮತ್ತು ಮಧ್ಯಂತರ ನಿವೇಶನಗಳು ವಿವರಗಳು (ಕ್ರ.ಸಂ. 31 ರಿಂದ 60)

ಕ್ರ.ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.3250/-
31	6356	N-E	Odd site	Odd site	967.80	33843940
32	6357	S-E	Odd site	Odd site	599.81	20975272
33	6365	East	Odd site	Odd site	1013.17	35430554
34	6369	N-E	39.60+58.00/2	25.30+27.00/2	1276.12	44625916
35	6370	N-W	18.30+25.30/2	13.00+30.30/2	471.97	16504791
36	6396	S-E	32.50+25.70/2	35.15+15.25/2	733.32	25644200
37	6405	East	19.40	24.15	468.51	16383795
38	6408	West	25.60+21.20/2	33.00+32.50/2	766.35	26799260
39	6409	West	23.30	32.50	757.25	26481033
40	6410	West	23.30	32.50	757.25	26481033
41	6411	West	23.30	32.50	757.25	26481033
42	6412	West	18.30	32.45	592.92	20734412
43	6413	West	18.30	32.45	592.92	20734412
44	6414	West	18.30	32.20	589.26	20606422
45	6415	West	15.25	32.00	486.40	17009408
46	6416	West	15.25	31.85	483.36	16903099

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ನಿವೇಶನಗಳು ವಿವರಗಳು (ಕ್ರ.ಸಂ. 47 ರಿಂದ 60)

ಕ್ರ.ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
47	326	North	6.00	9.00	54.00	1162080
48	339	North	6.00	9.00	54.00	1162080
49	399	East	9.00	6.00	54.00	1162080
50	405	East	9.00	6.00	54.00	1162080
51	410	East	9.00	6.00	54.00	1162080
52	467	South	6.00	9.00	54.00	1162080
53	595	North	6.00	9.00	54.00	1162080
54	698	East	9.00	6.00	54.00	1162080
55	171	South	6.00	9.00	54.00	1162080
56	323	North	6.00	9.00	54.00	1162080
57	703	East	9.00	6.00	54.00	1162080
58	730	East	9.00	6.00	54.00	1162080
59	739	East	9.00	6.00	54.00	1162080
60	1094	East	9.00	6.00	54.00	1162080

ಎಸ್.ಎಂ.ಕೆ.ನಗರ ವಸತಿ ಬಡಾವಣೆಯಲ್ಲಿ ಲಭ್ಯವಿರುವ ಮಧ್ಯಂತರ ನಿವೇಶನಗಳು ವಿವರಗಳು (ಕ್ರ.ಸಂ. 61 ರಿಂದ 100)

ಕ್ರ.ಸಂ	ನಿವೇಶನ ಸಂಖ್ಯೆ ವಾಣಿಜ್ಯ ನಿವೇಶನ	Site Facing of roads	ಅಳತೆ (ಮೀಟರ್‌ಗಳಲ್ಲಿ) ಪೂರ್ವ-ಪಶ್ಚಿಮ	ಉತ್ತರ-ದಕ್ಷಿಣ	ವಿಸ್ತೀರ್ಣ ಚ.ಮೀ	ಪ್ರಾಧಿಕಾರದಿಂದ ನಿಗದಿಪಡಿಸಿರುವ ಕನಿಷ್ಠ ಬೆಲೆ(ಪ್ರತಿ. ಚ.ಅಡಿ ಒಂದಕ್ಕೆ ರೂ.2000/-
61	721	West	9.00	6.00	54.00	1162080
62	805	South	6.00	9.00	54.00	1162080
63	814	South	6.00	9.00	54.00	1162080
64	1060	East	9.00	6.00	54.00	1162080
65	1063	East	9.00	6.00	54.00	1162080
66	1069	East	9.00	6.00	54.00	1162080
67	1070	East	9.00	6.00	54.00	1162080
68	1077	West	9.00	6.00	54.00	1162080
69	1078	West	9.00	6.00	54.00	1162080
70	1081	West	9.00	6.00	54.00	1162080
71	1095	East	9.00	6.00	54.00	1162080
72	1100	West	9.00	6.00	54.00	1162080
73	1101	West	9.00	6.00	54.00	1162080
74	1102	West	9.00	6.00	54.00	1162080
75	1717	East	9.00	6.00	54.00	1162080
76	1723	East	9.00	6.00	54.00	1162080
77	1724	East	9.00	6.00	54.00	1162080
78	1727	East	9.00	6.00	54.00	1162080
79	1728	East	9.00	6.00	54.00	1162080
80	1731	West	9.00	6.00	54.00	1162080
81	1732	West	9.00	6.00	54.00	1162080
82	1734	West	9.00	6.00	54.00	1162080
83	1745	West	9.00	6.00	54.00	1162080
84	1749	East	9.00	6.00	54.00	1162080
85	1752	East	9.00	6.00	54.00	1162080
86	1753	East	9.00	6.00	54.00	1162080
87	1755	East	9.00	6.00	54.00	1162080
88	1756	East	9.00	6.00	54.00	1162080
89	1760	East	9.00	6.00	54.00	1162080
90	1767	West	9.00	6.00	54.00	1162080
91	1768	West	9.00	6.00	54.00	1162080
92	1859	East	9.00	6.00	54.00	1162080
93	1860	East	9.00	6.00	54.00	1162080
94	1861	East	9.00	6.00	54.00	1162080
95	1862	East	9.00	6.00	54.00	1162080
96	1867	West	9.00	6.00	54.00	1162080
97	1868	West	9.00	6.00	54.00	1162080
98	1877	West	9.00	6.00	54.00	1162080
99	1879	West	9.00	6.00	54.00	1162080
100	1880	West	9.00	6.00	54.00	1162080

ಇ-ಹರಾಜಿನ ಷರತ್ತು ಮತ್ತು ನಿಯಮ ನಿಬಂಧನೆಗಳು ಕೆಳಕಂಡಂತಿವೆ:- 1.ಇ-ಹರಾಜಿನಲ್ಲಿ ಭಾಗವಹಿಸಲಿಚ್ಛಿಸುವವರು ಇ-ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು https://kppp.karnataka.gov.in ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಮುಖಪುಟದ ಡೌನ್‌ಲೋಡ್‌ನಲ್ಲಿ ಟೆಂಡರ್‌ದಾರರಿಗೆ ಬಳಕೆದಾರರ ಕೈಪಿಡಿಗಳು ಇಲ್ಲಿ New e-Auction Bidding user manual ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್- 080-46010000 ಮತ್ತು 080-68948777 ಗೆ ಸಂಪರ್ಕಿಸಬಹುದು 2.ಪ್ಯಾನ್ ಕಾರ್ಡ್ (PAN Card, Aadhar Card) ಲಗತ್ತಿಸುವುದು. 3.ಇ-ಮೇಲ್ ವಿಳಾಸ/ ಮೊಬೈಲ್ ದೂರವಾಣಿ ಸಂಖ್ಯೆ/ಸ್ಥಿರ ದೂರವಾಣಿ (ಲ್ಯಾಂಡ್‌ಲೈನ್)ಸಂಖ್ಯೆ ನಮೂದಿಸಿರುವುದು. ನಿರ್ಧಿಷ್ಟಪಡಿಸಿದ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು, ವಿವರಗಳನ್ನು ಭರ್ತಿ ಮಾಡಿ, ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಬೇಕಾಗಿರುತ್ತದೆ. 4.ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸಬಹುದಾಗಿದೆ. ಹೀಗೆ ಭಾಗವಹಿಸುವ ಪಾಲುದಾರ ಸಂಸ್ಥೆ/ಲಿಮಿಟೆಡ್ ಕಂಪನಿಗಳು/ಟ್ರಸ್ಟ್ ಹರಾಜಿನಲ್ಲಿ ಭಾಗವಹಿಸುವ ಮುನ್ನ ತಮ್ಮ ಪಾಲುದಾರಿಕೆ ಸಂಸ್ಥೆಯ ನೊಂದಾವಣೆಯನ್ನು ಭಾರತ ದೇಶದಲ್ಲಿ ಮಾಡಿ ಕೊಂಡಿರಬೇಕು. 5.ಹರಾಜಿನ ನಿವೇಶನಗಳಿಗೆ ಸಂಬಂಧಿಸಿದ ಎಲ್ಲಾ ಕಾನೂನು ಪ್ರಕರಣಗಳು ಹಾಸನದ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುತ್ತದೆ. 6.ಇ.ಎಂ.ಡಿ.ಮೊತ್ತ ರೂ.50,000/- & ರೂ.1,00,000/-ಗಳನ್ನು ಹಾಗೂ ಇ-ಹರಾಜಿನ ಶುಲ್ಕವನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ DEBIT CARD/CREDIT CARD/NET BANKING ಮುಖಾಂತರ ಅಥವಾ ಡಿ.ಡಿ. ಯೊಂದಿಗೆ ಚಲನ್ ಮುದ್ರಿಸಿ ಐ.ಸಿ.ಐ.ಸಿ.ಐ. ಬ್ಯಾಂಕ್ ಶಾಖೆಗೆ ಪಾವತಿ ಮಾಡಬಹುದಾಗಿದೆ. 7.ಯಶಸ್ವಿ ಬಿಡ್‌ದಾರರು ಬಿಡ್ಡನ್ನು ಅಂಗೀಕೃತಗೊಂಡಿರುವ ಬಗ್ಗೆ ಇ-ಪೋರ್ಟಲ್ ಮುಖಾಂತರವೇ ಪರಿಶೀಲಿಸಿಕೊಂಡು, 25% ರಷ್ಟು ಬಿಡ್ ಮೊತ್ತವನ್ನು (ಇ.ಎಂ.ಡಿ. ರೂ. 50,000/- ಮತ್ತು ರೂ.1,00,000/-ಗಳನ್ನು ಹೊರತುಪಡಿಸಿ) ಇ-ಹರಾಜು ಮುಕ್ತಾಯಗೊಂಡು ಅಂಗೀಕೃತಗೊಂಡ ಅವಧಿಯ 72 ಗಂಟೆಗೆ (03ದಿನಗಳ ಒಳಗಾಗಿ) ಅಥವಾ ಅದರೊಳಗಾಗಿ ಕೆಳಕಂಡ ಬ್ಯಾಂಕ್ ಖಾತೆಗೆ ಪಾವತಿ ಮಾಡಬೇಕು (ಪಾವತಿಸಿದ ನಂತರ ಅದರ ಪ್ರತಿಯನ್ನು ಕಛೇರಿಗೆ ಸಲ್ಲಿಸುವುದು) ಸರ್ಕಾರಿ ರಜಾ/ಬ್ಯಾಂಕ್ ರಜಾ ಇದ್ದಲ್ಲಿ, ನಂತರದ ದಿನದಲ್ಲಿ (Next Day) ಪಾವತಿಸತಕ್ಕದ್ದು. ಹಾಗೂ ಪಾವತಿಸಲು ವಿಫಲರಾದಲ್ಲಿ ಇ.ಎಂ.ಡಿ. ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಪಾವತಿಯ ರೀತಿ: ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ.

Beneficiary Name: Commissioner, Hassan Urban Development Authority, Hassan (HUDA)

ಕ್ರಸಂ.	ಬ್ಯಾಂಕ್ ಹೆಸರು	ಖಾತೆ ಸಂಖ್ಯೆ	ಐ.ಎಫ್.ಎಸ್.ಸಿ. ಕೋಡ್
1	ಬ್ಯಾಂಕ್ ಆಫ್ ಬರೋಡ, ಹುಡಾ ಶಾಖೆ, ಬಿ.ಎಂ.ರಸ್ತೆ, ಹಾಸನ	74730100000418	BARB0VJHUDA (ZERO)

8.ಯಶಸ್ವಿ ಬಿಡ್‌ದಾರರು ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25 ರಷ್ಟು ಪಾವತಿಸಿದ ನಂತರ ಇ-ಹರಾಜು ಬಿಡ್‌ನ್ನು ಪ್ರಾಧಿಕಾರ ಸ್ಥಿರೀಕರಣದ ಬಗ್ಗೆ ನಮೂನೆ 1 ರಲ್ಲಿ ತಿಳುವಳಿಕೆ ಪತ್ರವನ್ನು ಸ್ವೀಕರಿಸಿದ ದಿನಾಂಕದಿಂದ 45(ನಲವತ್ತೈದು) ದಿನಗಳೊಳಗಾಗಿ ವಸತಿ ಮೂಲೆ ನಿವೇಶನಗಳ ಪೂರ್ಣ ಹಣ ಸಂದಾಯ ಮಾಡಬೇಕು. ಅದಕ್ಕೆ ತಪ್ಪಿದಲ್ಲಿ ಶೇಕಡಾ 18 ರಂತೆ ಬಡ್ಡಿಯೊಂದಿಗೆ 90 (ತೊಂಭತ್ತು) ದಿನಗಳ ಕಾಲಾವಕಾಶ ವಿಸ್ತರಿಸಲಾಗುವುದು. ಪ್ರಾಧಿಕಾರವು ಒಪ್ಪಿದಲ್ಲಿ ಶೇಕಡಾ 21 ರಂತೆ ಬಡ್ಡಿ ದರದಲ್ಲಿ ಮುಂದಿನ 30 (ಮೂವತ್ತು) ದಿವಸಗಳ ಕಾಲಾವಕಾಶ ನೀಡಲಾಗುವುದು. ಈ ಮೇಲ್ಕಂಡ ಎಲ್ಲಾ ಕಾಲಾವಧಿಯು ಮುಗಿದ ನಂತರ ಮತ್ತೆ ಕಾಲಾವಕಾಶ ನೀಡಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. ನಿಗದಿತ ಅವಧಿ ಒಳಗಡೆ ಬಾಕಿ ಬಿಡ್ ಮೊತ್ತದ ಹಣ ಪಾವತಿಸದಿದ್ದಲ್ಲಿ ಹರಾಜು ಮೊತ್ತದ ಶೇಕಡಾ 25ರಷ್ಟು ಮುಂಗಡ ಠೇವಣಿ ಹಣವನ್ನು ಯಾವುದೇ ಸೂಚನೆ ನೀಡದೆ ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೂ ಸದರಿ ಹರಾಜು ರದ್ದಪಡಿಸಿ, ಹರಾಜಿಗೆ ತಗಲಿದ ವೆಚ್ಚವನ್ನು ನಿಮ್ಮಿಂದ ವಸೂಲು ಮಾಡಲಾಗುವುದು. 9.ಯಶಸ್ವಿ ಬಿಡ್‌ದಾರರು ನಿಗದಿತ ಅವಧಿಯೊಳಗೆ ಹಣ ಪಾವತಿಸದಿದ್ದಲ್ಲಿ ನಿವೇಶನ ಮರು ಹರಾಜು ಮಾಡಲಾಗುವುದು. ಮರುಹರಾಜಿನಲ್ಲಿ ಮೊದಲ ಬಿಡ್‌ದಾರರಿಂದ ಕಡಿಮೆ ಬಿಡ್ ಮೊತ್ತಕ್ಕೆ ಹರಾಜಿನಲ್ಲಿ ಪ್ರಾಧಿಕಾರಕ್ಕೆ ನಷ್ಟವಾಗುವ ಮೊತ್ತವನ್ನು ಮೊದಲ ಬಿಡ್‌ದಾರರಿಂದ ವಸೂಲಿ ಮಾಡಲು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು. ಒಂದು ವೇಳೆ ಮೊದಲ ಬಿಡ್‌ದಾರರು ಬಿಡ್ ಮೊತ್ತಕ್ಕಿಂತ ಹೆಚ್ಚಿನ ಮೊತ್ತಕ್ಕೆ ಹರಾಜಿನಲ್ಲಿ ಬರುವ ಲಾಭಾಂಶ ಮೊದಲ ಬಿಡ್‌ದಾರರಿಗೆ ನೀಡಲಾಗುವುದಿಲ್ಲ. 10.ಹರಾಜಿನಲ್ಲಿ ನಿವೇಶನ ಪಡೆದವರು ನಿವೇಶನವನ್ನು ವಿಭಜಿಸಲು ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ. 11.ಹರಾಜಿನಲ್ಲಿ ನಿವೇಶನ ಪಡೆದವರು ಪ್ರಾಧಿಕಾರದಿಂದ ನಿವೇಶನ ನೋಂದಾಯಿಸಿಕೊಡುವಾಗ ವಿಧಿಸಿದ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. 12.ನಿವೇಶನಗಳನ್ನು ಎಲ್ಲಿ ಹೇಗಿವೆಯೋ ಹಾಗೆಯೇ ಹರಾಜು ನಡೆಸಲಾಗುವುದು. 13.ಬ್ಯಾಂಕ್ ಸೇವಾ ಶುಲ್ಕ ಇತ್ಯಾದಿಗಳನ್ನು ಬಿಡ್ಡುದಾರರೇ ಭರಿಸತಕ್ಕದ್ದು. 14.ಅಖೈರು ಬಿಡ್ಡಾದ ನಂತರ ಸದರಿ ಬಿಡ್ಡನ್ನು ಅಂಗೀಕರಿಸುವ ಅಥವಾ ಯಾವುದೇ ಕಾರಣ ನೀಡದೆ, ತಿಳುವಳಿಕೆ ನೀಡದೆ ತಿರಸ್ಕರಿಸುವ ಹಕ್ಕನ್ನು ಪ್ರಾಧಿಕಾರ ಹೊಂದಿರುತ್ತದೆ. 15.ಈ ಹರಾಜನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಮೂಲೆ ಮತ್ತು ವಾಣಿಜ್ಯ ನಿವೇಶನಗಳ ವಿಲೇವಾರಿ ನಿಯಮ 1991ರ ನಿಯಮಾವಳಿ ರೀತ್ಯಾ ಕ್ರಮವಹಿಸಲಾಗುವುದು. 16.ನಿವೇಶನದ ವಿವರಕ್ಕೆ ಮತ್ತು ಇತರೆ ಮಾಹಿತಿಗಳಿಗೆ https://kppp.karnataka.gov.in ಲಾಗಿನ್ ಆಗಿ ಪಡೆಯಬಹುದು. 17.ಇ-ಹರಾಜಿನ ಯಶಸ್ವಿ ಬಿಡ್‌ದಾರರು (H-1 Bidders) ನಿವೇಶನದ ಬಿಡ್‌ನ ಮೊತ್ತದ ಶೇಕಡಾ 25ರಷ್ಟು ಹಣ ಪಾವತಿಸಿದ ನಂತರ ಪಾವತಿಸಿರುವ ರಸೀದಿ ಮತ್ತು ಸಂಬಂಧಿಸಿದ ದಾಖಲಾತಿಗಳನ್ನು ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು. 18.ಬಿಡ್‌ದಾರರು ಇ-ಪೋರ್ಟಲ್‌ನಲ್ಲಿ ನಿವೇಶನಕ್ಕಾಗಿ ರಿಜಿಸ್ಟ್ರೇಷನ್ ಮಾಡುವ ವೇಳೆ ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ ಕೋಡ್‌ನ್ನು ಸರಿಯಾಗಿ ರೀತಿಯಲ್ಲಿ ನಮೂದಿಸಬೇಕು. ತಪ್ಪಿದಲ್ಲಿ ಇ.ಎಂ.ಡಿ. ಮೊತ್ತವನ್ನು ಬ್ಯಾಂಕ್ ಖಾತೆಗೆ https://kppp.karnataka.gov.in ರವರು ವರ್ಗಾಯಿಸಲು ಸಾಧ್ಯವಾಗುವುದಿಲ್ಲ. 19.ಕ್ರ.ಸಂ. 01 ರಿಂದ 100 ನಿವೇಶನಗಳಿಗೆ ಕನಿಷ್ಠ ಬಿಡ್ ಬದಲಾವಣೆ ಮೊತ್ತ ರೂ.10000/- ಗಳು. 20.ಹರಾಜಿನಲ್ಲಿ ವಿಫಲರಾದವರಿಗೆ ಹರಾಜು ಅಂತಿಮಗೊಳಿಸಿದ ನಂತರ ಇ.ಎಂ.ಡಿ. ಮೊತ್ತವನ್ನು https://kppp.karnataka.gov.in ರವರು ನೇರವಾಗಿ ಬ್ಯಾಂಕ್ ಖಾತೆಗೆ ಮರುಪಾವತಿಸಲು ಕ್ರಮವಹಿಸುತ್ತಾರೆ. ಇ.ಎಂ.ಡಿ. ಮೊತ್ತವನ್ನು ಹಿಂದಿರುಗಿಸಲು ತಡವಾದ್ದಲ್ಲಿ, ಇ-ಮೇಲ್ ವಿಳಾಸ refund.eproc@karnataka.gov.in ಹಾಗೂ ದೂರವಾಣಿ ಸಂಖ್ಯೆ: 080-22230960, 080-22234115 ಸಂಪರ್ಕಿಸಬಹುದಾಗಿರುತ್ತದೆ. 21.ಇ-ಹರಾಜು ಕೊನೆಯ ಕ್ಷಣದಲ್ಲಿ ಬರುತ್ತಿರುವ ಬಿಡ್ಡುಗಳಿಗೆ ಡೆಲ್ಟಾ ಟೈಮ್ 5 ನಿಮಿಷಗಳ ಕಾಲ ವಿಸ್ತರಣೆಯಾಗುತ್ತದೆ. ಉದಾ: ಇ-ಹರಾಜಿನಲ್ಲಿ ಪಾಲ್ಗೊಳ್ಳಲು, ಆಸಕ್ತಿ ವ್ಯಕ್ತಪಡಿಸಲು ಅಂತಿಮ ಸಮಯ 5.00 ಎಂದಿದ್ದಲ್ಲಿ ಅದನ್ನು 4.57 ಗಂಟೆಗಳಿಂದ ಪ್ರಾರಂಭಿಸಿ, 5.02 ಘಂಟೆಗಳ ವರೆಗೆ ಅವಧಿ ವಿಸ್ತರಣೆಯಾಗುತ್ತದೆ. ಮತ್ತೆ ಯಾರಾದರೂ ಬಿಡ್‌ದಾರರು ಬಿಡ್ಡನ್ನು 5.01 ಘಂಟೆಗೆ ಮಾಡಿದ್ದಲ್ಲಿ 5.06 ವರೆಗೆ ಅವಧಿ ವಿಸ್ತರಣೆಯಾಗುತ್ತದೆ. 22.ಅಂತಿಮವಾಗಿ ನಿವೇಶನವನ್ನು ಬಿಡ್ಡುದಾರರಿಗೆ ಹಸ್ತಾಂತರಿಸುವ ಸಮಯದಲ್ಲಿ ನಿವೇಶನಗಳ ನಿಖರವಾದ ಅಳತೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಹೆಚ್ಚು/ಕಡಿಮೆ ದರವನ್ನು ಬಿಡ್ಡುದಾರರು ನೀಡಿರುವ ಬಿಡ್ಡಿನ ದರದ ಮೇಲೆ ನಿಗಧಿಪಡಿಸಲಾಗುವುದು. 23.ಹರಾಜಿಗೆ ಸಂಬಂಧಿಸಿದ ಮಾಹಿತಿಯನ್ನು www.hassan.uda.gov.in ವೆಬ್‌ಸೈಟ್‌ನಿಂದ ನೋಡಬಹುದಾಗಿದೆ. ನಿವೇಶನ ಮತ್ತು ಸ್ಥಳದ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಭಿಯಂತರರ ವಿವರ:-1)ಶ್ರೀ.ಎಂ.ಸಿ.ಸತ್ಯನಾರಾಯಣ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೊ:9448330622 2)ಶ್ರೀ.ಬಿ.ಕೆ.ಸಣ್ಣೇಗೌಡ, ನಗರ ಯೋಜಕರು ಮೊ:9741938357, 3)ಚನ್ನಕೇಶವ, ಕಿರಿಯ ಇಂಜಿನಿಯರ್ ಮೊ:9844740640.

ಸಹಿ/-(ಕೆ.ಎಂ.ರಮೇಶ್) ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ.

ವಾಸಾಸಂಇ/ಹಿಸನಿ/ಹಾಸನ/370/ಕೆಎಸ್‌ಎಂಸಿಎ/2024-25

ಬಂಗಾಳದ ಮಹಿಳೆ ಕೊಲೆ

ಹೈದರಾಬಾದ್ (ಪಿಟಿಐ): ತನ್ನಿಂದ ದೂರವಾಗಲು ಪ್ರಯತ್ನಿಸುತ್ತಿದ್ದ ಪಶ್ಚಿಮ ಬಂಗಾಳದ 26 ವರ್ಷದ ಮಹಿಳೆಯನ್ನು ಬೀದರ್‌ನ ಯುವಕನೊಬ್ಬ ಚಾಕುವಿನಿಂದ ಇರಿದು ಕೊಲೆ ಮಾಡಿ, ನಂತರ ತಾನೂ ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಬುಧವಾರ ತಡರಾತ್ರಿ ಮಹಿಳೆ ತಂಗಿದ್ದ ಕೊಠಡಿಗೆ ನುಗ್ಗಿ ಈ ಕೃತ್ಯ ಎಸಗಿದ್ದಾನೆ. ಆಕೆಯನ್ನು ರಕ್ಷಿಸಲು ಮುಂದಾದ ಇತರ ಮೂವರು ಮಹಿಳೆಯರ ಮೇಲೂ ಹಲ್ಲೆ ನಡೆಸಿದ್ದಾನೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪೊಲೀಸರು ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಲು ಮುಂದಾದರು. ಆದರೆ, ಅಷ್ಟರಲ್ಲೇ ತೀವ್ರ ಗಾಯಗೊಂಡಿದ್ದ ಈ ಮಹಿಳೆ ಮೃತಪಟ್ಟಿದ್ದರು ಎಂದು ಅಧಿಕಾರಿ ತಿಳಿಸಿದ್ದಾರೆ.

ಈ ಹಿಂದೆ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಆರೋಪಿ ಮತ್ತು ಬ್ಯೂಟಿಷಿಯನ್ ಆಗಿದ್ದ ಮಹಿಳೆ ಪರಸ್ಪರ ಪರಿಚಿತರಾಗಿ, ಪ್ರೇಮಿಸುತ್ತಿದ್ದರು. ಗಂಡನಿಂದ ದೂರವಾಗಿದ್ದ ಈ ಮಹಿಳೆ ನಂತರ ಹೈದರಾಬಾದ್‌ಗೆ ವಾಸ್ತವ್ಯ ಬದಲಿಸಿದ್ದರು. ಕೆಲ ದಿನಗಳಿಂದ ಆಕೆ ಆರೋಪಿಯಿಂದ ದೂರವಾಗಲು ಪ್ರಯತ್ನಿಸಿ, ಮತ್ತೊಬ್ಬನ ಜತೆ ಸಲುಗೆ ಬೆಳೆಸಿದ್ದಳು ಎಂದು ಶಂಕಿಸಲಾಗಿದೆ. ಇದೇ ಕಾರಣಕ್ಕೆ ಹಲ್ಲೆ ನಡೆದಿದೆ ಎಂದು ಪೊಲೀಸರು ಹೇಳಿದ್ದಾರೆ.

ಆರೋಪಿ, ಮೊಯಿನಾಬಾದ್ ಬಳಿ ವಿದ್ಯುತ್ ಕಂಬವನ್ನು ಹತ್ತಿ ಹೈ-ಟೆನ್ಷನ್ ತಂತಿ ಸ್ಪರ್ಶಿಸಿ ಆತ್ಮಹತ್ಯೆಗೆ ಯತ್ನಿಸಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಸದಸ್ಯರು ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಮಾಡಿದರು —ಪ್ರಜಾವಾಣಿ ಚಿತ್ರ

ದೈಹಿಕ ಶಿಕ್ಷಣ ಶಿಕ್ಷಕರ ಪ್ರತಿಭಟನೆ

ಬಡ್ತಿ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವುದೂ ಸೇರಿದಂತೆ ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ನಡೆಸಿದರು.

ಸಂಘದ ಗೌರವ ಅಧ್ಯಕ್ಷ ಅರುಣ್ ಶಹಾಪೂರ ಮಾತನಾಡಿ, 'ಸರ್ಕಾರ 17 ವರ್ಷಗಳ ಹಿಂದೆಯೇ ದೈಹಿಕ ಶಿಕ್ಷಕರನ್ನು ಸಹ ಶಿಕ್ಷಕರು ಎಂದು ಪರಿಗಣಿಸುವ ಆದೇಶ ನೀಡಿದೆ. ಆದರೆ, ಶಿಕ್ಷಣ ಇಲಾಖೆ ಇದುವರೆಗೂ ಅದನ್ನು ಅನುಷ್ಠಾನಗೊಳಿಸದೇ ದೈಹಿಕ ಶಿಕ್ಷಕರಿಗೆ ಅನ್ಯಾಯ ಮಾಡುತ್ತಿದೆ. ಕೂಡಲೇ ಈ ಆದೇಶವನ್ನು ಅನುಷ್ಠಾನಗೊಳಿಸಬೇಕು. ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಗೆ ದೈಹಿಕ ಶಿಕ್ಷಕರ ಪಾತ್ರ ಮುಖ್ಯ. ಆದರೆ, ರಾಜ್ಯದ ಬಹುತೇಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ಹುದ್ದೆಗಳು ಖಾಲಿ ಇವೆ' ಎಂದು ದೂರಿದರು.

ಸಂಘದ ಅಧ್ಯಕ್ಷ ಎಸ್. ಚೌಡಪ್ಪ ಮಾತನಾಡಿ, 'ಸಮಾನ ವೇತನ, ಸಮಾನ ವಿದ್ಯಾರ್ಹತೆ ಇದ್ದರೂ ಶಾಲಾ ಶಿಕ್ಷಣ ಇಲಾಖೆಯ ಸಹ ಶಿಕ್ಷಕರಿಗೆ ಸಿಗುವ ಸೌಲಭ್ಯ, ಬಡ್ತಿಗಳು ದೈಹಿಕ ಶಿಕ್ಷಕರಿಗೆ ಸಿಗುತ್ತಿಲ್ಲ. ಪ್ರತ್ಯೇಕ ದೈಹಿಕ ಶಿಕ್ಷಣ ನಿರ್ದೇಶನಾಲಯ ಸ್ಥಾಪಿಸಬೇಕು. ಮಕ್ಕಳ ಅನುಪಾತಕ್ಕೆ ಅನುಗುಣವಾಗಿ ದೈಹಿಕ ಶಿಕ್ಷಕರನ್ನು ನೇಮಿಸುವ ನಿಯಮ ಬದಲಿಸಬೇಕು. ಪದವಿಪೂರ್ವ ಕಾಲೇಜುಗಳಲ್ಲೂ ದೈಹಿಕ ಶಿಕ್ಷಣ ಉಪನ್ಯಾಸಕರ ಹುದ್ದೆ ಸೃಜಿಸಬೇಕು' ಎಂದು ಆಗ್ರಹಿಸಿದರು.

ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಪ್ರಕಾಶ ಬಿ. ಹುಕ್ಕೇರಿ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ಮನವಿ ಸ್ವೀಕರಿಸಿದರು. 'ನಮ್ಮ ಬೇಡಿಕೆಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದು ಪರಿಹಾರ ಒದಗಿಸುವ ಭರವಸೆ ನೀಡಿದರು' ಎಂದು ಚೌಡಪ್ಪ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ಯುಕೆಜಿ ಮಗುವಿಗೆ ಥಳಿತ: ಶಿಕ್ಷಕಿ ವಿರುದ್ಧ ಠಾಣೆಗೆ ದೂರು

ಸರಗೂರು (ಮೈಸೂರು ಜಿಲ್ಲೆ): ಸರಿಯಾಗಿ ಓದುತ್ತಿಲ್ಲ ಎಂಬ ಕಾರಣಕ್ಕೆ ಶಿಕ್ಷಕಿಯೊಬ್ಬರು ಯುಕೆಜಿ ವಿದ್ಯಾರ್ಥಿನಿಗೆ ಕೋಲಿನಿಂದ ಹೊಡೆದು ಗಾಯಗೊಳಿಸಿದ್ದು, ವಿದ್ಯಾರ್ಥಿನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಪಟ್ಟಣದ ಜೆಎಸ್‌ಎಸ್ ಶಾಲೆಯ ವಿದ್ಯಾರ್ಥಿನಿ ಆರ್.ಧನ್ವಿತಾಳಿಗೆ ಶಿಕ್ಷಕಿ ಮೇರಿ ಎಂಬುವರು ಗುರುವಾರ ತರಗತಿಯಲ್ಲಿ ಕೋಲಿನಿಂದ ಹೊಡೆದಿದ್ದಾರೆ. ಇದರಿಂದ ವಿದ್ಯಾರ್ಥಿನಿ ಕಾಲು ಊದಿಕೊಂಡಿದೆ. ವಿದ್ಯಾರ್ಥಿನಿಯ ತಂದೆ ರಂಗಸ್ವಾಮಿ ಸರಗೂರು ಪೊಲೀಸ್ ಠಾಣೆಯಲ್ಲಿ ಶಿಕ್ಷಕಿ ವಿರುದ್ಧ ದೂರು ನೀಡಿದ್ದಾರೆ.

ಶಿಲ್ಪಾ ಹಟ್ಟಿ ಚಿನ್ನದ ಗಣಿ ಕಂಪನಿ ಎಂ.ಡಿ

ಬೆಂಗಳೂರು: ಕೆಎಎಸ್ ಅಧಿಕಾರಿ ಶಿಲ್ಪಾ ಅವರನ್ನು ಹಟ್ಟಿ ಚಿನ್ನದ ಗಣಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಐಎಎಸ್ ಅಧಿಕಾರಿ ಪೂವಿತಾ ಅವರನ್ನು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ವಿಶೇಷಾಧಿಕಾರಿಯನ್ನಾಗಿ ವರ್ಗಾವಣೆ ಮಾಡಲಾಗಿದೆ.

ಕಳ್ಳತನದ ಮಾಹಿತಿ ನೀಡದ ಮುಖ್ಯ ಶಿಕ್ಷಕ ಅಮಾನತು

ಯಲಬುರ್ಗಾ (ಕೊಪ್ಪಳ ಜಿಲ್ಲೆ): ಸ್ಥಳೀಯ ಸರ್ಕಾರಿ ಹಿರಿಯ ಪ್ರಾಥಮಿಕ ನಂ.1 ಶಾಲೆಯಲ್ಲಿ ಎರಡು ಚೀಲ ತೊಗರಿ ಬೇಳೆ ಕಳ್ಳತನವಾಗಿರುವ ಬಗ್ಗೆ ಪೊಲೀಸ್ ಠಾಣೆಗೆ ದೂರು ನೀಡದೇ ನಿರ್ಲಕ್ಷಿಸಿದ್ದಾರೆ ಎಂಬ ಆರೋಪದ ಮೇಲೆ ಇಲಾಖೆ ವಿಚಾರಣೆ ಕಾಯ್ದಿರಿಸಿ ಶಾಲೆಯ ಮುಖ್ಯ ಶಿಕ್ಷಕ ರುದ್ರಗೌಡ ಗೋಣಿ ಅವರನ್ನು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಶ್ರೀಶೈಲ ಬಿರಾದಾರ ಅಮಾನತು ಮಾಡಿದ್ದಾರೆ.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು ಭೇಟಿ ನೀಡಿ ಕಳ್ಳತನ ಆಗಿರುವ ಬಗ್ಗೆ ದೃಢಪಡಿಸಿದ್ದರು.

ನಿವೃತ್ತರ ಕನಿಷ್ಠ ಪಿಂಚಣಿ ₹13,500

ಬೆಂಗಳೂರು: ನಿವೃತ್ತ ಸರ್ಕಾರಿ ನೌಕರರ ಕನಿಷ್ಠ ಪಿಂಚಣಿಯನ್ನು ₹13,500ಕ್ಕೆ ನಿಗದಿ ಮಾಡಿ ಆರ್ಥಿಕ ಇಲಾಖೆ ಆದೇಶ ಹೊರಡಿಸಿದೆ.

7ನೇ ವೇತನ ಆಯೋಗದ ಶಿಫಾರಸಿನಂತೆ ವೇತನ ಪರಿಷ್ಕರಣೆ ಮಾಡುವ ಮೊದಲು ಕನಿಷ್ಠ ಪಿಂಚಣಿ ₹8,500 ಇತ್ತು. ₹75,300 ಇದ್ದ ಗರಿಷ್ಠ ಪಿಂಚಣಿಯನ್ನು 1,20,600ಕ್ಕೆ ಹೆಚ್ಚಳ ಮಾಡಲಾಗಿದೆ. ನಿವೃತ್ತರ ಮರಣದ ನಂತರ ಅವರ ಕುಟುಂಬ ಪಡೆಯುವ ಪಿಂಚಣಿಯಲ್ಲೂ ಹೆಚ್ಚಳವಾಗಿದ್ದು, ₹45,180 ಇದ್ದ ಗರಿಷ್ಠ ಮೊತ್ತವನ್ನು ₹ 80,400ಕ್ಕೆ ನಿಗದಿ ಮಾಡಲಾಗಿದೆ. ಮೂಲ ನಿವೃತ್ತಿ ವೇತನದ ಶೇ 8.5ರಷ್ಟು ತುಟ್ಟಿಭತ್ಯೆ ನಿಗದಿ ಮಾಡಲಾಗಿದೆ. ಸರ್ಕಾರ ವರ್ಷಕ್ಕೆ ಎರಡು ಬಾರಿ ಘೋಷಿಸುವ ತುಟ್ಟಿಭತ್ಯೆಯ ಹೆಚ್ಚಳದ ಜೊತೆಗೆ ನಿವೃತ್ತರು ಹಾಗೂ ಅವರ ಕುಟುಂಬದವರಿಗೂ ಹೆಚ್ಚಳವಾಗಲಿದೆ. 70-80 ವರ್ಷ ವಯಸ್ಸಿನ ಪಿಂಚಣಿದಾರರಿಗೆ ಮೂಲ ಪಿಂಚಣಿಯ ಹೆಚ್ಚುವರಿ ಶೇ 10 ಸಿಗಲಿದೆ. ಮರಣ ಉಪಧನವನ್ನು ಗರಿಷ್ಠ ₹20 ಲಕ್ಷಕ್ಕೆ ಮಿತಿಗೊಳಿಸಲಾಗಿದೆ.

ಈ ಆದೇಶವು ಜುಲೈ 1, 2022ರ ನಂತರ ನಿವೃತ್ತರಾದ ವಿಶ್ವವಿದ್ಯಾಲಯ ಅನುದಾನ ಆಯೋಗದ ವೇತನ ಶ್ರೇಣಿ ಸೇರಿದಂತೆ ಉನ್ನತ ವೇತನ ಶ್ರೇಣಿಗೆ ಒಳಪಟ್ಟವರಿಗೆ ಅನ್ವಯಿಸುವುದಿಲ್ಲ. ಅದಕ್ಕೂ ಪೂರ್ವದಲ್ಲಿ ನಿವೃತ್ತರಾದವರು 7ನೇ ವೇತನ ಆಯೋಗದ ಪರಿಷ್ಕೃತ ವೇತನ ಶ್ರೇಣಿ ಪಡೆಯಬಹುದು.

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಾಮರಾಜನಗರ

ಕೊಠಡಿ ನಂ.: 306, ಜಿಲ್ಲಾ ಆಡಳಿತ ಭವನ, ಫೋ.: 08226-222421

Email : dhochamarajanagar@gmail.com

No.DHO/CHN/CV(2)/01/2023-24 Dated : 22-08-2024

ಹೊರಗುತ್ತಿಗೆ ಮಾನವ ಸಂಪನ್ಮೂಲ ಸೇವೆಯನ್ನು ಇ-Procurement ಮೂಲಕ ಪಡೆಯುವ ಬಗ್ಗೆ.

E-PROCUREMENT TENDER NOTIFICATION

Tender Number : DHFWS/2024-25/SE1008

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಚಾಮರಾಜನಗರ ವ್ಯಾಪ್ತಿಗೆ ಬರುವ ಆರೋಗ್ಯ ಸಂಸ್ಥೆಗಳಿಗೆ 18-ಫಾರ್ಮಸಿಸ್ಟ್, 13-ಕಿರಿಯ ಪ್ರಯೋಗಶಾಲಾ ತಂತ್ರಜ್ಞರು, 01-ಡಾಟಾ ಎಂಟ್ರಿ ಆಪರೇಟರ್ ಮತ್ತು 01-ಸರ್ವೀಸ್ ಇಂಜಿನಿಯರ್ ಒಟ್ಟು-33 ಹುದ್ದೆಗಳನ್ನು ಹೊರ ಸಂಪನ್ಮೂಲ ಏಜೆನ್ಸಿಯ ಮೂಲಕ ಒಂದು ವರ್ಷದ ಅವಧಿಗೆ ಸಿಬ್ಬಂದಿ ಸೇವೆ ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (KTPP) 1999 ನಿಯಮಗಳು 2000 ರ ಪ್ರಕಾರ ದ್ವಿ ಲಕೋಟೆಯ ಪದ್ಧತಿಯಲ್ಲಿ E-Procurement ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ : 23-08-2024 ಹಾಗೂ ಕೊನೆಯ ದಿನಾಂಕ : 06-09-2024 ರ ಅಪರಾಹ್ನ 4.30 ಗಂಟೆ ರವರೆಗೆ ಆಗಿರುತ್ತದೆ. ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಚಾಮರಾಜನಗರ ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು
ಕುಟುಂಬ ಕಲ್ಯಾಣಾಧಿಕಾರಿ, ಚಾಮರಾಜನಗರ ಜಿಲ್ಲೆ
ಚಾಮರಾಜನಗರ

ಸಂ: ವಾಸಾಸಂಇ:ಚಾನಗರ:211:2024-25

ಬೆಂಗಳೂರಿನಲ್ಲಿ ಅತಿ ಹೆಚ್ಚು ಪ್ರಕರಣ, ಕೊಡಗಿನಲ್ಲಿ ಕಡಿಮೆ ● 25 ಲಕ್ಷಕ್ಕೂ ಹೆಚ್ಚು ದಂಡ ವಸೂಲಿ

ದೋಷಪೂರಿತ ನಂಬರ್ ಪ್ಲೇಟ್: 19,448 ಪ್ರಕರಣ

● ನಾಗರಾಜ್ ಬಿ.ಎನ್.

ಹುಬ್ಬಳ್ಳಿ: ದೋಷಪೂರಿತ ನೋಂದಣಿ ಸಂಖ್ಯೆ ಫಲಕ(ನಂಬರ್ ಪ್ಲೇಟ್) ಅಳವಡಿಸಿಕೊಂಡು ಸಂಚರಿಸುತ್ತಿದ್ದ ವಾಹನ ಸವಾರರ ವಿರುದ್ಧ ಆಗಸ್ಟ್ 1 ರಿಂದ 22ರವರೆಗಿನ ಅವಧಿಯಲ್ಲಿ ರಾಜ್ಯದಾದ್ಯಂತ ಕಾರ್ಯಚರಣೆ ನಡೆಸಿದ ಸಂಚಾರ ಪೊಲೀಸರು 19,448 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ. ₹25 ಲಕ್ಷಕ್ಕೂ ಹೆಚ್ಚು ದಂಡ ವಸೂಲಿ ಮಾಡಿದ್ದಾರೆ.

ಬೆಂಗಳೂರು ನಗರದಲ್ಲಿ ಅತಿ ಹೆಚ್ಚು 9,684 ಪ್ರಕರಣ ಮತ್ತು ಕೊಡಗು ಜಿಲ್ಲೆಯಲ್ಲಿ ಅತಿ ಕಡಿಮೆ ಪ್ರಕರಣಗಳು ದಾಖಲಾಗಿವೆ. ಬೈಕ್, ಆಟೊ, ಟಂಟಂ, ಟ್ಯಾಕ್ಸಿ, ಕಾರು, ನೀರಿನ ಟ್ಯಾಂಕರ್, ಲಾರಿ, ಖಾಸಗಿ ಬಸ್‌ಗಳ ಚಾಲಕರ ವಿರುದ್ಧ ಪ್ರಕರಣ ದಾಖಲಾಗಿದೆ.

ನಂಬರ್ ಇಲ್ಲದ ಸ್ಕೂಟಿ

ಕೆಲ ವಾಹನಗಳ ನೋಂದಣಿ ಫಲಕ ತುಂಡಾಗಿದ್ದರೆ, ಇನ್ನೂ ಕೆಲ ವಾಹನಗಳ ನೋಂದಣಿ ಸಂಖ್ಯೆ ಫಲಕಗಳಲ್ಲಿ ಸಂಖ್ಯೆಗಳೇ ಅಳಿಸಿಹೋಗಿವೆ. ಬಹುತೇಕ ವಾಹನಗಳಲ್ಲಿ ನೋಂದಣಿ ಫಲಕಗಳ ಮೇಲೆ ಸಂಖ್ಯೆ ಬರೆಸದೇ ಸ್ಟಿಕ್ಕರ್ ಅಂಟಿಸಿದ್ದು ಕಾರ್ಯಾಚರಣೆ ವೇಳೆ ಪತ್ತೆಯಾಗಿದೆ.

ವಾಣಿಜ್ಯ ಬಳಕೆಯ ವಾಹನಗಳು, ಇ-ಕಾಮರ್ಸ್‌ನ ಲಾಜಿಸ್ಟಿಕ್ ಡೆಲಿವರಿ ಬೈಕ್‌ಗಳು ಸಹ ದೋಷಪೂರಿತ ನೋಂದಣಿ ಸಂಖ್ಯೆ ಫಲಕ ಅಳವಡಿಸಿಕೊಂಡಿವೆ. ಖಾಸಗಿ ವಾಹನಗಳು ಬಿಳಿ ಫಲಕ, ವಾಣಿಜ್ಯ ವಾಹನಗಳು ಹಳದಿ ಫಲಕ ಹೊಂದಿರಬೇಕು. ಆದರೆ, ವಾಣಿಜ್ಯ ವ್ಯವಹಾರಕ್ಕೆ ಬಳಕೆಯಾಗುವ ವಾಹನಗಳಿಗೂ ಕೆಲವರು ಬಿಳಿ ಫಲಕ ಅಳವಡಿಸಿಕೊಂಡಿದ್ದಾರೆ.

'ಕೆಲ ಹಿಟ್ ಆ್ಯಂಡ್ ರನ್ ಪ್ರಕರಣಗಳಲ್ಲಿ ವಾಹನಗಳ ನೋಂದಣಿ ಸಂಖ್ಯೆ ಪತ್ತೆ ಆಗುವುದಿಲ್ಲ. ರಾತ್ರಿ ವೇಳೆ ವ್ಹೀಲಿಂಗ್ ಮಾಡುವವರು, ಮನೆ, ಸರ ಕಳವು, ದರೋಡೆ ಪ್ರಕರಣಗಳಲ್ಲಿ ಭಾಗಿಯಾಗುವವರು, ಅಕ್ರಮ ಚಟುವಟಿಕೆಗಳಿಗೆ ವಾಹನ ಬಳಸುವ ಬಹುತೇಕರು ದೋಷಪೂರಿತ ನೋಂದಣಿ ಸಂಖ್ಯೆ ಫಲಕ ಹೊಂದಿರುತ್ತಾರೆ' ಎಂದು ಹುಬ್ಬಳ್ಳಿ ಉತ್ತರ ಸಂಚಾರ ಠಾಣೆ ಇನ್‌ಸ್ಪೆಕ್ಟರ್ ರಮೇಶ ಗೋಕಾಕ ಹೇಳುತ್ತಾರೆ.

'ವಿವಿಧ ನಗರಗಳಲ್ಲಿ ಸಂಚರಿಸುವ ಶೇ 20ರಷ್ಟು ವಾಹನಗಳು ದೋಷಪೂರಿತ ನೋಂದಣಿ ಫಲಕಗಳನ್ನು ಹೊಂದಿವೆ. ಇದರಿಂದ ಸಂಚಾರ ನಿಯಮ ಉಲ್ಲಘನೆಯಲ್ಲ-ದೆ, ಕೆಲ ಪ್ರಕರಣಗಳ ಆರೋಪಿಗಳ ಪತ್ತೆಗೂ ಹಿನ್ನಡೆಯಾಗುತ್ತಿದೆ. ಮೊದಲ ಬಾರಿಗೆ ₹100 ದಂಡ, ಪುನರಾವರ್ತನೆಯಾದರೆ ದುಪ್ಪಟ್ಟು ಆಗುತ್ತದೆ' ಎನ್ನುತ್ತಾರೆ ಪೊಲೀಸರು.

ಮೋಟಾರು ವಾಹನ ಕಾಯ್ದೆ ಮಾನದಂಡ

ಕೇಂದ್ರ ಮೋಟಾರು ವಾಹನ ಕಾಯ್ದೆ ಪ್ರಕಾರ, ನೋಂದಣಿ ಫಲಕದ ಮೇಲೆ ಯಾವುದೇ ಬರಹ ಅಥವಾ ರೇಖಾಚಿತ್ರ ಇರಬಾರದು. ಕಾಯ್ದೆ ಸೂಚಿಸಿದಂತೆ ಮಾನದಂಡ ಪಾಲನೆಯಾಗಬೇಕು. ಕರ್ನಾಟಕದಲ್ಲಿ ನೋಂದಣಿಗೊಂಡ ವಾಹನಗಳು ಕೆಎ ಕೋಡ್ ಮತ್ತು ಪ್ರಾದೇಶಿಕ ಸಾರಿಗೆ ಕಚೇರಿಯ ಕೋಡ್ ಹೊಂದಿರಬೇಕು. ನಂತರ ನೋಂದಣಿ ಸಂಖ್ಯೆಗಳು ಇರಬೇಕು.

ಪದಗಳು ಇಂಗ್ಲಿಷ್ ಕ್ಯಾಪಿಟಲ್ ಅಕ್ಷರಗಳಲ್ಲಿದ್ದರೆ, ಅಂಕಿಅಂಶಗಳು ಅರೇಬಿಕ್ ಶೈಲಿಯಲ್ಲಿರಬೇಕು. ಸರ್ಕಾರಿ ಇಲಾಖೆಗಳಿಗೆ ಸೇರಿದ ವಾಹನಗಳು ಸೇರಿ ಎಲ್ಲಾ ಬಗೆಯ ವಾಹನಗಳಿಗೂ ಈ ನಿಯಮ ಅನ್ವಯ. ಖಾಸಗಿ ವಾಹನಗಳ ನೋಂದಣಿ ಫಲಕವು ಬಿಳಿ ಹಿನ್ನೆಲೆ ಮತ್ತು ಕಪ್ಪು ಬಣ್ಣದ ಅಕ್ಷರ, ವಾಣಿಜ್ಯ ವಾಹನಗಳು ಕಪ್ಪು ಅಕ್ಷರಗಳೊಂದಿಗೆ ಹಳದಿ ಹಿನ್ನೆಲೆ ಹೊಂದಿರಬೇಕು.

ರಾಜ್ಯದಾದ್ಯಂತ ವಿಶೇಷ ಕಾರ್ಯಾಚರಣೆ ನಡೆಸಿ, ವಾಹನ ಸವಾರರಿಗೆ ಎಚ್ಚರಿಕೆ ನೀಡಿ ದಂಡ ವಸೂಲಿ ಮಾಡಲಾಗಿದೆ. ಕಾರ್ಯಾಚರಣೆ ಮುಂದುವರಿಯಲಿದೆ

ಅಲೋಕ್ ಕುಮಾರ್
ಎಡಿಜಿಪಿ, ಸಂಚಾರ ವಿಭಾಗ

ತೆಲಂಗಾಣ: ಅಕ್ರಮ ಕಟ್ಟಡ ತೆರವು ಕಾರ್ಯಾಚರಣೆ

ಸಿ.ಎಂ ಸಹೋದರ ತಿರುಪತಿ ರೆಡ್ಡಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಅಕ್ರಮ ಕಟ್ಟಡಗಳ ತೆರವು ಕಾರ್ಯಾಚರಣೆ ಮುಂದುವರಿಸಿರುವ ತೆಲಂಗಾಣ ಸರ್ಕಾರ, ನಗರದ ಐಟಿ ಕಾರಿಡಾರ್‌ನಲ್ಲಿರುವ ದುರ್ಗಮ್ ಚೆರುವು ಕೆರೆಯಲ್ಲಿ ಮತ್ತು ಸುತ್ತಮುತ್ತ ನಿರ್ಮಿಸಲಾಗಿರುವ ಕನಿಷ್ಠ 204 ಕಟ್ಟಡಗಳ ತೆರವಿಗಾಗಿ ನೋಟಿಸ್ ಜಾರಿ ಮಾಡಿದೆ.

ಮಾಧಾಪುರದಲ್ಲಿರುವ ಐಟಿ ಕಾರಿಡಾರ್‌ನ ಅಮರ ಸೊಸೈಟಿಯಲ್ಲಿರುವ, ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಸಹೋದರ ಎ.ತಿರುಪತಿ ರೆಡ್ಡಿ ಅವರಿಗೆ ಸೇರಿದ ಕಟ್ಟಡಕ್ಕೆ ಸಂಬಂಧಿಸಿಯೂ ನೋಟಿಸ್ ನೀಡಲಾಗಿದೆ.

30 ದಿನಗಳ ಒಳಗಾಗಿ ಈ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸುವಂತೆ ರಂಗಾರೆಡ್ಡಿ ಜಿಲ್ಲೆಯ ಕಂದಾಯ ಅಧಿಕಾರಿಗಳು ಮತ್ತು ಸೆರಿಲಿಂಗಂಪಲ್ಲಿ ತಾಲ್ಲೂಕು ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

ಈ ಕೆರೆಯು, ಹೈದರಾಬಾದ್‌ನ ಪಶ್ಚಿಮ ಭಾಗದಲ್ಲಿರುವ ಪ್ರಮುಖ ತಾಣವಾಗಿದೆ. ಕಳೆದ ಕೆಲ ವರ್ಷಗಳಿಂದೀಚೆಗೆ, ಈ ಕೆರೆಯಂಗಳದಲ್ಲಿ ಹಾಗೂ ಸುತ್ತಮುತ್ತ ಸಾಕಷ್ಟು ಅಭಿವೃದ್ಧಿ ಚಟುವಟಿಕೆಗಳು ಕಂಡುಬಂದಿವೆ. ಅನೇಕ ವಸತಿ ಪ್ರದೇಶಗಳು ನಿರ್ಮಾಣವಾಗಿವೆ.

ಜುಬಿಲಿ ಹಿಲ್ಸ್ ಮತ್ತು ಫೈನಾನ್ಶಿಯಲ್ ಸಿಟಿ ಸಂಪರ್ಕಿಸುವ ಕೇಬಲ್ ಸೇತುವೆಯನ್ನು ಕೂಡ ದುರ್ಗಮ್ ಚೆರುವು ಕೆರೆಗೆ ಅಡ್ಡಲಾಗಿ ನಿರ್ಮಿಸಲಾಗಿದೆ.

ಕೆರೆ ಸುತ್ತಮುತ್ತ ಇರುವ ನೆಕ್ಟರ್ಸ್ ಕಾಲೊನಿ, ಡಾಕ್ಟರ್ಸ್ ಕಾಲೊನಿ, ಕಾವೂರಿ ಹಿಲ್ಸ್ ಮತ್ತು ಅಮರ ಸೊಸೈಟಿಯಲ್ಲಿರುವ ಕನಿಷ್ಠ 204 ಕಟ್ಟಡಗಳ ತೆರವಿಗೆ ಸಂಬಂಧಿಸಿ ನೋಟಿಸ್ ನೀಡಲಾಗಿದೆ.

ಅಕ್ರಮ ಕಟ್ಟಡಗಳ ತೆರವಿಗೆ ಸಂಬಂಧಿಸಿ, ಆಗಸ್ಟ್ ಮೊದಲ ವಾರದಲ್ಲಿಯೇ ನೋಟಿಸ್ ಜಾರಿ ಮಾಡಲಾಗಿದ್ದರೂ, ಗುರುವಾರ ಈ ವಿಷಯ ಬಹಿರಂಗಗೊಂಡಿದೆ. ನಿಗದಿತ ಗಡುವಿನ ಒಳಗಾಗಿ ತೆರವುಗೊಳಿಸದಿದ್ದಲ್ಲಿ, ಕಟ್ಟಡಗಳನ್ನು ನೆಲಸಮಗೊಳಿಸಲಾಗುವುದು ಎಂದು ಎಚ್ಚರಿಸಲಾಗಿದೆ.

ಈ ಕೆರೆ ಸುತ್ತಮುತ್ತ ಹಲವು ಗಣ್ಯ ವ್ಯಕ್ತಿಗಳು ಹಾಗೂ ಸೆಲೆಬ್ರಿಟಿಗಳಿಗೆ ಸೇರಿದ ಕಟ್ಟಡಗಳಿವೆ. ತೆಲುಗಿನ ಜನಪ್ರಿಯ ನಟ ಅಕ್ಕಿನೇನಿ ನಾಗಾರ್ಜುನ ಒಡೆತನದ ಎನ್-ಕನ್ವೆಷನ್ ಎಂಬ ಸಭಾಂಗಣವನ್ನು ಇತ್ತೀಚೆಗೆ ನೆಲಸಮಗೊಳಿಸಲಾಗಿದೆ.

ನನಗೆ ತಿಳಿದಿರಲಿಲ್ಲ: ತಿರುಪತಿ ರೆಡ್ಡಿ ಪ್ರತಿಕ್ರಿಯೆ

ಕಟ್ಟಡ ತೆರವಿಗೆ ಸಂಬಂಧಿಸಿ ಅಧಿಕಾರಿಗಳು ನೀಡಿರುವ ನೋಟಿಸ್‌ಗೆ ಉತ್ತರ ನೀಡಿರುವ ಎ.ತಿರುಪತಿ ರೆಡ್ಡಿ, 'ಅಮರ ಸೊಸೈಟಿಯಲ್ಲಿ ನಾನು ವಾಸವಾಗಿರುವ ಮನೆಯನ್ನು 2015ರಲ್ಲಿ ಖರೀದಿಸಿದ್ದೇನೆ. ಈ ಮನೆ, ದುರ್ಗಮ್ ಚೆರುವು ಕೆರೆ ಎಫ್‌ಟಿಎಲ್ ವಲಯದಲ್ಲಿ ಬರುತ್ತದೆ ಎಂಬುದು ನನಗೆ ತಿಳಿದಿರಲಿಲ್ಲ' ಎಂದು ಹೇಳಿದ್ದಾರೆ.

'ನನ್ನ ಮನೆಯು ಕೆರೆಗೆ ಸೇರಿದ ಪ್ರದೇಶ ವ್ಯಾಪ್ತಿಯಲ್ಲಿದೆ ಎಂಬುದನ್ನು ಸರ್ಕಾರ ಗುರುತಿಸಿ, ಅಕ್ರಮ ತೆರವು ಕಾರ್ಯಾಚರಣೆ ಭಾಗವಾಗಿ ಕೈಗೊಳ್ಳುವ ಯಾವುದೇ ಕ್ರಮಕ್ಕೆ ನನ್ನ ಆಕ್ಷೇಪವಿಲ್ಲ' ಎಂದು ತಿಳಿಸಿದ್ದಾರೆ.

ಗುಂಡಿಗೆ ಇಳಿದ ಕಾರು: ಪರದಾಡಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಕವಿತಾಳ(ರಾಯಚೂರು ಜಿಲ್ಲೆ): ಪಟ್ಟಣದ ರಸ್ತೆ ಗುಂಡಿಯಲ್ಲಿ ಕಾರು ಸಿಕ್ಕಿ ಹಾಕಿಕೊಂಡ ಪರಿಣಾಮ ಕಾರಿನಲ್ಲಿದ್ದ ಅಧಿಕಾರಿಗಳು ಗುರುವಾರ ಪರದಾಡುವಂತಾಯಿತು.

ರಸ್ತೆ ಗುಂಡಿಗೆ ಇಳಿದ ಕಾರು ಮುಂದೆ ಚಲಿಸದ ಕಾರಣ ಕಾರಿನಲ್ಲಿದ್ದ ಜಿಲ್ಲಾಧಿಕಾರಿ ಕಚೇರಿಯ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಶಫಿಯುದ್ದೀನ್, ಪಟ್ಟಣ ಪಂಚಾಯಿತಿ ಎಂಜಿನಿಯರ್ ಕೃಷ್ಣ ಮತ್ತು ನರಸಮ್ಮ ಕಾರಿನಿಂದ ಇಳಿದು ನಡು ರಸ್ತೆಯಲ್ಲಿಯೇ ನಿಲ್ಲುವಂತಾಯಿತು. ಅಧಿಕಾರಿಗಳ ಅಸಹಾಯಕತೆ ಗಮನಿಸಿ ನೆರವಿಗೆ ಬಂದ ಆಟೊ ಚಾಲಕರು ಮತ್ತು ಸಾರ್ವಜನಿಕರು ಕಾರನ್ನು ಗುಂಡಿಯಿಂದ ಮೇಲೆತ್ತಿದರು.

'ಹದಗೆಟ್ಟ ರಸ್ತೆ ದುರಸ್ತಿ ಬಗ್ಗೆ ಸಾರ್ವಜನಿಕರು ಹಲವು ಬಾರಿ ಮನವಿ ಮಾಡಿದ್ದರೂ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಹೀಗಾಗಿ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಬರುವವರೆಗೆ ಕಾರನ್ನು ತೆಗೆಯುವುದು ಬೇಡ' ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದರು.

ಕವಿತಾಳದಲ್ಲಿ ರಾಜ್ಯ ಹೆದ್ದಾರಿ ಹದಗೆಟ್ಟಿದ್ದು ಗುರುವಾರ ಗುಂಡಿಯಲ್ಲಿ ಸಿಕ್ಕಿಕೊಂಡ ಅಧಿಕಾರಿಗಳ ಕಾರನ್ನು ಸಾರ್ವಜನಿಕರು ಮೇಲೆತ್ತಿದರು

ವಿಭಜಕ ನಿರ್ಮಾಣದಿಂದ ಲಿಂಗಸುಗೂರು ರಾಯಚೂರು ರಾಜ್ಯ ಹೆದ್ದಾರಿ ಕಿರಿದಾಗಿದ್ದು ವಾಹನ ದಟ್ಟಣೆಯಿಂದ ಆಳವಾದ ಗುಂಡಿಗಳು ಬಿದ್ದಿವೆ. ಮಳೆ ನೀರು ನಿಂತ ಪರಿಣಾಮ ರಸ್ತೆಯಲ್ಲಿ ತಗ್ಗು ಕಾಣದೆ ವಾಹನಗಳು ಸಿಕ್ಕಿ ಹಾಕಿಕೊಳ್ಳುತ್ತಿವೆ. ಈಗ ಅಧಿಕಾರಿಗಳಿಗೆ ರಸ್ತೆ ದುಸ್ಥಿತಿ ಅರಿವಿಗೆ ಬಂದಿದ್ದು ಈಗಲಾದರೂ ದುರಸ್ತಿಗೆ ಮುಂದಾಗಬಹುದು ಎಂದು ಸ್ಥಳೀಯರು ಮಾತನಾಡಿಕೊಂಡರು.

'ರಸ್ತೆ ದುರಸ್ತಿ ನಮ್ಮ ವ್ಯಾಪ್ತಿಗೆ ಬರುವುದಿಲ್ಲ. ಗುಂಡಿಯಲ್ಲಿ ನಿಂತ ನೀರನ್ನು ತೆಗೆದು ತಾತ್ಕಾಲಿಕವಾಗಿ ಗುಂಡಿ ಮುಚ್ಚುವಂತೆ ಪಟ್ಟಣ ಪಂಚಾಯಿತಿ ಆರೋಗ್ಯ ನಿರೀಕ್ಷರಿಗೆ ಸೂಚಿಸಲಾಗುವುದು' ಎಂದು ಎಇಇ ಶಫಿಯುದ್ದೀನ್ ತಿಳಿಸಿದರು.

'ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ರಸ್ತೆ ದುರಸ್ತಿಗೆ ಗಮನ ಹರಿಸಬೇಕು' ಎಂದು ಆರೋಗ್ಯ ನಿರೀಕ್ಷಕ ರಾಘವೇಂದ್ರ ತಿಳಿಸಿದರು.

ಪ್ರಾಚ್ಯವಿದ್ಯಾ ಭೂಷಣ ಪ್ರಶಸ್ತಿ ಪ್ರದಾನ

ಡಾ. ಸೂರ್ಯನಾರಾಯಣ ನಾಗೇಂದ್ರ ಭಟ್ಟ ಹಿತ್ಲಳ್ಳಿ ಅವರಿಗೆ ಪ್ರಾಚ್ಯವಿದ್ಯಾ ಭೂಷಣ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೇಂದ್ರ ಸಚಿವ ಗಿರಿರಾಜ್ ಸಿಂಗ್, ಕೇಂದ್ರೀಯ ಸಂಸ್ಕೃತ ವಿವಿ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ, ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿವಿ ಕುಲಪತಿ ಪ್ರೊ. ಮುರಳಿಮನೋಹರ ಪಾಠಕ್, ತಿರುಪತಿ ರಾಷ್ಟ್ರೀಯ ಸಂಸ್ಕೃತ ವಿವಿ ಕುಲಪತಿ ಜಿ. ಎಸ್. ಆರ್. ಕೃಷ್ಣಮೂರ್ತಿ, ಭಾರತೀಯ ಭಾಷಾ ಸಮಿತಿಯ ಅಧ್ಯಕ್ಷ ಚ. ಮೂ. ಕೃಷ್ಣಶಾಸ್ತ್ರಿ ಇದ್ದಾರೆ

ನವದೆಹಲಿ: ಇಲ್ಲಿನ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ, ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯ ಹಾಗೂ ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಸಹಯೋಗದಲ್ಲಿ 'ಉತ್ಕರ್ಷ ಮಹೋತ್ಸವ 2024' ಜರುಗಿತು.

ಸಂಸ್ಕೃತ ಕ್ಷೇತ್ರದಲ್ಲಿ ಗಮನಾರ್ಹ ಸೇವೆ ಸಲ್ಲಿಸಿದ ಹಿರಿಯ ಸಂಶೋಧಕ ಡಾ. ಸೂರ್ಯನಾರಾಯಣ ನಾಗೇಂದ್ರ ಭಟ್ಟ ಹಿತ್ಲಳ್ಳಿ ಸೇರಿ ಐವರಿಗೆ ಕೇಂದ್ರ ಜವಳಿ ಸಚಿವ ಗಿರಿರಾಜ್ ಸಿಂಗ್ ಅವರು ಪ್ರಾಚ್ಯವಿದ್ಯಾ ಭೂಷಣ ಪ್ರಶಸ್ತಿ ನೀಡಿ ಗೌರವಿಸಿದರು.

ವಿದ್ವಾಂಸರಿಗೆ ಪ್ರಾಚ್ಯವಿದ್ಯಾ ಭೂಷಣ ಪ್ರಶಸ್ತಿ ಮತ್ತು ₹1 ಲಕ್ಷ ನಗದು ಬಹುಮಾನ ನೀಡಲು ಮೂರು ಸಂಸ್ಕೃತ ವಿಶ್ವವಿದ್ಯಾಲಯಗಳು ನಿರ್ಧರಿಸಿವೆ.

ವಾಂತಿಭೇದಿ: 70 ವರ್ಷದ ವ್ಯಕ್ತಿ ಸಾವು

ಮಧುಗಿರಿ: ಮೂರು ದಿನದ ದಿನದ ಹಿಂದೆ ಗ್ರಾಮದ ಊಟ ಮಾಡಿದ ನಂತರ ವಾಂತಿಭೇದಿಯಿಂದ ಅಸ್ವಸ್ಥಗೊಂಡು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ತಾಲ್ಲೂಕಿನ ಪುರವರ ಹೋಬಳಿಯ ಮುದ್ದೇನಹಳ್ಳಿ ಗ್ರಾಮದ ವೃದ್ಧರೊಬ್ಬರು ಬುಧವಾರ ರಾತ್ರಿ ಮೃತಪಟ್ಟಿದ್ದಾರೆ.

ತುಮಕೂರು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದ ಮುದ್ದೇನಹಳ್ಳಿ ಗ್ರಾಮದ ತಿಪ್ಪೇರಾಯಣ್ಣ(70) ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಮತ್ತಿಬ್ಬರನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಆಗಸ್ಟ್ 26ರಂದು ಗ್ರಾಮದ ಎರಡು ಮನೆಗಳಲ್ಲಿ ಊಟ ಮಾಡಿ ವಾಂತಿಭೇದಿಯಿಂದ ಅಸ್ವಸ್ಥಗೊಂಡ ಏಳು ಮಂದಿಯನ್ನು ವಿವಿಧ ಆಸ್ಪತ್ರೆಗಳಿಗೆ ಸೇರಿಸಲಾಗಿದೆ.

ತಾಲ್ಲೂಕಿನ ಬುಳ್ಳಸಂದ್ರ ಗ್ರಾಮದಲ್ಲಿ ವಾಂತಿಭೇದಿಯಿಂದ ಅಸ್ವಸ್ಥಗೊಂಡಿದ್ದ 31 ಜನರ ಪೈಕಿ ಮೂವರು ಮೃತಪಟ್ಟ ಘಟನೆ ನಡೆದ ಎರಡು, ಮೂರು ದಿನಗಳಲ್ಲಿಯೇ ತಾಲ್ಲೂಕಿನಲ್ಲಿ ಮತ್ತೊಂದು ಘಟನೆ ಸಂಭವಿಸಿದೆ.

ಹವಾಮಾನ ಬದಲಾವಣೆ ವಿರುದ್ಧ ಹೋರಾಟ: ಸಚಿವ

'ಕಠಿಣ ನಿರ್ಧಾರ: ಪ್ರಜಾಪ್ರಭುತ್ವದಲ್ಲಿ ಅಸಾಧ್ಯ'

ನವದೆಹಲಿ (ಪಿಟಿಐ): 'ಜಾಗತಿಕ ಹವಾಮಾನ ಬದಲಾವಣೆ ಎದುರಿಸಲು ಸರ್ಕಾರ ರೂಪಿಸುವ ಯೋಜನೆಗಳ ಯಶಸ್ಸು ಸಾರ್ವಜನಿಕರ ಬೆಂಬಲವನ್ನು ಅವಲಂಬಿಸಿರುತ್ತದೆ. ಈ ವಿಚಾರದಲ್ಲಿ ಕಠಿಣ ನಿರ್ಧಾರ ತೆಗೆದುಕೊಳ್ಳುವುದು ಪ್ರಜಾಪ್ರಭುತ್ವದಲ್ಲಿ ಸಾಧ್ಯವಿಲ್ಲ' ಎಂದು ಕೇಂದ್ರ ಪರಿಸರ ಖಾತೆ ರಾಜ್ಯ ಸಚಿವ ಕೀರ್ತಿವರ್ಧನ್ ಸಿಂಗ್ ಅವರು ಗುರುವಾರ ತಿಳಿಸಿದರು.

ಭಾರತೀಯ ವಾಣಿಜ್ಯೋದ್ಯಮ ಮಹಾಸಂಘದ (ಅಸೋಚಾಂ)ದಿಂದ ಏರ್ಪಡಿಸಿದ್ದ ಪರಿಸರ ಹಾಗೂ ಇಂಗಾಲ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.


ಕೀರ್ತಿವರ್ಧನ್ ಸಿಂಗ್

'ತಾವು ಪ್ರತಿನಿಧಿಸುವ ಉತ್ತರಪ್ರದೇಶದಲ್ಲಿ ರೈತರು ಸಾಕಷ್ಟು ಸಂತುಷ್ಟರಾಗಿದ್ದಾರೆ ಎಂದು ಉದಾಹರಿಸಿದ ಅವರು, ಮೋಟರ್ ಪಂಪ್ ಮೂಲಕ ರೈತರು ಬೇಕಾದಷ್ಟು ನೀರು ಪಡೆದುಕೊಳ್ಳುತ್ತಿದ್ದಾರೆ' ಎಂದರು.

'ಇತ್ತೀಚೆಗಿನ ಚುನಾವಣೆಗಳಲ್ಲಿ 'ಹವಾಮಾನ ಬದಲಾವಣೆ'ಗೆ ಸಂಬಂಧಿಸಿದಂತೆ ಮತ ಪಡೆಯುವ ಉದ್ದೇಶದಿಂದ ಸಕಾರಾತ್ಮಕವಾಗಿ ಮಾತನಾಡುತ್ತಿದ್ದೇವೆ. ಈಗಂತೂ ಸಾಕಷ್ಟು ಪ್ರಮಾಣದಲ್ಲಿ ನೀರಾವರಿ ವ್ಯವಸ್ಥೆ ಲಭ್ಯವಿದ್ದು, ರೈತರು ಮೋಟರ್ ಪಂಪ್ ಚಾಲೂ ಮಾಡಿ, ಮನೆಗೆ ಹೋಗಿ ಮಲಗುತ್ತಾರೆ. ಬೆಳಿಗ್ಗೆ ಎದ್ದು ಬರುವ ವೇಳೆಗೆ ಅವರ ಜಮೀನಿಗೆ ನೀರು ಹಾಯಿಸುವುದು ಮಾತ್ರವಲ್ಲದೇ, ಪಕ್ಕದ ಜಮೀನಿಗೂ ನೀರು ಹರಿದು ಹೋಗಿರುತ್ತದೆ. ವಾಸ್ತವದಲ್ಲಿ, ನಮ್ಮ ಜಲಸಂಪನ್ಮೂಲಗಳು ವ್ಯರ್ಥವಾಗಿ ಹಾಳಾಗುತ್ತಿರುವ ವೇಳೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಪ್ರೋತ್ಸಾಹಿಸಬೇಕು' ಎಂದು ತಿಳಿಸಿದರು.

ಮಾಲಿನ್ಯ ನಿಯಂತ್ರಣ ನೌಕೆಗೆ ಚಾಲನೆ

ಪಣಜಿ (ಪಿಟಿಐ): ಭಾರತೀಯ ಕೋಸ್ಟ್ ಗಾರ್ಡ್‌ಗಾಗಿ ಗೋವಾ ಶಿಪ್‌ಯಾರ್ಡ್ ಸುಮಾರು ₹2,500 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮಾಲಿನ್ಯ ನಿಯಂತ್ರಣ ನೌಕೆಯನ್ನು ಗುರುವಾರ ಸೇವೆಗೆ ನಿಯೋಜಿಸಲಾಯಿತು.

ಕರ್ನಾಟಕ ಸರ್ಕಾರ GOVERNMENT OF KARNATAKA
ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.
Reg.No:205/1995-96-Recoginzed by Medical Council of India, New Dilhi vide No: MCI-57(3)/79-Med/1912, Dtd.16.04.1979. e-mail-ids:directorbmcrcbellary@gmail.com website: https://vims.karnataka.gov.in
ಸಂ:ಬಿಎಂಸಿಆರ್‌ಸಿ/ಟೆಂಡರ್/ಸಾಮಾನ್ಯ-1/02/2024-25, ದಿನಾಂಕ:27.08.2024
ಇ-ಟೆಂಡರ್ ಅಧಿಸೂಚನೆ
ಬಿಎಂಸಿಆರ್‌ಸಿ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಸರ್ಜಿಕಲ್ ಡಿಸ್ಪೋಜಲ್ಸ್ ಗಳನ್ನು ಒಂದು ವರ್ಷದ ಅವಧಿಗೆ ಧರಗುತ್ತಿಗೆ ಆಧಾರ ಮೇಲೆ ಸರಬರಾಜು ಮಾಡಲು ಅರ್ಹ ಟೆಂಡರ್ ದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ- 1999-2000ರಂತೆ ದ್ವಿ-ಬಿಡ್ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಪೋರ್ಟಲ್ https://kppp.karnataka.gov.in ಮೂಲಕ ಮರು ಇ-ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಆಸಕ್ತ ಬಿಡ್ ದಾರರು ಮೇಲಿನ ಪೋರ್ಟಲ್ ನಲ್ಲಿ ಟೆಂಡರನ್ನು ದಿನಾಂಕ:12/09/2024 ಸಂಜೆ 5.00 ಗಂಟೆಯ ಒಳಗಾಗಿ ಸಲ್ಲಿಸಲು ಕೋರಿದೆ. ಟೆಂಡರಿನ ಅಂದಾಜು ಮೊತ್ತ ರೂ.166.38 ಲಕ್ಷಗಳಿರುತ್ತವೆ. ಹೆಚ್ಚಿನ ವಿವರಗಳನ್ನು ಮೇಲಿನ ವೆಬ್ ಸೈಟ್ www.vims.karnataka.gov.in. ನಲ್ಲಿ ಪಡೆಯಬಹುದಾಗಿದೆ.
ಸಹಿ/- ಡೀನ್ & ನಿರ್ದೇಶಕರು, ಬಿಎಂಸಿಆರ್‌ಸಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/393/ಕೆಎಸ್ಎಂಸಿಎ/2024-25

ಕರ್ನಾಟಕ ಸರ್ಕಾರ
ಕೃಷಿ ಇಲಾಖೆ, ಕೊಪ್ಪಳ
ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಜಿಲ್ಲಾಡಳಿತ ಭವನ, ಕೊಪ್ಪಳ
ದೂ.-08539-221633 ಫ್ಯಾಕ್ಸ್ : 220226
ಕ್ರಸಂ/ಜಕೃನಿಕೊ/ಸಿ-1/ಟೆಂಡರ್/AVP/03/2024-25/341 ದಿನಾಂಕ:29/08/2024
ಟೆಂಡರ್ ಪ್ರಕಟಣೆ
ಕೊಪ್ಪಳ ಜಂಟಿ ಕೃಷಿ ನಿರ್ದೇಶಕರ ಕಛೇರಿಯ ಅಧೀನದಲ್ಲಿರುವ 2024-25ನೇ ಸಾಲಿಗೆ ಖಾಲಿ ಹುದ್ದೆಗೆ ಎದುರಾಗಿ(AVP) ಹೊರಗುತ್ತಿಗೆ ಸಂಪನ್ಮೂಲ ಏಜನ್ಸಿಯವರಿಂದ ಬೆರಳಚ್ಚುಗಾರರು(DEO)-7, ವಾಹನ ಚಾಲಕರು-2, "ಡಿ" ಗ್ರೂಪ್-8, ಪ್ರಯೋಗಶಾಲ ಪರಿಚಾರಕ-1 ಮತ್ತು ಬಾಣಸಿಗರು-1 ಒಟ್ಟು-19 ಸಿಬ್ಬಂದಿ ಸೇವೆಯನ್ನು ಪಡೆಯುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಗಳಲ್ಲಿ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ) 1999 ನಿಯಮಗಳು 2000 ರ ಪ್ರಕಾರ e-PROCUREMENT ಒಂದು ವರ್ಷದ ಅವಧಿಗೆ ಅರ್ಹ ಹೊರ ಸಂಪನ್ಮೂಲ ಏಜನ್ಸಿಯವರಿಂದ ಟೆಂಡರ್ ಕರೆಯಲಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು https://kppp.karnataka.gov.in ವೆಬ್ ಸೈಟನ್ನು ಸಂಪರ್ಕಿಸಲು ಕೋರಲಾಗಿದೆ. ಟೆಂಡರ್ ಪ್ರಕಟಣೆ ದಿನಾಂಕ: 29.08.2024. ಟೆಂಡರ್ ವಾರ್ಷಿಕ ಅಂದಾಜು ಮೊತ್ತ: 51,38,133/-ಇ.ಎಮ್.ಡಿ ಮೊತ್ತ: ರೂ. 1,00,000/- ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ: 29.08.2024. ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ:09.09.2024 ಸಂಜೆ 05.00 ಗಂಟೆಗೆ. ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: ಜಂಟಿ ಕೃಷಿ ನಿರ್ದೇಶಕರ ಕಛೇರಿ, ಕೊಪ್ಪಳ-583231 ದಿನಾಂಕ:12.09.2024 ಬೆಳಿಗ್ಗೆ: 11.00 ಗಂಟೆಗೆ. ಹಣಕಾಸಿನ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ: ಜಂಟಿ ಕೃಷಿ ನಿರ್ದೇಶಕರ ಕಛೇರಿ, ಕೊಪ್ಪಳ-583231 ದಿನಾಂಕ:17.09.2024 ಬೆಳಿಗ್ಗೆ: 11.00 ಗಂಟೆಗೆ.
ಸಹಿ/- ಜಂಟಿ ಕೃಷಿ ನಿರ್ದೇಶಕರು ಕೊಪ್ಪಳ
ವಾ.ಸಾ.ಇ/ಕೊಪ್ಪಳ/281/ದೇಶಪಾಂಡೆಪಬ್ಲಿಸಿಟಿ/2024-25

ಕರ್ನಾಟಕ ಸರ್ಕಾರ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ನಿರ್ದೇಶಕರ ಕಛೇರಿ,
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು
ಸಿಎ 03 ,ಖಜಾನೆ ಬಡಾವಣೆ, ಕೇರ್ಗಳ್ಳಿ, ಮೈಸೂರು - 570026.
ದೂ.: 0821-2560275, ಇಮೇಲ್: trimysore@gmail.com
ಪ್ರಕಟಣೆ
"ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, #ಸಿಎ 03, ನ್ಯಾಯಾಂಗ ಬಡಾವಣೆ, ಕೇರ್ಗಳ್ಳಿ, ಮೈಸೂರು ಕಛೇರಿಯಿಂದ ಅಧಿಕೃತ ಹೊರ ಗುತ್ತಿಗೆ ಏಜೆನ್ಸಿ ಮೂಲಕ ಹೊರ ಸಂಪನ್ಮೂಲ ಸಿಬ್ಬಂದಿ ಸೇವೆಯನ್ನು ಪಡೆಯಲು https:// https://kppp.karnataka.gov.in ಪೋರ್ಟಲ್ ನಲ್ಲಿ ಕೆಳಕಂಡ ವಿವರದಂತೆ ಇ-ಟೆಂಡರ್ ಪ್ರಕಟಣೆಯನ್ನು ಹೊರಡಿಸಿರುತ್ತಾರೆ. ಆಸಕ್ತ ಸಂಸ್ಥೆಗಳು ನಿಯಮಾನುಸಾರ ಟೆಂಡರ್ ನಲ್ಲಿ ಭಾಗವಹಿಸಬಹುದಾಗಿರುತ್ತದೆ."
1) ಟೆಂಡರ್ ಪ್ರಕಟಣೆ ದಿ: 27.08.2024 2) ಟೆಂಡರ್ ಮೊತ್ತ ರೂ. 175.00 ಲಕ್ಷಗಳು. 3) ಪ್ರಿ-ಬಿಡ್ ಸಭೆ ಸ್ಥಳ & ಸಮಯ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ಕಛೇರಿಯ ಸಭಾಂಗಣ ದಿ: 02.09.2024 ಬೆಳಿಗ್ಗೆ 11:30ಕ್ಕೆ. 4) ಟೆಂಡರ್ ಸಲ್ಲಿಸಲು ಅಂತಿಮ ದಿ: 09.09.2024 ಸಂಜೆ 4:00 ಗಂಟೆ. 5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ & ಸಮಯ ದಿ: 11.09.2024 ಬೆಳಿಗ್ಗೆ 11:00 ಗಂಟೆ. 6) ಆರ್ಥಿಕ ಲಕೋಟೆ ತೆರೆಯುವ ದಿನಾಂಕ & ಸಮಯ ಪೋರ್ಟಲ್ ನಲ್ಲಿ ಮಾಹಿತಿ ಪಡೆಯುವುದು
ಹೆಚ್ಚಿನ ಮಾಹಿತಿಗೆ ಕಛೇರಿ ಅವಧಿಯಲ್ಲಿ ಭೇಟಿ ನೀಡಿ ಅಥವಾ ಕಛೇರಿ ದೂರವಾಣಿ: 0821-2560275 ಗೆ ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.
ಸಹಿ/- ಉಪನಿರ್ದೇಶಕರು,
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು
DIPR/DDMYS-477/KSMCA-318/2024-25

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ರಾಜ್ಯ ಸರ್ಕಾರದ ಒಂದು ಉದ್ದಿಮೆ)
ನಂ. 8 "ಸಂಪರ್ಕ ಸೌಧ" ಡಾ॥ ರಾಜ್‌ಕುಮಾರ್ ರಸ್ತೆ ರಾಜಾಜಿನಗರ 1ನೇ ಬ್ಲಾಕ್ ಬೆಂಗಳೂರು-560010
ಟೆಲಿಫ್ಯಾಕ್ಸ್ : 080-22024000 ಇ-ಮೇಲ್: cekrdcl@gmail.com : ವೆಬ್‌ಸೈಟ್ : www.krdcl.in
ನಂ. ಕೆಆರ್‌ಡಿಸಿಎಲ್/ಐಎಫ್‌ಬಿ/ಆರ್‌ಎಫ್‌ಪಿ/2024-25/05 ದಿನಾಂಕ: 27.08.2024
ಪ್ರಸ್ತಾವನೆ ಕೋರಿಕೆಗಾಗಿ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಆಧಾರದ ಮೇಲೆ)
1. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (KRDCL) ದಲ್ಲಿ ಗುತ್ತಿಗೆ ಮತ್ತು ವಿವಾದ ನಿರ್ವಹಣೆಗಾಗಿ ಸಲಹಾ ಸೇವೆಗಳ ಆಯ್ಕೆಯನ್ನು ಒದಗಿಸಲು ಪ್ರತಿಷ್ಠಿತ ಸಲಹಾ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಿದೆ.
ಸೇವೆಯ ಹೆಸರು : ಕೆಆರ್‌ಡಿಸಿಎಲ್‌ನ ಅನುಷ್ಠಾನ ಮತ್ತು ಪ್ರಸ್ತಾವಿತ ಗುತ್ತಿಗೆಗಳಲ್ಲಿ ಸಲಹಾ ಸೇವೆಯನ್ನು ಒದಗಿಸುವುದು ಮತ್ತು ಪಿಪಿಪಿ-ವಿಜಿಎಫ್/ವರ್ಷಾಶನ/ ಹೆಚ್‌ಎಎಂ ಗುತ್ತಿಗೆ, ವಿವಾದ ನಿರ್ವಹಣೆ ಮತ್ತು ವಿಷಯಗಳನ್ನು ಇತ್ಯರ್ಥಗೊಳಿಸುವುದು.
ಸೇವೆಯ ಅವಧಿ: 30 ತಿಂಗಳು
2. ಆಸಕ್ತ ಅರ್ಜಿದಾರರು ಬಿಡ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ www.kpp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಬಿಡ್‌ಗಳನ್ನು ಮತ್ತು ಇಎಂಡಿಯನ್ನು (ವಿದ್ಯುನ್ಮಾನವಾಗಿ) ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸಲ್ಲಿಸಬೇಕು.
3. ಗುಣಮಟ್ಟ ಮತ್ತು ದರ ಆಧಾರಿತ ವಿಧಾನದ (ಕ್ಯುಸಿಬಿಎಸ್) ಮೂಲಕ ಆಯ್ಕೆ ನಡೆಸಲಾಗುವುದು.
4. ವಿವಿಧ ಚಟುವಟಿಕೆಗಳ ಮಾರ್ಗಸೂಚಿ ಈ ರೀತಿಯಾಗಿದೆ.
ಎ) ಪೂರ್ವಭಾವಿ ಸಭೆ : 02.09.2024ರಂದು ಮಧ್ಯಾಹ್ನ 03:30 ಗಂಟೆಗೆ ಬೆಂಗಳೂರಿನ ಈ ಮೇಲಿನ ವಿಳಾಸದ ಕೆಆರ್‌ಡಿಸಿಎಲ್ ಕಚೇರಿಯ ಬೋರ್ಡ್ ರೂಮ್‌ನಲ್ಲಿ ನಡೆಯಲಿದೆ.
ಬಿ) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 10.09.2024 17:30 ರವರೆಗೆ.
ಸಿ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 12.09.2024ರಂದು ಬೆಳಿಗ್ಗೆ 11.30 ಗಂಟೆಗೆ.
*ಇನ್ನು ಮುಂದೆ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ, ಅದನ್ನು ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ಕೆಪಿಪಿ ಪೋರ್ಟಲ್ ಮತ್ತು ವೆಬ್‌ಸೈಟ್ http://www.krdcl.in ರಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.
ಸಹಿ/-
ಮುಖ್ಯ ಅಭಿಯಂತರರು
ಕೆ.ಆರ್.ಡಿ.ಸಿ.ಎಲ್, ಬೆಂಗಳೂರು
DIPR/CP/YC/1721/2024-25

ನಗರಸಭಾ ಕಾರ್ಯಾಲಯ ಚನ್ನಪಟ್ಟಣ
ರಾಮನಗರ ಜಿಲ್ಲೆ - 562 160. ದೂ. : 080-2725 1235.
ಇಮೇಲ್ : itstaff_ulb_channapatna@yahoo.co.in
ವೆಬ್‌ಸೈಟ್ : www.channapatnacity.mrc.gov.in
ಸಂಖ್ಯೆ : ನ.ಸ.ಚ./ಕಾ.ವಿ./ಟೆಂಡರ್/ಸಿಆರ್/09/2024-25 ದಿನಾಂಕ : 23-08-2024
ಟೆಂಡರ್ ಪ್ರಕಟಣೆ
2020-21 ರಿಂದ 2022-23 ನೇ ಸಾಲಿನ 15 ನೇ ಹಣಕಾಸು (ಮುಕ್ತನಿಧಿ ಮತ್ತು ನಿರ್ಬಂಧಿತ) ಯೋಜನೆ ಉಳಿತಾಯ ಅನುದಾನ, 2024-25 ನೇ ಸಾಲಿನ ನಗರಸಭಾ ನಿಧಿ (ಎಸ್‌ಸಿಎಸ್‌ಪಿ), 2023-24 ನೇ ಸಾಲಿನ ನಗರಸಭಾ ನಿಧಿ, 2024-25 ನೇ ಸಾಲಿನ ನಗರಸಭಾ ನಿಧಿ (ಟಿ.ಎಸ್.ಪಿ.) ಮತ್ತು 2024-25 ನೇ ಸಾಲಿನ ನಗರಸಭಾ ನಿಧಿ (7.25%) ರ ಅನುದಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000 ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ, ಮತ್ತು ಕೆ.ಪಿ.ಪಿ.ಪಿ., ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಸಿವಿಲ್ ಮತ್ತು ಎಲೆಕ್ಟ್ರೀಕಲ್ ಗುತ್ತಿಗೆದಾರರಿಂದ ದ್ವಿ ಲಕೋಟೆಯಲ್ಲಿ (2 Cover) www.kppp.karnataka.gov.in ಮೂಲಕ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು.
ಗುತ್ತಿಗೆದಾರರು ತಮ್ಮ ಐಟಂವಾರು ಟೆಂಡರ್‌ಗಳನ್ನು ಕೆಡಬ್ಲ್ಯೂ - 1 & 2 ರ ಪ್ರಮಾಣಿತ ಟೆಂಡರ್ ದಸ್ತಾವೇಜಿನ ನಿಯಮಗಳಂತೆ ದಿನಾಂಕ 09-09-2024 ರ ಸಂಜೆ 5.30 ಗಂಟೆಯೊಳಗೆ ಪೋರ್ಟಲ್‌ನಲ್ಲಿ ಸಲ್ಲಿಸತಕ್ಕದ್ದು. ಇ.ಎಂ.ಡಿ. ಮೊತ್ತ ಕೆ.ಪಿ.ಪಿ. ಪೋರ್ಟಲ್ ರೀತ್ಯಾ ಇರುತ್ತದೆ. ಪೋರ್ಟಲ್‌ನಲ್ಲಿ ಸ್ವೀಕೃತಿಯಾಗಿರುವ ಟೆಂಡರ್‌ಗಳನ್ನು ದಿನಾಂಕ : 11-09-2024 ರ ಬೆಳಿಗ್ಗೆ 10.30 ಗಂಟೆಗೆ ತೆರೆಯಲಾಗುವುದು. ಇಂಡೆಂಟ್ ಸಂಖ್ಯೆ : 1)18687/CALL-2, 2) 18688/CALL-2, 3) 18689/CALL-2, 4) 18690/CALL-2, 5) 18691/CALL-2, 6) 18693/CALL-2, 7) 18695/CALL-2, 8) 18696/CALL-2, 9) 18698/CALL-2 , 10) 27917, 11) 18699 12) 18700.
ಹೆಚ್ಚಿನ ವಿವರಗಳಿಗೆ ಚನ್ನಪಟ್ಟಣ ನಗರಸಭೆಯ ತಾಂತ್ರಿಕ ಶಾಖೆಯಲ್ಲಿ ಹಾಗೂ ನಗರಸಭೆಯ ವೆಬ್‌ಸೈಟ್ : www.channapatnacity.mrc.gov.in ರ ಟೆಂಡರ್ ವಿಭಾಗದಲ್ಲಿ ವಿವರವಾದ ಟೆಂಡರ್ ಪ್ರಕಟಣೆಯನ್ನು ವೀಕ್ಷಿಸಬಹುದಾಗಿದೆ.
ಸಹಿ/- ಪೌರಾಯುಕ್ತರು,
ನಗರಸಭೆ, ಚನ್ನಪಟ್ಟಣ.
ಡಿಐಪಿಆರ್/ರಾಮನಗರ/278/ಮಣಿಪಾಲ್/2024-25

ಬೆಂಗಳೂರು ಉತ್ತರ ವಿಶ್ವವಿದ್ಯಾಲಯ
ಶ್ರೀ ದೇವರಾಜ ಅರಸ್ ಬಡಾವಣೆ, ಟಮಕ, ಕೋಲಾರ-563 103. Email:bnuregistrar@karnataka.gov.in
website:www.bnu.karnataka.gov.in
ಸಂಖ್ಯೆ: ಬೆಂ.ಉ.ವಿ /ಶೈಕ್ಷಣಿಕ/ ಸ್ನಾತಕೋತ್ತರ ಪ್ರವೇಶಾತಿ/ /2024-25 ದಿನಾಂಕ:27.08.2024
ಸ್ನಾತಕೋತ್ತರ ಪದವಿ ಪ್ರವೇಶಾತಿ ಅಧಿಸೂಚನೆ 2024-25
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಮಂಗಸಂದ್ರ, ಕೋಲಾರ ಮತ್ತು ವಿಶ್ವವಿದ್ಯಾಲಯದ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ಲಭ್ಯವಿರುವ ಈ ಕೆಳಕಂಡ ಸ್ನಾತಕೋತ್ತರ ಪದವಿ ಕೋರ್ಸುಗಳ ಪ್ರವೇಶಾತಿಗಳಿಗೆ 2024-25ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರ, ಮಂಗಸಂದ್ರ, ಕೋಲಾರ. ಇಲ್ಲಿ ಲಭ್ಯವಿರುವ ಸ್ನಾತಕೋತ್ತರ ಕೋರ್ಸುಗಳ ವಿವರ:
ಅ. ಕಲಾ ನಿಕಾಯ: ಎಂ.ಎ- ಕನ್ನಡ, ಇಂಗ್ಲೀಷ್, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ & ಸಮೂಹ ಸಂವಹನ ಮತ್ತು ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ).
ಆ. ವಿಜ್ಞಾನ ನಿಕಾಯ: ಎಂ.ಎಸ್ಸಿ- ಗಣಿತಶಾಸ್ತ್ರ, ಗಣಕವಿಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ (ಎಂ.ಎಲ್.ಐ.ಎಸ್ಸಿ.), ಸಸ್ಯಶಾಸ್ತ್ರ, ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ.
ಇ. ವಾಣಿಜ್ಯ ನಿಕಾಯ: ಎಂ.ಕಾಂ.
ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಸಂಯೋಜಿತ ಕಾಲೇಜುಗಳಲ್ಲಿ ಇರುವ ಸ್ನಾತಕೋತ್ತರ ಕೋರ್ಸುಗಳ ವಿವರ:
ಅ ಕಲಾ ನಿಕಾಯ: ಎಂ.ಎ-ಕನ್ನಡ, ಇಂಗ್ಲೀಷ್, ಇತಿಹಾಸ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ & ಸಮೂಹ ಸಂವಹನ, ಮತ್ತು ಸಮಾಜ ಕಾರ್ಯ(ಎಂ.ಎಸ್.ಡಬ್ಲ್ಯೂ)
ಆ ವಿಜ್ಞಾನ ನಿಕಾಯ: ಎಂ.ಎಸ್ಸಿ- ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಪ್ರಾಣಿಶಾಸ್ತ್ರ, ಗಣಕ ವಿಜ್ಞಾನ, ಜೀವ ರಸಾಯನಶಾಸ್ತ್ರ, ಜೀವತಂತ್ರಜ್ಞಾನ, ಸೂಕ್ಷ್ಮಜೀವಶಾಸ್ತ್ರ, ಆಡಿಯೋಲಜಿ, ಸ್ಪೀಚ್ ಲಾಂಗ್ವೇಜ್ ಪೆಥಾಲಜಿ, ಮನಃಶಾಸ್ತ್ರ ಮತ್ತು ಕೌನ್ಸೆಲಿಂಗ್ ಸೈಕಾಲಜಿ.
ಇ ವಾಣಿಜ್ಯ ಮತ್ತು ನಿರ್ವಹಣಾ ನಿಕಾಯ : ಎಂ.ಕಾಂ. (ಈ) ಶಿಕ್ಷಣ ನಿಕಾಯ : ಎಂ.ಇಡಿ. (ಶಿಕ್ಷಣ) (ಉ) ಎಂ.ಎ : ಶಿಕ್ಷಣ
ಅರ್ಜಿಯನ್ನು UUCMS ಆನ್‌ಲೈನ್ ಪೋರ್ಟಲ್ ಮೂಲಕ ಸಲ್ಲಿಸಲು ಮಾರ್ಗಸೂಚಿಗಳು:
1. ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸ ಬಯಸುವ ಅರ್ಹ ಅಭ್ಯರ್ಥಿಗಳು UUCMS Online portal https://uucms.Karanataka.gov.in./Login/Index ಮೂಲಕವೇ ಅರ್ಜಿಗಳನ್ನು ಸಲ್ಲಿಸುವುದು.
2. ಒಂದಕ್ಕಿಂತ ಹೆಚ್ಚು ಸ್ನಾತಕೋತ್ತರ ಕೋರ್ಸುಗಳಿಗೆ ಪ್ರವೇಶ ಬಯಸಿದ್ದಲ್ಲಿ, ಪ್ರತಿಯೊಂದು ಸ್ನಾತಕೋತ್ತರ ಕೋರ್ಸಿಗೆ ಪ್ರತ್ಯೇಕ ಅರ್ಜಿ ಸಲ್ಲಿಸಬೇಕು. ಅಭ್ಯರ್ಥಿಗಳು ಆಯಾ ಕೋರ್ಸಿನ ಅರ್ಜಿಗಳ ಜೊತೆ ಅರ್ಜಿ ಶುಲ್ಕವನ್ನು ಪ್ರತ್ಯೇಕವಾಗಿ ಪಾವತಿಸಿ ಸಲ್ಲಿಸತಕ್ಕದ್ದು.
3. ಅರ್ಜಿ ಶುಲ್ಕ ರೂ.260/- ಗಳನ್ನು (ಪರಿಶಿಷ್ಟ ಜಾತಿ/ ಪಂಗಡ ಹಾಗೂ ಪ್ರವರ್ಗ-1, ವಿಶೇಷ ಚೇತನ, ತೃತೀಯ ಲಿಂಗಿಗಳಿಗೆ ರೂ. 130/- ಮಾತ್ರ) ಆನ್-ಲೈನ್ ಮೂಲಕವೇ uucms Payment link ಮೂಲಕ ಪಾವತಿಸಬೇಕು.
4. ಪ್ರವೇಶಾತಿಗೆ ಸಂಬಂಧಿಸಿದ ಅರ್ಹತಾ ಮಾನದಂಡಗಳು, ನಿಯಮಗಳು, ಸೀಟ್ ಮಾಟ್ರಿಕ್ಸ್, ಶುಲ್ಕದ ಮಾಹಿತಿ ಮತ್ತು ಇತರೆ ಮಾಹಿತಿಗಳನ್ನು ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ವೆಬ್‌ಸೈಟ್ www.bnu.karnataka.gov.in ಇಲ್ಲಿ ನೋಡಬಹುದು.
5. 2024-25ನೇ ಸಾಲಿಗೆ ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭದ ದಿನಾಂಕ: 28.08.2024, ಸ್ನಾತಕೋತ್ತರ ಪದವಿ ಕೋರ್ಸುಗಳಿಗೆ ದಂಡ ಶುಲ್ಕವಿಲ್ಲದೆ ಅರ್ಜಿಗಳನ್ನು ಸಲ್ಲಿಸಲು 09.09.2024 ಕೊನೆಯ ದಿನಾಂಕವಾಗಿರುತ್ತದೆ ರೂ.200/- ಗಳ ದಂಡ ಶುಲ್ಕದೊಂದಿಗೆ 11.09.2024 ರವರೆಗೆ ಹಾಗೂ ಮುದ್ರಿತ ಅರ್ಜಿಗಳನ್ನು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಕೊನೆಯ ದಿನಾಂಕ; 12.09.2024.
6. UUCMS ಆನ್‌ಲೈನ್ ಮೂಲಕ ಸಲ್ಲಿಸಿರುವ ಅರ್ಜಿಗಳನ್ನು ಮಾತ್ರ ಸೀಟುಗಳ ಆಯ್ಕೆಗಾಗಿ ಪರಿಗಣಿಸಲಾಗುವುದು.
7. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು: 6364710762, 8553658762, 9071078023 & 7892087298 (UUCMS).
ಸಹಿ/-
ಕುಲಸಚಿವರು
ಬೆಂಗಳೂರು ಉತ್ತರ ವಿಶ್ವವಿದ್ಯಾಲಯ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:200/ಕೆಎಸ್‌ಎಂ.ಸಿ.ಎ/2024-25

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ತುಮಕೂರು.
ದೂರವಾಣಿ:0816-2281105 Email:eemitmk@gmail.com
ಐ.ಎಫ್.ಟಿ ಸಂಖ್ಯೆ.02/2024-25(ಟರ್ನ್‌ಕೀ ಆಧಾರದಲ್ಲಿ) (ಎರಡು ಹಂತದಲ್ಲಿ) ದಿನಾಂಕ: 26.08.2024
ಪರ್ವ ಅರ್ಹತೆ ಅಲ್ಪಾವಧಿ ಟೆಂಡರ್ ಪ್ರಕಟಣೆ ದಿನಾಂಕ: 26.08.2024
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ತುಮಕೂರು ವ್ಯಾಪ್ತಿಯಲ್ಲಿ 2024-25 ನೇ ಸಾಲಿನ ಲೆಕ್ಕ ಶೀರ್ಷಿಕೆ: 4702-00-101-3-01-139 - ಏತ ನೀರಾವರಿ ಯೋಜನೆಗಳು (ಪ್ರಧಾನ ಕಾಮಗಾರಿಗಳು) ಅಡಿಯಲ್ಲಿ ಅನುಮೋದನೆಗೊಂಡಿರುವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕೆ.ಪಿ.ಪಿ.ಪಿ ಪೋರ್ಟಲ್ ಅಡಿಯಲ್ಲಿ ಟರ್ನ್‌ಕೀ ಆಧಾರಲ್ಲಿ ಟೆಂಡರ್‌ನ್ನು ಈ ಕಛೇರಿ ಟೆಂಡರು ಪ್ರಕಟಣೆ ಸಂಖ್ಯೆ: 02/2024-25, ದಿ: 26-08-2024 ರಂದು ಆಹ್ವಾನಿಸಲಾಗಿದೆ. ಟೆಂಡರು ಪ್ರಕ್ರಿಯೆ ದಿನಾಂಕ ಮತ್ತು ವಿವರಗಳನ್ನು ಟೆಂಡರ್‌ನ ನಿಗಧಿತ ನಮೂನೆಯಲ್ಲಿ ವೆಬ್‌ಸೈಟ್ https://kppp.karnataka.gov.in/ ನಲ್ಲಿ ಅವಶ್ಯಕ ಮಾಹಿತಿಗಳೊಂದಿಗೆ, ಅರ್ಜಿ ಶುಲ್ಕದೊಂದಿಗೆ ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರು ಪ್ರಕ್ರಿಯೆಯ ದಿನಾಂಕಗಳು ಈ ಕೆಳಕಂಡಂತಿವೆ:
ಕಾಮಗಾರಿಯ ಹೆಸರು: 1) ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕಿನಲ್ಲಿ ಅಂತರ್ಜಲ ಅಭಿವೃದ್ಧಿ ಪಡಿಸುವ ಸಲುವಾಗಿ ಎತ್ತಿನಹೊಳೆ ಯೋಜನೆಯ ಮಧುಗಿರಿ ಗುರುತ್ವಾ ಕಾಲುವೆಯಿಂದ 45 ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿ. 2) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನಲ್ಲಿ ಅಂತರ್ಜಲ ಅಭಿವೃದ್ಧಿ ಪಡಿಸುವ ಸಲುವಾಗಿ ಎತ್ತಿನಹೊಳೆ ಯೋಜನೆಯ ಮಧುಗಿರಿ ಗುರುತ್ವಾ ಕಾಲುವೆಯಿಂದ 62 ಕೆರೆಗಳಿಗೆ ನೀರನ್ನು ತುಂಬಿಸುವ ಕಾಮಗಾರಿ.
1. ಟೆಂಡರ್ ಪ್ರಕಟಣೆಯನ್ನು ದಿನಾಂಕ: 30-08-2024 ರಂದು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು. 2. ಪ್ರಿಬಿಡ್ ಮೀಟಿಂಗ್‌ನ್ನು ದಿನಾಂಕ: 09-09-2024 ಬೆಳಗ್ಗೆ 11.00 ಗಂಟೆಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವೃತ್ತ, ಬೆಂಗಳೂರುರವರ ಕಛೇರಿಯಲ್ಲಿ ನಡೆಸಲಾಗುವುದು. 3. ಅವಶ್ಯ ಟೆಂಡರ್ ಮಾಹಿತಿ/ಸ್ಪಷ್ಟೀಕರಣವನ್ನು ಪಡೆಯಲು ದಿನಾಂಕ: 09-09-2024 ಸಾಯಂಕಾಲ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 4. ಗುತ್ತಿಗೆದಾರರಿಂದ ಟೆಂಡರ್‌ನ್ನು "ಕೆ.ಪಿ.ಪಿ.ಪಿ" ಪೋರ್ಟಲ್ ಮೂಲಕ ದಿನಾಂಕ: 19-09-2024 ಸಾಯಂಕಾಲ 4.00 ಗಂಟೆಯವರೆಗೆ ಸ್ವೀಕರಿಸಲಾಗುವುದು. 5. ತಾಂತ್ರಿಕ ಬಿಡ್ಡನ್ನು ದಿನಾಂಕ: 20-09-2024 ಸಾಯಂಕಾಲ 4.05 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಅಥವಾ ಮೇಲೆ ತಿಳಿಸಿದ ವೆಬ್ ಸೈಟ್ ಮೂಲಕ ಪಡೆಯಬಹುದಾಗಿದೆ.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂ.ಅ ವಿಭಾಗ, ತುಮಕೂರು.
DIPR/TUM/285/KSMCA/2024-25

❦ ಸುಭಾಷಿತ ❦

ಖಾಲಿ ಜೇಬು ಬದುಕಿನಲ್ಲಿ ನಿಮಗೆ ಲಕ್ಷಾಂತರ ಪಾಠಗಳನ್ನು ಕಲಿಸುತ್ತದೆ, ಆದರೆ ತುಂಬಿದ ಜೇಬು ಲಕ್ಷಾಂತರ ಮಾರ್ಗಗಳಲ್ಲಿ ನಿಮ್ಮನ್ನು ಹಾಳುಮಾಡುತ್ತದೆ.

-ಎ.ಪಿ.ಜೆ. ಅಬ್ದುಲ್ ಕಲಾಂ

ಕವಿತಾಗೆ ಜಾಮೀನು: ಕಾರ್ಯಾಂಗದ ಅತಿಗೆ ಕೋರ್ಟ್ ಮಿತಿ

ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷದ ನಾಯಕಿ ಕೆ. ಕವಿತಾ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿರುವುದು ಹಾಗೂ ಜಾಮೀನು ನೀಡುವ ಸಂದರ್ಭದಲ್ಲಿ ಆಡಿರುವ ಮಾತುಗಳು ಬಹಳ ಮಹತ್ವ ಪಡೆದುಕೊಳ್ಳುತ್ತವೆ. ನಾಗರಿಕರ ಹಕ್ಕುಗಳ ವಿಚಾರವಾಗಿ ಕೋರ್ಟ್ ಈಚೆಗೆ ಆಡಿರುವ ಮಾತುಗಳಿಗೆ ಅನುಗುಣವಾಗಿ ಈ ಮಾತುಗಳು ಕೂಡ ಇವೆ. ಪ್ರಜಾತಂತ್ರದ ಜೀವಸೆಲೆ ಆಗಿರುವ ಹಕ್ಕುಗಳ ಪೈಕಿ ಅತ್ಯಂತ ಪ್ರಮುಖವಾದುದು ಎಂಬುದನ್ನು ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಹೇಳಿದೆ. ನಾಗರಿಕರ ವೈಯಕ್ತಿಕ ಸ್ವಾತಂತ್ರ್ಯವನ್ನು ಕಾರ್ಯಾಂಗವು ತರ್ಕರಹಿತವಾಗಿ, ತನ್ನಿಷ್ಟದಂತೆ ಕಿತ್ತುಕೊಳ್ಳಲು ಅವಕಾಶ ಇಲ್ಲ ಎಂದು ಕೂಡ ಕೋರ್ಟ್ ಹಲವು ಬಾರಿ ಸ್ಪಷ್ಟಪಡಿಸಿದೆ. ದೆಹಲಿಯ ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕವಿತಾ ಅವರನ್ನು ಮಾರ್ಚ್ 15ರಂದು ಬಂಧಿಸಲಾಗಿತ್ತು, ಆ ದಿನದಿಂದ ಅವರು ಜೈಲಿನಲ್ಲಿದ್ದರು. ಸಿಬಿಐ ಹಾಗೂ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಕವಿತಾ ಅವರ ವಿರುದ್ಧ ಹೊರಿಸಿದ ಆರೋಪಗಳಿಗೆ ಸಂಬಂಧಿಸಿದಂತೆಯೂ ಸುಪ್ರೀಂ ಕೋರ್ಟ್ ಕೆಲವು ಮಾತುಗಳನ್ನು ಆಡಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಉಪಮುಖ್ಯಮಂತ್ರಿಯಾಗಿದ್ದ ಮನೀಶ್ ಸಿಸೋಡಿಯಾ ವಿರುದ್ಧವೂ ಈ ತನಿಖಾ ಸಂಸ್ಥೆಗಳು ಆರೋಪಗಳನ್ನು ಹೊರಿಸಿವೆ. ಸಿಸೋಡಿಯಾ ಅವರಿಗೆ ಕೋರ್ಟ್ ಈಚೆಗೆ ಜಾಮೀನು ನೀಡಿದೆ. ಕೋರ್ಟ್ ಮಾತುಗಳು ಈ ತನಿಖಾ ಸಂಸ್ಥೆಗಳ ಕಾರ್ಯಗಳ ಬಗ್ಗೆ, ಅವು ಅನುಸರಿಸುತ್ತಿರುವ ತನಿಖಾ ಪದ್ಧತಿಯ ಬಗ್ಗೆ ಹಾಗೂ ಅವು ಸಂಗ್ರಹಿಸುವ ಸಾಕ್ಷ್ಯಗಳ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತಿವೆ.

ಇದೂ ಸೇರಿದಂತೆ ಈಚಿನ ಕೆಲವು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ಹೇಳಿರುವ ಕೆಲವು ಮಾತುಗಳು ವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಎತ್ತಿ ಹಿಡಿದಿವೆ

ತನಿಖಾ ಸಂಸ್ಥೆಗಳು ಎಷ್ಟು ನಿಷ್ಪಕ್ಷಪಾತ ಎಂಬುದರ ಬಗ್ಗೆ ಕೋರ್ಟ್ ಕೆಲವು ಪ್ರಶ್ನೆಗಳನ್ನು ಎತ್ತಿದೆ. ದೆಹಲಿ ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಇತರ ಕೆಲವು ಪ್ರಕರಣಗಳಲ್ಲಿಯೂ ಕಂಡುಬಂದಿರುವ, ಮಾಫಿ ಸಾಕ್ಷಿದಾರರ ಹೇಳಿಕೆಗಳನ್ನು ಪ್ರಮುಖ ಸಾಕ್ಷ್ಯವಾಗಿ ಬಳಸಿಕೊಳ್ಳುವ ಪ್ರವೃತ್ತಿಯ ಬಗ್ಗೆ ಕೋರ್ಟ್ ಪ್ರಶ್ನೆ ಎತ್ತಿದೆ. ಆರೋಪಿಯೊಬ್ಬ ಇನ್ನೊಬ್ಬ ಆರೋಪಿಯ ಬಗ್ಗೆ ನೀಡುವ ಹೇಳಿಕೆಗಳನ್ನು ಆಧಾರ, ಪುರಾವೆಯಾಗಿ ಎಷ್ಟರಮಟ್ಟಿಗೆ ಬಳಸಿಕೊಳ್ಳಬಹುದು ಎಂಬ ಪ್ರಶ್ನೆಯನ್ನೂ ಕೇಳಿದೆ. ನ್ಯಾಯಸಮ್ಮತ ವಿಚಾರಣೆ ಎಂಬುದು ಆರೋಪಿಗಳ ಹಕ್ಕು, ಕೋರ್ಟ್ ಎತ್ತಿರುವ ಪ್ರಶ್ನೆಗಳು ನ್ಯಾಯಸಮ್ಮತ ವಿಚಾರಣೆಗೆ ಸಂಬಂಧಿಸಿರುವ ಬಹಳ ಮಹತ್ವದ್ದು. ಕವಿತಾ ಅವರಿಗೆ ಸಂಬಂಧಿಸಿದ ಪ್ರಕರಣದಲ್ಲಿ 493 ಸಾಕ್ಷಿಗಳು ಇದ್ದಾರೆ, 57 ಮಂದಿ ಆರೋಪಿಗಳು ಇದ್ದಾರೆ. ಹೀಗಾಗಿ, ಪ್ರಕರಣದ ವಿಚಾರಣೆಯು ಬೇಗ ನಡೆಯುವ ಸಾಧ್ಯತೆ ಕಡಿಮೆ ಎಂಬ ವಿಷಯವನ್ನೂ ಕೋರ್ಟ್ ಪ್ರಸ್ತಾಪಿಸಿದೆ. ಇಂತಹ ಪರಿಸ್ಥಿತಿಯಲ್ಲಿ, ನ್ಯಾಯಾಲಯವು ಬೇರೆ ಬೇರೆ ಸಂದರ್ಭಗಳಲ್ಲಿ ಹೇಳಿರುವಂತೆ, ವಿಚಾರಣಾ ಪ್ರಕ್ರಿಯೆ ಎಂಬುದೇ ಶಿಕ್ಷೆಯಾಗಿ ಪರಿಣಮಿಸುತ್ತದೆ. ಆಗ ಆರೋಪಿಯ ನ್ಯಾಯದಾನವು ಮರೀಚಿಕೆಯಾಗುತ್ತದೆ. ಪ್ರಕರಣದಲ್ಲಿ ತನಿಖೆಯು ಪೂರ್ಣಗೊಂಡಿದೆ, ಕವಿತಾ ಅವರು ತಪ್ಪಿಸಿಕೊಂಡು ಹೋಗುವ ಅಪಾಯ ಇಲ್ಲ ಎಂದು ಕೋರ್ಟ್ ಹೇಳಿದೆ. ಕವಿತಾ ಅವರ ಪ್ರಕರಣದಲ್ಲಿಯೂ ಜಾಮೀನು ನೀಡುವಾಗ ಸಹಜವಾಗಿ ಅನ್ವಯವಾಗುವ ತತ್ವಗಳೇ ಅನ್ವಯವಾಗುತ್ತವೆ, ಅವರ ಸ್ವಾತಂತ್ರ್ಯವನ್ನು ಹತ್ತಿಕ್ಕುವುದಕ್ಕೆ ಕಾರಣಗಳೇ ಇಲ್ಲ ಎಂದು ಕೂಡ ಸುಪ್ರೀಂ ಕೋರ್ಟ್ ಹೇಳಿದೆ.

ಈಚಿನ ಕೆಲವು ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ತಾಳಿರುವ ನಿಲುವಿನ ಪುನರುಚ್ಚಾರದಂತೆ ಇವೆ ಈ ಎಲ್ಲ ಮಾತುಗಳು. ವ್ಯಕ್ತಿಯೊಬ್ಬನ ಸ್ವಾತಂತ್ರ್ಯದ ಪ್ರಶ್ನೆ ಇರುವ ಪ್ರಕರಣಗಳ ವಿಚಾರಣೆ ನಡೆಸುವ ಸಂದರ್ಭಗಳಲ್ಲಿ ಈ ಮಾತುಗಳನ್ನು, ನಿಯಮಗಳನ್ನು ಪಾಲಿಸಬೇಕು ಎಂದು ಅಧೀನ ನ್ಯಾಯಾಲಯಗಳಿಗೆ ಸುಪ್ರೀಂ ಕೋರ್ಟ್ ಹೇಳಿದೆ. ಬಂಧನ ಹಾಗೂ ರಿಮಾಂಡ್‌ಗೆ ಸಂಬಂಧಿಸಿದ ಪ್ರಕರಣಗಳಲ್ಲಿ ತನಿಖಾ ಸಂಸ್ಥೆಗಳು ಕಾನೂನನ್ನು, ಸರಿಯಾದ ಪ್ರಕ್ರಿಯೆಗಳನ್ನು ಪಾಲನೆ ಮಾಡಬೇಕು ಎಂದು ಕೂಡ ಇತರ ಕೆಲವು ಪ್ರಕರಣಗಳಲ್ಲಿ ಕೋರ್ಟ್ ಸ್ಪಷ್ಟಪಡಿಸಿದೆ. ಇವೆಲ್ಲವೂ ವ್ಯಕ್ತಿಸ್ವಾತಂತ್ರ್ಯದ ಮಹತ್ವವನ್ನು ಒತ್ತಿಹೇಳುತ್ತವೆ. ವ್ಯಕ್ತಿಸ್ವಾತಂತ್ರ್ಯವನ್ನು ಹತ್ತಿಕ್ಕುವ ಉದ್ದೇಶದಿಂದ ಕಾರ್ಯಾಂಗವು ತನ್ನ ಅಧಿಕಾರವನ್ನು ಮಿತಿ ಮೀರಿ ಬಳಸಿಕೊಳ್ಳುವ ಚಾಳಿಯನ್ನು ಹದ್ದುಬಸ್ತಿನಲ್ಲಿ ಇರಿಸಲು ಇವೆಲ್ಲವೂ ಮಾರ್ಗಸೂಚಿಯಂತೆ ಕೆಲಸ ಮಾಡಬೇಕು.

ದಿನದ ಟ್ವೀಟ್

ಕನ್ನಡ ಬಳಕೆ ಹೆಚ್ಚಿಸೋಣ

ಕನ್ನಡದ ಪದಗಳನ್ನು ಇಂಗ್ಲಿಷ್ ಪದಗಳು ನಿಧಾನವಾಗಿ ನುಂಗುತ್ತಿವೆ. ನಾವು ಯಾರೂ ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಅವುಗಳನ್ನು ಸ್ವೀಕರಿಸುತ್ತಿದ್ದೇವೆ. ಮನೆಯಲ್ಲಿ ಮಕ್ಕಳ ಜೊತೆ ಮಾತನಾಡುವಾಗ ಕಡಿಮೆ ಇಂಗ್ಲಿಷ್ ಪದಗಳನ್ನು ಬಳಸುವುದನ್ನು ಶುರು ಮಾಡಿ. ಕ್ರಮೇಣ ಅವರು ಕೂಡ ಕನ್ನಡ ಪದಗಳ ಬಳಕೆಯನ್ನು ಹೆಚ್ಚು ಮಾಡುತ್ತಾರೆ. ಹೊರಗೆ ಕನ್ನಡಿಗ ಸ್ನೇಹಿತರ ಹತ್ತಿರ ಕೂಡ ಇದೇ ರೀತಿ ಶುರು ಮಾಡಿ. ಯಾರಾದರೂ ಹಾಸ್ಯ ಮಾಡಿದರೆ ಅವರಿಗೆ ತಿಳಿಹೇಳಿ...ಇಂಗ್ಲಿಷ್ ಹೇರಿಕೆ ನಿಲ್ಲಿಸಿ.

ರಾಧಿಕ

ಕಿಡಿನುಡಿ

ಬಂಧನಕ್ಕೆ ಒಳಗಾದ ನಂತರ ಎಲ್ಲ ಸೌಲಭ್ಯಗಳೂ ಇರುವ ಜೈಲ್ ರೆಸಾರ್ಟ್‌ಗೆ ತನ್ನನ್ನು ಕಳಿಸಲಾಗುತ್ತದೆ ಎಂಬುದನ್ನು ತಿಳಿದವನು ಯಾರು ತಾನೇ ಕಳ್ಳನಾಗಲಾರ?

ತೇಜಸ್ವಿ

25 ವರ್ಷಗಳ ಹಿಂದೆ

ಸೋಮವಾರ, 30-8-1999

● **ಸಮ್ಮಿಶ್ರ ಸರ್ಕಾರ: ಕಾಂಗ್ರೆಸ್ ನಿಲುವು ಸ್ಪಷ್ಟನೆಗೆ ಆಗ್ರಹ**

ಮಂಗಳೂರು, ಆ. 29– ಸಮ್ಮಿಶ್ರ ಸರ್ಕಾರಗಳ ಬಗ್ಗೆ ಕಾಂಗ್ರೆಸ್ ಪಕ್ಷ ತನ್ನ ಖಚಿತ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಇಲ್ಲಿ ಆಗ್ರಹಪಡಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪ್ರಧಾನಿ ಅವರು, ಸಮ್ಮಿಶ್ರ ಸರ್ಕಾರ ಕುರಿತಂತೆ ‘ಅನುಕೂಲಸಿಂಧು’ ಮತ್ತು ‘ಪ್ರಜಾಸತ್ತೆಗೆ ವಿರೋಧಿ’ಯಾದ ಹೇಳಿಕೆಗಳನ್ನು ಕಾಂಗ್ರೆಸ್ ನೀಡುತ್ತಿದೆ ಎಂದರು.

‘ಬಿಜೆಪಿಯ ಸಮ್ಮಿಶ್ರ ಸರ್ಕಾರವನ್ನು ಟೀಕಿಸುವುದರ ಜತೆಗೆ ತಮ್ಮ ಪಕ್ಷವೇ ಬೆಂಬಲ ನೀಡಿ ನಂತರ ಉರುಳಿಸಿದ್ದ ಸಂಯುಕ್ತ ರಂಗದ ಸರ್ಕಾರದ ವಿರುದ್ಧವೂ ಸೋನಿಯಾ ಟೀಕಿಸಿದ್ದಾರೆ. ಅವುಗಳಿಂದ ಸ್ಥಿರತೆ ಸಾಧ್ಯವಿಲ್ಲ, ಕಾಂಗ್ರೆಸ್ ಒಂದರಿಂದಲೇ ಸ್ಥಿರ ಸರ್ಕಾರ ಸಾಧ್ಯ ಎಂದು ಹೇಳಿದ್ದಾರೆ. ಇದು ಅವರ ಗೊಂದಲದ ದ್ಯೋತಕ’ ಎಂದು ವಾಜಪೇಯಿ ಹೇಳಿದರು.

● **ಸಂವಿಧಾನ ಉಲ್ಲಂಘನೆ: ಪ್ರಧಾನಿ ವಿರುದ್ಧ ಕಾಂಗ್ರೆಸ್ ಆರೋಪ**

ನವದೆಹಲಿ, ಆ. 29 (ಪಿಟಿಐ)– ವಿದೇಶಿ ಮೂಲದ ಸೋನಿಯಾ ಗಾಂಧಿ ಅವರು ಪ್ರಧಾನಿಯಾಗಲು ಸಾಧ್ಯವಿಲ್ಲ ಎಂದು ಹೇಳುವುದರ ಮೂಲಕ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಸಂವಿಧಾನವನ್ನು ಉಲ್ಲಂಘಿಸಿದ್ದಾರೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಸಂವಿಧಾನವು ಯಾವುದೇ ಪ್ರಜೆಗೆ ಜನಾಂಗ, ಧರ್ಮ, ಜಾತಿ, ಸ್ಥಳಗಳ ಆಧಾರದ ಮೇಲೆ ಪಕ್ಷಪಾತ ಮಾಡುವುದಿಲ್ಲ ಎಂದು ಹೇಳುತ್ತದೆ; ಈ ಹಿನ್ನೆಲೆಯಲ್ಲಿ ವಾಜಪೇಯಿ ಅವರ ಹೇಳಿಕೆ ಸಂವಿಧಾನದ ಉಲ್ಲಂಘನೆ ಎಂದು ಕಾಂಗ್ರೆಸ್ಸಿನ ವಕ್ತಾರ ಕಪಿಲ್ ಸಿಬಲ್ ಅವರು ಸುದ್ದಿಗಾರರಿಗೆ ಹೇಳಿದರು.

50 ವರ್ಷಗಳ ಹಿಂದೆ

ಶುಕ್ರವಾರ, 30-8-1974

● **ಭಾರತೀಯ ಲೋಕದಳದ ಉದಯ: ಪ್ರತಿಪಕ್ಷ ಆಗುವ ಗುರಿ**

ನವದೆಹಲಿ, ಆ. 29– ಏಳು ಪಕ್ಷಗಳ ಸಂಯುಕ್ತ ವಿರೋಧ ಸಂಸ್ಥೆ ‘ಭಾರತೀಯ ಲೋಕದಳ’ ಇಂದು ಉದಯಿಸಿತು.

ಈಗಿನ ಕ್ಲಿಷ್ಟ ಪರಿಸ್ಥಿತಿಯಲ್ಲಿ ಆಡಳಿತ ಪಕ್ಷಕ್ಕೆ ರಾಷ್ಟ್ರೀಯ ಪ್ರತಿಪಕ್ಷವೊಂದನ್ನು ಒದಗಿಸುವುದೇ ಈ ವಿಲೀನದ ಉದ್ದೇಶವೆಂದು ವ್ಯವಸ್ಥಾಪಕರು ಹೇಳಿದ್ದಾರೆ.

ಭಾರತೀಯ ಕ್ರಾಂತಿ ದಳದ (ಬಿ.ಕೆ.ಡಿ) ಅಧ್ಯಕ್ಷ ಚರಣ್ ಸಿಂಗ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಚುನಾಯಿಸಲಾಯಿತು.

ಬಿ.ಕೆ.ಡಿ, ಸ್ವತಂತ್ರ ಪಕ್ಷ, ಉತ್ಕಲ ಕಾಂಗ್ರೆಸ್, ರಾಷ್ಟ್ರೀಯ ಲೋಕತಾಂತ್ರಿಕ ದಳ, ಸಂಯುಕ್ತ ಸಮಾಜವಾದಿ ಪಕ್ಷ, ಕಿಸಾನ್ ಮಜ್ದೂರ್ ಪಕ್ಷ ಮತ್ತು ಪಂಜಾಬ್ ಬಿ.ಬಿ.ಜೆ ಸಂಘ– ಈ ಏಳು ಸಂಸ್ಥೆಗಳ ವಿಲೀನದಿಂದ ಲೋಕದಳವನ್ನು ರಚಿಸಲಾಗಿದೆ.

● **ಹೈದರಾಬಾದಿನ ಎಚ್.ಎಂ.ಟಿಯಲ್ಲಿ ಬಲ್ಬು ತಯಾರಿಕೆ**

ನವದೆಹಲಿ, ಆ. 29– ಎಚ್.ಎಂ.ಟಿ ಕಾರ್ಖಾನೆಯ ಹೈದರಾಬಾದ್ ಘಟಕದಲ್ಲಿ ವಿದ್ಯುತ್ ಬಲ್ಬು, ಫಿಲಮೆಂಟುಗಳನ್ನು ಉತ್ಪಾದಿಸಲು ಯೋಜಿಸಲಾಗಿದೆ. ಇದರ ಜತೆಗೆ ಗಾಜಿನ ವಸ್ತುಗಳನ್ನೂ, ಬಲ್ಬಿನ ಟೋಪಿ, ಟಂಗ್‌ಸ್ಟನ್ ತಂತಿ, ಲ್ಯಾಂಪ್ ತಯಾರಿಸುವ ಯಂತ್ರೋಪಕರಣ ಮುಂತಾದವನ್ನೂ ಉತ್ಪಾದಿಸಲಾಗುವುದು ಎಂದು ಭಾರಿ ಉದ್ಯಮಗಳ ಸಚಿವ ಶ್ರೀ ಟಿ.ಎ.ಪೈ ಇಂದು ಲೋಕಸಭೆಗೆ ತಿಳಿಸಿದರು.

ಆರನೇ ವರ್ಷದ ವೇಳೆಗೆ 3 ಕೋಟಿ 30 ಲಕ್ಷ ಬಲ್ಬುಗಳನ್ನು ತಯಾರಿಸುವ ಉದ್ದೇಶ ಇದೆಯೆಂದೂ, ಸರ್ಕಾರ ಇನ್ನೂ ಬಂಡವಾಳದ ಬಗ್ಗೆ ನಿರ್ಧಾರ ಕೈಗೊಂಡಿಲ್ಲವೆಂದೂ ಪೈ ಹೇಳಿದರು.

ವಿರೋಧ ಪಕ್ಷದಲ್ಲಿದ್ದಾಗಿನ ನಿಲುವು ಆಡಳಿತ ಪಕ್ಷದಲ್ಲಿದ್ದಾಗ ಬದಲಾಗುವ ಪವಾಡ

ಜಯ ಜಿಂದಾಲು, ಜನ ಕಂಗಾಲು!



ಅನುಸಂಧಾನ

ರವೀಂದ್ರ ಭಟ್ಟ

ನಿಮಗೆ ಪವಾಡಗಳಲ್ಲಿ ನಂಬಿಕೆ ಇದೆಯಾ? ಇಲ್ಲದಿದ್ದರೆ ನಮ್ಮ ರಾಜಕಾರಣಿಗಳು ಆಗಾಗ ಪವಾಡ ಮಾಡಿ ನಂಬಿಕೆ ಹುಟ್ಟಿಸುತ್ತಾರೆ. ಇದಕ್ಕೆ ಬಹಳಷ್ಟು ಉದಾಹರಣೆಗಳನ್ನು ಕೊಡಬಹುದು. ಜಿಂದಾಲ್ ಉಕ್ಕು ಕಂಪನಿಗೆ ಬಳ್ಳಾರಿ ಜಿಲ್ಲೆಯಲ್ಲಿ 3,667 ಎಕರೆ ಜಮೀನು ನೀಡಲು ತೀರ್ಮಾನಿಸಿರುವುದು ತೀರಾ ಇತ್ತೀಚಿನ ಉದಾಹರಣೆ.

ಜಿಂದಾಲ್ ಕಂಪನಿಗೆ ಭೂಮಿ ಕೊಡುವ ಸಂಬಂಧದ ಮಾತುಕತೆ 2005ರಿಂದಲೂ ನಡೆಯುತ್ತಲೇ ಇದೆ. ಕಾಂಗ್ರೆಸ್ ಪಕ್ಷ ಭೂಮಿ ನೀಡಲು ಮುಂದಾದರೆ, ಆಗಿನ ವಿರೋಧ ಪಕ್ಷ ಬಿಜೆಪಿ ವಿರೋಧ ಮಾಡುತ್ತದೆ. ಬಿಜೆಪಿ ಆಡಳಿತಕ್ಕೆ ಬಂದಾಗ ಆ ಪಕ್ಷವೂ ಜಿಂದಾಲ್‌ಗೆ ಭೂಮಿ ಕೊಡಲು ನಿರ್ಧಾರ ಮಾಡುತ್ತದೆ. ಆಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸುತ್ತದೆ. ಆಡಳಿತ ಪಕ್ಷದಲ್ಲಿದ್ದಾಗ ಒಂದು ನಿಲುವು, ವಿರೋಧ ಪಕ್ಷದಲ್ಲಿದ್ದಾಗ ಮತ್ತೊಂದು ನಿಲುವು. ಹೀಗೆ ನಿಲುವು ಬದಲಾಗುವ ಪವಾಡ ನಡೆಯುತ್ತಲೇ ಇರುತ್ತದೆ.

ಬಡವರಿಗೆ ಸೂರು ಕಲ್ಪಿಸುವುದು, ರೈತರಿಗೆ ನೆರವು ನೀಡುವುದು, ಭೂಕುಸಿತದಿಂದ ತೊಂದರೆಗೆ ಒಳಗಾದವರಿಗೆ ನೆರವು ನೀಡುವುದು, ಪರಿಶಿಷ್ಟರಿಗೆ ಭೂಮಿ ನೀಡುವಂತಹ ವಿಷಯಗಳಲ್ಲಿ ಮಾತ್ರ ಇಂತಹ ಪವಾಡಗಳು ನಡೆಯುವುದೇ ಇಲ್ಲ. ಧರ್ಮಸಿಂಗ್ ಅವರು ಮುಖ್ಯಮಂತ್ರಿಯಾಗಿದ್ದಾಗ ಜಿಂದಾಲ್ ಕಂಪನಿಗೆ 2,000.58 ಎಕರೆ ಭೂಮಿ ಹಂಚಿಕೆಗೆ ಅನುಮೋದನೆ ನೀಡಲಾಗಿತ್ತು. 2006ರಲ್ಲಿ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗ 6 ವರ್ಷಕ್ಕೆ ಲೀಸ್ ಆಧಾರದಲ್ಲಿ ಕೊಡಲಾಗಿತ್ತು. 2007ರಲ್ಲಿ ಮತ್ತೆ 1,666.73 ಎಕರೆ ಹಂಚಿಕೆ ಮಾಡಲಾಗಿತ್ತು. 2015ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಶುದ್ಧ ಕ್ರಯಪತ್ರ ಮಾಡಿಕೊಡುವ ವಿಚಾರ ಸಂಪುಟದ ಮುಂದೆ ಬಂದಿತ್ತು. ಆಗಲೂ ವಿರೋಧ ವ್ಯಕ್ತವಾಗಿತ್ತು. ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾದಾಗ 2019ರಲ್ಲಿ ಪ್ರತಿ ಎಕರೆಗೆ ₹ 1.22 ಲಕ್ಷದಂತೆ 3,667 ಎಕರೆ ಮಾರಾಟ ಮಾಡಲು ಒಪ್ಪಿಗೆ ನೀಡಲಾಗಿತ್ತು. ಆಗ ವಿರೋಧ ಪಕ್ಷದಲ್ಲಿದ್ದ ಯಡಿಯೂರಪ್ಪ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದೇ ಅಲ್ಲದೆ ‘ಕುಮಾರಸ್ವಾಮಿ ಲಂಚ ಪಡೆದಿದ್ದಾರೆ’ ಎಂದೂ ಆರೋಪಿಸಿದ್ದರು. ಯಡಿಯೂರಪ್ಪ ಮುಖ್ಯಮಂತ್ರಿ ಆದಾಗ ಅವರ ನಿಲುವು ಬದಲಾಯಿತು. 2021ರಲ್ಲಿ ಕಂಪನಿಗೆ ಭೂಮಿ ಮಾರಾಟ ಮಾಡಲು ಅವರು ಒಪ್ಪಿಗೆ ಸೂಚಿಸಿದ್ದರು.

ಬಿಜೆಪಿಯ ಅರವಿಂದ ಬೆಲ್ಲದ ಆಗಲೂ ಇದನ್ನು ವಿರೋಧಿಸಿದ್ದರು, ಈಗಲೂ ವಿರೋಧ ವ್ಯಕ್ತಪಡಿಸಿದ್ದಾರೆ. ಜಿಂದಾಲ್ ಕಂಪನಿಗೆ ಭೂಮಿ ನೀಡಲು ಬಿಜೆಪಿ ನೇತೃತ್ವದ ಸರ್ಕಾರ ಮುಂದಾದಾಗ ಅದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದವರಲ್ಲಿ ಕಾಂಗ್ರೆಸ್‌ನ ಎಚ್.ಕೆ.ಪಾಟೀಲ ಪ್ರಮುಖರು. ಈಗ ಅವರು ಕಾಂಗ್ರೆಸ್ ನೇತೃತ್ವದ ಸರ್ಕಾರದಲ್ಲಿ ಕಾನೂನು ಮಂತ್ರಿ. ಜಿಂದಾಲ್ ಕಂಪನಿಗೆ ಭೂಮಿ ನೀಡುವ ಪ್ರಸ್ತಾಪ ಸಚಿವ ಸಂಪುಟದ ಮುಂದೆ ಬಂದಾಗಲೂ ಅವರು ವಿರೋಧ ವ್ಯಕ್ತಪಡಿಸಿದ್ದರು ಎನ್ನಲಾಗಿದೆ. ಆದರೆ ಕಂಪನಿಗೆ ಭೂಮಿ ನೀಡಲು ಸಂಪುಟ ಒಪ್ಪಿಗೆ ನೀಡಿತು. ಆ ನಿರ್ಧಾರವನ್ನು ಬಹಿರಂಗವಾಗಿ ಪ್ರಕಟಿಸುವ ಇಕ್ಕಟ್ಟಿಗೆ ಎಚ್.ಕೆ.ಪಾಟೀಲರು ಸಿಲುಕಬೇಕಾಯಿತು.

ಪವಾಡ ನಡೆಯುವುದು ನಿಲುವು ಬದಲಾವಣೆಯಲ್ಲಿ ಮಾತ್ರ ಅಲ್ಲ. ಭೂಮಿಯ ಬೆಲೆ ನಿಗದಿಯಲ್ಲಿಯೂ ಪವಾಡ ನಡೆಯುತ್ತದೆ. ರಾಜ್ಯ ಸರ್ಕಾರ ಈಗ ಒಂದಷ್ಟು ಭೂಮಿಗೆ ಒಂದು ಎಕರೆಗೆ ₹ 1.22 ಲಕ್ಷ ಮತ್ತು ಇನ್ನುಳಿದ ಭೂಮಿಗೆ ₹ 1.50 ಲಕ್ಷದಂತೆ ಕಂಪನಿಗೆ ನೀಡಲು ಮುಂದಾಗಿದೆ. ಜಿಂದಾಲ್ ಉಕ್ಕು ಕಂಪನಿಗೆ ನೀಡಲು ಉದ್ದೇಶಿಸಿರುವ ಭೂ ಪ್ರದೇಶದಲ್ಲಿ ತುಂಗಭದ್ರಾ ಎಡದಂಡೆ ಕಾಲುವೆ ಪ್ರದೇಶವೂ ಇದೆ. ಅಲ್ಲಿ ಒಂದು ಎಕರೆ ಭೂಮಿಯ ಬೆಲೆ ₹ 3 ಕೋಟಿ ಇದೆ ಅನ್ನುತ್ತಾರೆ ಅಲ್ಲಿನ ರೈತರು. ಉಳಿದ ಭೂಮಿಗೆ ಎಕರೆಗೆ ₹ 50 ಲಕ್ಷದಿಂದ ₹ 1.25 ಕೋಟಿ ಮಾರುಕಟ್ಟೆ ಬೆಲೆ ಇದೆ ಎಂದೂ ಅವರು ಹೇಳುತ್ತಾರೆ. ಅದೇ ಭೂಮಿಯನ್ನು ಇಷ್ಟು ಕಡಿಮೆ ಬೆಲೆಗೆ ಕಂಪನಿಗೆ ನೀಡಲು ನಿರ್ಧರಿಸುವ ಪವಾಡವೂ ಇಲ್ಲಿ ನಡೆಯುತ್ತದೆ.

ಕೈಗಾರಿಕೆಗಳಿಗೆ ಭೂಮಿ ನೀಡುವುದು ತಪ್ಪಲ್ಲ. ಉಚಿತವಾಗಿಯೇ ನೀಡಲಿ, ಅದೂ ಪರವಾಗಿಲ್ಲ. ಆದರೆ ಹೀಗೆ ಭೂಮಿ ನೀಡುವುದರಿಂದ ಕರ್ನಾಟಕದ ಜನರಿಗೆ ಏನೆಲ್ಲ ಲಾಭವಾಗುತ್ತದೆ ಎನ್ನುವುದನ್ನು ಸರ್ಕಾರ ಬಹಿರಂಗವಾಗಿ ಹೇಳಬೇಕು. ರಾಜ್ಯದ ಹಿತವನ್ನು ಜನರಿಗೆ ಮನದಟ್ಟು ಮಾಡಿಕೊಡಬೇಕು. ಆಗ ಜನ ಕೂಡ ಬೆಂಬಲ ನೀಡುತ್ತಾರೆ. ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ 1971– 72ರಲ್ಲಿ ಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ಸೂಕ್ತ ಪರಿಹಾರ ನೀಡಿಲ್ಲ ಎಂಬ ಆರೋಪ ಇದೆ. ಅಲ್ಲಿನ ಜನರಿಗೆ ಉದ್ಯೋಗ ಕೂಡ ಸಿಕ್ಕಿಲ್ಲ. ಈಗ ಸರ್ಕಾರಕ್ಕೆ ನಷ್ಟ ಮಾಡಿಕೊಂಡು ಕಂಪನಿಗೆ ಭೂಮಿ ಕೊಡುವ ಜರೂರತ್ತು ಏನಿದೆ ಎಂಬ ಅನ್ನದಾತನ ಪ್ರಶ್ನೆಯಲ್ಲಿ ಅರ್ಥವಿದೆ.

ಇಷ್ಟು ಪ್ರಮಾಣದ ಭೂಮಿಯು ಕಂಪನಿಗೆ ಯಾಕೆ ಬೇಕು ಎನ್ನುವ ಪ್ರಶ್ನೆಗೂ ಸರ್ಕಾರ ಉತ್ತರ ಹೇಳಬೇಕಾಗುತ್ತದೆ. ಉತ್ಪಾದನಾ ಸಾಮರ್ಥ್ಯ, ಉದ್ಯೋಗ ಸೃಷ್ಟಿ, ಕಂಪನಿಗೆ ನೀಡಲಾಗುವ ಭೂಮಿಯ ಪ್ರಮಾಣ ಎಲ್ಲವೂ ತಾಳೆಯಾಗಬೇಕು. ಅಂದಾಗ ಮಾತ್ರ ಭೂಮಿ ಕೊಡುವುದರಲ್ಲಿ ಅರ್ಥವಿದೆ. ನ್ಯಾಯಾಲಯದ ಆದೇಶದಂತೆ ಶುದ್ಧ ಕ್ರಯಪತ್ರ ಮಾಡಿಕೊಡಲಾಗುತ್ತಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾದಾಗ ಸರ್ಕಾರ ಸೂಕ್ತ ದಾಖಲೆಗಳನ್ನು ನೀಡಿಲ್ಲ ಮತ್ತು ವಾದವನ್ನೂ ನಡೆಸಿಲ್ಲ ಎಂಬ ಆರೋಪವೂ ಇದೆ. ಸರ್ಕಾರದ ವಿರುದ್ಧ ಕಂಪನಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದಾಗ ಶುದ್ಧ ಕ್ರಯಪತ್ರ ಮಾಡಿಕೊಡುವ ನಿರ್ಧಾರದ ಪುನರ್‌ಪರಿಶೀಲನೆ ನಡೆಸಲಾಗಿದೆ ಎಂದು ಹೇಳಿದ ಸರ್ಕಾರ, ಸಂಬಂಧಿಸಿದ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಿಲ್ಲ. ಈ ಎಲ್ಲದಕ್ಕೂ ಸರ್ಕಾರ ಉತ್ತರಿಸಬೇಕಾಗುತ್ತದೆ.

ಇದನ್ನೆಲ್ಲಾ ನೋಡಿದಾಗ ಒಂದು ಕತೆ ನೆನಪಾಗುತ್ತದೆ. ಒಬ್ಬ ರಾಜ ಇದ್ದನಂತೆ. ಅವನಿಗೆ ಅಹಂಕಾರ ಇತ್ತು. ಅಲ್ಲದೆ ಅವನಿಗೆ ಹೊಟ್ಟೆಕಿಚ್ಚು ಜಾಸ್ತಿ. ಯಾರಾದರೂ ಇತರರನ್ನು ಹೊಗಳಿದರೆ ಅವನಿಗೆ ಸಹಿಸಿಕೊಳ್ಳಲು ಆಗುತ್ತಿರಲಿಲ್ಲ. ಒಂದು ದಿನ ಅವನಿಗೆ ಯಾರೋ ಒಂದು ಆನೆಯನ್ನು ಉಡುಗೊರೆಯಾಗಿ ನೀಡಿದರು. ಅದು ಉತ್ಕೃಷ್ಟವಾದ ಆನೆ. ಬೆಳೆಯುತ್ತಾ ಬೆಳೆಯುತ್ತಾ ಆನೆಯ ಜನಪ್ರಿಯತೆ ಇನ್ನಷ್ಟು ಹೆಚ್ಚಾಯಿತು. ಅದನ್ನು ಸಹಿಸಲು ರಾಜನಿಗೆ ಸಾಧ್ಯವಾಗಲಿಲ್ಲ.

ಒಂದು ದಿನ ರಾಜ ಮಾವುತನಿಗೆ ‘ಇದು ಅತ್ಯಂತ ಶ್ರೇಷ್ಠವಾದ ಆನೆಯೇ?’ ಎಂದು ಕೇಳಿದ. ‘ಹೌದು ಸ್ವಾಮಿ, ಇಂತಹ ಆನೆ ವಿಶ್ವದಲ್ಲೇ ಇಲ್ಲ’ ಎಂದ ಮಾವುತ. ‘ಸರಿ ಹಾಗಾದರೆ ಅದನ್ನು ನಾಳೆ ಬೆಟ್ಟದ ತುದಿಗೆ ಕರೆದುಕೊಂಡು ಬಾ’ ಎಂದು ಹೇಳಿದ. ಅದರಂತೆ ಮಾರನೇ ದಿನ ಬೆಟ್ಟದ ತುದಿಗೆ ಆನೆಯನ್ನು ಕರೆದುಕೊಂಡು ಹೋಗಲಾಯಿತು. ಆನೆಗೆ ‘ಒಂದು ಕಾಲನ್ನು ಮೇಲಕ್ಕೆ ಎತ್ತು’ ಎಂದ ರಾಜ. ಆನೆ ಕಾಲು ಮೇಲಕ್ಕೆ ಎತ್ತಿತು. ‘ಎರಡು ಕಾಲನ್ನು ಮೇಲಕ್ಕೆ ಎತ್ತು’ ಎಂದ ರಾಜ. ಆನೆ ಹಾಗೆಯೇ ಮಾಡಿತು. ‘ಈಗ ಬೆಟ್ಟದಿಂದ ಕೆಳಕ್ಕೆ ಹಾರು’ ಎಂದು ಆನೆಗೆ ಆದೇಶಿಸಿದ ರಾಜ. ಆನೆಗೆ ಸಿಟ್ಟು ಬಂತು. ತಿರುಗಿ ಬಂದು ರಾಜನನ್ನು ಸೊಂಡಿಲಿನಲ್ಲಿ ಸುತ್ತಿಕೊಂಡು ಬೆಟ್ಟದಿಂದ ಕೆಳಕ್ಕೆ ಎತ್ತಿ ಬಿಸಾಕಿತು. ಮಂತ್ರಿಯನ್ನು ಕರೆದು ತಂದು ಸಿಂಹಾಸನದ ಮೇಲೆ ಕುಳ್ಳಿರಿಸಿತು.

ಕರ್ನಾಟಕದಲ್ಲಿಯೂ ಹೀಗೆಯೇ ಆಗಿದೆ. ಮತದಾರ ಎಂಬ ಆನೆ ಪ್ರತಿ ಬಾರಿಯೂ ರಾಜನನ್ನು ಎತ್ತಿ ಕೆಳಕ್ಕೆ ಹಾಕುತ್ತದೆ. ಮತ್ತೊಬ್ಬನನ್ನು ತಂದು ಸಿಂಹಾಸನದ ಮೇಲೆ ಕುಳ್ಳಿರಿಸುತ್ತದೆ. ಆದರೆ ಹೊಸದಾಗಿ ಬಂದ ರಾಜ ಮಾತ್ರ ಹಿಂದಿನ ರಾಜನಂತೆಯೇ ನಡೆದುಕೊಳ್ಳುತ್ತಾನೆ. ಕರ್ಮ ಕರ್ಮ.

ಚುರುಮುರಿ



ಸಿರಿಗನ್ನಡಂ ‘ಪುಲ್ಗೆ’

● ಬಿ.ಎನ್.ಮಲ್ಲೇಶ್

‘ಲೇ ತೆಪರ, ಈ ಗುಟೇಶನ್ ಪುಲ್ಗೆ ಅಂದ್ರೆ ಏನ್ಲೆ?’ ಹರಟೆಕಟ್ಟೆಯಲ್ಲಿ ದುಬ್ಬೀರ ಕೇಳಿದ.

‘ಏನು? ಪುಲ್ಗೆನಾ? ಯಾವ ಭಾಷೆ ಅದು?’ ತೆಪರೇಸಿ ತಲೆ ಕೆರೆದುಕೊಂಡ.

‘ನಿನ್ತೆಲಿ, ಕನ್ನಡ ಕಣಲೆ, ಕೆಪಿಎಸ್ಸಿ ಪರೀಕ್ಷೇಲಿ ಕೇಳಿದಾರೆ’.

‘ಹೌದಾ? ನಾನು ಸಿರಿಗನ್ನಡಂ ಗೆಲ್ಗೆ, ಬಾಳ್ಗೆ ಅಂತ ಕೇಳಿದ್ನೆಪ, ಇದ್ಯಾವುದು ಪುಲ್ಗೆ?’

‘ಇಂಗ್ಲೀಷಲ್ಲಿ ಪುಲ್ ಅಂದ್ರೆ ಎಳಿಯೋದು, ಪುಶ್ ಅಂದ್ರೆ ತಳ್ಳೋದು. ಅದೇನರೆ ಕೇಳಿದ್ರಾ ಅಂತ’ ಗುಡ್ಡೆ ತನ್ನ ಪಾಂಡಿತ್ಯ ಪ್ರದರ್ಶಿಸಿದ.

‘ಲೇಯ್, ತಳ್ಳೋದು, ಎಳಿಯೋದು ಎಲ್ಲ ಕೆಲ್ಸ ಸಿಕ್ಕ ಮೇಲೆ. ಈಗ ಪರೀಕ್ಷೇಲೇ ಹಿಂಗೆ ಕೇಳಿದ್ರೆ ಹೆಂಗೆ? ಆ ಪ್ರಶ್ನೆಪತ್ರಿಕೆ ರೆಡಿ ಮಾಡಿದೋನಿಗೆ ‘ಪುಲ್ಗೆ ಕನ್ನಡ ಪ್ರಶಸ್ತಿ’ ಅಂತ ಒಂದು ಪ್ರಶಸ್ತಿ ಕೊಡಬೇಕು ನೋಡು’ ದುಬ್ಬೀರ ನಕ್ಕ.

‘ಇಂಥವು ಬಾಳ ತಪ್ಪದಾವಂತೆ, ಕಾಪಿ ಹೊಡೆದ್ರೂ ನಮ್ಮುಡುಗ್ರು ಪಾಸಾಗಲ್ಲ’.

‘ಏನೋ ಸಣ್ಣ ಪುಟ್ಟ ತಪ್ಪಾಗಿರ್ತಾವೆ ಬಿಡ್ರಲೆ, ವೈಟ್ನರ್ ಹಚ್ಚಿ ಸರಿ ಮಾಡಿದ್ರಾತು’ ಗುಡ್ಡೆ ಕಿಸಕ್ಕೆಂದ.

‘ಹಂಗಾದ್ರೆ ಇಡೀ ಕ್ವಶ್ಚನ್ ಪೇಪರ್‌ಗೇ ವೈಟ್ನರ್ ಹಚ್ಚಬೇಕಾಗ್ತತಿ. ಅದ್ರ ಬದ್ಲು ಗ್ರೇಸ್ ಮಾರ್ಕ್ಸ್ ಕೊಟ್ಟು ಪಾಸ್ ಮಾಡಿದ್ರೆ ನಮ್ಮುಡುಗ್ರು ಗ್ರೇಸಾಫೀಸರ್‌ಗಳಾದ್ರು ಆಗ್ತಾರೆ’ ಕೊಟ್ರೇಶಿ ಹೋಲ್‌ಸೇಲ್ ಮಾತಾಡಿದ.

‘ಅದು ಬಿಡ್ರಲೆ ಅತ್ಲಾಗೆ, ಈ ರಾಜಕೀಯದ್ದು ಏನ್ಕತೆ?’ ತೆಪರೇಸಿ ಮಾತು ಬದಲಾಯಿಸಿದ.

‘ರಾಜಕೀಯದ್ದಾ? ಮೊನ್ನೆ ನಮ್ ಸಿಎಂ ಸಾಹೇಬ್ರು ಯಾವುದೋ ಫೈಲ್ ನೋಡೋವಾಗ ಗುಂಡುಪಿನ್ ಚುಚ್ಚಿ ಬೆರಳಿಗೆ ಗಾಯ ಆತಂತಪ’ ದುಬ್ಬೀರ ಹೇಳಿದ.

‘ಹೌದಾ? ಮೋಸ್ಟ್‌ಲೀ ಅದು ಮುಡಾ ಫೈಲೇ ಇರ್ಬೇಕು’ ಕೊಟ್ರೇಶಿ ನಕ್ಕ.

‘ಅಥ್ವಾ ಆ ಗುಂಡುಪಿನ್ನು ಎಚ್‌ಡಿಕೆ ಬ್ರಾಂಡ್‌ದು ಇರಬೋದಾ?’ ಗುಡ್ಡೆ ಕೀಟಲೆಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಓ... ನೀವು ಹೌಸ್ ವೈಫಾ?!

ಮನೆಯ ನಿರ್ವಹಣೆಯಲ್ಲಿ ಮಹಿಳೆಯ ಪಾತ್ರಕ್ಕೆ ಪ್ರಾಮುಖ್ಯ ಸಿಗುವುದೆಂದು?

● ನಿರಂಜನ ವಾನಳ್ಳಿ

ಈಚೆಗೆ ಭೇಟಿಯಾದ ಅಪರಿಚಿತ ಹಿರಿಯರೊಬ್ಬರು ಮಾತನಾಡುತ್ತ ‘ನೀವು ಏನು ಕೆಲಸ ಮಾಡುತ್ತೀರಿ?’ ಎಂದು ಕೇಳಿದರು. ಅದಕ್ಕೆ ಹೇಗೋ ಉತ್ತರ ಕೊಟ್ಟು ಕೈ ತೊಳೆದುಕೊಂಡಾಗ, ಎರಡನೇ ಪ್ರಶ್ನೆ ಬಂತು ‘ನಿಮ್ಮ ಮನೆಯವರು ಏನು ಕೆಲಸ ಮಾಡುತ್ತಾರೆ?’ ಈ ಪ್ರಶ್ನೆ ಬೇರೆಯವರಿಂದ ಬಂದಾಗ, ಅನೇಕ ಸಲ ಇರುಸುಮುರುಸು ಉಂಟುಮಾಡಿದೆ. ‘ಅವರು ಮನೆಯ ಜವಾಬ್ದಾರಿ ನೋಡಿಕೊಳ್ಳುತ್ತಾರೆ’ ಎಂದರೆ ‘ಓ ಹೌಸ್ ವೈಫಾ’ ಎಂಬ ಉದ್ಗಾರ ಹೊರಡುತ್ತದೆ. ಇತ್ತೀಚೆಗೆ ಅದಕ್ಕೆ ಸಿಕ್ಕಿರುವ ಹೊಸ ಹೆಸರು ‘ಹೋಂ ಮೇಕರ್’. ‘ಹೌಸ್ ವೈಫು’ ಅಂತ ಮೂಗು ಮುರಿಯುವುದಕ್ಕಿಂತ ಇದು ಒಳಿತು ಎನಿಸುತ್ತದೆ. ಆದರೂ ತಲೆತಲಾಂತರದಿಂದ ಮನೆಯ ಜವಾಬ್ದಾರಿ ಹೊತ್ತು ಗಂಡ-ಮಕ್ಕಳನ್ನು ನೋಡಿಕೊಳ್ಳುವ ಮಹಿಳೆಗೆ ಈ ಸಮಾಜ ಅನ್ಯಾಯ ಮಾಡಿದೆ ಎನಿಸುತ್ತದೆ.

ತಿಂಗಳು ತಿಂಗಳು ಸಂಬಳ ತರುವ ಕೆಲಸ ಮಾಡುವ ಜನ ಮಾತ್ರ ಕೆಲಸ ಮಾಡುವವರು, ಸಂಬಳಕ್ಕಾಗಿ ದುಡಿಯದೇ ತಮ್ಮ ಆಸೆ ಆಕಾಂಕ್ಷೆಗಳು, ಆದ್ಯತೆಗಳನ್ನೆಲ್ಲ ಬದಿಗಿಟ್ಟು ಸಂಸಾರಕ್ಕಾಗಿ ದುಡಿಯುವವರ ಶ್ರಮಕ್ಕೆ ಬೆಲೆಯೇ ಇಲ್ಲ ಎಂಬಂತಿರುತ್ತದೆ ಕೆಲವರ ನಡವಳಿಕೆ. ಮನೆಯೊಳಗೆ ಮಹಿಳೆ (ಅವಳು ಅಮ್ಮ, ಅಕ್ಕ, ಅತ್ತಿಗೆ... ಹೀಗೆ ಯಾರೇ ಆಗಿರಬಹುದು) ಪ್ರತಿನಿತ್ಯ ಮಾಡುವ ಕೆಲಸವನ್ನು ಇಷ್ಟೇ ಎಂದು ಹೇಳಲು ಸಾಧ್ಯವೇ ಇಲ್ಲ.

ಸಾಮಾನ್ಯವಾಗಿ ಅವರು ಮನೆಯ ಇತರರು ಏಳುವ ಮುನ್ನ ಏಳಬೇಕು. ಹಾಸಿಗೆಯಲ್ಲಿ ಕುಳಿತೇ ‘ಕಾಫಿ’ ಎನ್ನುವವರಿಗೆ ಅವರ ಇಚ್ಛೆ ಪೂರೈಸಬೇಕು. ಬಾಗಿಲು ಸಾರಿಸಿ, ರಂಗೋಲಿ ಹಾಕಬೇಕು. ಮಕ್ಕಳನ್ನು ಹಾಸಿಗೆಯಿಂದ ಏಳಿಸಬೇಕು. ತಿಂಡಿ, ಅಡುಗೆ ಸಿದ್ಧಪಡಿಸಬೇಕು. ಸ್ನಾನ ಮಾಡಿಸಿ ಯೂನಿಫಾರ್ಮ್ ತೊಡಿಸಬೇಕು. ಹೆಣ್ಣುಮಕ್ಕಳಾದರೆ ತಲೆಬಾಚಿ, ರಿಬ್ಬನ್ನು ಕಟ್ಟಿ, ಕರವಸ್ತ್ರ ಕೈಗೆ ನೀಡುವವರೆಗೆ ಎಲ್ಲವೂ ಅಮ್ಮನ ಕೆಲಸ. ಆಮೇಲೆ ಲಗುಬಗೆಯಿಂದ ಊಟದ ಡಬ್ಬಿ ಕೈಗೆ ಕೊಟ್ಟು ಮಕ್ಕಳನ್ನು ಶಾಲೆಗೆ ಹೊರಡಿಸಬೇಕು.

ಸಣ್ಣ ಮಕ್ಕಳಾದರೆ ಎಲ್ಲಕ್ಕಿಂತ ಕಷ್ಟದ ಕೆಲಸ ಶಾಲೆಗೆ ಹೋಗುವ ಮುನ್ನ ಅವರಿಗೆ ತಿನ್ನಿಸುವುದು. ಅದಕ್ಕೆ ಏನೇನು ಸರ್ಕಸ್ಸು ಮಾಡಬೇಕು ಎಂಬುದು ತಾಯಂದಿರಿಗೆ ಮಾತ್ರ ಗೊತ್ತು! ನಾನು ಗಮನಿಸಿರುವಂತೆ, ಮಕ್ಕಳಿಗೆ ತಿಂಡಿ ತಿನ್ನಿಸುವ ಕೆಲಸವನ್ನು ಮಾತ್ರ ಯಾರ ಮನೆಯಲ್ಲೂ ಅಪ್ಪ ಮಾಡುವುದಿಲ್ಲ. ಅದು ಅಮ್ಮನಿಗೇ ಮೀಸಲಾದ ಕೆಲಸ. ಯಾಕೋ ಗೊತ್ತಿಲ್ಲ!

ಅಷ್ಟುಹೊತ್ತಿಗೆ ಕಚೇರಿಗೆ ಹೊರಡಲು ಬರುವ ಗಂಡ ಮಹಾಶಯನ ಎಲ್ಲಾ ಅಗತ್ಯಗಳನ್ನು ಪೂರೈಸಬೇಕಿರುವುದು ಹೆಂಡತಿಯ ಕೆಲಸ. ಅಂತೂ ಬೆಳಿಗ್ಗೆ ಎದ್ದರೆ ರಾತ್ರಿ ಮಲಗುವವರೆಗೆ ಗಿರಿಗಿಟ್ಟಲೆ ತಿರುಗುವಂತೆ ಮನೆಯಲ್ಲಿ ಅಮ್ಮನ, ಹೆಂಡತಿಯ ಕೆಲಸಗಳು ನಡೆಯುತ್ತಲೇ ಇರುತ್ತವೆ. ಆದರೆ ಹೆಚ್ಚಿನ ಮನೆಗಳಲ್ಲಿ ‘ನೀನು ತಿಂಡಿ ತಿಂದೆಯಾ?’, ‘ಊಟ ಮಾಡಿದೆಯಾ?’ ಎಂದು ಅವರನ್ನು ಯಾರೂ ಕೇಳುವವರಿಲ್ಲ. ಅಮ್ಮನಿಗೆ ಹುಷಾರಿಲ್ಲದಿದ್ದರೆ ಅವಳು ಕೈಲಾಗದೆ ಮಲಗುವವರೆಗೂ ಯಾರಿಗೂ ಅದು ಗಮನಕ್ಕೇ ಬರುವುದಿಲ್ಲ.

ಎಲ್ಲಾ ಮನೆಗಳಲ್ಲಿ ಹೀಗೇ ನಡೆಯುತ್ತದೆ, ಎಲ್ಲಾ ಕಡೆ ಗಂಡಸರು ಅಮಾನವೀಯರೇ ಆಗಿರುತ್ತಾರೆ ಎಂದು ಹೇಳಲಾಗದು. ಆದರೆ ಹೆಚ್ಚಿನ ಮನೆಗಳಲ್ಲಿ ಇಂದಿಗೂ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗಿಯೇನೂ ಇರುವುದಿಲ್ಲ. ಮನೆಯಲ್ಲಿ ಆಕೆ ಎಷ್ಟೆಲ್ಲ ಕೆಲಸ ಮಾಡುತ್ತಾಳೆ, ಅವಳ ಅನುಪಸ್ಥಿತಿಯಲ್ಲಿ ಆ ಎಲ್ಲ ಕೆಲಸಗಳನ್ನು ಮಾಡಲು ಎಷ್ಟು ಜನ ಬೇಕು ಎಂಬುದು ಯಾರಿಗೂ ಅರ್ಥವಾಗುವುದಿಲ್ಲ. ಅಷ್ಟಾಗಿಯೂ ಜನ ಹೇಳುವುದು ‘ಓ ಹೌಸ್ ವೈಫಾ’ ಎಂದು. ಅಂದರೆ ಕೆಲಸಕ್ಕೆ ಹೋಗುವುದಿಲ್ಲವೇ ಎಂಬ ಅರ್ಥದಲ್ಲಿ.

ಅವಳು ಮನೆಯಲ್ಲಿದ್ದೇ ಕೆಲಸಕ್ಕೆ ಹೋಗುವವರ ನಾಲ್ಕು ಪಟ್ಟು ಕೆಲಸ ಮಾಡುತ್ತಾಳೆ. ಇನ್ನು ಕೆಲಸಕ್ಕೆ ಹೋಗುವ ಹೆಂಗಸರು ಸಾಮಾನ್ಯವಾಗಿ ಮನೆಯಲ್ಲಿ ಇದೆಲ್ಲವನ್ನೂ ಮಾಡಿ ಮುಗಿಸಿ ಕೆಲಸಕ್ಕೆ ಹೋಗಬೇಕು. ನನ್ನ ಮಹಿಳಾ ಸಹೋದ್ಯೋಗಿ ಒಬ್ಬರಿದ್ದರು. ಮೂವತ್ತು ವರ್ಷಗಳ ಹಿಂದೆ ಅವರು ದಿನನಿತ್ಯ ರೈಲಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಹೋಗಿ ಕೆಲಸ ಮಾಡಿ ವಾಪಸ್ ಬರುತ್ತಿದ್ದರು. ಬಂದವರು ರಿಕ್ಷಾ ಹಿಡಿದು, ಹತ್ತು ಕಿ.ಮೀ. ದೂರದಲ್ಲಿದ್ದ ಮನೆಗೆ ಹೋಗಿ, ಮನೆಯವರಿಗೆ ಅಡುಗೆ ಮಾಡಬೇಕಿತ್ತು. ಮರುದಿನ ಬೆಳಿಗ್ಗೆ ಮತ್ತೆ ನಾಲ್ಕು ಗಂಟೆಗೆ ಎದ್ದು ಕುಟುಂಬದವರಿಗೆ ತಿಂಡಿ, ಮಧ್ಯಾಹ್ನದ ಊಟವನ್ನು ಸಿದ್ಧಪಡಿಸಿ ತಮಗೆ ಬುತ್ತಿ ಕಟ್ಟಿಕೊಂಡು ಮತ್ತೆ ರೈಲಿಗೆ ಹೊರಡಬೇಕಿತ್ತು. ಅವರು ಅಷ್ಟು ದೂರ ಹೋಗಿ ಬರುತ್ತಾರೆ ಎಂಬ ಕಾರಣಕ್ಕೆ ಮನೆಯವರೇನೂ ಆಕೆಯ ಕೆಲಸಗಳಲ್ಲಿ ನೆರವಾಗುತ್ತಿರಲಿಲ್ಲ. ಈಗಲೂ ಪ್ರತಿನಿತ್ಯ ಕೆಲಸಕ್ಕಾಗಿ ಬೆಂಗಳೂರು- ಮೈಸೂರಿಗೆ ಓಡಾಡುವ ಮಹಿಳೆಯರು ತುಂಬಾ ಜನ ಇದ್ದಾರೆ. ಅವರ ಪ್ರಯಾಣದ ಅವಧಿ ಸ್ವಲ್ಪಮಟ್ಟಿಗೆ ಕಡಿಮೆ ಆಗಿರಬಹುದು, ಆದರೆ ಕಷ್ಟ ಮಾತ್ರ ಕಡಿಮೆ ಆದಂತಿಲ್ಲ.

ಮನೆಯಲ್ಲಿ ತಾಯಿ, ಹೆಂಡತಿಯಂತಹ ಹಲವು ಪಾತ್ರಗಳನ್ನು ನಿರ್ವಹಿಸುವ ಹೆಣ್ಣುಮಕ್ಕಳು ಮಾಡುವ ದಿನನಿತ್ಯದ ಕೆಲಸಗಳಿಗೆ ಬೆಲೆ ಕಟ್ಟಲಾಗದು ಎಂಬ ಸತ್ಯ ನಮ್ಮವರಿಗೆ ಅರ್ಥವಾಗುವುದು ಯಾವಾಗ?

ವಾಚಕರ ವಾಣಿ

ನ್ಯಾಯಮಂಡಳಿ ಪುನರ್‌ರಚನೆಯಾಗಲಿ

ಗೇಣಿ ಜಮೀನಿನ ವ್ಯಾಜ್ಯ ನಿರ್ವಹಣೆಗೆ ಇರುವ ಭೂ ಸುಧಾರಣಾ ನ್ಯಾಯಮಂಡಳಿಯು ವಿಧಾನಸಭಾ ಚುನಾವಣೆಯ ಸಮಯದಲ್ಲಿ ವಿಸರ್ಜನೆಯಾಗಿದ್ದು, ಇನ್ನೂ ಪುನರ್‌ರಚನೆ ಆಗಿಲ್ಲ. ಒಂದು ವರ್ಷದಿಂದ ಸಾವಿರಾರು ರೈತರ ಕಡತಗಳು ಬಾಕಿ ಉಳಿದಿವೆ. ತಾಲ್ಲೂಕು ಕಚೇರಿಗೆ ನಿತ್ಯ ಅವರು ಅಲೆದಾಡಬೇಕಾಗಿದೆ. ತಮ್ಮ ಜಮೀನಿನ ಕಾಗದಪತ್ರಗಳನ್ನು ತಮ್ಮ ಜೀವಮಾನದಲ್ಲಿ ಸರಿಪಡಿಸಿಕೊಳ್ಳಲು ಆಗುತ್ತದೆಯೇ ಎಂಬ ಅನುಮಾನ ಅವರನ್ನು ಕಾಡತೊಡಗಿದೆ. ಸರ್ಕಾರ ಹಾಗೂ ರಾಜಕೀಯ ಪಕ್ಷಗಳು ತಮ್ಮ ರಾಜಕೀಯ ಮೇಲಾಟಗಳನ್ನು ಬಿಟ್ಟು ಜನರ ಅಗತ್ಯಗಳ ಕಡೆ ಗಮನ ಹರಿಸಬೇಕು.

ಗೌತಮ್ ಟಿ., ತೀರ್ಥಹಳ್ಳಿ

ಚಾಲನಾ ಪರವಾನಗಿ: ಕಟ್ಟುನಿಟ್ಟಾಗಲಿ ಪರೀಕ್ಷೆ

‘ದೇಶದಲ್ಲಿ ನಡೆಯುವ ರಸ್ತೆ ಅಪಘಾತಗಳಲ್ಲಿ ವಾರ್ಷಿಕ ಒಂದೂವರೆ ಲಕ್ಷ ಜನ ಸಾವನ್ನಪ್ಪುತ್ತಿದ್ದಾರೆ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಹೇಳಿರುವುದನ್ನು ಓದಿ (ಪ್ರ.ವಾ., ಆ. 29) ಬೇಸರವಾಯಿತು. ಪ್ರತಿವರ್ಷ ಇಷ್ಟು ದೊಡ್ಡ ಪ್ರಮಾಣದಲ್ಲಿ ಸಾವು ಸಂಭವಿಸುತ್ತಿದ್ದರೂ ಎಷ್ಟೋ ವಾಹನ ಸವಾರರು ದಂಡ ತಪ್ಪಿಸಲು ಮಾತ್ರ ಸಂಚಾರ ನಿಯಮಗಳನ್ನು ಪಾಲನೆ ಮಾಡುತ್ತಿರುತ್ತಾರೆ. ಸಂಚಾರ ಪೊಲೀಸರು ಇಲ್ಲದ ಕಡೆ ಅಥವಾ ಸಿ.ಸಿ. ಟಿ.ವಿ. ಕ್ಯಾಮೆರಾ ಕಣ್ಗಾವಲು ಇಲ್ಲದ ಕಡೆ ಸಂಚಾರ ನಿಯಮಗಳ ಉಲ್ಲಂಘನೆ ಎಗ್ಗಿಲ್ಲದಂತೆ ನಡೆಯುತ್ತದೆ. ಈ ಬಗೆಯ ಉಲ್ಲಂಘನೆಗಳು ಅಪಘಾತಗಳಿಗೆ ದಾರಿ ಮಾಡುತ್ತವೆ. ವಾಹನ ಚಾಲನಾ ಪರವಾನಗಿ ನೀಡುವಾಗ ನಡೆಸುವ ಪರೀಕ್ಷಾರ್ಥ ಚಾಲನೆಯಲ್ಲಿ ಕಟ್ಟುನಿಟ್ಟಾಗಿ ಪರೀಕ್ಷೆ ನಡೆಸಬೇಕು. ಸಂಚಾರ ನಿಯಮಗಳ ಸೂಕ್ತ ಅರಿವೇ ಇಲ್ಲದವರು ವಾಹನ ಚಲಾಯಿಸಿ ಅನ್ಯರ ಸಾವಿಗೆ ಕಾರಣವಾಗುವುದನ್ನು ತಪ್ಪಿಸಬೇಕು.

ಈರಣ್ಣ ಎನ್.ವಿ., ಶಿರಾ

ಅಡ್ಜಸ್ಟ್ ಆಗಬೇಕು!

ಬೆಂಗಳೂರು ಜೈಲಿನ ಫುಡ್, ಬೆಡ್
ಅಡ್ಜಸ್ಟ್ ಆಗಿಲ್ಲ ಎಂದವರೀಗ
ಬಳ್ಳಾರಿ ಜೈಲಿಗೆ ಹೋಗಿದ್ದಾರೆ...
ಅಲ್ಲಿ ಬಿಸಿಲೂ ಸೇರಿ ಎಲ್ಲದರ ಜೊತೆ
ಅಡ್ಜಸ್ಟ್ ಆಗಲೇಬೇಕೀಗ!

ಜೆ.ಬಿ.ಮಂಜುನಾಥ
ಪಾಂಡವಪುರ

ಜಾನಪದ ಅಧ್ಯಯನ ವಿಭಾಗ: ಇಂಥ ಸ್ಥಿತಿಯೇಕೆ?

ಕರ್ನಾಟಕದ ನೆಲ, ಜಲ, ನಾಡು– ನುಡಿ ಹಾಗೂ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿ ಬೆಳೆಸುವ ಸದುದ್ದೇಶದಿಂದ ಸ್ಥಾಪಿತವಾದ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ಮತ್ತು ಸಂಶೋಧನಾ ವಿಭಾಗವು ಇಂದು ಅನಾಥವಾಗಿ ಬಿಕೋ ಎನ್ನುತ್ತಿದೆ.

ಒಬ್ಬರು ಪ್ರಾಧ್ಯಾಪಕರನ್ನು ಹೊರತುಪಡಿಸಿ ಉಳಿದ ಎಲ್ಲ ಪ್ರಾಧ್ಯಾಪಕರು ನಿವೃತ್ತರಾಗಿದ್ದಾರೆ. ಹಾಲಿ ಸೇವೆ ಸಲ್ಲಿಸುತ್ತಿದ್ದ ಪ್ರಾಧ್ಯಾಪಕರನ್ನು ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಕುಲಸಚಿವರನ್ನಾಗಿ ಸರ್ಕಾರ ನೇಮಿಸಿದೆ. ಎರಡು ವರ್ಷಗಳಿಂದ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರೇ ಇಲ್ಲ.

ಇಂಥ ಪರಿಸ್ಥಿತಿಯಲ್ಲಿ ಜಾನಪದದಲ್ಲಿ ಅಧ್ಯಯನ ಮತ್ತು ಸಂಶೋಧನೆಯನ್ನು ಕೈಗೊಳ್ಳಲು ಇಚ್ಛಿಸುವ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಸಮಸ್ಯೆ ಎದುರಾಗಿದೆ. ಹಾಲಿ ಇರುವ ಏಕೈಕ ಪ್ರಾಧ್ಯಾಪಕರು ಕರ್ನಾಟಕ ಜಾನಪದ ವಿಶ್ವವಿದ್ಯಾಲಯಕ್ಕೆ ಅತ್ಯಂತ ಅನಿವಾರ್ಯವಾದ ಕುಲಸಚಿವರೇ ಅಥವಾ ಅವರು ತಮ್ಮ ಮೂಲಸ್ಥಾನವಾದ ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದ ಏಕೈಕ ಪ್ರಾಧ್ಯಾಪಕರಾಗಿ ವಿಭಾಗವನ್ನು ಮುನ್ನಡೆಸುವ ಗುರುತರವಾದ ಜವಾಬ್ದಾರಿಯನ್ನು ಹೊಂದಿರಬೇಕಾದದ್ದು ಸಮಯೋಚಿತವೇ? ರಾಜ್ಯ ಸರ್ಕಾರ ಈ ಬಗ್ಗೆ ಗಂಭೀರವಾಗಿ ಯೋಚಿಸಲಿ.

ಬಸಪ್ಪ ಯ. ಬಂಗಾರಿ, ಬೆಂಗಳೂರು

ಅದೇ ಹೇಳಿಕೆ, ಅದೇ ಗಿಳಿಪಾಠ!

‘ಜಾರ್ಖಂಡ್‌ನ ಹಿತಾಸಕ್ತಿಗಾಗಿ ನಾನು ಬಿಜೆಪಿ ಸೇರುವ ನಿರ್ಧಾರ ತೆಗೆದುಕೊಂಡಿದ್ದೇನೆ’ ಎಂದು ಚಂಪೈ ಸೊರೇನ್ ಅವರು ಹೇಳಿರುವುದು (ಪ್ರ.ವಾ., ಆ. 29) ಬಹಳ ತಮಾಷೆಯಾಗಿದೆ. ಕರ್ನಾಟಕದಲ್ಲಿ 2008 ಮತ್ತು 2018ರ ಸುಮಾರಿನಲ್ಲಿ ಇಂತಹುದೇ ಹೇಳಿಕೆ ನೀಡಿ ಎರಡು ಬಾರಿ ಶಾಸನಸಭೆಗೆ ಆಯ್ಕೆಯಾಗಲು ನೆರವಾದ ಪಕ್ಷಕ್ಕೆ ಶಾಸಕರು ಸೋಡಾ ಚೀಟಿ ನೀಡಿದ ಪ್ರಸಂಗವನ್ನು ರಾಜ್ಯ ಹಾಗೂ ದೇಶದ ಜನ ಮರೆತಿರಲಾರರು. ಹಣ, ಅಧಿಕಾರಕ್ಕಾಗಿ ರಾಜ್ಯದ ಹಿತದೃಷ್ಟಿ, ಕ್ಷೇತ್ರದ ಅಭಿವೃದ್ಧಿ ಎಂದೆಲ್ಲಾ ಕತೆ ಕಟ್ಟಿದ ಅನೇಕ ರಾಜಕಾರಣಿಗಳು, ಶಾಸಕರು, ಸಂಸದರು ಕರ್ನಾಟಕ, ಗೋವಾ, ಮಹಾರಾಷ್ಟ್ರ, ಮಧ್ಯಪ್ರದೇಶ ಸೇರಿದಂತೆ ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲೂ ಇದ್ದಾರೆ. ಅಂತಹವರು ಪ್ರತಿನಿಧಿಸಿದ ಕ್ಷೇತ್ರಗಳು ಇಂದಿಗೂ ರಸ್ತೆ, ಕುಡಿಯುವ ನೀರು, ವಿದ್ಯುತ್, ಶಾಲೆ– ಕಾಲೇಜು, ಆಸ್ಪತ್ರೆ ಸೇರಿದಂತೆ ಹಲವು ನಾಗರಿಕ ಸೌಲಭ್ಯಗಳಿಲ್ಲದೆ ಹಾಗೇ ಇವೆ. ಇವರು ಮಾತ್ರ ದೇಶದ ಅಭಿವೃದ್ಧಿಯ ಹೆಸರಿನಲ್ಲಿ ಮೂರು ತಲೆಮಾರಿಗೆ ಆಗುವಷ್ಟು ಸಂಪಾದನೆ ಮಾಡಿಕೊಂಡಿದ್ದಾರೆ. ಈಗ ಚಂಪೈ ಸೊರೇನ್ ಆ ಯಾದಿಗೆ ಹೊಸ ಸೇರ್ಪಡೆಯಷ್ಟೇ.

ತತ್ವ, ಅಭಿವೃದ್ಧಿ, ದೇಶಾಭಿಮಾನ, ನಡವಳಿಕೆಗಳೆಲ್ಲಾ ಹಳೆ ಗಿಳಿಪಾಠಗಳೇ. ಜನಪ್ರತಿನಿಧಿಯೊಬ್ಬರ ಮೇಲೆ ಕಣ್ಗಾವಲು ಇಡಲಾಗಿದೆ ಎಂಬ ಆರೋಪ ಇದೇ ಮೊದಲಲ್ಲ. ಇದು ಕೂಡ ಈ ದೇಶದಲ್ಲಿ ಬಹಳ ಹಳೆಯ ರಾಜಕೀಯ ಪ್ರಸಂಗ. ಚಂದ್ರಶೇಖರ್ ಪ್ರಧಾನಿ ಆಗಿದ್ದಾಗ, ಮಾಜಿ ಪ್ರಧಾನಿಯೊಬ್ಬರಿಂದ ಇದೇ ರೀತಿಯ ಆರೋಪ ಕೇಳಿಬಂದಿತ್ತು. ಆಗ ಚಂದ್ರಶೇಖರ್ ನೇತೃತ್ವದ ಸರ್ಕಾರಕ್ಕೆ ಕಾಂಗ್ರೆಸ್ ನೀಡಿದ ಬೆಂಬಲ ವಾಪಸ್ ಪಡೆದ ನಂತರ ರಾಜಕೀಯ ವಲಯದಲ್ಲಿ ಸಂಭವಿಸಿದ ರಾಜಕೀಯ ನಿರ್ವಾತ, ಆಘಾತಕಾರಿ ಬೆಳವಣಿಗೆಯನ್ನು ಜನ ಮರೆತಿರಲಾರರು. ಉನ್ನತ ಸ್ಥಾನದಲ್ಲಿದ್ದ ಜನಪ್ರತಿನಿಧಿಯೊಬ್ಬರು ಪಕ್ಷ ಬದಲಿಸುವ ವೇಳೆ ನೀಡುವ ಇಂತಹ ನುಡಿಮುತ್ತುಗಳನ್ನು ಜನ ಕೇಳುತ್ತಿರುವುದು ಇದು ಮೊದಲೇನಲ್ಲ. ಸೊರೇನ್ ಅವರ ಅನುಮಾನಾಸ್ಪದ ನಡವಳಿಕೆಯನ್ನು ಕಂಡು ಅವರದೇ ಪಕ್ಷದವರು ಅವರ ಚಲನವಲನಗಳ ಮೇಲೆ ನಿಗಾ ಇರಿಸಿರಬಹುದು. ಮಾಧ್ಯಮಗಳು ಇಂತಹವರಿಗೆ ಪ್ರಚಾರ ನೀಡಬಾರದು.

ಎಂ.ಜಿ.ರಂಗಸ್ವಾಮಿ, ಹಿರಿಯೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಹಣಕಾಸು ಆಯೋಗ

ಪಾಲು ಹಂಚಿಕೆ: ಏಕೀ ವ್ಯತ್ಯಾಸ?

16ನೇ ಹಣಕಾಸು ಆಯೋಗದ ಅಧ್ಯಕ್ಷರಾದ ಅರವಿಂದ ಪನಗಡಿಯಾ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಹಣಕಾಸು ಹಂಚಿಕೆಯ ಬಗ್ಗೆ ಚರ್ಚೆ ನಡೆಸಿದ್ದಾರೆ. ಈ ವೇಳೆ ಸಿದ್ದರಾಮಯ್ಯ ಅವರು ತೆರಿಗೆ ಹಂಚಿಕೆಯಲ್ಲಿ ರಾಜ್ಯಕ್ಕೆ ಆದ ಅನ್ಯಾಯವನ್ನು ಪುನರುಚ್ಚರಿಸಿದ್ದಾರೆ. ಹಣಕಾಸು ಆಯೋಗದ ರಚನೆಯ ಉದ್ದೇಶ, ರಾಜ್ಯಗಳಿಗೆ ತೆರಿಗೆ ಪಾಲು ನೀಡುವಲ್ಲಿನ ಮಾನದಂಡಗಳ ಬಗೆಗಿನ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ

ಪ್ರಜಾವಾಣಿ ವಾರ್ತೆ

ಭಾರತ ಒಕ್ಕೂಟದ ಕೆಲವು ರಾಜ್ಯಗಳು– ಮುಖ್ಯವಾಗಿ ದಕ್ಷಿಣದ ರಾಜ್ಯಗಳು– ಕೇಂದ್ರದಿಂದ ತಮಗೆ ನ್ಯಾಯಯುತವಾಗಿ ಸಿಗಬೇಕಿದ್ದ ತೆರಿಗೆ ಪಾಲು ಸಿಗುತ್ತಿಲ್ಲ ಎಂದು ಆಕ್ಷೇಪಿಸಿ, ಪ್ರತಿಭಟನೆಯನ್ನೂ ನಡೆಸಿದ್ದವು. ತೆರಿಗೆ ಸಂಗ್ರಹದಲ್ಲಿ ತಮ್ಮ ಪಾಲಿಗೆ ತಕ್ಕಂತೆ ಕೇಂದ್ರವು ತಮಗೆ ಹಣಕಾಸು ಹಂಚಿಕೆ ಮಾಡುತ್ತಿಲ್ಲ ಎನ್ನುವುದು ರಾಜ್ಯಗಳ ಅಸಮಾಧಾನಕ್ಕೆ ಕಾರಣವಾಗಿತ್ತು.

ಕಾರ್ಪೊರೇಟ್ ತೆರಿಗೆ, ಆದಾಯ ತೆರಿಗೆ, ಸೆಂಟ್ರಲ್ ಜಿಎಸ್‌ಟಿ, ಸಮಗ್ರ ಸರಕು ಮತ್ತು ಸೇವಾ ತೆರಿಗೆಯ (ಐಜಿಎಸ್‌ಟಿ) ಕೇಂದ್ರದ ಪಾಲಿನಲ್ಲಿ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತದೆ. ಈ ಹಂಚಿಕೆ ನಡೆಯುವುದು ಹಣಕಾಸು ಆಯೋಗದ ಶಿಫಾರಸಿನ ಮೇರೆಗೆ.

ಸಂವಿಧಾನದ 270ನೇ ವಿಧಿಯು ಕೇಂದ್ರ ಮತ್ತು ರಾಜ್ಯಗಳ ನಡುವಿನ ತೆರಿಗೆ ಹಂಚಿಕೆಯ ಬಗ್ಗೆ ವಿವರಿಸುತ್ತದೆ. ಕೇಂದ್ರವು ರಾಜ್ಯಗಳಿಗೆ ತೆರಿಗೆಯ ಪಾಲನ್ನು ಹಂಚುವುದರ ಜತೆಗೆ ಕೇಂದ್ರ ಹಣಕಾಸು ಆಯೋಗದ ಶಿಫಾರಸಿಗೆ ತಕ್ಕಂತೆ ಅನುದಾನವನ್ನೂ ನೀಡುತ್ತದೆ. ಆದರೆ, ಕೇಂದ್ರವು ಸಂಗ್ರಹ ಮಾಡುವ ಸೆಸ್ ಮತ್ತು ಸರ್‌ಚಾರ್ಜ್‌ನಲ್ಲಿ ರಾಜ್ಯಗಳಿಗೆ ಪಾಲು ನೀಡುವುದಿಲ್ಲ.

ಕೇಂದ್ರ ಸರ್ಕಾರ ಸಂಗ್ರಹಿಸುವ ತೆರಿಗೆಯಲ್ಲಿ ಶೇ 41ರಷ್ಟು ಮೊತ್ತವನ್ನು ರಾಜ್ಯ ಸರ್ಕಾರಗಳಿಗೆ 14 ಕಂತುಗಳಲ್ಲಿ ಹಂಚಬೇಕೆಂದು 15ನೇ ಹಣಕಾಸು ಆಯೋಗವು ಶಿಫಾರಸು ಮಾಡಿತ್ತು. ವಿವಿಧ ಮಾನದಂಡಗಳ ಆಧಾರದಲ್ಲಿ ಹಣಕಾಸು ಆಯೋಗವು ರಾಜ್ಯಗಳ ಪಾಲನ್ನು ಹಂಚಿಕೆ ಮಾಡಿತ್ತು.

ಹಣಕಾಸು ಆಯೋಗದ ಶಿಫಾರಸಿನ ಅನುಸಾರ ರಾಜ್ಯಗಳಿಗೆ ತೆರಿಗೆ ಹಂಚಿಕೆ ಮಾಡಲಾಗುತ್ತಿದ್ದರೂ, ಕರ್ನಾಟಕವು ಸೇರಿದಂತೆ ಕೆಲವು ರಾಜ್ಯಗಳು ಕೇಂದ್ರವು ತಾರತಮ್ಯ ಧೋರಣೆ ಅನುಸರಿಸುತ್ತಿದೆ ಎಂದು ಆರೋಪಿಸುತ್ತಿವೆ. ಕೇಂದ್ರಕ್ಕೆ ಪ್ರತಿ ರಾಜ್ಯವು ಪಾವತಿಸುವ ಒಂದು ರೂಪಾಯಿ ತೆರಿಗೆಗೆ ಪ್ರತಿಯಾಗಿ ಅವುಗಳಿಗೆ ಕೇಂದ್ರದಿಂದ ಸಿಗುವ ಪಾಲಿನಲ್ಲಿ ಭಾರಿ ಅಂತರ ಇದೆ. ಉತ್ತರ ಪ್ರದೇಶ, ಬಿಹಾರದಂಥ ರಾಜ್ಯಗಳಿಗೆ ಹೋಲಿಸಿದರೆ, ಉದ್ಯಮಗಳು ಅಭಿವೃದ್ಧಿ ಹೊಂದಿರುವ ರಾಜ್ಯಗಳಿಗೆ ಸಿಗುವ ಮೊತ್ತವು ಕಡಿಮೆ ಇದೆ. ಮತ್ತೊಂದು ಮುಖ್ಯ ವಿಚಾರ ಎಂದರೆ, ಕಳೆದ ಆರು ಹಣಕಾಸು ಆಯೋಗಗಳ ಅವಧಿಯಲ್ಲೂ ದಕ್ಷಿಣದ ರಾಜ್ಯಗಳಿಗೆ ನೀಡಲಾಗುತ್ತಿರುವ ತೆರಿಗೆ ಪಾಲು ಕಡಿಮೆ ಆಗುತ್ತಾ ಬಂದಿದೆ.

ರಾಜ್ಯಗಳ ತೆರಿಗೆಯ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ಆದಾಯದ ಅಂತರ ಕಡಿಮೆ ಮಾಡುವುದು ಮತ್ತು ಅಗತ್ಯಗಳ (ಜನಸಂಖ್ಯೆ, ಪ್ರದೇಶ ಮತ್ತು ಅರಣ್ಯ) ಆಧಾರದಲ್ಲಿ ತೆರಿಗೆ ಪಾಲು ಹಂಚಿಕೆ ಮಾಡುತ್ತಿರುವುದು ಇದಕ್ಕೆ ಕಾರಣ ಎನ್ನಲಾಗುತ್ತಿದೆ. 15ನೇ ಹಣಕಾಸು ಆಯೋಗದ ಪ್ರಕಾರ, ಆದಾಯದ ಕೊರತೆ, ನಿರ್ದಿಷ್ಟ ವಲಯದ ಆಧಾರದಲ್ಲಿ ಕೆಲವು ರಾಜ್ಯಗಳಿಗೆ ತೆರಿಗೆ/ಅನುದಾನ ಹಂಚಿಕೆ ಮಾಡಲಾಗಿದೆ. ಜನಸಂಖ್ಯೆ ಮತ್ತು ರಾಜ್ಯಗಳ ಪ್ರಾದೇಶಿಕತೆಯನ್ನೂ ಆಧರಿಸಿ ನೆರವು ನೀಡಲಾಗಿದೆ. ಕೇಂದ್ರದ ಈ ತೆರಿಗೆ ಹಂಚಿಕೆಯ ನೀತಿ ವಿರುದ್ಧ ಕೆಲವು ರಾಜ್ಯಗಳು ಆಕ್ಷೇಪಣೆ ಎತ್ತಿವೆ.

ರಾಜ್ಯಗಳ ಆದಾಯದ ಪ್ರಮಾಣ ಶೇ 40 ಆಗಿದ್ದರೆ, ವೆಚ್ಚದ ಪ್ರಮಾಣ ಶೇ 60 ಆಗಿದೆ. ಸಾಮಾನ್ಯವಾಗಿ, ಹಣಕಾಸು ಆಯೋಗವು ಈ ಅಸಮಾನತೆಯನ್ನು ಗುರಿಯಾಗಿಸಿಕೊಂಡು, ಹಣಕಾಸು ಹಂಚಿಕೆಯ ಸೂತ್ರಗಳನ್ನು ನಿಗದಿಪಡಿಸುತ್ತದೆ. ಸರಾಸರಿ ತೆರಿಗೆ ವರಮಾನದಲ್ಲಿ (ಜಿಟಿಆರ್) ಸೆಸ್ ಮತ್ತು ಸರ್‌ಚಾರ್ಜ್ ಪ್ರಮಾಣ ಹೆಚ್ಚಾಗುತ್ತಿದೆ. ಹೀಗಾಗಿ ರಾಜ್ಯಗಳಿಗೆ ತೆರಿಗೆಯ ಹಂಚಿಕೆಯ ಪಾಲು ಇಳಿಕೆಯಾಗುತ್ತಿದೆ ಎನ್ನುವ ವಿಶ್ಲೇಷಣೆ ಇದೆ. 2011–12ರಲ್ಲಿ ಜಿಟಿಆರ್‌ನಲ್ಲಿ ಶೇ 10.4ರಷ್ಟಿದ್ದ ಸೆಸ್ ಮತ್ತು ಸರ್‌ಚಾರ್ಜ್ ಪ್ರಮಾಣವು 2021ರ ವೇಳೆಗೆ ಶೇ 20.2ಕ್ಕೆ ಏರಿಕೆಯಾಗಿತ್ತು.

ದೇಶದ ಸಮಗ್ರ ಅಭಿವೃದ್ಧಿಗೆ ರಾಜ್ಯಗಳು ಕೊಡುಗೆ ನೀಡಬೇಕು ಎನ್ನುವುದೇ ನಿಜವೇ ಆದರೂ, ಒಕ್ಕೂಟ ವ್ಯವಸ್ಥೆಯಲ್ಲಿ ತೆರಿಗೆ ಹಂಚಿಕೆಯ ವಿಚಾರದಲ್ಲಿ ಕೇಂದ್ರವು ಕೆಲವೊಂದು ಕ್ರಮಗಳನ್ನು ಅನುಸರಿಸಬೇಕು ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ರಾಜ್ಯಕ್ಕೆ ತೆರಿಗೆ ಪಾಲು

4.71%

14ನೇ ಹಣಕಾಸು ಆಯೋಗವು ಕೇಂದ್ರದ ತೆರಿಗೆ ಆದಾಯದಲ್ಲಿನ ರಾಜ್ಯಗಳ ಬಾಬ್ತಿನಲ್ಲಿ ಕರ್ನಾಟಕಕ್ಕೆ ಮಾಡಿದ್ದ ಹಂಚಿಕೆ ಪ್ರಮಾಣ

3.65%

15ನೇ ಹಣಕಾಸು ಆಯೋಗವು ಕೇಂದ್ರದ ತೆರಿಗೆ ಆದಾಯದಲ್ಲಿನ ರಾಜ್ಯಗಳ ಬಾಬ್ತಿನಲ್ಲಿ ರಾಜ್ಯಕ್ಕೆ ಮಾಡಿರುವ ಹಂಚಿಕೆ ಪ್ರಮಾಣ

ತಜ್ಞರ ಸಲಹೆಗಳು

- ಕೇಂದ್ರವು ಸಂಗ್ರಹಿಸುವ ಸೆಸ್ ಮತ್ತು ಸರ್‌ಚಾರ್ಜ್‌ನ ಒಂದು ಪಾಲನ್ನು ರಾಜ್ಯಗಳಿಗೆ ಕೂಡ ಹಂಚಿಕೆ ಮಾಡಬೇಕು.
- ತೆರಿಗೆಯ ಹಂತಗಳಲ್ಲಿ ಬದಲಾವಣೆ ಮಾಡುವ ಮೂಲಕ ಕೇಂದ್ರವು ನಿಧಾನವಾಗಿ ಕೆಲವು ರೀತಿಯ ಸೆಸ್ ಮತ್ತು ಸರ್‌ಚಾರ್ಜ್‌ಗಳನ್ನು ರದ್ದುಪಡಿಸಬೇಕು
- ರಾಜ್ಯಗಳ ಜಿಎಸ್‌ಟಿ ಕೊಡುಗೆಯನ್ನೂ ತೆರಿಗೆ ಹಂಚಿಕೆಯ ಒಂದು ಮಾನದಂಡವನ್ನಾಗಿ ಮುಂದಿನ ಹಣಕಾಸು ಆಯೋಗವು ಅಳವಡಿಸಿಕೊಳ್ಳಬೇಕು
- ಜಿಎಸ್‌ಟಿ ಮಂಡಳಿಯ ರೂಪದಲ್ಲೇ ಹಣಕಾಸು ಆಯೋಗದ ರಚನೆ ಮತ್ತು ಕಾರ್ಯದಲ್ಲಿ ರಾಜ್ಯಗಳ ಭಾಗವಹಿಸುವಿಕೆ ಸಾಧ್ಯವಾಗುವಂಥ ವ್ಯವಸ್ಥೆ ರೂಪಿಸಬೇಕು

ಕೇಂದ್ರದಿಂದ ರಾಜ್ಯಕ್ಕೆ ಸಿಕ್ಕಿದ್ದು

ಅನುದಾನ (ಕೋಟಿ ₹ಗಳಲ್ಲಿ)

ವರ್ಷ	ಕೇಂದ್ರದ ತೆರಿಗೆ ಪಾಲು	ಕೇಂದ್ರದ ಅನುದಾನ	ಒಟ್ಟು
14ನೇ ಹಣಕಾಸು ಆಯೋಗ (2015–2020)			
2015-16	23,983	13,929	37,912
2016-17	28,760	15,703	44,463
2017-18	28,547	21,641	50,188
2018–19	35,188	25,481	60,669
2019-20	30,919	34,480	65,399
2020-21*	21,694	30,076	51,770
15ನೇ ಹಣಕಾಸು ಆಯೋಗ (2021–2026)			
2021–22	33,283	41,936	75,219
2022–23	34,596	22,281	56,877
2023-24	40,280	-	-

*ಕೋವಿಡ್ ಸಂದರ್ಭ

ಹಣಕಾಸು ಆಯೋಗದ ರಚನೆ

ಹಣಕಾಸು ಆಯೋಗವು ಒಂದು ಸಾಂವಿಧಾನಿಕ ಸಂಸ್ಥೆಯಾಗಿದ್ದು, ಅದು ಕೇಂದ್ರ ಮತ್ತು ರಾಜ್ಯಗಳ ನಡುವೆ ಸಾಂವಿಧಾನಿಕ ವ್ಯವಸ್ಥೆಗಳು ಮತ್ತು ಪ್ರಸ್ತುತ ಅವಶ್ಯಕತೆಗಳ ಪ್ರಕಾರ ತೆರಿಗೆ ಹಂಚಿಕೆಯ ವಿಧಾನ ಮತ್ತು ಸೂತ್ರವನ್ನು ನಿರ್ಧರಿಸುತ್ತದೆ.

ಕೇಂದ್ರ ಸರ್ಕಾರವು ಸಂವಿಧಾನದ 280ನೇ ವಿಧಿಯ ಷರತ್ತು (1)ರ ಅನುಸಾರವಾಗಿ ಐದು ವರ್ಷಗಳಿಗೊಮ್ಮೆ ಹಣಕಾಸು ಆಯೋಗವನ್ನು ರಚಿಸುತ್ತದೆ. ಆಯೋಗವು ಒಬ್ಬ ಅಧ್ಯಕ್ಷ ಸೇರಿದಂತೆ ನಾಲ್ವರು ಸದಸ್ಯರನ್ನು ಒಳಗೊಂಡಿದ್ದು, ರಾಷ್ಟ್ರಪತಿಯು ಅವರನ್ನು ನೇಮಕ ಮಾಡುತ್ತಾರೆ. ಹಣಕಾಸು ಆಯೋಗ (ವಿವಿಧ ನಿಬಂಧನೆಗಳು) ಕಾಯ್ದೆ–1951 ಹಣಕಾಸು ಆಯೋಗದ ಅಧ್ಯಕ್ಷರ ಮತ್ತು ಸದಸ್ಯರ ಅರ್ಹತೆಗಳನ್ನು ನಿಗದಿಪಡಿಸುತ್ತದೆ. ಕೇಂದ್ರ ಡಾ.ಅರವಿಂದ ಪನಗಡಿಯಾ ಅಧ್ಯಕ್ಷತೆಯಲ್ಲಿ 2026–31ರ ಅವಧಿಗೆ ಶಿಫಾರಸುಗಳನ್ನು ಮಾಡಲು 16ನೇ ಹಣಕಾಸು ಆಯೋಗವನ್ನು ರಚಿಸಿದೆ.

14ನೇ ಹಣಕಾಸು ಆಯೋಗ
ಮಾನದಂಡಗಳು ಮತ್ತು ಆದ್ಯತೆ (%ಗಳಲ್ಲಿ)



15ನೇ ಹಣಕಾಸು ಆಯೋಗ
ಮಾನದಂಡಗಳು ಮತ್ತು ಆದ್ಯತೆ (%ಗಳಲ್ಲಿ)



ಕೆಲವು ಮಾನದಂಡ ಬದಲು

ರಾಜ್ಯಗಳಿಗೆ ತೆರಿಗೆ ಪಾಲು, ಅನುದಾನವನ್ನು ಹಂಚಿಕೆ ಮಾಡಲು ಅನುಸರಿಸಲಾಗುತ್ತಿದ್ದ ಕೆಲವು ಮಾನದಂಡಗಳು ಮತ್ತು ಅದಕ್ಕೆ ನೀಡುತ್ತಿದ್ದ ಆದ್ಯತೆಯನ್ನು 15ನೇ ಹಣಕಾಸು ಆಯೋಗವು ಬದಲಾಯಿಸಿದೆ.

ಜನಸಂಖ್ಯೆ: 14ನೇ ಹಣಕಾಸು ಆಯೋಗವು ತನ್ನ ಶಿಫಾರಸುಗಳನ್ನು ಮಾಡುವಾಗ 1971ರ ಮತ್ತು 2011ರ ಜನಸಂಖ್ಯೆಯನ್ನು ಪರಿಗಣಿಸಿತ್ತು. ಇದಕ್ಕೆ ಶೇ 17.5ರಷ್ಟು ಪ್ರಾಮುಖ್ಯ ನೀಡಿತ್ತು. 15ನೇ ಹಣಕಾಸು ಆಯೋಗವು 2011ರ ಜನಸಂಖ್ಯೆಯನ್ನು ಪರಿಗಣಿಸಿದ್ದು, ಒಟ್ಟು ಹಂಚಿಕೆಯಲ್ಲಿ ಶೇ 10ರಷ್ಟು ಆದ್ಯತೆಯನ್ನು ಇದಕ್ಕೆ ನೀಡಬೇಕು ಎಂದು ಹೇಳಿದೆ.

ವಿಸ್ತೀರ್ಣ: ರಾಜ್ಯಗಳ ವ್ಯಾಪ್ತಿ ಅಥವಾ ವಿಸ್ತೀರ್ಣಕ್ಕೆ 14ನೇ ಆಯೋಗ ಶೇ 15ರಷ್ಟು ಆದ್ಯತೆ ನೀಡಿದ್ದರೆ, 15ನೇ ಆಯೋಗವೂ ಅದನ್ನೇ ಉಳಿಸಿಕೊಂಡಿದೆ. ಅಂದರೆ ರಾಜ್ಯದ ವಿಸ್ತೀರ್ಣ ಜಾಸ್ತಿ ಇದ್ದರೆ, ಅನುದಾನ, ತೆರಿಗೆ ಹಂಚಿಕೆಯೂ ಜಾಸ್ತಿ ಇರುತ್ತದೆ.

ಜನಸಂಖ್ಯೆ ನಿಯಂತ್ರಣ ಪ್ರಯತ್ನ: ಜನಸಂಖ್ಯೆ ನಿಯಂತ್ರಣಕ್ಕೆ ಒತ್ತು ನೀಡಬೇಕು ಎಂಬ ಉದ್ದೇಶದಿಂದ 15ನೇ ಹಣಕಾಸು ಆಯೋಗ, ಜನಸಂಖ್ಯೆ ನಿಯಂತ್ರಣ ಯತ್ನ ಎಂಬ ಹೊಸ ಮಾನದಂಡವನ್ನು ಸೇರ್ಪಡೆ ಮಾಡಿದ್ದು, ಇದಕ್ಕೆ ಶೇ 12.5ರಷ್ಟು ಒತ್ತು ನೀಡಿದೆ.

ಅರಣ್ಯ ಪ್ರದೇಶ: ಸುಸ್ಥಿರ ಆರ್ಥಿಕ ಅಭಿವೃದ್ಧಿಗಾಗಿ ಅರಣ್ಯದ ನಿರ್ವಹಣೆ ಮತ್ತು ಸಂರಕ್ಷಣೆ ಮಾನದಂಡಕ್ಕೆ 14ನೇ ಆಯೋಗ ಶೇ 7.5ರಷ್ಟು ಪ್ರಾಮುಖ್ಯ ಕೊಟ್ಟಿದ್ದರೆ, 15ನೇ ಆಯೋಗವು ಅರಣ್ಯದೊಂದಿಗೆ ಪರಿಸರವನ್ನೂ (ಎಕಾಲಜಿ) ಸೇರಿಸಿ ಶೇ 10ರಷ್ಟು ಆದ್ಯತೆ ನೀಡಿದೆ.

ವರಮಾನದ ಅಂತರ: ರಾಜ್ಯಗಳ ವರಮಾನದ ಅಂತರದ (ಇದು ರಾಜ್ಯಗಳ ಆದಾಯಕ್ಕೆ ಸಂಬಂಧಿಸಿದ್ದು, ಇದರಲ್ಲಿ ಕಡಿಮೆ ಆದಾಯ ಹೊಂದಿರುವ ರಾಜ್ಯಗಳು ಕೇಂದ್ರದಿಂದ ಹೆಚ್ಚು ಪಾಲನ್ನು ಪಡೆಯುತ್ತವೆ) ಮಾನದಂಡಕ್ಕೆ 14ನೇ ಹಣಕಾಸು ಆಯೋಗ ಶೇ 50ರಷ್ಟು ಪ್ರಾಮುಖ್ಯ ನೀಡಿದ್ದರೆ, 15ನೇ ಆಯೋಗ ಶೇ 45ರಷ್ಟು ಪ್ರಾಮುಖ್ಯ ಕೊಟ್ಟಿದೆ.

ತೆರಿಗೆ ಮತ್ತು ಆರ್ಥಿಕ ಪ್ರಯತ್ನಗಳು: 15ನೇ ಹಣಕಾಸು ಆಯೋಗವು ತೆರಿಗೆ ಮತ್ತು ಆರ್ಥಿಕ ಪ್ರಯತ್ನಗಳು ಎಂಬ ಹೊಸ ಮಾನದಂಡವನ್ನು ಸೇರಿಸಿದ್ದು, ತೆರಿಗೆ ಸಂಗ್ರಹವನ್ನು ಪರಿಣಾಮಕಾರಿಯಾಗಿ ನಡೆಸುವ ರಾಜ್ಯಗಳ ಪ್ರಯತ್ನಕ್ಕೆ ಉತ್ತೇಜನ ನೀಡುವ ಉದ್ದೇಶವನ್ನು ಇದು ಹೊಂದಿದೆ.

ತೆರಿಗೆ ಪಾಲು ಕ್ರಮೇಣ ಹೆಚ್ಚಳ

ಕೇಂದ್ರ ಸರ್ಕಾರವು ರಾಜ್ಯಗಳಿಗೆ ಹಂಚಿಕೆ ಮಾಡುವ ತೆರಿಗೆಯ ಪಾಲು ಈಗ ಶೇ 41ರಷ್ಟಿದೆ. 13ನೇ ಹಣಕಾಸು ಆಯೋಗವು ಇದನ್ನು ಶೇ 32ರಷ್ಟು ನಿಗದಿಪಡಿಸಿತ್ತು. 14ನೇ ಹಣಕಾಸು ಆಯೋಗವು 2015–20ರ ಅವಧಿಗೆ ಇದನ್ನು ಶೇ 42ಕ್ಕೆ ಹೆಚ್ಚಿಸಿತ್ತು. 15ನೇ ಆಯೋಗವು ಶೇ 41ಕ್ಕೆ ಇಳಿಸಿದೆ. ಉಳಿದ ಶೇ 1ರಷ್ಟು ಹಣವನ್ನು ಹೊಸದಾಗಿ ರಚಿಸಲಾದ ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ಗಳಿಗೆ ಹಂಚಿಕೆ ಮಾಡಬೇಕು ಎಂದು ಹೇಳಿದೆ.

ಆಧಾರ: ಪಿಐಬಿ, ರಾಜ್ಯಸಭೆಯಲ್ಲಿ ಸಚಿವರ ಉತ್ತರಗಳು, ಬಜೆಟ್ ಪ್ರತಿ, ಕರ್ನಾಟಕ ಸರ್ಕಾರದ ಅಂಕಿ–ಅಂಶ, ಹಣಕಾಸು ಆಯೋಗದ ವೆಬ್‌ಸೈಟ್

‘ಲವ್ ಈಸ್ ಲೈಫ್’ ಪ್ರಾರಂಭ

ಮಿಷಲ್, ಭರತ್‌ಕುಮಾರ್

‘ಮೆಜೆಸ್ಟಿಕ್-2’ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ಭರತ್‌ಕುಮಾರ್, ಆ ಚಿತ್ರದ ಶೂಟಿಂಗ್ ಮುಗಿಯುವ ಮೊದಲೇ ಇನ್ನೊಂದು ಚಿತ್ರದಲ್ಲಿ ನಾಯಕನಾಗಿದ್ದಾರೆ. ಇತ್ತೀಚೆಗಷ್ಟೇ ಸೆಟ್ಟೇರಿರುವ ಚಿತ್ರಕ್ಕೆ ‘ಲವ್ ಈಸ್ ಲೈಫ್’ ಎಂದು ಹೆಸರಿಡಲಾಗಿದೆ.ಅಂಬಿಗಾ ಕ್ರಿಯೇಶನ್ಸ್ ಮೂಲಕ ಜಿ.ಡಿ. ಸಂತೋಷ್ ಕುಮಾರ್ ಹಾಗೂ ಎನ್.ಹನುಮಂತ ರಾಜು ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಜಿ.ಶಿವರಾಜ್ ಅವರ ಕಥೆ, ಚಿತ್ರಕಥೆ, ನಿರ್ದೇಶನವಿದೆ.

‘ಕಳೆದ 14 ವರ್ಷಗಳಿಂದ ಚಿತ್ರರಂಗದಲ್ಲಿದ್ದೇನೆ. ಸುಂದರನಾಥ ಸುವರ್ಣ, ಅಶೋಕ್ ಕಶ್ಯಪ್ ಅವರ ಜೊತೆ ಅಸಿಸ್ಟೆಂಟ್ ಕ್ಯಾಮೆರಾಮನ್ ಆಗಿದ್ದೆ, ಬೇರೆ ಎಲ್ಲಾ ವಿಭಾಗಗಳಲ್ಲಿ ಕೆಲಸಮಾಡಿ ಅನುಭವ ಪಡೆದಿದ್ದೇನೆ. ಇದೊಂದು ವಿಭಿನ್ನ ಪ್ರೇಮಕಥೆ. ವಿದೇಶದಿಂದ ಭಾರತಕ್ಕೆ ಬರುವ ಹುಡುಗ ಇಲ್ಲಿನ ಸಮಸ್ಯೆಗಳನ್ನು ಯಾವ ರೀತಿ ಬಗೆಹರಿಸುತ್ತಾನೆ ಎಂಬುದನ್ನು ಪ್ರೇಮಕಥೆಯ ಹಿನ್ನೆಲೆ ಇಟ್ಟುಕೊಂಡು ಹೇಳುತ್ತಿದ್ದೇವೆ. ಶೃಂಗೇರಿಯಲ್ಲಿ ಚಿತ್ರೀಕರಣ ಪ್ರಾರಂಭವಾಗಲಿದ್ದು, ಒಂದೇ ಹಂತದಲ್ಲಿ ಶೂಟಿಂಗ್ ಮುಗಿಸುವ ಆಲೋಚನೆಯಿದೆ’ ಎಂದು ಮಾಹಿತಿ ನೀಡಿದರು ನಿರ್ದೇಶಕರು.

ಮಿಷಲ್ ಚಿತ್ರದ ನಾಯಕಿ.ಚಿತ್ರದಲ್ಲಿ ಐದು ಹಾಡುಗಳಿದ್ದು,ಎ.ಟಿ. ರವೀಶ್ ಸಂಗೀತ ನಿರ್ದೇಶನವಿದೆ. ಎಂ.ಬಿ. ಅಳ್ಳೀಕಟ್ಟಿ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ನಾಗೇಂದ್ರ ಅರಸ್, ಪೂಜಾಗೌಡ, ಅಮಿತ್ ಪ್ರಮುಖ ತಾರಾಗಣದಲ್ಲಿದ್ದಾರೆ.

ಸೆ.2ಕ್ಕೆ ‘ಬಿಲ್ಲಾ ರಂಗ ಬಾಷಾ’ ಘೋಷಣೆ

ಸುದೀಪ್, ಅನೂಪ್ ಭಂಡಾರಿ

ಸ್ಯಾಂಡಲ್‌ವುಡ್‌ನ ಅಭಿನಯ ಚಕ್ರವರ್ತಿ ‘ಕಿಚ್ಚ’ ಸುದೀಪ್ ಅವರ ‘ವಿಕ್ರಾಂತ್ ರೋಣ’ 2022ರ ಜುಲೈನಲ್ಲಿ ಬಿಡುಗಡೆಯಾಗಿತ್ತು. ಅನಂತರ ಇವರ ನಟನೆಯ ‘ಮ್ಯಾಕ್ಸ್’ ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದ್ದರೂ ರಿಲೀಸ್ ಯಾವಾಗ ಎನ್ನುವುದರ ಬಗ್ಗೆ ಚಿತ್ರತಂಡ ಇನ್ನೂ ಮಾಹಿತಿ ನೀಡಿಲ್ಲ. ಇದರ ನಡುವೆ ಅನೂಪ್ ಭಂಡಾರಿ ಜೊತೆ ಮತ್ತೊಂದು ಸಿನಿಮಾ ಮಾಡಲು ಸುದೀಪ್ ಸಜ್ಜಾಗಿದ್ದಾರೆ.

ಈ ಹಿಂದೆಯೇ ಘೋಷಣೆಯಾಗಿದ್ದ ‘ಬಿಲ್ಲಾ ರಂಗ ಬಾಷಾ’(BRB) ಸಿನಿಮಾದ ತುಣುಕು ಸೆ.2ರಂದು ಬಿಡುಗಡೆಯಾಗಲಿದೆ. ‘ಮತ್ತೊಮ್ಮೆ ಕಿಚ್ಚ ಸುದೀಪ್ ಅವರೊಂದಿಗೆ ಸಿನಿಮಾ ಮಾಡುತ್ತಿರುವುದು ಖುಷಿ ನೀಡಿದೆ. ಸೆ.2ರಂದು ಸುದೀಪ್ ಅವರ ಜನ್ಮದಿನದಂದು ಮತ್ತೆ ಭೇಟಿಯಾಗೋಣ. ಅಂದು ಬೆಳಗ್ಗೆ 10 ಗಂಟೆಗೆ ಬಿಆರ್‌ಬಿ ಸಿನಿಮಾ ಘೋಷಣೆಯಾಗಲಿದೆ’ ಎಂದು ಅನೂಪ್ ಭಂಡಾರಿ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ. ಈ ಮೂಲಕ ‘ವಿಕ್ರಾಂತ್ ರೋಣ’ ಜೋಡಿ ಮತ್ತೊಮ್ಮೆ ತೆರೆ ಮೇಲೆ ಬರಲಿದೆ.

ಸುದೀಪ್ ನಟನೆಯ 46ನೇ ಸಿನಿಮಾ‘ಮ್ಯಾಕ್ಸ್’ ಶೀಘ್ರದಲ್ಲೇ ತೆರೆಗೆ ಬರುವ ಸಾಧ್ಯತೆ ಇದೆ. ‘ಮೈ ಆಟೋಗ್ರಾಫ್’ ಸಿನಿಮಾ ಮೂಲಕ ನಿರ್ದೇಶಕನ ಕ್ಯಾಪ್ ತೊಟ್ಟಿದ್ದ ಸುದೀಪ್ ‘ಮಾಣಿಕ್ಯ’ ಸಿನಿಮಾ ಬಳಿಕ ಮತ್ತೊಮ್ಮೆ ನಿರ್ದೇಶನಕ್ಕೆ ಇಳಿಯಲೂ ಸಿದ್ಧತೆ ನಡೆಸಿದ್ದಾರೆ. ತಮ್ಮ ನಟನೆಯ 50ನೇ ಸಿನಿಮಾವನ್ನು ತಾವೇ ನಿರ್ದೇಶಿಸಲಿದ್ದಾರೆ ಕಿಚ್ಚ.ಈ ಚಿತ್ರವನ್ನು ಕೆಆರ್‌ಜಿ ಸ್ಟುಡಿಯೋಸ್‌ನಡಿ ಕಾರ್ತಿಕ್ ಗೌಡ ಮತ್ತು ಯೋಗಿ ಜಿ. ರಾಜ್ ನಿರ್ಮಿಸುತ್ತಿದ್ದಾರೆ. ಈ ಸಿನಿಮಾಗಳ ಮಧ್ಯೆ ‘ಬಿಆರ್‌ಬಿ’ ಚಿತ್ರೀಕರಣ ಆರಂಭವಾಗಲಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಮಹಿಳೆಯೊಬ್ಬರು** ವೇದಿಕೆಯ ಮೇಲೆ ನೃತ್ಯ ಮಾಡುತ್ತಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಅದೇ ವೇದಿಕೆಯ ಹಿಂಭಾಗದಲ್ಲಿ ‘ಜಸ್ಟೀಸ್ ಫಾರ್ ಆರ್.ಜಿ.ಕರ್’ ಎಂಬ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಆರ್.ಜಿ.ಕರ್ ಆಸ್ಪತ್ರೆಯಲ್ಲಿ ಟ್ರೈನಿ ವೈದ್ಯೆಯ ಅತ್ಯಾಚಾರ ಮತ್ತು ಕೊಲೆ ವಿರೋಧಿಸಿ ಬಿಜೆಪಿ ಪ್ರತಿಭಟನೆ ನಡೆಸುತ್ತಿದ್ದ ವೇದಿಕೆಯಲ್ಲೇ ಮಹಿಳೆ ನೃತ್ಯ ಮಾಡಿದ್ದಾರೆ; ಬಿಜೆಪಿಯ ಈ ನಡೆ ನಾಚಿಕೆಗೇಡಿನದ್ದು ಎನ್ನುವ ಪ್ರತಿಪಾದನೆಯೊಂದಿಗೆ ವಿಡಿಯೊ ಅನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಪ್ರತಿಪಾದನೆ.

✓ **ವಿಡಿಯೊ** ಅನ್ನು ಸೂಕ್ಷ್ಮವಾಗಿ ಗಮನಿಸಿದಾಗ, ವೇದಿಕೆಯ ಹಿಂಭಾಗದಲ್ಲಿ ಬಂಗಾಳಿಯಲ್ಲಿ ‘ಮೇಳ’ ಎಂದು ಬರೆದಿರುವುದು ಕಂಡುಬರುತ್ತದೆ. ವಿಡಿಯೊ ಅನ್ನು ಮತ್ತಷ್ಟು ಪರಿಶೀಲಿಸಿದಾಗ, ಮಹಿಳೆ ನೃತ್ಯ ಮಾಡುತ್ತಿರುವ ವೇದಿಕೆಯ ಆಸುಪಾಸಿನಲ್ಲೇ ಜಾತ್ರೆಯ ವಾತಾವರಣ ಕಂಡುಬರುತ್ತದೆ. ಇದು ಬಿಜೆಪಿ ಪ್ರತಿಭಟನೆಯ ವಿಡಿಯೊ ಅಲ್ಲ ಎಂದು ಕೆಲವರು ಕಮೆಂಟ್ ಕೂಡ ಮಾಡಿದ್ದಾರೆ. ಹಾಗೆ ಕಮೆಂಟ್ ಮಾಡಿದ್ದ ಭೌಮಿಕ್ ಎನ್ನುವವರನ್ನು ಸಂಪರ್ಕಿಸಿದಾಗ, ಇದು ಪಶ್ಚಿಮ ಬಂಗಾಳದ ನದಿಯಾ ಜಿಲ್ಲೆಯ ನವದ್ವೀಪ್ ಪೊಲೀಸ್ ಠಾಣಾ ವ್ಯಾಪ್ತಿಯ ಹಳ್ಳಿಯೊಂದರಲ್ಲಿ ನಡೆದ ಮಾ ಮಾನಸಾ ಅವರ ಪೂಜಾ ಮಹೋತ್ಸವದ ವಿಡಿಯೊ ಆಗಿದ್ದು, ತಾನು ಕೂಡ ಆ ಜಾತ್ರೆಯ ಆಯೋಜಕರಲ್ಲಿ ಒಬ್ಬರಾಗಿರುವುದಾಗಿ ಅವರು ತಿಳಿಸಿದರು. ಜಾತ್ರೆಯ ವೇಳೆ ವೇದಿಕೆಯಲ್ಲಿ ಅತ್ಯಾಚಾರದ ವಿರುದ್ಧ ಪ್ರತಿಭಟನಾರ್ಥವಾಗಿ ತಾವೇ ವೇದಿಕೆಯಲ್ಲಿ ಪೋಸ್ಟರ್ ಹಾಕಿದ್ದಾಗಿ ಅವರು ಹೇಳಿದರು. ಆಲ್ಟ್ ನ್ಯೂಸ್ ಈ ಬಗ್ಗೆ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನಮಗೂ ಬುದ್ಧನಿಗೂ ವ್ಯತ್ಯಾಸ ಏನು?

ನುಡಿ ಬೆಳಗು 12

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಭಗವಾನ್ ಬುದ್ಧನಿಗೂ ಕಷ್ಟ ಬಂತು. ನಮಗೂ ಬುದ್ಧನಿಗೂ ವ್ಯತ್ಯಾಸ ಏನು ಅಂದ್ರೆ ಬುದ್ಧ ಕಷ್ಟ ಯಾಕೆ ಬಂತು ಅಂತ ತಿಳಿದುಕೊಳ್ಳಲು ಮನೆ ಬಿಟ್ಟ. ನಾವು ಕಷ್ಟ ತಡಕಳಕಾಗದೆ ಮನೆ ಬಿಡ್ತೀವಿ. ದುಃಖ ಅಂದರೆ ಏನಂತ ತಿಳಿದುಕೊಳ್ಳಾಕ ಬುದ್ಧ ಮನೆ ಬಿಟ್ಟ.ನಾವು ದುಃಖ ತಡೆದುಕೊಳ್ಳಲಾಗದ್ದಕ್ಕೆ ಮನೆ ಬಿಟ್ವಿ. ಹರಿಶ್ಚಂದ್ರನಿಗೆ ಬಂದ ಕಷ್ಟ ನಮಗೆ ಬಂತೇನು? ಆತನಿಗೆ ಒಂದು ಕಡೆ ಮಗನ ಹೆಣ,ಇನ್ನೊಂದು ಕಡೆ ಸತ್ಯಪರಿಪಾಲನೆ ಸಂಕಷ್ಟ. ರಾಮನಿಗೆ ಮದುವೆಯಾದ ತಕ್ಷಣ ಕಾಡಿಗೆ ಹೋಗುವ ಶಿಕ್ಷೆ. ನಮಗೆ ಅಂತಹ ಕಷ್ಟವೇನೂ ಬರಲಿಲ್ಲವಲ್ಲ?

ಕಷ್ಟ ಬಂತು ಅಂದ್ರ ನಾವು ದೇವರ ಗುಡಿಗೆ ಹೋಗ್ತೀವಿ. ರಾಮನ ಗುಡಿಗೆ ಹೋದ್ರ ರಾಮ ಅಂತಾನ, ‘ನಿಮದೇ ಚಲೋ ಐತಿ, 14 ವರ್ಷವನವಾಸಕ್ಕೆ ಹೋಗಿಬಂದ್ರೂ ಮುಗಿದಿಲ್ಲ ನಮ್ಮದು ಇನ್ನೂ ತ್ರಾಸ’ ಅಂತ. ಇದು ಬ್ಯಾಡ ಅಂತ ಮಾರುತಿ ಗುಡಿಗೆ ಹೋಗಿ ಇನ್ನೂ ಕನ್ಯಾಸಿಕ್ಕಿಲ್ಲ ಅಂತ ಕೇಳ್ತೀರಿ. ಅವ ಅಂತಾನ, ‘ಮೊದಲು ಕೆಳಗಿಳಿ, ಲಗ್ನ ಆದವರ ಜಗಳ ಬಿಡಸಾಕ ಹೋಗಿ ನಾವು ಹಾಂಗಾ ಕುಂತೀವಿ. ಹರಇಲ್ಲ ಶಿವ ಇಲ್ಲ’ ಅಂತ. ಗಣಪತಿ ಹತ್ತಿರ ಹೋದರ ‘ನಂದೇನಿಲ್ಲಪ, ನಾಕು ದಿನ ಅರಾಂ ಇದ್ದು ಒಂದಿನ ಹೋಗಿಬಿಡ್ತೀನಿ ಅಷ್ಟೆ’ಅಂತಾನ.

ಗುರು ಅಂದರ ಕಾವಿ ಹಾಕಿರಬೇಕು ಅಂತೇನಿಲ್ಲ. ಹಿಮಾಲಯಕ್ಕೆ ಹೋಗಬೇಕಿಲ್ಲ. ಹಸಿದವರಿಗೆ ಒಂದು ತುತ್ತು ಅನ್ನ, ಬಾಯಾರಿದವರಿಗೆ ಒಂದು ಕಪ್ ನೀರು ಕೊಟ್ಟರೆ ಸಾಕು. ಯಾರು ದುಃಖದಿಂದ ಬರ್ತಾರ ಅವರ ಕಣ್ಣೀರು ಒರೆಸಿ ನಿಮ್ಮ ಜೊತೆ ನಾನಿದೀನಿ ಅಂತಾನ, ಅವನೇ ಗುರು. ‘ಅನ್ನವನು ಇಕ್ಕುವುದು, ನನ್ನಿಯನು ನುಡಿವುದು, ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾವಕ್ಕು ಸರ್ವಜ್ಞ’.

ಬುದ್ಧನ ಕಾಲದಲ್ಲಿ ಉಪಗುಪ್ತ ಅಂತಾ ಒಬ್ಬ ಮಹಾರಾಜ ಇದ್ದ. ಅವನು ಎಲ್ಲಾ ಬಿಟ್ಟು ಭಿಕ್ಷು ಆದ. ಒಂದಿನ ಒಬ್ಬ ನರ್ತಕಿ ಮನೆ ಮುಂದೆ ನಿಂತು ಭಿಕ್ಷೆ ಬೇಡಿದ. ಈತನ ಸೌಂದರ್ಯಕ್ಕೆ ಮೆಚ್ಚಿದ ನರ್ತಕಿ ‘ನನ್ನ ಮನೆ ಮುಂದೆ ಎಂತೆಂತಹ ಶ್ರೀಮಂತರು ಬಂದು ನಿಂತರೂನಾನು ಮೆಚ್ಚಿಲ್ಲ. ನಿನ್ನ ಮೆಚ್ಚೇನಿ. ಮನಿ ಒಳಗ ಬಾ. ನೀ ಒಳಗೆ ಬಂದರೆ ನಾನೂ ನಿನ್ನವಳು, ಈ ಸಂಪತ್ತೂ ನಿನ್ನದು’ ಎಂದಳು. ಅದಕ್ಕೆಉಪಗುಪ್ತ, ‘ನಾನು ಈಗ ಬಂದಿರುವುದು ಕೇವಲ ಅನ್ನದ ಭಿಕ್ಷೆಗಾಗಿ. ಸಮಯ ಬಂದಾಗ ಬರುವೆ’ ಎಂದು ಹೇಳಿ ಹೋದ.

ಕೆಲವು ಸಮಯದ ನಂತರ ಆಕೆಗೆ ರೋಗ ಬಂತು. ಊರವರು ಆಕೆಗೆ ಕಲ್ಲು ತಗೊಂಡು ಹೊಡೆದರು. ಆಸ್ತಿ ಕಸಿದುಕೊಂಡರು. ಎಲ್ಲೋಒಂದು ದಾರಿಯಲ್ಲಿ ನರಳುತ್ತಾ ಬಿದ್ದಿದ್ದಳು. ಅದೇ ದಾರಿಯಲ್ಲಿ ಬಂದ ಉಪಗುಪ್ತ ಆಕೆಗೆ ಒಂದು ಗುಟುಕು ನೀರು ಕೊಟ್ಟ, ತುತ್ತುಅನ್ನ ನೀಡಿ ತಲೆ ಮೇಲೆ ಕೈಯಾಡಿಸಿದ. ‘ನನ್ನ ಬಳಿ ಸೌಂದರ್ಯ ಇದ್ದಾಗ ಸಂಪತ್ತು ಇದ್ದಾಗ ಬಾ ಅಂದರೆ ಬರಲಿಲ್ಲ. ಈಗ್ಯಾಕೆ ಬಂದಿ’ಎಂದು ನರ್ತಕಿ ಕೇಳಿದಳು. ‘ನಿನ್ನ ಹತ್ರ ಎಲ್ಲಾ ಇದ್ದಾಗ ಬಂದವ ಗುರು ಆಗೋದಿಲ್ಲ. ನೀನು ಬಿದ್ದಾಗ ಬಂದು ಎತ್ತೋವ ಗುರು ಆಗ್ತಾನ’ ಎಂದ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಆಗಸ್ಟ್ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣದ್ವಾದಶಿ ಗಂ. 26-26 ನಕ್ಷತ್ರ: ಪುನರ್ವಸು ಗಂ. 17-56 ಯೋಗ: ವ್ಯತೀಪಾತ ಗಂ. 17-47 ಕರಣ: ಕೌಲವ ಗಂ. 13-58, ಸಿಂಹ ಮಾಸದ 14 ನೇ ದಿನ, ಮಳೆನಕ್ಷತ್ರ: ಪೂರ್ವಫಲ್ಗುಣಿ 1.
ರಾಹುಕಾಲ : ಬೆಳಿಗ್ಗೆ 10-30 – 12-00
ಸೂರ್ಯೋದಯ : 06-23 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 25 ಸಫರ್
ಅದೃಷ್ಟ ಸಂಖ್ಯೆ : 10, 8

ಮೇಷ: ಅಧಿಕವಾಗಿ ಎಣ್ಣೆಯಲ್ಲಿ ಕರಿದ ಪದಾರ್ಥ ದೇಹಪ್ರಕೃತಿಗೆ ಸರಿ ಹೊಂದುವುದಿಲ್ಲ. ಗುಪ್ತಚರ ದಳ ಮಂದಿಗೆ ಕಾರ್ಯಭಾರಗಳು ಹೆಚ್ಚಲಿವೆ. ಮನೆಯಲ್ಲಿನ ಆಗು ಹೋಗುಗಳ ಬಗೆಗೆ ಹೆಚ್ಚು ಗಮನ ನೀಡಬೇಕಾಗುವುದು.

ವೃಷಭ: ಗುತ್ತಿಗೆ ವ್ಯವಹಾರಗಳಲ್ಲಿ ಎಡವಿ ಬೀಳಬಹುದು. ಜಾಗ್ರತರಾಗಿರಿ. ಸುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ವ್ಯವಹರಿಸಿ. ವಿಷ್ಣುಸಹಸ್ರನಾಮದ ಪಠಣೆಯಿಂದ ನೆಮ್ಮದಿ.

ಮಿಥುನ: ಉಪಹಾರ ಮಂದಿರ, ಐಸ್‌ಕ್ರೀಮ್, ತಂಪುಪಾನೀಯದ ಅಂಗಡಿಯವರಿಗೆ ಈ ದಿನವು ಸುಗ್ಗಿ ಹಬ್ಬದಂತಾಗುವುದು. ಅಪರಿಚಿತರೊಬ್ಬರ ಅನವಶ್ಯಕ ಮಾತುಗಳು ತಾಳ್ಮೆಯನ್ನು ಕೆಡಿಸುತ್ತವೆ.

ಕರ್ಕಾಟಕ: ಸತ್ಯದ ಹಾದಿಗೆ ಅಡೆತಡೆಗಳಿರುತ್ತವೆ ಎಂಬುದನ್ನು ಮರೆಯದಿರಿ. ಜಯ ಇದೆ ಎಂಬುದನ್ನು ಅರಿಯಿರಿ. ವೈದ್ಯ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಪ್ರಗತಿ ಕಂಡು ಬರುವುದು. ಮಗಳ ಮಾತಿಗೆ ಬೆಲೆ ಕೊಡಿ.

ಸಿಂಹ: ಈ ದಿನ ಗ್ರಹಗಳು ಪೂರಕವಾಗಿವೆ. ನಿಮ್ಮಿಚ್ಛೆಯಂತೆ ಚಟುವಟಿಕೆಗಳು ನಡೆಯುವುದು. ಈ ಫಲವನ್ನು ಸದುಪಯೋಗಪಡಿಸಿಕೊಳ್ಳಿರಿ. ಕೆಲವು ಘಟನಾವಳಿಗಳು ಶಕುನಗಳಂತೆ ಕಂಡು ಕೆಲವು ದುರ್ಘಟನೆಗಳಿಂದ ಪಾರಾಗುವಿರಿ.

ಕನ್ಯಾ: ಕೆಲಸವನ್ನು ಹುಡುಕುವ ಬದಲು ಉನ್ನತ ವಿದ್ಯಾಭ್ಯಾಸದ ಬಗ್ಗೆ ಒಲವು ತೋರಿಸುವುದು ಈ ಸಮಯದಲ್ಲಿ ಸೂಕ್ತ ಕಾಣುತ್ತದೆ. ಆಯುರ್ವೇದದ ಔಷಧಿಯ ಸೇವನೆಯಿಂದ ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು.

ತುಲಾ: ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ. ಅವಿವಾಹಿತರ ಮನೋಕಾಮನೆಗಳು ಪೂರ್ಣಗೊಳ್ಳುವ ದಿನವಾಗುವುದು. ಗುರುವಿನ ಮಾರ್ಗದರ್ಶನ ಪಡೆಯುವಿರಿ.

ವೃಶ್ಚಿಕ: ಪ್ರಯಾಣ ಅಂದುಕೊಂಡಂತೆ ಸುಗಮವಾಗಿರುವುದಿಲ್ಲ. ರಾಹುಕಾಲದ ನಂತರ ಸಂಚಾರ ಮಾಡಿ. ಕುಟುಂಬದಲ್ಲಿ ನಡೆದ ದುರ್ಘಟನೆಗಳಿಂದ ಮನಸ್ಸು ದುರ್ಬಲವಾಗಬಹುದು.

ಧನು: ಉದ್ಯೋಗದಲ್ಲಿನ ಪ್ರಯತ್ನಗಳು ವ್ಯಕ್ತಿಯೊಬ್ಬರ ಬೆಂಬಲದಿಂದ ನೆರವೇರುವುದು. ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವಿರಿ. ದೃಢ ನಿರ್ಧಾರವನ್ನು ಕೈಗೊಂಡ ಫಲದಿಂದಾಗಿ ಒಳ್ಳೆಯ ಫಲಿತಾಂಶ ಪಡೆಯುವಿರಿ.

ಮಕರ: ಹೊಸ ನಿರ್ಮಾಣ ಕಾರ್ಯದಂಥ ಯೋಜನೆಗಳು ನಿರಾತಂಕವಾಗಿ ಮುಂದುವರೆಯಲಿವೆ. ಆಂಜನೇಯನ ಆರಾಧನೆಯಿಂದ ಭಯವನ್ನು ಹೋಗಲಾಡಿಸಿಕೊಳ್ಳಬಹುದು. ಹೈನುಗಾರರಿಗೆ ಬೇಡಿಕೆ ಹೆಚ್ಚಲಿದೆ.

ಕುಂಭ: ಸಾಮರ್ಥ್ಯ, ಸೇವಾ ಮನೋಭಾವಗಳಿಂದಾಗಿ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಲಿದೆ. ಬದಲಾವಣೆ ಬಯಸಿದಲ್ಲಿ ಕಾಯುವುದು ಅವಶ್ಯ. ಕುಟುಂಬದ ಕಿರಿಯ ಸೋದರನಿಗೆ ವಿವಾಹ ನಿಶ್ಚಯವಾಗುವುದು.

ಮೀನ: ಸರ್ಕಾರಿ ಕೆಲಸಗಳನ್ನು ಆದಷ್ಟು ಬೇಗ ಪೂರ್ಣಗೊಳಿಸಿಕೊಳ್ಳುವ ಯೋಚನೆಯನ್ನು ಮಾಡಿ. ಮಕ್ಕಳನ್ನು ಮಳೆಯಲ್ಲಿ ನೆನೆಯದಂತೆ ,ಆಡದಂತೆ ನೋಡಿಕೊಳ್ಳುವುದೇ ಸವಾಲಾಗುವುದು.

ಪದಬಂಧ 5788

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಸ್ಯ ಮೂಲವಾದ ಆಹಾರ (4)
2.ಪಾರುವಿನ ಮೇಲ್ವಿಚಾರಣೆ! (4)
4.ಇದು ಮನುಷ್ಯನಿಗೆ ಸಂಬಂಧಪಟ್ಟದ್ದು (4)
6.ಕೊನೆಗೆ ಪದವಿಟ್ಟರೆ ಐಶ್ವರ್ಯ ಸಿಗುವುದಲ್ಲಾ! (3)
8.ಕನಸಲ್ಲಿ ಕಾಣಿಸಿರುವ ಗಲೀಜು (2)
10.ಮಗನಿಗೆ ಕಲಿಸಿದ ವೇದ (3)
11.ಉರಗದ ಎದೆಯಿಲ್ಲಿ ಉಲ್ಟಾ ಕಾಣುತ್ತಿದೆ(2)
13.ಆಸಕ್ತನಾದವನು ಇಲ್ಲಿದ್ದಾನೆ (3)
14.ಲೋಪದೋಷಗಳನ್ನು ಸರಿಪಡಿಸುವವನು (4)
16.ಒಂದು ಬಗೆಯ ನಯವಾದ ಬಟ್ಟೆ (4)
17.ಕನ್ನಡಿಗನ ಹೆಲ್ಮೆಟ್ (4)

ಮೇಲಿಂದ ಕೆಳಕ್ಕೆ
1.ಉಷ್ಣದ ಪ್ರಮಾಣವನ್ನು ಕಂಡು ಹಿಡಿಯುವ ಸಾಧನ (5)
2.ಕ್ರೈಸ್ತ ಗುರುವನ್ನು ಹೀಗೆನ್ನಿ (2)
3.ಪ್ರತಿಫಲಾಕ್ಷೆ ಇಲ್ಲದೆ ಇತರರಿಗೆ ಸಹಾಯ ಮಾಡುವುದು (5)
5.ಯವನ ಸರಿಸಿದ ತೆರೆ! (4)
7. ಗುಣದೋಷವನ್ನು ಕಂಡುಹಿಡಿ (4)
9.ಜೊತೆಯಲ್ಲಿ ಆಲೋಚಿಸುವವನು (5)
12.ಕೆಲಸ ಮಾಡಲು ಬೇಕಾದ ಸಲಕರಣೆ (5)
15.ಲಾಲಾರಸವಿದು (2)



5787ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಶ್ಚಾತ್ತಾಪ 3.ಕದಲೋತಿ
5.ಕನಕ 6.ನಿಕ್ಷೇಪ
8.ಕುಶಲ 9.ಅಹಿತ
10.ರಥಿಕ 12.ವರ್ಜನ
14.ನಿಷ್ಠುರಣ 15.ದುರಾಚಾರ

ಮೇಲಿಂದ ಕೆಳಕ್ಕೆ:
1.ಪಯಸ್ವಿನಿ 2.ಪಥಿಕ
3.ಕಟುಕ 4.ತಿಮಿಂಗಿಲ
7.ಪರ್ವತ 8.ಕುಬೇರ
9.ಅವಧಾನಿ 11.ಕಳೇವರ
12.ವರುಣ 13.ನಗದು

ಸುಡೊಕು 6173

3	7			4				9
			6		9			2
2		4		7		3		
7	8						5	
			4			6		7
6		5		8			2	
		7	2				9	
				1	7		3	
9		1		5		2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6172 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3500-4000
ಮಧ್ಯಮ	₹3000-3500
ಸಣ್ಣ	₹2000-3000

ಷೇರುಪೇಟೆ ವಹಿವಾಟು 349



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,052
ಇಂದಿನ ಅಂತ್ಯ	25,151
▲	99
ದಿನದ ಗರಿಷ್ಠ	25,192

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹232
ಆರ್‌ಎಸ್‌ಎಸ್-5	₹226
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹210

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹510
12 ಕ್ಕೆ	₹68
ಮೈಸೂರು	
100ಕ್ಕೆ	₹512

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹295-533
ದ್ವಿತಳಿ (ಬಿ.ವಿ)	₹345-691

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1570)
ಸೋಯಾ (ರಿಫೈನ್ಡ್)	₹980 (980)
ಸೂರ್ಯಕಾಂತಿ (ರಿಫೈನ್ಡ್)	₹990 (990)
ಪಾಮೋಲಿನ್	₹965 (970)

ವಿನಿಮಯ ದರ

$ ಡಾಲರ್	83.89
£ ಪೌಂಡ್	111.67
€ ಯುರೊ	93.07
¥ ಯೆನ್ (100ಕ್ಕೆ)	58

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

18ನೇ ವರ್ಷದ ಚಿರಸ್ಮರಣೆ

ಜೆ.ಟಿ.ರಾಮಮೂರ್ತಿ
ನಿಧನ: 30-8-2006
ಒಲವಿನ ಬೀಜಬಿತ್ತಿ ಪ್ರೀತಿವಾತ್ಸಲ್ಯದ ಹೆಮ್ಮರ ಬೆಳೆಸಿದ ಪ್ರೇಮ ಮೂರ್ತಿ ನೀವು
ಪತ್ನಿ: ಶಾಂತ, ಮಕ್ಕಳು ಮತ್ತು ಸೊಸೆಯಂದಿರು ಹಾಗೂ ಮೊಮ್ಮಕ್ಕಳು.
ಶ್ರೀನಗರ, ಬೆಂಗಳೂರು.

12 ಕೈಗಾರಿಕಾ ಸ್ಮಾರ್ಟ್‌ಸಿಟಿ ಸ್ಥಾಪನೆ

ನವದೆಹಲಿ (ಪಿಟಿಐ): ದೇಶೀಯ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲು ದೇಶದ 10 ರಾಜ್ಯಗಳಲ್ಲಿ ಹೊಸದಾಗಿ 12 ಕೈಗಾರಿಕಾ ಸ್ಮಾರ್ಟ್‌ಸಿಟಿ ಸ್ಥಾಪನೆಗೆ ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಅನುಮೋದನೆ ನೀಡಿದೆ.

ಉತ್ತರಾಖಂಡ, ಪಂಜಾಬ್, ಮಹಾರಾಷ್ಟ್ರ, ಕೇರಳ, ಉತ್ತರಪ್ರದೇಶ, ಬಿಹಾರ, ತೆಲಂಗಾಣ, ಆಂಧ್ರಪ್ರದೇಶ, ರಾಜಸ್ಥಾನ ಮತ್ತು ಹರಿಯಾಣದಲ್ಲಿ ಈ ಕೈಗಾರಿಕಾ ಸ್ಮಾರ್ಟ್‌ಸಿಟಿಗಳು ಸ್ಥಾಪನೆಯಾಗಲಿವೆ.

ಈಗಾಗಲೇ, ದೇಶದಲ್ಲಿ 8 ಕೈಗಾರಿಕಾ ಸ್ಮಾರ್ಟ್‌ಸಿಟಿಗಳು ಅಭಿವೃದ್ಧಿ ಹಂತದಲ್ಲಿವೆ. ಹೊಸ ಸ್ಮಾರ್ಟ್‌ಸಿಟಿಗಳ ಸ್ಥಾಪನೆಯಿಂದ ಇವುಗಳ ಸಂಖ್ಯೆ 20ಕ್ಕೆ ಏರಲಿದೆ.

'ರಾಷ್ಟ್ರೀಯ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಕಾರ್ಯಕ್ರಮದಡಿ (ಎನ್‌ಐಸಿಡಿಪಿ) ಈ ಯೋಜನೆಗಳಿಗೆ ಒಪ್ಪಿಗೆ ನೀಡಲಾಗಿದೆ. ಇದಕ್ಕಾಗಿ ಅಂದಾಜು ₹28,602 ಕೋಟಿ ಹೂಡಿಕೆ ಮಾಡಲಾಗುತ್ತಿದೆ. ಇದರಲ್ಲಿ ಜಾಗದ ವೆಚ್ಚಕ್ಕೆ ₹11 ಸಾವಿರ ಕೋಟಿ ನಿಗದಿಪಡಿಸಲಾಗಿದೆ' ಎಂದು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಈ ಯೋಜನೆಯಿಂದ ನೇರವಾಗಿ 10 ಲಕ್ಷ ಮತ್ತು ಪರೋಕ್ಷವಾಗಿ 30 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಈ ಯೋಜನೆಗಳು ₹1.52 ಲಕ್ಷ ಕೋಟಿ ಹೂಡಿಕೆಯನ್ನು ಆಕರ್ಷಿಸಲಿವೆ ಎಂದು ಹೇಳಿದ್ದಾರೆ.

ರಿಲಯನ್ಸ್ ಕಂಪನಿಯಿಂದ ಬೋನಸ್ ಷೇರು ಪ್ರಕಟ

ಮುಂಬೈ (ಪಿಟಿಐ): ರಿಲಯನ್ಸ್ ಇಂಡಸ್ಟ್ರಿಸ್ ಲಿಮಿಟೆಡ್ ತನ್ನ ಷೇರುದಾರರಿಗೆ 1:1 ಅನುಪಾತದಲ್ಲಿ ಬೋನಸ್ ಷೇರು ನೀಡುವುದಾಗಿ ಪ್ರಕಟಿಸಿದೆ.

ಪ್ರತಿ ಒಂದು ಷೇರಿಗೆ ಒಂದು ಬೋನಸ್ ಷೇರು ನೀಡುವ ಬಗ್ಗೆ ಗುರುವಾರ ನಡೆದ ಕಂಪನಿಯ 47ನೇ ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಪ್ರಸ್ತಾಪಿಸಲಾಗಿದೆ. ಸೆಪ್ಟೆಂಬರ್ 5ರಂದು ಕಂಪನಿಯ ಆಡಳಿತ ಮಂಡಳಿ ಸಭೆಯಲ್ಲಿ ಈ ಕುರಿತು ಚರ್ಚಿಸಿ ಅನುಮೋದನೆ ನೀಡುವ ಸಾಧ್ಯತೆಯಿದೆ.

2017ರ ಬಳಿಕ ಮೊದಲ ಬಾರಿಗೆ ಕಂಪನಿಯು ಬೋನಸ್ ಷೇರು ವಿತರಿಸುತ್ತಿದೆ.

100 ಜಿ.ಬಿ ಕ್ಲೌಡ್ ಸಂಗ್ರಹ: ಸಭೆಯಲ್ಲಿ ಮಾತನಾಡಿದ ಕಂಪನಿಯ ಮುಖ್ಯಸ್ಥ ಮತ್ತು ವ್ಯವಸ್ಥಾಪಕ ನಿರ್ದೇಶಕ ಮುಕೇಶ್ ಅಂಬಾನಿ, 'ಶೀಘ್ರವೇ, ರಿಲಯನ್ಸ್ ಜಿಯೊ ತನ್ನ ಗ್ರಾಹಕರಿಗೆ 100 ಜಿ.ಬಿವರೆಗೆ ಉಚಿತವಾಗಿ ಕ್ಲೌಡ್ ಸಂಗ್ರಹ ನೀಡಲಿದೆ. ಇದರಲ್ಲಿ ಫೋಟೊ, ವಿಡಿಯೊ ಅಥವಾ ಡಾಕ್ಯುಮೆಂಟ್‌ಗಳನ್ನು ಸಂಗ್ರಹಿಸಬಹುದಾಗಿದೆ' ಎಂದು ತಿಳಿಸಿದರು.

ಅಲ್ಲದೆ, 'ಜಿಯೊ ಬ್ರೈನ್' ಕೃತಕ ಬುದ್ಧಿಮತ್ತೆ ಪ್ರಾರಂಭಿಸಲು ತಯಾರಿ ನಡೆಸುತ್ತಿದೆ. ಜಿಯೊ ಸಂಪೂರ್ಣವಾಗಿ ಎ.ಐ ಒಳಗೊಂಡ ಪರಿಕರಗಳು ಮತ್ತು ಪ್ಲಾಟ್‌ಫಾರ್ಮ್‌ಗಳನ್ನು ಅಭಿವೃದ್ಧಿಪಡಿಸುತ್ತಿದೆ ಎಂದರು.

ಗುಜರಾತ್‌ನ ಜಾಮ್‌ನಗರದಲ್ಲಿ ಪ್ರಸಕ್ತ ವರ್ಷದಲ್ಲಿ ಸೌರ ಗಿಗಾ ಫ್ಯಾಕ್ಟರಿ ಸ್ಥಾಪನೆಗೆ ನಿರ್ಧರಿಸಲಾಗಿದೆ. ಇದು ಕೃತಕ ಬುದ್ಧಿಮತ್ತೆ ಆಧಾರಿತ ಡೇಟಾ ಕೇಂದ್ರವಾಗಿದೆ. ರಿಲಯನ್ಸ್‌ನ ಹಸಿರು ಶಕ್ತಿಯಿಂದ ಇದು ಚಾಲಿತವಾಗಲಿದೆ. ಭಾರತದಲ್ಲಿ ಎ.ಐ ಅಪ್ಲಿಕೇಷನ್‌ಗಳನ್ನು ಕೈಗೆಟುಕುವಂತೆ ಮಾಡುವುದೇ ಇದರ ಉದ್ದೇಶವಾಗಿದೆ ಎಂದರು.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ		ಕೋಕ	10699-22989	ರಾಶಿ	40089-45699
ಕೋಕ	18000-28500	ಕೆಂಪುಗೋಟು	12899-33199	ತಟ್ಟಿಬೆಟ್ಟೆ	30089-36889
ಹೊಸತು	28500-40000	ರಾಶಿ	26989-48099	**ಶಿರಸಿ**	
ಹಳತು	40000-47500	ಸಿಪ್ಪೆಗೋಟು	8119-17169	ಬೆಟ್ಟೆ	27969-43809
ಚಿತ್ರದುರ್ಗ		**ಕಾರ್ಕಳ**		ಬಿಳಿಗೋಟು	20009-30728
ಅಪಿ	47019-47429	ಹೊಸತು	25000-40000	ಚಾಲಿ	32209-3613
ಬೆಟ್ಟೆ	33659-34099	**ಶಿವಮೊಗ್ಗ**		ಕೆಂಪುಗೋಟು	11000-22600
ಕೆಂಪುಗೋಟು	27609-28010	ಬೆಟ್ಟೆ	42014-55139	ರಾಶಿ	41259-47391
ರಾಶಿ	46539-46969	ಗೊರಬಲು	18030-36099	**ಯಲ್ಲಾಪುರ**	
ಕುಮಟ		ರಾಶಿ	30000-48521	ಅಪಿ	56819-56819
ಚಿಪ್ಪು	21229-28009	ಸರಕು	50400-84096	ಬಿಳಿಗೋಟು	16899-27112
ಕೋಕ	7109-24189	**ಸಿದ್ದಾಪುರ**		ಚಾಲಿ	28869-36119
ಹಳೆಚಾಲಿ	33599-39299	ಬಿಳಿಗೋಟು	24900-29000	ಕೋಕ	6019-16602
ಹೊಸಚಾಲಿ	32599-35811	ಚಾಲಿ	31099-35100	ಕೆಂಪುಗೋಟು	17099-26399
ಸಾಗರ		ಕೋಕ	24700-27989	ರಾಶಿ	40099-53900
ಬಿಳಿಗೋಟು	11699-24075	ಕೆಂಪುಗೋಟು	22299-23019	ತಟ್ಟಿಬೆಟ್ಟೆ	26469-38930
ಚಾಲಿ	24290-32809				

ಫಸಲಿಗೆ ಕೊಳೆರೋಗ • ಅವಧಿಗೆ ಮುನ್ನವೇ ಕೊಯ್ಲು

ಶುಂಠಿ ಧಾರಣೆ ಕುಸಿತ

• ಗಂಗೇಶ್ ಬಿ.ಪಿ.

ಕೊಣನೂರು (ಹಾಸನ ಜಿಲ್ಲೆ): ಮಾರುಕಟ್ಟೆಯಲ್ಲಿ ಹಸಿ ಶುಂಠಿ ಧಾರಣೆಯು ದಿಢೀರ್ ಕುಸಿತ ಕಂಡಿದೆ.

ಮತ್ತೊಂದೆಡೆ ಕೊಳೆರೋಗದಿಂದಾಗಿ ಅವಧಿಗೆ ಮುನ್ನವೇ ಶುಂಠಿ ಕೊಯ್ಲು ಆರಂಭಗೊಂಡಿದ್ದು, ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಫೆಬ್ರುವರಿಯಲ್ಲಿ ಶುಂಠಿ ನಾಟಿ ಆಗಿದ್ದು, 6 ತಿಂಗಳಾದರೂ ನಿರೀಕ್ಷೆಗೆ ತಕ್ಕಂತೆ ಬೆಳವಣಿಗೆ ಆಗಿಲ್ಲ. ನಿರಂತರ ಮಳೆಯಿಂದಾಗಿ ಕೊಳೆರೋಗ ಆವರಿಸಿದೆ. ಹೀಗಾಗಿ, ಫಸಲು ಕರಗಿ ಹೋಗುವ ಬದಲು ಸಿಕ್ಕಷ್ಟು ಸಿಗಲಿ ಎಂದು ಜುಲೈ ಕೊನೆಯ ವಾರದಿಂದಲೇ ರೈತರು ಶುಂಠಿ ಕಟಾವು ಮಾಡಿ ಮಾರಾಟ ಮಾಡುತ್ತಿದ್ದಾರೆ.

60 ಕೆ.ಜಿ ತೂಕದ ಚೀಲಕ್ಕೆ ಆರಂಭದಲ್ಲಿ ₹2 ಸಾವಿರ ಬೆಲೆ ದೊರಕಿತ್ತು. ಕೊಯ್ಲು ಹೆಚ್ಚಾದ ಕಾರಣ ಈಗ ದರವು ₹1,100ಕ್ಕೆ ಕುಸಿದಿದೆ.

ಬೆಲೆಯ ಏರಿಳಿತ: 2023ರ ಜನವರಿಯಲ್ಲಿ ಹಸಿ ಶುಂಠಿ ಬೆಲೆ ಪ್ರತಿ ಚೀಲಕ್ಕೆ (60 ಕೆ.ಜಿ) ₹2,000ದಿಂದ ₹2,200 ಇತ್ತು. ಮಾರ್ಚ್– ಏಪ್ರಿಲ್‌ನಲ್ಲಿ ₹5 ಸಾವಿರಕ್ಕೆ ತಲುಪಿತ್ತು. ಮೇ ಮತ್ತು ಜೂನ್‌ನಲ್ಲಿ ₹10,000ರಿಂದ ₹11,000ದವರೆಗೂ ಮುಟ್ಟಿತ್ತು.

ಅದೇ ವರ್ಷದ ಜುಲೈ–ಆಗಸ್ಟ್‌ನಲ್ಲಿ ಹೊಸ ಶುಂಠಿಯು ಮಾರುಕಟ್ಟೆಗೆ ಬಂದಿದ್ದರಿಂದ ಬೆಲೆಯು ₹3,500ಕ್ಕೆ ಇಳಿದಿತ್ತು. ಸೆಪ್ಟೆಂಬರ್‌ನಲ್ಲಿ ₹3,800, ಅಕ್ಟೋಬರ್‌ನಲ್ಲಿ ₹4 ಸಾವಿರದಿಂದ ₹5 ಸಾವಿರ ತಲುಪಿತ್ತು. ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ₹4,800 ಬೆಲೆ ಇದ್ದರೆ, ಪ್ರಸಕ್ತ ವರ್ಷದ ಜನವರಿ ಮತ್ತು ಫೆಬ್ರುವರಿಯಲ್ಲಿ ₹4,000 ರಿಂದ ₹4,500 ಬೆಲೆ ಇತ್ತು ಎಂದು ವ್ಯಾಪಾರಿಗಳು ಹೇಳುತ್ತಾರೆ.

ಹಾಸನ ಜಿಲ್ಲೆಯ ಕೊಣನೂರು ಸಮೀಪದ ಲಕ್ಕನಹಳ್ಳಿಯಲ್ಲಿ ಶುಂಠಿ ಕೊಯ್ಲಿನಲ್ಲಿ ನಿರತರಾಗಿರುವ ಕಾರ್ಮಿಕರು

ಕೂಲಿ ವೆಚ್ಚ ಸಿಗುವುದು ಕಷ್ಟಕರ

'ಈ ಬಾರಿ ಬಿತ್ತನೆ ಶುಂಠಿ ಬೆಲೆಯು 60 ಕೆ.ಜಿ.ಗೆ ₹5,500ರಿಂದ ₹6,500 ವರೆಗೆ ಇತ್ತು. ಜೊತೆಗೆ ಕೂಲಿ, ಪೈಪ್‌ಲೈನ್, ಕೋಳಿಗೊಬ್ಬರ, ರಾಸಾಯನಿಕಗಳ ದರದಲ್ಲಿ ಗಣನೀಯವಾಗಿ ಏರಿಕೆಯಾಗಿದೆ. 1 ಎಕರೆಯಲ್ಲಿ ಶುಂಠಿ ಬೆಳೆಯಲು ₹5.5ಲಕ್ಷದಿಂದ ₹6 ಲಕ್ಷ ವೆಚ್ಚವಾಗಿದೆ' ಎಂದು ರೈತರು ವಿವರಿಸುತ್ತಾರೆ.

ಈಗಿನ ಬೆಲೆಯಲ್ಲಿ ಒಂದು ಎಕರೆಯಲ್ಲಿ ಬೆಳೆದ ಶುಂಠಿ ಮಾರಾಟ ಮಾಡಿದರೆ ₹2 ಲಕ್ಷದಿಂದ ₹2.5 ಲಕ್ಷ ಸಿಗುತ್ತಿದೆ. ಬೆಳೆಗಾರರು ಒಂದು ಎಕರೆಗೆ ₹5 ಲಕ್ಷಕ್ಕೂ ಹೆಚ್ಚು ಖರ್ಚು ಮಾಡಿದ್ದಾರೆ. ಇದರ ಅರ್ಧದಷ್ಟು ಮಾತ್ರ ಆದಾಯ ಸಿಗುವಂತಾಗಿದೆ ಎಂದು ಹೇಳುತ್ತಾರೆ.

> ಕಳೆದ ವರ್ಷ ಶುಂಠಿ ಬೆಲೆ ಏರಿಕೆ ಜೊತೆಗೆ ಬಿತ್ತನೆ ಬೀಜ, ಗೊಬ್ಬರ, ಕೂಲಿ ದರವೂ ಏರಿತ್ತು. ಇದರಿಂದಾಗಿ ಉತ್ಪಾದನಾ ವೆಚ್ಚ ಹೆಚ್ಚಾಗಿದ್ದು, ಈಗ ಬೆಲೆ ಕುಸಿದಿದೆ
> **ಕೆ.ಟಿ. ಸತೀಶ್,** ಶುಂಠಿ ಬೆಳೆಗಾರ

2014ರಲ್ಲಿದ್ದ ಆಸ್ತಿ ಮೌಲ್ಯ ₹44 ಸಾವಿರ ಕೋಟಿ

ಅದಾನಿ ಸಂಪತ್ತು ಶೇ 95 ಏರಿಕೆ

ಮುಂಬೈ (ಪಿಟಿಐ): ಹುರೂನ್ ಇಂಡಿಯಾ 2014ರಲ್ಲಿ ಪ್ರಕಟಿಸಿದ್ದ ದೇಶದ ಸಿರಿವಂತರ ಪಟ್ಟಿಯಲ್ಲಿ ಉದ್ಯಮಿ ಗೌತಮ್ ಅದಾನಿ ಅವರು, 10ನೇ ಸ್ಥಾನದಲ್ಲಿದ್ದರು. ಆಗ ಅವರ ಸಂಪತ್ತಿನ ಮೌಲ್ಯ ₹44 ಸಾವಿರ ಕೋಟಿ ಇತ್ತು.

2024ರ ವರದಿ ಅನ್ವಯ ಕಳೆದ ಒಂದು ವರ್ಷದ ಅವಧಿಯಲ್ಲಿ ಅದಾನಿ ಸಂಪತ್ತು ಶೇ 95ರಷ್ಟು ಏರಿಕೆಯಾಗಿದೆ.

ಉಳಿದ ಸ್ಥಾನದಲ್ಲಿ ಯಾರಿದ್ದಾರೆ?: ಎಚ್‌ಸಿಎಲ್ ಮುಖ್ಯಸ್ಥ ಶಿವ ನಾಡಾರ್ (3ನೇ ಸ್ಥಾನ), ಸೀರಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದ ಸೈರಸ್ ಪೂನಾವಾಲಾ (4ನೇ ಸ್ಥಾನ) ಹಾಗೂ ಸನ್ ಫಾರ್ಮಾಸ್ಯುಟಿಕಲ್ಸ್‌ನ ದಿಲೀಪ್ ಸಾಂಘ್ವಿ (5ನೇ ಸ್ಥಾನ) ಆ ನಂತರದ ಸ್ಥಾನದಲ್ಲಿದ್ದಾರೆ.

ಸ್ವಂತ ಪರಿಶ್ರಮದಿಂದ ಸಿರಿವಂತರಾದ ಮಹಿಳೆಯರ ಪಟ್ಟಿಯಲ್ಲಿರುವ ಜೋಹೊ ಕಂಪನಿಯ ರಾಧಾ ವೆಂಬು ಅವರು, ₹47,500 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ.

ಜೆಪ್ಟೊ ಕಂಪನಿಯ ಸಹ ಸಂಸ್ಥಾಪಕರಾದ ಕೈವಲ್ಯ ವೊಹ್ರಾ (21ನೇ ಸ್ಥಾನ) ಮತ್ತು ಆದಿತ್ ಪಲಿಚ (22ನೇ ಸ್ಥಾನ) ಅವರು ಕಿರಿಯ ವಯಸ್ಸಿನ ಸಿರಿವಂತರಾಗಿದ್ದಾರೆ. ಈ ಇಬ್ಬರು ಕ್ರಮವಾಗಿ ₹3,600 ಹಾಗೂ ₹4,300 ಕೋಟಿ ಸಂಪತ್ತು ಹೊಂದಿದ್ದಾರೆ.

₹1 ಸಾವಿರ ಕೋಟಿಗೂ ಹೆಚ್ಚು ಆಸ್ತಿ ಹೊಂದಿದವರ ಪಟ್ಟಿಗೆ ಹೊಸದಾಗಿ 220 ವ್ಯಕ್ತಿಗಳು ಸೇರ್ಪಡೆಯಾಗಿದ್ದಾರೆ. ದೇಶದಲ್ಲಿ ಇಷ್ಟು ಮೊತ್ತದ ಆಸ್ತಿ ಹೊಂದಿದವರ ಸಂಖ್ಯೆ 1,539 ಆಗಿದೆ.

ದೇಶದ ಹತ್ತು ಶ್ರೀಮಂತರು (₹ ಲಕ್ಷ ಕೋಟಿಗಳಲ್ಲಿ)



ಶಾರುಕ್ ಖಾನ್ ₹7,300 ಕೋಟಿ ಒಡೆಯ

ಬಾಲಿವುಡ್ ನಟ ಶಾರುಕ್ ಖಾನ್ ಮೊದಲ ಬಾರಿಗೆ ಶತಕೋಟ್ಯಧಿಪತಿಗಳ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ. ಅವರು ಒಟ್ಟು ₹7,300 ಕೋಟಿ ಸಂಪತ್ತು ಹೊಂದಿದ್ದಾರೆ. ಬಾಲಿವುಡ್ ನಟಿ ಜೂಹಿ ಚಾವ್ಲಾ ₹4,600 ಕೋಟಿ ಮೌಲ್ಯದ ಆಸ್ತಿಯ ಒಡೆಯರಾಗಿದ್ದಾರೆ.

16 ವೃತ್ತಿಪರರು ಕೂಡ ಶ್ರೀಮಂತರ ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಾರೆ. ಈ ಪೈಕಿ ಅರಿಸ್ಟಾ ನೆಟ್‌ವರ್ಕ್ಸ್‌ನ ಮುಖ್ಯ ಕಾರ್ಯ ನಿರ್ವಾಹಕಿ ಜಯಶ್ರೀ ಉಲ್ಲಾಳ್ ₹32,100 ಕೋಟಿ ಆಸ್ತಿ ಹೊಂದಿದ್ದಾರೆ.

ಡಿ–ಮಾರ್ಟ್‌ನ ಮುಖ್ಯ ಕಾರ್ಯ ನಿರ್ವಾಹಕ ಇಗ್ನೇಷಿಯಸ್ ನವಿಲ್ ನೊರೊನ್ಹಾ ಅವರು ₹6,900 ಕೋಟಿ ಸಂಪತ್ತು ಹೊಂದಿದ್ದಾರೆ.

ಎಸ್‌ಸಿಒ ಸಭೆ: ಪ್ರಧಾನಿ ಮೋದಿಗೆ ಪಾಕ್ ಆಹ್ವಾನ

ಇಸ್ಲಾಮಾಬಾದ್(ಪಿಟಿಐ): ಇಲ್ಲಿ ಅಕ್ಟೋಬರ್‌ನಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸಭೆಯಲ್ಲಿ ಪಾಲ್ಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪಾಕಿಸ್ತಾನ ಆಹ್ವಾನ ನೀಡಿದೆ ಎಂದು ವಿದೇಶಾಂಗ ಸಚಿವಾಲಯ ವಕ್ತಾರರಾದ ಮುಮ್ತಾಜ್ ಝಹ್ರಾ ಬಲೂಚ್ ಗುರುವಾರ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಮಾಹಿತಿ ನೀಡಿದ ಅವರು, 'ಅಕ್ಟೋಬರ್ 15 ಹಾಗೂ 16ರಂದು ನಡೆಯಲಿರುವ ಈ ಸಭೆಗೆ ಸಂಬಂಧಪಟ್ಟ ಎಲ್ಲ ರಾಷ್ಟ್ರಗಳ ಮುಖ್ಯಸ್ಥರಿಗೆ ಆಹ್ವಾನ ನೀಡಲಾಗಿದೆ. ಭಾರತ ಪ್ರಧಾನಿ ಮೋದಿ ಅವರನ್ನೂ ಆಹ್ವಾನಿಸಲಾಗಿದೆ' ಎಂದು ತಿಳಿಸಿದರು.

'ಎಸ್‌ಸಿಒ ಸಭೆಯಲ್ಲಿ ಪಾಲ್ಗೊಳ್ಳುವುದನ್ನು ಕೆಲ ರಾಷ್ಟ್ರಗಳು ಈಗಾಗಲೇ ಖಚಿತಪಡಿಸಿವೆ. ಯಾವ ದೇಶಗಳು ತಮ್ಮ ಭಾಗವಹಿಸುವಿಕೆಯನ್ನು ದೃಢಪಡಿಸಿವೆ ಎಂಬ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡಲಾಗುವುದು' ಎಂದು ಬಲೂಚ್ ತಿಳಿಸಿದ್ದಾರೆ ಎಂಬುದಾಗಿ ಡಾನ್ ಪತ್ರಿಕೆ ವರದಿ ಮಾಡಿದೆ.

ಆರ್ಥಿಕ ಮುನ್ನೋಟ ಸ್ಥಿರ

ನವದೆಹಲಿ (ಪಿಟಿಐ): ಜಾಗತಿಕ ಸಾಲ ಮೌಲ್ಯಮಾಪನ ಸಂಸ್ಥೆ ಫಿಚ್, ವಿತ್ತೀಯ ಶಿಸ್ತು ಕಾಯ್ದುಕೊಳ್ಳುವಲ್ಲಿ ಭಾರತಕ್ಕೆ ನೀಡಿರುವ ಆರ್ಥಿಕ ಮುನ್ನೋಟದ ಸ್ಥಾನಮಾನದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ.

ದೇಶದಲ್ಲಿ ವಿತ್ತೀಯ ಕೊರತೆ ಪ್ರಮಾಣ ಹೆಚ್ಚುತ್ತಿರುವುರಿಂದ 2006ರ ಆಗಸ್ಟ್‌ನಲ್ಲಿ ಕನಿಷ್ಠ ಹೂಡಿಕೆ ಮಾನದಂಡವನ್ನು (ಬಿಬಿಬಿ ಮೈನಸ್) ನೀಡಿತ್ತು. ಸದ್ಯ ಇದರಲ್ಲಿ ಬದಲಾವಣೆ ಮಾಡಿಲ್ಲ. ದೇಶದ ಮಧ್ಯಮಾವಧಿ ಬೆಳವಣಿಗೆಯು ದೃಢವಾಗಿದೆ. ಇದು ವಿತ್ತೀಯ ಹೊಣೆಗಾರಿಕೆ ನಿಭಾಯಿಸಲು ಸಹಕಾರಿಯಾಗಲಿದೆ. ಜೊತೆಗೆ, ಜಾಗತಿಕ ಆರ್ಥಿಕತೆಯಲ್ಲಿ ಭಾರತದ ಜಿಡಿಪಿ ಪಾಲು ಹೆಚ್ಚಳಕ್ಕೆ ನೆರವಾಗಲಿದೆ ಎಂದು ಹೇಳಿದೆ.

'ಬಿಬಿಬಿ' ಮಾನದಂಡ ಹೊಂದಿರುವ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ವಿತ್ತೀಯ ನಿರ್ವಹಣೆ ದುರ್ಬಲವಾಗಿದೆ. ಸಾಲದ ಹೊರೆಯ ಪರಿಣಾಮ ಸಾಲ ಮರುಪಾವತಿ ಸಾಮರ್ಥ್ಯವು ಕುಗ್ಗಿದೆ ಎಂದು ಹೇಳಿದೆ.

'ಶೇ 7.2ರಷ್ಟು ಜಿಡಿಪಿ ಪ್ರಗತಿ'

ನವದೆಹಲಿ (ಪಿಟಿಐ): ಮೂಡಿಸ್ ಇನ್‌ವೆಸ್ಟರ್ಸ್ ಸರ್ವಿಸಸ್ ಸಂಸ್ಥೆಯು ಭಾರತದ ಜಿಡಿಪಿ ಬೆಳವಣಿಗೆಯನ್ನು ಪರಿಷ್ಕರಿಸಿದೆ. 2024ನೇ ಕ್ಯಾಲೆಂಡರ್ ವರ್ಷದಲ್ಲಿ ಶೇ 7.2ರಷ್ಟು ಹಾಗೂ 2025ನೇ ಕ್ಯಾಲೆಂಡರ್ ವರ್ಷದಲ್ಲಿ ಶೇ 6.6ರಷ್ಟು ಪ್ರಗತಿ ಕಾಣಲಿದೆ ಎಂದು ಅಂದಾಜಿಸಿದೆ.

ದಿನಬಳಕೆಯ ಸರಕು ಮತ್ತು ಸೇವೆಯಲ್ಲಿನ ವೆಚ್ಚದ ಏರಿಕೆಯಿಂದಾಗಿ ಈ ಪ್ರಗತಿ ಸಾಧ್ಯವಾಗಲಿದೆ. ಬಡ್ಡಿದರ, ನಿರುದ್ಯೋಗ ಆಧಾರಿತ ಸ್ಥೂಲ ಆರ್ಥಿಕ ಸ್ಥಿತಿಯು ಉತ್ತಮವಾಗಿದೆ. ಚಿಲ್ಲರೆ ಹಣದುಬ್ಬರ ಮಂದಗತಿಯಲ್ಲಿದೆ ಎಂದು ಹೇಳಿದೆ.

ಅಣ್ವಸ್ತ್ರ ಸಾಮರ್ಥ್ಯದ ಜಲಾಂತರ್ಗಾಮಿ ಕ್ಷಿಪಣಿ ಸಜ್ಜು

ನವದೆಹಲಿ (ಪಿಟಿಐ): ಅಣ್ವಸ್ತ್ರ ಪ್ರಯೋಗ ಸಾಮರ್ಥ್ಯವುಳ್ಳ, ಖಂಡಾಂತರ ದಾಳಿ ಉದ್ದೇಶದ, ಭಾರತದ ಎರಡನೇ ಜಲಾಂತರ್ಗಾಮಿ ಕ್ಷಿಪಣಿಯು ಈಗ ಕಾರ್ಯಾರಂಭಕ್ಕೆ ಸಜ್ಜಾಗಿದೆ.

ದ್ವಿತೀಯ ಜಲಾಂತರ್ಗಾಮಿ ಕ್ಷಿಪಣಿ ಎಸ್‌ಎಸ್‌ಬಿಎನ್ (ಹಡಗು, ಜಲಾಂತರ್ಗಾಮಿ, ಖಂಡಾಂತರ, ಅಣ್ವಸ್ತ್ರ) ಕಾರ್ಯಾರಂಭಕ್ಕೆ ಸಜ್ಜಾಗಿದೆ ಎಂದು ವಿಶಾಖಪಟ್ಟಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಘೋಷಿಸಿದರು ಎಂದು ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ.

'ಐಎನ್‌ಎಸ್ ಅರಿಘಾತ್' ಕಾರ್ಯಾರಂಭವನ್ನು ಅಣ್ವಸ್ತ್ರ ದಾಳಿಗೆ ಪ್ರತಿರೋಧ ಒಡ್ಡುವ ನಿಟ್ಟಿನಲ್ಲಿ ಭಾರತದ ನೌಕಾಪಡೆಯ ಸಾಮರ್ಥ್ಯದ ವೃದ್ಧಿಯಲ್ಲಿ ಮಹತ್ವದ ಹೆಜ್ಜೆ ಎಂದೇ ಬಣ್ಣಿಸಲಾಗಿದೆ.

ಎಸ್‌ಎಸ್‌ಬಿಎನ್ ಗೋಪ್ಯವಾಗಿ ಅನುಷ್ಠಾನಗೊಳಿಸಲಾದ ಯೋಜನೆಯಾಗಿದೆ. ಪ್ರಥಮ ಜಲಾಂತರ್ಗಾಮಿ ಕ್ಷಿಪಣಿ ಐಎನ್‌ಎಸ್ ಅರಿಹಂತ್‌ನ ಪರೀಕ್ಷಾರ್ಥ ಪ್ರಯೋಗ ಜುಲೈ 2009ರಲ್ಲಿ ನಡೆದಿತ್ತು. ಇದನ್ನು ಹೆಚ್ಚು ಪ್ರಚಾರವಿಲ್ಲದೇ 2016ರಲ್ಲಿ ಕಾರ್ಯಾರಂಭಗೊಳಿಸಲಾಗಿತ್ತು.

ಪ್ರಥಮ ಕ್ಷಿಪಣಿ ಐಎನ್‌ಎಸ್ ಅರಿಹಂತ್‌ನ ಪರೀಕ್ಷಾರ್ಥ ಪ್ರಯೋಗ ಅಕ್ಟೋಬರ್ 2022ರಲ್ಲಿ ಬಂಗಾಳಕೊಲ್ಲಿಯಲ್ಲಿ ನಡೆದಿದ್ದು, ನಿಖರವಾಗಿ ಗುರಿ ತಲುಪಿತ್ತು ಎಂದು ರಕ್ಷಣಾ ಸಚಿವಾಲಯವು ತಿಳಿಸಿದೆ.

ಪುರುಲಿಯಾದಲ್ಲಿ ಶಸ್ತ್ರಾಸ್ತ್ರ ಬೀಳಿಸಿದ ಪ್ರಕರಣ

ಆರೋಪಿ ಹಸ್ತಾಂತರ: ಭಾರತದ ಮನವಿ ತಿರಸ್ಕರಿಸಿದ ಡೆನ್ಮಾರ್ಕ್ ನ್ಯಾಯಾಲಯ

ಕೋಪೆನ್‌ಹೆಗನ್ (ಡೆನ್ಮಾರ್ಕ್) (ಎಪಿ): 29 ವರ್ಷಗಳ ಹಿಂದೆ ಪಶ್ಚಿಮ ಬಂಗಾಳದ ಪುರುಲಿಯಾದಲ್ಲಿ ವಿಮಾನವೊಂದರಿಂದ ಶಸ್ತ್ರಾಸ್ತ್ರಗಳನ್ನು ಕೆಳಗೆ ಬೀಳಿಸಿದ್ದ ಪ್ರಕರಣದಲ್ಲಿ ಆರೋಪಿಯಾಗಿರುವ, ಡೆನ್ಮಾರ್ಕ್ ಪ್ರಜೆ ಹಸ್ತಾಂತರ ಕೋರಿ ಭಾರತ ಸಲ್ಲಿಸಿದ್ದ ಮನವಿಯನ್ನು ಸ್ಥಳೀಯ ಕೋರ್ಟ್ ಗುರುವಾರ ತಿರಸ್ಕರಿಸಿದೆ.

ಆರೋಪಿ ನೀಲ್ಸ್ ಹಾಕ್ ಎಂಬಾತನ ಹಸ್ತಾಂತರಕ್ಕೆ ಡೆನ್ಮಾರ್ಕ್‌ನ ನ್ಯಾಯಾಂಗ ಇಲಾಖೆ ಅನುಮತಿ ನೀಡಿತ್ತು. ಆದರೆ, ಹಿಲೆರಾಡ್ ಜಿಲ್ಲಾ ನ್ಯಾಯಾಲಯ, ನೀಲ್ಸ್ ಹಸ್ತಾಂತರಕ್ಕೆ ತಡೆ ನೀಡಿದೆ.

'ಆರೋಪಿಯ ಹಸ್ತಾಂತರಕ್ಕೆ ಸಂಬಂಧಿಸಿ ಭಾರತವು ಹೆಚ್ಚುವರಿಯಾಗಿ ರಾಜತಾಂತ್ರಿಕ ಖಾತರಿಗಳನ್ನು ಒದಗಿಸಿದೆ. ಆದಾಗ್ಯೂ, ಭಾರತದಲ್ಲಿ ನೀಲ್ಸ್ ಹಾಕ್‌ಗೆ ಚಿತ್ರಹಿಂಸೆ ಅಥವಾ ಆತನೊಂದಿಗೆ ಅಮಾನವೀಯವಾಗಿ ನಡೆದುಕೊಳ್ಳುವ ಅಪಾಯ ಇದೆ' ಎಂಬ ಕಾರಣ ನೀಡಿ, ಭಾರತದ ಮನವಿಯನ್ನು ಕೋರ್ಟ್ ತಿರಸ್ಕರಿಸಿದೆ.

'ನನ್ನನ್ನು ಭಾರತಕ್ಕೆ ಹಸ್ತಾಂತರಿಸಿದಲ್ಲಿ ನನ್ನ ಜೀವಕ್ಕೆ ಅಪಾಯ ಇದೆ' ಎಂಬುದಾಗಿ 62 ವರ್ಷದ ನೀಲ್ಸ್ ಕೋರ್ಟ್‌ಗೆ ತಿಳಿಸಿದ್ದ.

1995ರಲ್ಲಿ ಪುರುಲಿಯಾದಲ್ಲಿ, ಅಸಾಲ್ಟ್ ರೈಫಲ್‌ಗಳು, ರಾಕೆಟ್ ಲಾಂಚರ್ ಮತ್ತು ಕ್ಷಿಪಣಿಗಳನ್ನು ಸರಕು ಸಾಗಣೆ ವಿಮಾನವೊಂದರಿಂದ ಕೆಳಗೆ ಹಾಕಲಾಗಿತ್ತು. ಈ ಕಾರ್ಯದಲ್ಲಿ ತಾನು ಭಾಗಿಯಾಗಿದ್ದಾಗಿ ನೀಲ್ಸ್ ತಪ್ಪೊಪ್ಪಿಕೊಂಡಿದ್ದಾನೆ.

ಭಾರತದಲ್ಲಿನ ಕ್ರಾಂತಿಕಾರಿಗಳ ಗುಂಪಿಗಾಗಿ ಇವುಗಳನ್ನು ನೀಡಲಾಗಿತ್ತು ಎಂದು ಭಾರತದ ಪೊಲೀಸರು ಹೇಳಿದ್ದರು. ಈತನ ಹಸ್ತಾಂತರಕ್ಕಾಗಿ ಭಾರತ 2002ರಲ್ಲಿ ಮೊದಲು ಮನವಿ ಮಾಡಿತ್ತು. ನಂತರ, 2016ರಲ್ಲಿ ಮತ್ತೊಮ್ಮೆ ಮನವಿ ಮಾಡಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿ, ಒಬ್ಬ ಬ್ರಿಟನ್ ಹಾಗೂ ಐದು ಜನ ಲಾತ್ವಿಯಾ ಪ್ರಜೆಗಳನ್ನು ಭಾರತ ಬಂಧಿಸಿತ್ತು. ನೀಲ್ಸ್ ಪರಾರಿಯಾಗಿದ್ದ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿವಿದೆ13,000 - 17,000. 8951315839 , 9141634619

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555, 9663542555

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9731810277
9886213331
9845114560
*Conditions apply

ಕ್ಲಾಸಿಫೈಡ್ಸ್
ADMISSION CORNER

VIVEKANANDA INSTITUTE OF TECHNOLOGY
AN INSTITUTE OF JANATHA EDUCATION SOCIETY®
Recognised by GOK, Affiliated to VTU & Approved by AICTE
CET CODE: E087 | Estd.: 1997 | COMEDK CODE: E149
BE: Bachelor of Engineering
❖ Computer Science
❖ Artificial Intelligence & Machine Learning
❖ Electronics & Communication
❖ Information Science
❖ Mechanical ❖ Civil
B+ NAAC
College of Law
3Yr LL.B
5Yr B.A.LL.B | B.Com.LL.B
Institute of Management — PGCET B-323
BCA | BBA
MBA - Finance | Marketing, HR | Business Analytics
Degree College
BCA | BA |
B.Ed | BA Journalism
B.Com | B.Com Data Analytics
College of Pharmacy — CET B060
D.Pharm | B.Pharm
M.Pharm - Pharmaceutical Chemistry, Pharmaceutics
2024-25 Admissions Open
95139 53482
VKIT Campus: Gudimavu, Kumbalgodu, Kengeri, Bengaluru - 74
City Campus: Dr. RajKumar Road, Next to Orion Mall, Rajajinagar, Bengaluru - 55

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/- ರಿಂದ 20,000/- ESI,PF ಸೌಲಭ್ಯವಿರುತ್ತದೆ. ಬೆಂಗಳೂರು-76. ಸಂಪರ್ಕಿಸಿ: 9008835841, 9900859248

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 04.10.2024,14.11.2024 20.12.2024 8ದಿನಗಳು ಪಂಚರಾಮಕ್ಷೇತ್ರ ದರ್ಶನಯಾತ್ರೆ ವಿಜಯವಾಡ,ಮಂಗಳಗಿರಿ ಪೀಠಾಪುರಂ,ಅನ್ನಾವರಂ ವಿಶಾಖಪಟ್ಟಣ,ಭದ್ರಾಚಲಂ,ಇತರ. 25000. 04.10.2024, 14.11.2024,20.12.2024 8ದಿನಗಳು ಅಹೋಬಲಂ ಹೈದರಾಬಾದ್ ಪ್ರವಾಸ ಶ್ರೀಶೈಲಂ, ಮಹಾನಂದಿ 25000. 20.09.2024,04.10.2024 20.10.2024,15.11.2024 21.12.2024 7/10ದಿನಗಳು ಅಖಂಡ ಕೇರಳ ಪ್ರವಾಸ. 32000. 9743351212/ 9206979202/ 8792319181

ದಸರಾ ರಜೆಯಲ್ಲಿ ರಿಯಾಯಿತಿ ದರದಲ್ಲಿ ವಿದೇಶ ಪ್ರವಾಸ. 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್. 6ದಿನಗಳ ಶ್ರೀಲಂಕಾ ಪ್ರವಾಸ. 6 ದಿನಗಳ ದುಬೈ ಅಬುದಾಬಿ ಪ್ರವಾಸ. 6 ದಿನಗಳ ಬಾಲಿ. 18 ದಿನಗಳ ಯುಕೆ ಮತ್ತು ಯುರೋಪ್. ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793, 9900080796, 080-26617178

★ಶ್ರೀಶ್ರೇಯಸ್ ಟೂರ್ಸ್★ 04.10.2024,06.11.2024 16.11.2024 7ದಿನಗಳು ಭೂತಾನ್ ರಾಷ್ಟ್ರ ಪ್ರವಾಸ 40000. 14.11.2024 8ದಿನಗಳು ಶ್ರೀಲಂಕಾ ರಾಷ್ಟ್ರ ಪ್ರವಾಸ 85000. 09.09.2024, 04.10.2024 11ದಿನಗಳು ಚಾರ್‌ದಾಮ್ ಯಾತ್ರೆ 40000. 9743351212/ 9206979202/ 8792319181

16.09.2024 12ದಿನಗಳು ದೆಹಲಿ,ಬದ್ರಿನಾಥ್ ಕೇದಾರನಾಥ ಗಂಗೋತ್ರಿ,ಯಮುನೋತ್ರಿ (ಕೆಲವೇ ಸೀಟುಗಳುವೆ) 42000/ `03.10.2024 6ದಿನಗಳು`ಕಾಶಿ, ಅಯೋಧ್ಯಾ`ಗಯಾ, ಅಲಹಾಬಾದ್`32,000/ ಸೆಪ್ಟೆಂಬರ್`ಅಕ್ಟೋಬರ್`ನಲ್ಲಿ ಅಂಡಮಾನ್`ಹವಳದ್ವೀಪ. "ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್" 9739847429/ 9845560219

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಲೈಂಗಿಕ ದೌರ್ಜನ್ಯ ಕುರಿತು ಮಲಯಾಳ ಚಿತ್ರನಟಿಯಿಂದ ದೂರು: ಸೆ.3ರವರೆಗೆ ಬಂಧಿಸದಂತೆ ಹೈಕೋರ್ಟ್ ಸೂಚನೆ

ಮುಕೇಶ್ ವಿರುದ್ಧ ಅತ್ಯಾಚಾರ ಪ್ರಕರಣ

ತಿರುವನಂತಪುರ (ಪಿಟಿಐ): 'ತನ್ನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ನಟಿಯೊಬ್ಬರು ನೀಡಿದ್ದ ದೂರು ಆಧರಿಸಿ ಮಲಯಾಳ ಚಿತ್ರನಟ, ಆಡಳಿತಾರೂಢ ಸಿಪಿಎಂ ಶಾಸಕ ಎಂ.ಮುಕೇಶ್ ವಿರುದ್ಧ ಪೊಲೀಸರು ಗುರುವಾರ ಅತ್ಯಾಚಾರ ಪ್ರಕರಣ ದಾಖಲಿಸಿದ್ದಾರೆ.

ನಟ ಜಯಸೂರ್ಯ ವಿರುದ್ಧವೂ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿರುವ ಪೊಲೀಸರು, ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಇನ್ನೊಂದೆಡೆ, ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ನಟ, ಶಾಸಕ ಮುಕೇಶ್ ಅವರನ್ನು ಸೆ. 3ರವರೆಗೂ ಬಂಧಿಸಬಾರದು ಎಂದು ಸ್ಥಳೀಯ ಕೋರ್ಟ್ ಆದೇಶಿಸಿದ್ದು, ಸದ್ಯಕ್ಕೆ ಅವರು ನಿರಾಳರಾಗಿದ್ದಾರೆ.

ಮುಕೇಶ್ ವಿರುದ್ಧ ಐಪಿಸಿ ಸೆಕ್ಷನ್ 376ರ ಅನ್ವಯ ಎಫ್‌ಐಆರ್ ದಾಖಲಿಸಿದೆ. ಭಾರತೀಯ ನ್ಯಾಯ ಸಂಹಿತೆಗೆ ಜಾರಿಗೆ ಬರುವ ಮೊದಲೇ, ಈ ಕೃತ್ಯ ನಡೆದಿರುವ ಕಾರಣ ಐಪಿಸಿ ಪ್ರಕಾರ, ಪ್ರಕರಣ ದಾಖಲಿಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.


ಮುಕೇಶ್

ಮಲಯಾಳ ಚಿತ್ರರಂಗದಲ್ಲಿ ಲೈಂಗಿಕ ದೌರ್ಜನ್ಯ ಕುರಿತಂತೆ ನ್ಯಾಯಮೂರ್ತಿ ಹೇಮಾ ಸಮಿತಿ ವರದಿ ಬಳಿಕ ದಾಖಲಾದ 3ನೇ ಎಫ್‌ಐಆರ್ ಇದಾಗಿದೆ. ಹಿಂದೆ ನಟ ಸಿದ್ದೀಕ್, ನಿರ್ದೇಶಕ ರಂಜಿತ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ರಂಜಿತ್ ವಿರುದ್ಧ ಪಶ್ಚಿಮ ಬಂಗಾಳದ ನಟಿಯೊಬ್ಬರು 2009ರಲ್ಲಿ ನಡೆದಿದ್ದ ಕೃತ್ಯಕ್ಕೆ ಸಂಬಂಧಿಸಿದಂತೆ ದೂರು ನೀಡಿದ್ದರು.

ಆರೋಪದ ಬಳಿಕ ರಂಜಿತ್ ಕೇರಳ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಸ್ಥಾನಕ್ಕೆ, ಸಿದ್ದೀಕ್ ಮಲಯಾಳ ಸಿನಿಮಾ ಕಲಾವಿದರ ಸಂಘದ (ಅಮ್ಮ) ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

2017ರ ನಟಿಯೊಬ್ಬರ ಮೇಲಿನ ಹಲ್ಲೆ ಕೃತ್ಯ ಕುರಿತು ಕೇರಳ ಸರ್ಕಾರ ರಚಿಸಿದ್ದ ನ್ಯಾಯಮೂರ್ತಿ ಹೇಮಾ ನೇತೃತ್ವದ ಸಮಿತಿಯ ವರದಿ ಈಚೆಗೆ ಪ್ರಕಟವಾಗಿದ್ದವು.

> ಮಲಯಾಳ ಚಿತ್ರರಂಗದಲ್ಲಿ ನಟಿಯರನ್ನು ಕೀಳಾಗಿ ನೋಡುವ ಸ್ಥಿತಿ ಇದ್ದರೆ, ಸರ್ಕಾರ ಕ್ರಮ ಜರುಗಿಸಲಿ. ಆದರೆ, ನ್ಯಾ.ಹೇಮಾ ವರದಿ ಸಂಬಂಧ ಕ್ರಮ ಕೈಗೊಳ್ಳುತ್ತಿಲ್ಲ
> **ವಿ.ಮುರಳೀಧರನ್**
> ಬಿಜೆಪಿ ನಾಯಕ, ಕೇಂದ್ರದ ಮಾಜಿ ಸಚಿವ

> ಆರೋಪಿ ನಟ, ಸಿಪಿಎಂ ಶಾಸಕ ಎಂ.ಮುಕೇಶ್ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ. ಮುಕೇಶ್ ಮತ್ತು ಅವರ ಪಕ್ಷ ಈ ಬಗ್ಗೆ ತೀರ್ಮಾನಿಸಬೇಕು
> **ವಿ.ಡಿ.ಸತೀಶನ್**
> ವಿಧಾನಸಭೆ ವಿರೋಧಪಕ್ಷದ ನಾಯಕ

'ಕಾಂಗ್ರೆಸ್ ತನ್ನ ಶಾಸಕರಿಂದ ರಾಜೀನಾಮೆ ಕೊಡಿಸಲಿ'

ತಿರುವನಂತಪುರ (ಪಿಟಿಐ): ಲೈಂಗಿಕ ದೌರ್ಜನ್ಯ ಆರೋಪವುಳ್ಳ ನಟ, ಸಿಪಿಐ (ಎಂ) ಶಾಸಕ ಎಂ.ಮುಕೇಶ್ ಅವರ ಬೆಂಬಲಕ್ಕೆ ಆಡಳಿತಾರೂಢ ಮೈತ್ರಿಕೂಟ ಎಲ್‌ಡಿಎಫ್ ನಿಂತಿದೆ.

ಮುಕೇಶ್ ಅವರ ರಾಜೀನಾಮೆ ಕೇಳುವ ಮೊದಲು, ಲೈಂಗಿಕ ದೌರ್ಜನ್ಯ ಎಸಗಿದ ಆರೋಪವಿರುವ ಇಬ್ಬರು ಕಾಂಗ್ರೆಸ್ ಶಾಸಕರು ರಾಜೀನಾಮೆ ನೀಡಬೇಕು ಎಂದು ಎಲ್‌ಡಿಎಫ್ ಪ್ರತಿಕ್ರಿಯಿಸಿದೆ.

ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಕಾಂಗ್ರೆಸ್ ಶಾಸಕರಾದ ಎಂ.ವಿನ್ಸೆಂಟ್, ಇ.ಕುನ್ನಪ್ಪಿಳ್ಳಿ ವಿರುದ್ಧದ ಆರೋಪ ಉಲ್ಲೇಖಿಸಿ ಈ ಮಾತು ಹೇಳಿದರು.

'ಸಾಬೀತಾದರೆ ಶಾಸಕನಾಗಿ ಮುಂದುವರಿಯುವ ಹಕ್ಕಿಲ್ಲ'

ತಿರುವನಂತಪುರ (ಪಿಟಿಐ): 'ಮುಕೇಶ್ ವಿರುದ್ಧದ ಆರೋಪ ಸಾಬೀತಾದಲ್ಲಿ ಅವರಿಗೆ ಶಾಸಕರಾಗಿರುವ ಹಕ್ಕು ಇರುವುದಿಲ್ಲ' ಎಂದು ಸಿಪಿಐ (ಎಂ) ಪಕ್ಷದ ನಾಯಕಿ, ಮಾಜಿ ಸಚಿವೆ ಕೆ.ಕೆ.ಶೈಲಜಾ ಹೇಳಿದರು.

'ವಿಶೇಷ ತನಿಖಾ ತಂಡ ಒಮ್ಮೆ ವರದಿ ಸಲ್ಲಿಸಿದ ಬಳಿಕ ಸರ್ಕಾರ ಸೂಕ್ತ ಕ್ರಮಕೈಗೊಳ್ಳಲಿದೆ. ತನಿಖೆ ಇನ್ನೂ ಪ್ರಾಥಮಿಕ ಹಂತದಲ್ಲಿದೆ. ರಾಜೀನಾಮೆ ಕುರಿತು ಈ ಹಂತದಲ್ಲಿ ಹೇಳಲಾಗದು. ರಾಜ್ಯ ಸರ್ಕಾರ ಈ ವಿಷಯದಲ್ಲಿ ಯಾರನ್ನೂ ರಕ್ಷಿಸುವುದಿಲ್ಲ' ಎಂದು ಅಭಿಪ್ರಾಯಪಟ್ಟರು.

ಚಿತ್ರರಂಗದ ವಿವಿಧ ನಟರು, ನಿರ್ದೇಶಕರ ವಿರುದ್ಧ ಆರೋಪಗಳು ಕೇಳಿಬಂದ ಕಾರಣ ತನಿಖೆಗಾಗಿ ರಾಜ್ಯ ಸರ್ಕಾರ ಇತ್ತೀಚೆಗೆ ಏಳು ಸದಸ್ಯರ ಸಮಿತಿ ರಚಿಸಿತ್ತು. ಸಮಿತಿ ರಚನೆಯ ಬಳಿಕ ನಟ, ನಿರ್ದೇಶಕರ ವಿರುದ್ಧ ಹಲವು ದೂರುಗಳು ದಾಖಲಾಗಿವೆ.

ಸಮಿತಿ ರಚನೆಗೆ ಮುಂದಾದ ತಮಿಳು ಚಿತ್ರರಂಗ:

(ಚೆನ್ನೈ ವರದಿ): ತಮಿಳು ಚಿತ್ರರಂಗದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಕುರಿತು ದಾಖಲಾಗುವ ದೂರುಗಳ ಪರಿಶೀಲನೆಗೆ ಶೀಘ್ರವೇ ಸಮಿತಿಯನ್ನು ರಚಿಸಲು ದಕ್ಷಿಣ ಭಾರತ ಕಲಾವಿದರ ಸಂಘ (ನಡಿಗರ್ ಸಂಗಂ) ನಿರ್ಧರಿಸಿದೆ ಎಂದು ಪ್ರಧಾನ ಕಾರ್ಯದರ್ಶಿ, ನಟ ವಿಶಾಲ್ ಅವರು ತಿಳಿಸಿದ್ದಾರೆ.

'10 ಜನರ ಸದಸ್ಯರ ಸಮಿತಿಯನ್ನು ಇನ್ನು ಹತ್ತು ದಿನಗಳಲ್ಲಿ ರಚಿಸಲಾಗುವುದು' ಎಂದು ಹೇಳಿದ್ದಾರೆ.

ಮುಸ್ಲಿಮರ ಮದುವೆ ನೋಂದಣಿ ಕಡ್ಡಾಯ: ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ಗುವಾಹಟಿ: ಮುಸ್ಲಿಮರ ಮದುವೆ ಹಾಗೂ ವಿಚ್ಛೇದನ ಕುರಿತು ನೋಂದಣಿ ಮಾಡಿಸುವುದನ್ನು ಕಡ್ಡಾಯಗೊಳಿಸುವ ಹಾಗೂ ಅಪ್ರಾಪ್ತ ವಯಸ್ಕರ ಮದುವೆಯನ್ನು ನಿಷೇಧಿಸುವ ಮಸೂದೆಯನ್ನು ಅಸ್ಸಾಂ ವಿಧಾನಸಭೆ ಗುರುವಾರ ಅಂಗೀಕರಿಸಿತು.

ಈವರೆಗೆ ಮುಸ್ಲಿಮರ ಮದುವೆಗಳನ್ನು ಶಾಸ್ತ್ರೋಕ್ತವಾಗಿ ನೆರವೇರಿಸುತ್ತಿದ್ದ ಖಾಜಿಗಳು, ಇನ್ನು ಮುಂದೆ ಈ ವಿಧಿ ನಡೆಸುವುದನ್ನು ನಿಷೇಧಿಸುವ ಅವಕಾಶವನ್ನು ಈ ಮಸೂದೆ ಒಳಗೊಂಡಿದೆ.

'ಅಸ್ಸಾಂ ಮುಸ್ಲಿಮರ ಮದುವೆಗಳು ಹಾಗೂ ವಿಚ್ಛೇದನಗಳ ನೋಂದಣಿ ಕಾಯ್ದೆ, 1935' ಬದಲಿಗೆ ಅಂಗೀಕೃತ ಈ ಮಸೂದೆಯಡಿ ರೂಪಿಸುವ ಕಾಯ್ದೆ ಜಾರಿಗೆ ಬರಲಿದೆ. ತಿದ್ದುಪಡಿ ಮಸೂದೆಯು ತಾರತಮ್ಯದಿಂದ ಕೂಡಿದೆ ಹಾಗೂ ಆಡಳಿತಾರೂಢ ಬಿಜೆಪಿಯು ಕೋಮು ಧ್ರುವೀಕರಣಕ್ಕೆ ಯತ್ನಿಸುತ್ತಿದೆ. ಎಂಬ ವಿರೋಧ ಪಕ್ಷಗಳ ಟೀಕೆ ನಡುವೆಯೇ, 'ಅಸ್ಸಾಂ ಮುಸ್ಲಿಮರ ಮದುವೆಗಳ ಮತ್ತು ವಿಚ್ಛೇದನಗಳ ಕಡ್ಡಾಯ ನೋಂದಣಿ ಮಸೂದೆ, 2024'ಅನ್ನು ವಿಧಾನಸಭೆಯು ಅಂಗೀಕರಿಸಿತು.

ಹಿಮಂತ ಬಿಸ್ವ ಶರ್ಮಾ

ಮಸೂದೆ ಮೇಲಿನ ಚರ್ಚೆ ವೇಳೆ ಮಾತನಾಡಿದ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ, 'ನಮ್ಮ ಗುರಿ ಬಾಲ್ಯ ವಿವಾಹ ಪದ್ಧತಿಯನ್ನು ನಿರ್ಮೂಲನೆ ಮಾಡುವುದು ಮಾತ್ರವಲ್ಲ, 'ಖಾಜಿ ವ್ಯವಸ್ಥೆ'ಯನ್ನು ತೆಗೆದು ಹಾಕವುದೂ ಆಗಿದೆ' ಎಂದು ಹೇಳಿದರು.

'ಮುಸ್ಲಿಮರಲ್ಲಿ ನಡೆಯುವ ಎಲ್ಲ ವಿವಾಹಗಳು ಮತ್ತು ವಿಚ್ಛೇದನಗಳು ಸರ್ಕಾರಿ ವ್ಯವಸ್ಥೆಯಡಿ ನೋಂದಣಿಯಾಗಬೇಕು ಎಂಬುದು ನಮ್ಮ ಬಯಕೆ' ಎಂದರು. 'ಈಗಾಗಲೇ ಖಾಜಿಗಳು ವಿಧಿಬದ್ಧವಾಗಿ ನೆರವೇರಿಸಿರುವ ಮದುವೆಗಳಿಗೆ ಈ ಮಸೂದೆಯಲ್ಲಿನ ಅವಕಾಶಗಳು ಅನ್ವಯವಾಗುವುದಿಲ್ಲ. ಹೊಸದಾಗಿ ನೆರವೇರುವ ಮದುವೆ ಗಳು ಈ ನೂತನ ಕಾಯ್ದೆ ವ್ಯಾಪ್ತಿಗೆ ಒಳಪಡಲಿವೆ' ಎಂದು ವಿಪಕ್ಷ ಎಐಯುಡಿಎಫ್‌ನ ಪ್ರಶ್ನೆ ಯೊಂದಕ್ಕೆ ಶರ್ಮಾ ಉತ್ತರಿಸಿದರು.

ವಿದ್ಯಾರ್ಥಿಗಳ ಪ್ರತಿಭಟನೆಗೆ ನನ್ನ ಬೆಂಬಲವೂ ಇದೆ: ಪಶ್ಚಿಮ ಬಂಗಾಳ ಸಿ.ಎಂ

ಬೆದರಿಕೆ ಆರೋಪ ಅಲ್ಲಗಳೆದ ಮಮತಾ

ಕೋಲ್ಕತ್ತ (ಪಿಟಿಐ): ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳ ಕಿರಿಯ ವೈದ್ಯರಿಗೆ ತಾವು ಬೆದರಿಕೆ ಒಡ್ಡಿಲ್ಲ ಎಂದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಗುರುವಾರ ಸ್ಪಷ್ಟಪಡಿಸಿದ್ದಾರೆ. ಕೋಲ್ಕತ್ತದ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆಯನ್ನು ಖಂಡಿಸಿ ಕಿರಿಯ ವೈದ್ಯರು 21 ದಿನಗಳಿಂದ ಕೆಲಸ ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಪ್ರತಿಭಟನೆಯಲ್ಲಿ ತೊಡಗಿರುವ ಕಿರಿಯ ವೈದ್ಯರಿಗೆ ತಾವು ಬೆದರಿಕೆ ಒಡ್ಡಿರುವುದಾಗಿ ಕೆಲವರು ಮಾಡಿರುವ ಆರೋಪವು 'ದುರುದ್ದೇಶದಿಂದ ತಪ್ಪು ಮಾಹಿತಿ ನೀಡುವ ಅಭಿಯಾನದ ಒಂದು ಭಾಗ' ಎಂದು ಮಮತಾ ದೂರಿದ್ದಾರೆ.

'ವಿದ್ಯಾರ್ಥಿಗಳ (ವೈದ್ಯಕೀಯ ಇತ್ಯಾದಿ) ವಿರುದ್ಧ ನಾನು ಒಂದು ಪದವನ್ನೂ ಆಡಿಲ್ಲ ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅವರ ಚಳವಳಿಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸುತ್ತಿದ್ದೇನೆ.

ಮಮತಾ ಬ್ಯಾನರ್ಜಿ

ಅವರದ್ದು ಸಕಾರಣದ ಹೋರಾಟ. ಕೆಲವರು ನನ್ನನ್ನು ಗುರಿಯಾಗಿಸಿಕೊಂಡು ಆರೋಪಿಸಿ ರುವಂತೆ, ನಾನು ಅವರನ್ನು ಯಾವತ್ತೂ ಬೆದರಿಸಿಲ್ಲ. ಆರೋಪಗಳು ಸಂಪೂರ್ಣವಾಗಿ ಸುಳ್ಳು' ಎಂದು ಮಮತಾ ಅವರು 'ಎಕ್ಸ್'ನಲ್ಲಿ ಬರೆದಿದ್ದಾರೆ.

ತೃಣಮೂಲ ಕಾಂಗ್ರೆಸ್ ಛಾತ್ರ ಪರಿಷತ್ ಆಯೋಜಿಸಿದ್ದ ರ‍್ಯಾಲಿಯನ್ನು ಉದ್ದೇಶಿಸಿ ಬುಧವಾರ ಮಾತನಾಡಿದ್ದ ಮಮತಾ ಅವರು, ಪ್ರತಿಭಟನೆಯಲ್ಲಿ ತೊಡಗಿರುವ ಕಿರಿಯ ವೈದ್ಯರು ಕರ್ತವ್ಯಕ್ಕೆ ಮರಳುವ ಬಗ್ಗೆ ತುರ್ತಾಗಿ ಪರಿಗಣಿಸಬೇಕು ಎಂದು ಮನವಿ ಮಾಡಿದ್ದರು. ಪ್ರತಿಭಟನೆಯಲ್ಲಿ ತೊಡಗಿರುವ ವೈದ್ಯರ ಭವಿಷ್ಯವನ್ನು ಪರಿಗಣಿಸಿ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲು ತಮಗೆ ಇಷ್ಟವಿಲ್ಲ ಎಂದೂ ಮಮತಾ ಹೇಳಿದ್ದರು. ಈ ಮಾತನ್ನು ಈ ವೈದ್ಯರು 'ಪರೋಕ್ಷ ಬೆದರಿಕೆ' ಎಂದು ಅರ್ಥೈಸಿಕೊಂಡಿದ್ದರು. ಕೆಲಸಕ್ಕೆ ಮರಳಲು ನಿರಾಕರಿಸಿದ್ದರು

ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

ನವದೆಹಲಿ (ಪಿಟಿಐ): ಮಹಿಳೆಯರ ಸುರಕ್ಷತೆಯ ವಿಚಾರವಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರು ಕೆಂಪು ಕೋಟೆಯಿಂದ ಮಾಡಿದ ಭಾಷಣಗಳಲ್ಲಿ ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದಂತೆ ಹಲವು ಬಾರಿ ಪ್ರಸ್ತಾಪಿಸಿದ್ದರೂ, ಅವರ ನೇತೃತ್ವದ ಸರ್ಕಾರವು ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆಯುವ ಕ್ರಿಮಿನಲ್ ಅಪರಾಧಗಳನ್ನು ತಡೆಯಲು ವಾಸ್ತವದಲ್ಲಿ ಏನೂ ಮಾಡಿಲ್ಲ ಎಂದು ಖರ್ಗೆ ದೂರಿದ್ದಾರೆ.

ವಿವಿಧೆಡೆ ದೌರ್ಜನ್ಯ

ಮಗಳಿಗೆ ಲೈಂಗಿಕ ಕಿರುಕುಳ: ಅಪ್ಪನ ವಿರುದ್ಧ ಪ್ರಕರಣ

ಠಾಣೆ (ಪಿಟಿಐ): ಮಗಳಿಗೆ ಲೈಂಗಿಕ ಕಿರುಕುಳ ನೀಡಿದ 64 ವರ್ಷದ ತಂದೆಯ ವಿರುದ್ಧ ಮಹಾರಾಷ್ಟ್ರದ ಠಾಣೆ ಜಿಲ್ಲೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

18 ವರ್ಷದ ಯುವತಿ ತನ್ನ ತಂದೆಯ ವಿರುದ್ಧ ನೀಡಿರುವ ದೂರಿನಲ್ಲಿ, 'ಜುಲೈ 5ರಂದು ಮನೆಯಲ್ಲಿ ಯಾರೂ ಇಲ್ಲದಾಗ, ಅಪ್ಪ ಬಲವಂತವಾಗಿ ನನಗೆ ಲೈಂಗಿಕ ಕಿರುಕುಳ ನೀಡಿದ್ದಾರೆ' ಎಂದು ಉಲ್ಲೇಖಿಸಿದ್ದಾರೆ ಎಂದು ವರ್ತಕ್ ನಗರ ಪೊಲೀಸ್ ಠಾಣೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ವೈದ್ಯನಿಂದ ಲೈಂಗಿಕ ಕಿರುಕುಳ

ಮುಜಾಫ್ಫರ್‌ನಗರ (ಉತ್ತರ ಪ್ರದೇಶ) (ಪಿಟಿಐ): ಖಾಸಗಿ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ದಾಖಲಾಗಿದ್ದ 17 ವರ್ಷದ ಬಾಲಕಿಗೆ ಅಲ್ಲಿನ ವೈದ್ಯರೊಬ್ಬರು ಲೈಂಗಿಕ ಕಿರುಕುಳ ನೀಡಿದ್ದಾರೆ ಎಂಬ ಆರೋಪ ವ್ಯಕ್ತವಾಗಿದ್ದು, ಈ ಸಂಬಂಧ ದೂರು ದಾಖಲಾಗಿದೆ.

ಆಸ್ಪತ್ರೆಯಲ್ಲಿ ಆಗಸ್ಟ್ 17ರಂದು ಈ ಘಟನೆ ನಡೆದಿದೆ ಎಂದು ಬಾಲಕಿಯ ಪೋಷಕರು ದೂರು ನೀಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸತ್ಯನಾರಾಯಣ ಪ್ರಜಾಪತಿ ತಿಳಿಸಿದ್ದಾರೆ.

ಶಸ್ತ್ರಚಿಕಿತ್ಸೆಯ ಬಳಿಕ ವಿಶ್ರಾಂತಿ ಪಡೆಯುತ್ತಿದ್ದ ಬಾಲಕಿಗೆ ಲೈಂಗಿಕ ಕಿರುಕುಳ ನೀಡಲಾಗಿದೆ ಎಂದು ಪೋಷಕರು ದೂರಿನಲ್ಲಿ ತಿಳಿಸಿದ್ದಾರೆ ಎಂದು ಅವರು ವಿವರಿಸಿದ್ದಾರೆ. ಆರೋಪಿ ವೈದ್ಯನ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದ್ದು, ಅವರ ಪತ್ತೆಗೆ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಅಶ್ಲೀಲ ವಿಡಿಯೊ ತೋರಿಸಿದ ಶಿಕ್ಷಕ ಸೆರೆ

ಠಾಣೆ (ಪಿಟಿಐ): ತನ್ನ ಮೊಬೈಲ್ ಫೋನ್‌ನಲ್ಲಿ ವಿದ್ಯಾರ್ಥಿನಿಯರಿಗೆ ಅಶ್ಲೀಲ ವಿಡಿಯೊಗಳನ್ನು ತೋರಿಸಿದ್ದಕ್ಕಾಗಿ ಮಹಾರಾಷ್ಟ್ರದ ಠಾಣೆ ಜಿಲ್ಲೆಯ ಭಿವಂಡಿ ಸಿವಿಲ್ ಶಾಲೆಯ ಶಿಕ್ಷಕನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಆರೋಪಿಯನ್ನು ಮುಜಮ್ಮಿಲ್ ಎಂದು ಗುರುತಿಸಲಾಗಿದ್ದು, ಆತನನ್ನು ಬುಧವಾರ ಬಂಧಿಸಲಾಗಿದೆ. ಬಾಲಕಿಯೊಬ್ಬಳು ತನ್ನ ಪೋಷಕರಿಗೆ ವಿಷಯ ತಿಳಿಸಿದ್ದರಿಂದ ಆತನ ಕೃತ್ಯ ಬೆಳಕಿಗೆ ಬಂದಿದೆ ಎಂದು ಅವರು ಹೇಳಿದರು.

'7ನೇ ತರಗತಿಯ ವಿದ್ಯಾರ್ಥಿನಿ ಶಾಲೆಗೆ ನಿಯಮಿತವಾಗಿ ತಡವಾಗಿ ಹೋಗುತ್ತಿದ್ದಳು. ಹೀಗೆ ಯಾಕೆ ಆಗುತ್ತಿದೆ ಎಂದು ತಿಳಿಯಲು ಶಾಲೆಯ ಮುಖ್ಯೋಪಾಧ್ಯಾಯರು ಆಕೆಯ ಪೋಷಕರಿಗೆ ಕರೆ ಮಾಡಿದರು. ಆದರೆ, ಆ ಸಮಯದಲ್ಲಿ ಬಾಲಕಿ ಈ ಬಗ್ಗೆ ಅವರಿಗೆ ಏನನ್ನೂ ಹೇಳಿರಲಿಲ್ಲ' ಎಂದು ಶಾಂತಿ ನಗರ ಪೊಲೀಸ್ ಠಾಣೆಯ ಹಿರಿಯ ಇನ್‌ಸ್ಪೆಕ್ಟರ್ ವಿನಾಯಕ ಗಾಯಕವಾಡ್ ತಿಳಿಸಿದ್ದಾರೆ.

ಶಿಕ್ಷಕನೊಬ್ಬ ತನ್ನ ಮೊಬೈಲ್ ಫೋನ್‌ನಲ್ಲಿ ಅವಳಿಗೆ ಅಶ್ಲೀಲ ವಿಡಿಯೊಗಳನ್ನು ತೋರಿಸಿದ್ದು ಮತ್ತು ಅವಳೊಂದಿಗೆ ಅನುಚಿತವಾಗಿ ವರ್ತಿಸಿದಾಗಿನಿಂದ ಶಾಲೆಗೆ ಹೋಗಲು ಇಷ್ಟವಿಲ್ಲ ಎಂದು ಮನೆಗೆ ಮರಳಿದ ನಂತರ ಬಾಲಕಿಯು ಪೋಷಕರಿಗೆ ತಿಳಿಸಿದ್ದಾಳೆ.

ಇತರ ಕೆಲವು ವಿದ್ಯಾರ್ಥಿನಿಯರಿಗೂ ಶಿಕ್ಷಕ ಅದೇ ರೀತಿ ಮಾಡಿದ್ದಾನೆ ಎಂದು ಬಾಲಕಿ ಹೇಳಿದ್ದು, ನಂತರ ಆಕೆಯ ಪೋಷಕರು ಪೊಲೀಸರನ್ನು ಸಂಪರ್ಕಿಸಿ ಶಿಕ್ಷಕನ ವಿರುದ್ಧ ದೂರು ದಾಖಲಿಸಿದ್ದಾರೆ. ಶಿಕ್ಷಕನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

ಏಳು ಮಂದಿಯ ಕೊಂದಿದ್ದ ತೋಳ ಸೆರೆ

ಬಹರಾಯಿಚ್/ಯುಪಿ (ಪಿಟಿಐ): ಬಹರಾಯಿಚ್ ಜಿಲ್ಲೆಯ ಮೆಹ್ಸಿ ತಾಲ್ಲೂಕಿನಲ್ಲಿ ಉತ್ತರ ಪ್ರದೇಶದ ಅರಣ್ಯ ಇಲಾಖೆಯ ತಂಡವು ಗುರುವಾರ ಗಂಡು ತೋಳವೊಂದನ್ನು ಸೆರೆಹಿಡಿದಿದ್ದಾರೆ.

'ಆಪರೇಷನ್ ಭೇಡಿಯಾ' ಭಾಗವಾಗಿ ಈ ಕಾರ್ಯಾಚರಣೆ ನಡೆಸಲಾಯಿತು. 'ಸೀಸಯ್ಯ ಚೂಡಾಮಣಿ ಗ್ರಾಮದ ಬಳಿ ಇರಿಸಲಾಗಿದ್ದ ಬೋನಿನಲ್ಲಿ ಗಂಡು ತೋಳ ಸಿಕ್ಕಿಬಿದ್ದಿದೆ' ಎಂದು 'ಆಪರೇಷನ್ ಭೇಡಿಯಾ' ಉಸ್ತುವಾರಿ ಬಾರಾಬಂಕಿ ವಿಭಾಗೀಯ ಅರಣ್ಯಾಧಿಕಾರಿ (ಡಿಎಫ್‌ಒ) ಆಕಾಶದೀಪ್ ತಿಳಿಸಿದ್ದಾರೆ.

ಬಹರಾಯಿಚ್‌ನಲ್ಲಿ ಕಳೆದ ಒಂದೂವರೆ ತಿಂಗಳಲ್ಲಿ ತೋಳದ ದಾಳಿಗೆ ಆರು ಮಕ್ಕಳು ಸೇರಿದಂತೆ ಮಹಿಳೆಯೊಬ್ಬರು ಮೃತಪಟ್ಟಿದ್ದು, ಇಲ್ಲಿಯವರೆಗೆ ಇಲಾಖೆಯು ಸುಮಾರು ನಾಲ್ಕು ತೋಳಗಳನ್ನು ಸೆರೆಹಿಡಿದಿದೆ.

ತೋಳಗಳನ್ನು ಹಿಡಿಯಲು ಅರಣ್ಯ ಇಲಾಖೆಯಿಂದ ಡ್ರೋನ್ ಕ್ಯಾಮೆರಾಗಳು ಮತ್ತು ಥರ್ಮಲ್ ಡ್ರೋನ್ ಮ್ಯಾಪಿಂಗ್ ತಂತ್ರಗಳನ್ನು ಬಳಸಲಾಗುತ್ತಿದೆ.

ರಕ್ಷಣೆ ಭಾರಿ ಮಳೆಯಿಂದಾಗಿ ಗುಜರಾತ್‌ನ ವಡೋದರದಲ್ಲಿ ಸಂಕಷ್ಟಕ್ಕೆ ಸಿಲುಕಿರುವವರ ನೆರವಿಗೆ ಸೇನೆ ಧಾವಿಸಿದ್ದು ಯೋಧರೊಬ್ಬರು ಮಗುವನ್ನು ರಕ್ಷಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು –ಪಿಟಿಐ ಚಿತ್ರ

'ಕಂಗನಾಗೆ ಅತ್ಯಾಚಾರದ ಅನುಭವವಿದೆ'

ಚಂಡೀಗಢ/ನವದೆಹಲಿ (ಪಿಟಿಐ): 'ದೆಹಲಿಯಲ್ಲಿ ರೈತರು ನಡೆಸಿದ ಹೋರಾಟದ ಸಂದರ್ಭದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ನಡೆದಿದ್ದವು' ಎಂದು ಹೇಳಿದ್ದ ನಟಿ, ಸಂಸದೆ ಕಂಗನಾ ರನೌತ್ ಹೇಳಿಕೆಗೆ ಶಿರೋಮಣಿ ಅಕಾಲಿದಳದ (ಅಮೃತಸರ) ಮುಖ್ಯಸ್ಥ ಸಿಮರನಜೀತ್ ಸಿಂಗ್ ಮಾನ್ ಗುರುವಾರ ನೀಡಿದ ಪ್ರತಿಕ್ರಿಯೆಗೆ ಆಕ್ಷೇಪ ವ್ಯಕ್ತವಾಗಿದೆ. ಪತ್ರಕರ್ತರೊಬ್ಬರ ಪ್ರಶ್ನೆಗೆ ಉತ್ತರಿಸಿದ ಮಾನ್, 'ಅತ್ಯಾಚಾರ ಹೇಗೆ ನಡೆಯುತ್ತದೆ ಎಂದು ನೀವು ಅವರನ್ನೇ (ಕಂಗನಾ) ಕೇಳಿ. ಅತ್ಯಾಚಾರದ ಕುರಿತು ಅವರಿಗೆ ಸಾಕಷ್ಟು ಅನುಭವವಿದೆ' ಎಂದು ಮಾನ್ ಉತ್ತರಿಸಿದರು.

ಮಾನ್ ಅವರ ಹೇಳಿಕೆಗೆ ಕಂಗನಾ ತಮ್ಮ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, 'ಅತ್ಯಾಚಾರಗಳು ಸಾಮಾನ್ಯ ಎಂಬ ಅಭಿಪ್ರಾಯದಿಂದ ಈ ದೇಶವು ಎಂದಿಗೂ ಹೊರಬರುವುದಿಲ್ಲ ಎನ್ನಿಸುತ್ತದೆ' ಎಂದು ಹೇಳಿದ್ದಾರೆ.

'ಆಸ್ಪತ್ರೆಯಿಂದ 3 ಕರೆ, ಭಿನ್ನ ಮಾಹಿತಿ..'

ವೈದ್ಯ ವಿದ್ಯಾರ್ಥಿನಿ ಕೊಲೆ ದಿನ ಆಸ್ಪತ್ರೆ ಸಿಬ್ಬಂದಿಯಿಂದ ಪಾಲಕರಿಗೆ ಮಾಹಿತಿ

ಕೋಲ್ಕತ್ತ (ಪಿಟಿಐ): ಅತ್ಯಾಚಾರ ಮತ್ತು ಹತ್ಯೆಗೀಡಾದ ವೈದ್ಯ ವಿದ್ಯಾರ್ಥಿನಿಯ ತಂದೆ–ತಾಯಿಗೆ, ಆರ್.ಜಿ. ಕರ್ ವೈದ್ಯಕೀಯ ಕಾಲೇಜಿನ ಸಿಬ್ಬಂದಿ ಆಗಸ್ಟ್ 9ರ ಬೆಳಿಗ್ಗೆ ಮಾಡಿದ್ದು ಎನ್ನಲಾದ ದೂರವಾಣಿ ಕರೆಯ ವಿವರಗಳು ಗುರುವಾರ ಬಹಿರಂಗವಾಗಿವೆ.

ಸಿಬ್ಬಂದಿ ಆ ತಂದೆ–ತಾಯಿಗೆ ನೀಡಿದ ಮಾಹಿತಿ ತಪ್ಪಾಗಿತ್ತು ಹಾಗೂ ಮಾಹಿತಿ ನೀಡುವಾಗ ಎಷ್ಟು ಅಸೂಕ್ಷ್ಮವಾಗಿ ವರ್ತಿಸಿದ್ದರು ಎಂಬುದು ಈಗ ಚರ್ಚೆಗೀಡಾಗಿದೆ.

ದೂರವಾಣಿ ಕರೆ ಮಾಡಿದ್ದ ಸಿಬ್ಬಂದಿ, 'ವಿವರ ನೀಡುವಾಗ ಮಾತುಗಳನ್ನು ಬದಲಿಸಿರುವುದು ಕೃತ್ಯವನ್ನು ಮುಚ್ಚಿಹಾಕುವ ಯತ್ನ ಆಸ್ಪತ್ರೆಯಿಂದ ನಡೆದಿತ್ತೇ ಎಂಬ ಪ್ರಶ್ನೆಯನ್ನೂ ಮೂಡಿಸಿದೆ. ದೂರವಾಣಿ ಕರೆಯ ಸತ್ಯಾಸತ್ಯತೆಯನ್ನು ಪರಿಶೀಲಿಸಲು ಪಿಟಿಐ ಸುದ್ದಿಸಂಸ್ಥೆಗೆ ಸಾಧ್ಯವಾಗಿಲ್ಲ.

ಸಂತ್ರಸ್ತೆ ತಂದೆಗೆ ಕರೆ ಮಾಡಿದ್ದ ಮಹಿಳೆಯು ತನ್ನನ್ನು ಆಸ್ಪತ್ರೆಯ ಸಹಾಯಕ ಅಧೀಕ್ಷಕಿ ಎಂದು ಪರಿಚಯಿಸಿಕೊಂಡಿದ್ದಾರೆ. ಮೂವತ್ತು ನಿಮಿಷಗಳಲ್ಲಿ ಆ ಮಹಿಳೆ ಸಂತ್ರಸ್ತೆ ತಂದೆಗೆ ಮೂರು ಬಾರಿ ಕರೆ ಮಾಡಿದ್ದಾರೆ. ತಕ್ಷಣ ಆಸ್ಪತ್ರೆಗೆ ಬನ್ನಿ ಎಂದು ಮತ್ತೆ, ಮತ್ತೆ ಹೇಳಿದ್ದಾರೆ.

ಕರೆಗಳಲ್ಲಿ ಏನಿದೆ?

ಬೆಳಿಗ್ಗೆ 10.53ಕ್ಕೆ ತಂದೆಗೆ ಬಂದ ಮೊದಲ ಕರೆ

ಮಹಿಳೆ: ನಾನು ಆರ್.ಜಿ. ಕರ್ ಆಸ್ಪತ್ರೆಯಿಂದ ಕರೆ ಮಾಡುತ್ತಿದ್ದೇನೆ. ನೀವು ಇಲ್ಲಿಗೆ ತಕ್ಷಣ ಬರಬಹುದೇ?

ತಂದೆ: ಏಕೆ? ಏನಾಗಿದೆ?

ಮಹಿಳೆ: ನಿಮ್ಮ ಮಗಳಿಗೆ ಸ್ವಲ್ಪ ಹುಷಾರಿಲ್ಲ. ಆಕೆಯನ್ನು ಚಿಕಿತ್ಸೆಗೆ ದಾಖಲು ಮಾಡಿಕೊಳ್ಳುತ್ತಿದ್ದೇವೆ. ನೀವು ಬೇಗನೆ ಬರಬಹುದೇ?

ಹೆಚ್ಚಿನ ಮಾಹಿತಿಗೆ ತಂದೆ ಒತ್ತಾಯಿಸಿದಾಗ, 'ವೈದ್ಯರು ಮಾತ್ರ ಆ ಮಾಹಿತಿ ನೀಡಬಲ್ಲರು. ನಿಮ್ಮ ದೂರವಾಣಿ ಸಂಖ್ಯೆ ಪತ್ತೆ ಮಾಡಿ, ಕರೆ ಮಾಡಿದೆವು' ಎನ್ನುತ್ತಾರೆ.

ಪರಿಸ್ಥಿತಿ ಗಂಭೀರವಾಗಿದೆಯೇ ಎಂಬ ಪ್ರಶ್ನೆಗೆ, 'ಹೌದು,ಗಂಭೀರವಾಗಿದೆ. ಬೇಗ ಬನ್ನಿ' ಎಂಬ ಉತ್ತರ. ಈ ಕರೆಯ ಅವಧಿ ಸುಮಾರು 11 ಸೆಕೆಂಡ್ ಇದೆ.

2ನೇ ಕರೆ ಐದು ನಿಮಿಷದ ಬರುತ್ತದೆ. ಅದರ ಅವಧಿ ಸುಮಾರು 46 ಸೆಕೆಂಡ್. **ಮತ್ತದೇ ಮಹಿಳೆ:** 'ಮಗಳ ಸ್ಥಿತಿ ತುಂಬಾ ಗಂಭೀರವಾಗಿದೆ. ಬೇಗ ಬನ್ನಿ. ಎಷ್ಟು ಸಾಧ್ಯವೋ ಅಷ್ಟು ಬೇಗ ಬನ್ನಿ' ಎನ್ನುತ್ತಾರೆ.

ಆತಂಕಗೊಂಡ ತಂದೆ, 'ಏನಾಗಿದೆ ಮಗಳಿಗೆ' ಎಂದು ಪ್ರಶ್ನಿಸುತ್ತಾರೆ. ಆಗಲೂ ಅದೇ ಉತ್ತರ: 'ವೈದ್ಯರು ತಿಳಿಸುತ್ತಾರೆ. ಬೇಗ ಬನ್ನಿ'

ಆಗ ತಂದೆ ನೀವು ಯಾರು ಎಂದು ಪ್ರಶ್ನಿಸಿದಾಗ, 'ನಾನು, ಸಹಾಯಕ ಸೂಪರಿಟೆಂಡೆಂಟ್. ವೈದ್ಯೆಯಲ್ಲ. ನಿಮ್ಮ ಮಗಳನ್ನು ತುರ್ತು ಚಿಕಿತ್ಸಾ ಕೊಠಡಿಗೆ ಕರೆತಂದಿದ್ದೇವೆ. ಬೇಗ ಬನ್ನಿ'.

'ದಯವಿಟ್ಟು ಏನಾಯಿತು ತಿಳಿಸಿ. ಆಕೆ, ಡ್ಯೂಟಿಯಲ್ಲಿದ್ದಳು' ಎಂದು ಆತಂಕದ ದನಿಯಲ್ಲಿ ವೈದ್ಯೆಯ ತಾಯಿ, ಹಿನ್ನೆಲೆಯಲ್ಲಿ ಕೇಳುತ್ತಾರೆ.

ಆದರೆ, ಮೂರು ಮತ್ತು ಅಂತಿಮ ಕರೆಯಲ್ಲಿ ತಂದೆ–ತಾಯಿಗೆ, ಸಾವಿನ ಸುದ್ದಿ ತಿಳಿಸಲಾಗುತ್ತದೆ.

'ಹೌದು, ದಯವಿಟ್ಟು ಕೇಳಿಸಿಕೊಳ್ಳಿ. ಮೊದಲಿನಿಂದ ಮತ್ತೆ, ಮತ್ತೆ ಹೇಳುತ್ತಿದ್ದೇವೆ. ನಿಮ್ಮ ಮಗಳು ಆತ್ಮಹತ್ಯೆ ಮಾಡಿಕೊಂಡಿರಬಹುದು ಅಥವಾ... ಆಕೆ ಸತ್ತಿದ್ದಾಳೆ. ಇಲ್ಲಿ ಪೊಲೀಸರು ಇದ್ದಾರೆ. ಆಸ್ಪತ್ರೆಯ ಎಲ್ಲರೂ ಇದ್ದೇವೆ.' ಎಂದು ಮೊದಲು ಕರೆ ಮಾಡಿದ್ದ ಮಹಿಳೆಯೇ, ಈಗ ಮಾತುಗಳನ್ನು ತಡೆದು ಆಡಿ ಹೇಳುತ್ತಾರೆ.

ಅಂತಿಮ ಕರೆಯ ಅವಧಿ 28 ಸೆಕೆಂಡ್‌ಗಳು.

ಆಸ್ಪತ್ರೆಯ ಸಿಬ್ಬಂದಿ ನೀಡಿದ ಹೇಳಿಕೆಗಳಲ್ಲಿ ಬದಲಾವಣೆ ಇದೆ. ಮೊದಲ ಕರೆಯಲ್ಲಿ ಸ್ವಲ್ಪ ಅನಾರೋಗ್ಯವಿದೆ ಎಂದರೆ, ಎರಡನೇ ಕರೆಯಲ್ಲಿ ತುರ್ತು ಚಿಕಿತ್ಸಾ ಕೊಠಡಿಗೆ ದಾಖಲಿಸಿದ್ದೇವೆ ಎನ್ನುತ್ತಾರೆ. ಮೂರನೇ ಕರೆಯಲ್ಲಿ, 'ಮಗಳು ಆತ್ಮಹತ್ಯೆ ಮಾಡಿಕೊಂಡಿರಬಹುದು' ಎನ್ನುತ್ತಾರೆ.

ಕುಟುಂಬ ಸದಸ್ಯರ ಹಾದಿ ತಪ್ಪಿಸುವಂತೆ ಮಾಹಿತಿ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸುತ್ತಾರೆ.

'ಆಸ್ಪತ್ರೆ ಸಿಬ್ಬಂದಿಗೆ ಕ್ರೂರಕೃತ್ಯದ ಸಂಪೂರ್ಣ ಮಾಹಿತಿ ಇದ್ದಾಗಲೂ, ತಿರುಚಿದ, ತಪ್ಪಾದ ಮಾಹಿತಿಯನ್ನು ಪೋಷಕರಿಗೆ ನೀಡುವುದು ಹೇಗೆ ಸಾಧ್ಯ' ಎಂದು ಪ್ರತಿಭಟನನಿರತ ವಿದ್ಯಾರ್ಥಿಯೊಬ್ಬರು ಪ್ರಶ್ನಿಸಿದರು.

ಘೋಷ್ ವಿಚಾರಣೆ ಮುಂದುವರಿಸಿದ ಸಿಬಿಐ

ಕೋಲ್ಕತ್ತ (ಪಿಟಿಐ): ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರ್.ಜಿ. ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಅವರ ವಿಚಾರಣೆಯನ್ನು ಸಿಬಿಐ ಅಧಿಕಾರಿಗಳು ಗುರುವಾರ ಮುಂದುವರಿಸಿದರು.

ಘೋಷ್ ಅವರು ಸತತ 13ನೆಯ ದಿನವೂ ವಿಚಾರಣೆಗೆ ಸಿಬಿಐ ಅಧಿಕಾರಿಗಳ ಮುಂದೆ ಹಾಜರಾದರು ಎಂದು ಮೂಲಗಳು ತಿಳಿಸಿವೆ. ಘೋಷ್ ಅವರನ್ನು ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟು 130 ತಾಸಿಗೂ ಹೆಚ್ಚು ಕಾಲ ವಿಚಾರಣೆಗೆ ಗುರಿಪಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು. ಘೋಷ್ ಅವರನ್ನು ಸಿಬಿಐ ಅಧಿಕಾರಿಗಳು ಸುಳ್ಳುಪತ್ತೆ ಪರೀಕ್ಷೆಗೂ ಒಳಪಡಿಸಿದ್ದಾರೆ.

ರಾಜ್ಯಪಾಲರ ಭೇಟಿ ಮಾಡಿದ ಬಿಜೆಪಿ ನಿಯೋಗ

ಕೋಲ್ಕತ್ತ (ಪಿಟಿಐ): ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರನ್ನು ಗುರುವಾರ ಭೇಟಿ ಮಾಡಿರುವ ಬಿಜೆಪಿ ಪಶ್ಚಿಮ ಬಂಗಾಳ ಘಟಕದ ಅಧ್ಯಕ್ಷ ಸುಕಾಂತ ಮಜುಮ್ದಾರ್ ನೇತೃತ್ವದ ನಿಯೋಗ ವೈದ್ಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಆಕೆಯ ಹತ್ಯೆಯ ನಂತರದಲ್ಲಿ ರಾಜ್ಯದಲ್ಲಿ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಕುರಿತು ಚರ್ಚಿಸಿತು.

ಸಿ.ವಿ. ಆನಂದ ಬೋಸ್

ಮಜುಮ್ದಾರ್ ಅವರು ಕೇಂದ್ರ ಸಚಿವ ಕೂಡ ಹೌದು. ರಾಜ್ಯದಲ್ಲಿ ನಿರ್ಮಾಣವಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯನ್ನು ತಿಳಿಗೊಳಿಸಲು ನಿರ್ಣಾಯಕ ಕ್ರಮ ಕೈಗೊಳ್ಳಬೇಕು ಎಂದು ಮಜುಮ್ದಾರ್ ಅವರು ರಾಜ್ಯಪಾಲರನ್ನು ಒತ್ತಾಯಿಸಿದರು. ಬಿಜೆಪಿ ಮುಖಂಡರಾದ ದಿಲೀಪ್ ಘೋಷ್ ಹಾಗೂ ಇತರರಿದ್ದರು.

'ಬಂಗಾಳದ ಜನರ ಹಕ್ಕುಗಳನ್ನು ರಕ್ಷಿಸುವಂತೆ, ರಾಜ್ಯವನ್ನು ವಿಪತ್ತಿನ ಈ ಪರಿಸ್ಥಿತಿಯಿಂದ ಪಾರು ಮಾಡಲು ಅಗತ್ಯ ಕ್ರಮಕೈಗೊಳ್ಳುವಂತೆ ನಾವು ರಾಜ್ಯಪಾಲರನ್ನು ಕೋರಿದ್ದೇವೆ' ಎಂದು ಮಜುಮ್ದಾರ್ ತಿಳಿಸಿದರು.

ಕವಿತಾಗೆ ಜಾಮೀನು: ತೆಲಂಗಾಣ ಸಿ.ಎಂ ಹೇಳಿಕೆಗೆ 'ಸುಪ್ರೀಂ' ಕಿಡಿ

ನವದೆಹಲಿ (ಪಿಟಿಐ): ಬಿಆರ್‌ಎಸ್ ಪಕ್ಷದ ನಾಯಕಿ ಕೆ.ಕವಿತಾ ಅವರಿಗೆ ಜಾಮೀನು ಕುರಿತು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ ರೆಡ್ಡಿ ಅವರು ನೀಡಿದ್ದ ಹೇಳಿಕೆಗೆ ಸುಪ್ರೀಂ ಕೋರ್ಟ್ ಕಿಡಿಕಾರಿದೆ.

ಜಾಮೀನು ಪಡೆಯಲು ಬಿಜೆಪಿ ಮತ್ತು ಬಿಆರ್‌ಎಸ್ ನಡುವಿನ ಸಂಧಾನ ಕಾರಣವಾಗಿರಬಹುದು ಎಂಬ ರೇವಂತ ರೆಡ್ಡಿ ಅವರ ಹೇಳಿಕೆಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಸುಪ್ರೀಂ ಕೋರ್ಟ್, 'ಇಂತಹ ಹೇಳಿಕೆಗಳು ಜನರ ಮನಸ್ಸಿನಲ್ಲಿ ಅನುಮಾನಗಳನ್ನು ಮೂಡಿಸುತ್ತವೆ' ಎಂದು ಅಭಿಪ್ರಾಯಪಟ್ಟಿದೆ.

'ಸುದ್ದಿಪತ್ರಿಕೆಗಳಲ್ಲಿ ಅವರ ಹೇಳಿಕೆ ಓದಿದ್ದೀರಾ? ಒಮ್ಮೆ ಓದಿ. ಜವಾಬ್ದಾರಿಯುತ ಮುಖ್ಯಮಂತ್ರಿಯಿಂದ ಇದೆಂತಹ ಹೇಳಿಕೆ? ಸಾಂವಿಧಾನಿಕ ಹುದ್ದೆಯಲ್ಲಿ ಇರುವವರು ಹೀಗೆ ಮಾತನಾಡುತ್ತಾರಾ' ಎಂದು ಪ್ರಶ್ನಿಸಿತು.

'ರಾಜಕೀಯ ವಿರೋಧಗಳಿಗಾಗಿ ಕೋರ್ಟ್ ಅನ್ನು ಏಕೆ ಎಳೆಯುತ್ತೀರಿ. ರಾಜಕೀಯ ಪಕ್ಷಗಳ ಜೊತೆ ಚರ್ಚಿಸಿ ನಾವು ಆದೇಶವನ್ನು ನಿಡುತ್ತೇವಾ? ರಾಜಕಾರಣಿಗಳು ಅಥವಾ ಇನ್ಯಾರಾದರೂ ಕೋರ್ಟ್ ಆದೇಶಗಳನ್ನು ಟೀಕಿಸಿದರೆ, ಆ ಕುರಿತು ನಾವು ಕೆಡಿಸಿಕೊಳ್ಳುವುದಿಲ್ಲ. ಆತ್ಮಸಾಕ್ಷಿ ಮತ್ತು ಪ್ರತಿಜ್ಞಾವಿಧಿಗೆ ಅನುಸಾರವಾಗಿ ಮಾತ್ರ ಕರ್ತವ್ಯ ನಿಭಾಯಿಸುತ್ತೇವೆ' ಎಂದು ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಮೂವರು ಸದಸ್ಯರಿದ್ದ ಪೀಠವು ರೇವಂತ ರೆಡ್ಡಿ ಅವರನ್ನು ಪ್ರತಿನಿಧಿಸಿದ್ದ ವಕೀಲ ಮುಕುಲ್ ರೋಹಟಗಿ ಅವರಿಗೆ ಹೇಳಿತು.

'ಮನೀಶ್ ಸಿಸೋಡಿಯಾ ಅವರಿಗೆ 15 ತಿಂಗಳ ಬಳಿಕ ಸಿಕ್ಕ ಜಾಮೀನು, ಕವಿತಾ ಅವರಿಗೆ ಐದೇ ತಿಂಗಳಲ್ಲಿ ಸಿಕ್ಕಿದೆ. ಈ ಬಗ್ಗೆ ಅನುಮಾನಗಳಿವೆ. ಬಿಆರ್‌ಎಸ್ ಮತ್ತು ಬಿಜೆಪಿ ಜೊತೆಗಿನ ಸಂಧಾನದ ಫಲವಾಗಿಯೇ ಈಗ ಜಾಮೀನು ಸಿಕ್ಕಿರಬಹುದು' ಎಂದು ರೇವಂತ ರೆಡ್ಡಿ ಮಾಧ್ಯಮಗಳ ಜೊತೆ ಮಾತನಾಡುತ್ತಾ ಪ್ರತಿಕ್ರಿಯಿಸಿದ್ದರು.

ಸಂಸ್ಥೆಗಳನ್ನು ಕುರಿತಂತೆ ಪರಸ್ಪರ ಗೌರವವನ್ನು ಹೊಂದುವುದು ಮತ್ತು ನಿರ್ದಿಷ್ಟ ಅಂತರವನ್ನು ಕಾಯ್ದುಕೊಳ್ಳುವುದು ಮೂಲಭೂತವಾದ ಹೊಣೆಗಾರಿಕೆ ಕರ್ತವ್ಯ ಎಂದು ಕೋರ್ಟ್ ಅಭಿಪ್ರಾಯಪಟ್ಟಿತು.

ರೇವಂತ ರೆಡ್ಡಿ ಅವರು ಆರೋಪಿಯಾಗಿರುವ, ಭೋಪಾಲ್‌ಗೆ ಸಂಬಂಧಿಸಿದ 2015ರ 'ವೋಟಿಗಾಗಿ ಕಾಸು' ಪ್ರಕರಣದ ವಿಚಾರಣೆಯ ವೇಳೆ ಸುಪ್ರೀಂ ಕೋರ್ಟ್ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಯನ್ನು ವಿಶೇಷ ಪ್ರಾಸಿಕ್ಯೂಟರ್ ಒಬ್ಬರು ನಡೆಸಲಿದ್ದಾರೆ ಎಂದೂ ತಿಳಿಸಿತು.

ಕೆಸಿಆರ್ ಭೇಟಿಯಾದ ಎಂಎಲ್‌ಸಿ ಕವಿತಾ

ಹೈದರಾಬಾದ್ (ಪಿಟಿಐ): ಅಬಕಾರಿ ನೀತಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನಿಂದ ಜಾಮೀನು ದೊರೆತು ದೆಹಲಿಯ ತಿಹಾರ್ ಜೈಲಿನಿಂದ ಬಿಡುಗಡೆಯಾಗಿ ಹೈದರಾಬಾದ್‌ಗೆ ಬಂದ ಬಿಆರ್‌ಎಸ್ ಪಕ್ಷದ ವಿಧಾನಪರಿಷತ್ ಸದಸ್ಯೆ ಕೆ.ಕವಿತಾ ಅವರು ಗುರುವಾರ ತೆಲಂಗಾಣದ ಮಾಜಿ ಮುಖ್ಯಮಂತ್ರಿ ಹಾಗೂ ತಮ್ಮ ತಂದೆ ಕೆ.ಚಂದ್ರಶೇಖರರಾವ್ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡರು.

ಯುವಕರ ಜೊತೆ ಕದನಕಲೆಗಳ ಅಭ್ಯಾಸ ಮಾಡಿದ ರಾಹುಲ್

ಭಾರತ್ 'ಜೋಡೊ' ಅಲ್ಲ, 'ಡೋಜೊ' ಯಾತ್ರೆ!

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತ್ ಜೋಡೊ ಯಾತ್ರೆಯನ್ನು ಎರಡು ಬಾರಿ ಕೈಗೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, 'ಭಾರತ್ ಡೋಜೊ ಯಾತ್ರೆ' ಕೈಗೊಳ್ಳುವ ಆಲೋಚನೆ ಇದೆ ಎಂದು ಗುರುವಾರ ಹೇಳಿದ್ದಾರೆ.

ಈ ವರ್ಷದ ಆರಂಭದಲ್ಲಿ ನಡೆದ, ದೇಶದ ಪಶ್ಚಿಮದಿಂದ ಪೂರ್ವದ ಕಡೆ ಸಾಗಿದ ಭಾರತ್ ಜೋಡೊ ಯಾತ್ರೆಯು ತಂಗುತ್ತಿದ್ದ ಸ್ಥಳಗಳಲ್ಲಿ ಕದನಕಲೆಗಳ (ಮಾರ್ಷಲ್ ಆರ್ಟ್ಸ್) ಕಲಿಕೆಗೆ ಸಂಬಂಧಿಸಿದ ವಿಡಿಯೊ ಒಂದನ್ನು ರಾಹುಲ್ ಅವರು ಹಂಚಿಕೊಂಡಿದ್ದಾರೆ. 'ಡೋಜೊ' ಅಂದರೆ ಕದನಕಲೆಗಳ ಕಲಿಕಾ ಶಾಲೆ ಎಂಬ ಅರ್ಥವಿದೆ.

ವಿಡಿಯೊದಲ್ಲಿ ರಾಹುಲ್ ಅವರು ಯುವಕರ ಜೊತೆ ಈ ಕದನಕಲೆಗಳನ್ನು ಅಭ್ಯಾಸ ಮಾಡುತ್ತಿರುವುದು ಕಾಣುತ್ತದೆ. 'ಭಾರತ್ ಜೋಡೊ ನ್ಯಾಯಯಾತ್ರೆಯ ಸಂದರ್ಭದಲ್ಲಿ ನಾವು ಸಹಸ್ರಾರು ಕಿಲೋ ಮೀಟರ್ ಸಾಗುವಾಗ, ನಮ್ಮ ತಂಗುದಾಣಗಳಲ್ಲಿ ಪ್ರತಿದಿನ ಸಂಜೆ ಜಿಯು–ಜಿತ್ಸು ಅಭ್ಯಾಸ ಮಾಡುತ್ತಿದ್ದೆವು. ಸದೃಢವಾಗಿರುವ ಉದ್ದೇಶದಿಂದ ಆರಂಭಿಸಿದ ಸರಳ ಕ್ರಮವೊಂದು ಬಹಳ ಬೇಗ ಸಾಮುದಾಯಿಕ ಚಟುವಟಿಕೆಯಾಗಿ ಪರಿವರ್ತನೆ ಕಂಡಿತು. ಇದು ಯಾತ್ರಿಗಳು ಹಾಗೂ ನಾವು ಉಳಿದುಕೊಳ್ಳುತ್ತಿದ್ದ ಪಟ್ಟಣಗಳಲ್ಲಿ ಕದನಕಲೆಗಳನ್ನು ಅಭ್ಯಾಸ ಮಾಡುತ್ತಿದ್ದ ಯುವಕರನ್ನು ಒಗ್ಗೂಡಿಸಿತು' ಎಂದು ರಾಹುಲ್ ಹೇಳಿದ್ದಾರೆ.

'ಈ ಯುವಕರಿಗೆ ಸೌಮ್ಯವಾದ ಕಲೆಯ ಸೌಂದರ್ಯವನ್ನು ಪರಿಚಯಿಸುವುದು ನಮ್ಮ ಗುರಿಯಾಗಿತ್ತು. ಇದು ಧ್ಯಾನ, ಜಿಯು–ಜಿತ್ಸು, ಐಕಿಡೊ ಮತ್ತು ಸಂಘರ್ಷವನ್ನು ಹಿಂಸೆಯಿಲ್ಲದೆ ಬಗೆಹರಿಸಿಕೊಳ್ಳುವ ತಂತ್ರಗಾರಿಕೆಯ ಸಮರಸದ ಮಿಶ್ರಣ. ಹಿಂಸೆಯನ್ನು ಸೌಮ್ಯವಾಗಿಸುವುದರ ಮಹತ್ವವನ್ನು ಅವರಿಗೆ ತಿಳಿಸುವ, ಅವರಿಗೆ ಹೆಚ್ಚು ಸಹಾನುಭೂತಿಯ ಹಾಗೂ ಹೆಚ್ಚು ಸುರಕ್ಷಿತವಾದ ಸಮಾಜವನ್ನು ಕಟ್ಟಲು ಸಾಧನವೊಂದನ್ನು ನೀಡುವ ಗುರಿ ಹೊಂದಿದ್ದೆವು' ಎಂದು ರಾಹುಲ್ ಅವರು ರಾಷ್ಟ್ರೀಯ ಕ್ರೀಡಾ ದಿನದ ಅಂಗವಾಗಿ 'ಎಕ್ಸ್' ವೇದಿಕೆಯಲ್ಲಿ ಮಾಡಿರುವ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ತಾವು ಪಡೆದ ಅನುಭವಗಳನ್ನು ಜನರ ಜೊತೆ ಹಂಚಿಕೊಳ್ಳುವ ಬಯಕೆ ಇರುವುದಾಗಿ ಹೇಳಿರುವ ರಾಹುಲ್, 'ಭಾರತ್ ಡೋಜೊ ಯಾತ್ರೆಯು ಶೀಘ್ರದಲ್ಲೇ ಬರಲಿದೆ' ಎಂದೂ ಬರೆದಿದ್ದಾರೆ.

'ಭಾರತ್ ಜೋಡೊ ನ್ಯಾಯ ಯಾತ್ರೆ'ಯ ಸಂದರ್ಭದಲ್ಲಿ ನಡೆದ ಕದನಕಲೆಗಳ ಅಭ್ಯಾಸದ ವಿಡಿಯೊ ಒಂದನ್ನು ರಾಹುಲ್ ಗಾಂಧಿ ಅವರು ಗುರುವಾರ ಹಂಚಿಕೊಂಡಿದ್ದಾರೆ –ಪಿಟಿಐ ಚಿತ್ರ

'ರಾಹುಲ್ ಗಾಂಧಿ ಚುನಾವಣಾ ವೆಚ್ಚ: ಕ್ಷೇತ್ರಕ್ಕೆ ₹70 ಲಕ್ಷ'

ನವದೆಹಲಿ(ಪಿಟಿಐ): ವಯನಾಡ್ ಮತ್ತು ರಾಯ್ ಬರೇಲಿ ಲೋಕಸಭಾ ಕ್ಷೇತ್ರಕ್ಕೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಪ್ರತಿ ಕ್ಷೇತ್ರಕ್ಕೆ ಸಂಬಂಧಿಸಿ ಚುನಾವಣಾ ವೆಚ್ಚವಾಗಿ ₹70 ಲಕ್ಷದಂತೆ ನೀಡಲಾಗಿತ್ತು ಎಂದು ಕಾಂಗ್ರೆಸ್ ಹೇಳಿದೆ.

ಚುನಾವಣೆ ವೆಚ್ಚಕ್ಕೆ ಸಂಬಂಧಿಸಿ, ಪಕ್ಷವು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಮಾಹಿತಿಯಲ್ಲಿ ಈ ವಿವರ ನೀಡಿದೆ.

ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಿಕ್ರಮಾದಿತ್ಯ ಸಿಂಗ್ ಅವರಿಗೆ ಗರಿಷ್ಠ ಮೊತ್ತ ₹80 ಲಕ್ಷ ನೀಡಲಾಗಿತ್ತು ಎಂದೂ ತಿಳಿಸಲಾಗಿದೆ.

ವಿಕ್ರಮಾದಿತ್ಯ ಸಿಂಗ್ ಅವರು ಬಿಜೆಪಿಯ ಕಂಗನಾ ರನೌತ್ ವಿರುದ್ಧ ಪರಾಭವಗೊಂಡರು.

ಕಲಬುರಗಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದ್ದ ರಾಧಾಕೃಷ್ಣ, ಪಂಜಾಬ್‌ನ ಆನಂದಪುರ ಸಾಹಿಬ್ ಕ್ಷೇತ್ರದಿಂದ ಸ್ಪರ್ಧಿಸಿದ್ದ ವಿಜಯ ಇಂದರ್ ಸಿಂಗ್ಲಾ ಅವರಿಗೂ ತಲಾ ₹70 ಲಕ್ಷ ನೀಡಲಾಗಿತ್ತು.

ಕಿಶೋರಿಲಾಲ್ ಶರ್ಮಾ, ಕೆ.ಸಿ.ವೇಣುಗೋಪಾಲ್, ಮಾಣಿಕಂ ಟ್ಯಾಗೋರ್ ಅವರಿಗೂ ತಲಾ ₹70 ಲಕ್ಷ. ಹಿರಿಯ ನಾಯಕರಾದ ಆನಂದ ಶರ್ಮಾ ಹಾಗೂ ದಿಗ್ವಿಜಯ ಸಿಂಗ್ ಅವರಿಗೆ ಕ್ರಮವಾಗಿ ₹46 ಹಾಗೂ ₹50 ಲಕ್ಷ ನೀಡಲಾಗಿತ್ತು ಎಂದು ಆಯೋಗಕ್ಕೆ ಕಾಂಗ್ರೆಸ್ ಮಾಹಿತಿ ನೀಡಿದೆ.

ಪ್ಯಾರಿಸ್ ಪ್ಯಾರಾಲಿಂಪಿಕ್ಸ್: ಬ್ಯಾಡ್ಮಿಂಟನ್ ಮಿಶ್ರ ಡಬಲ್ಸ್‌ನಲ್ಲಿ ನಿತೇಶ್– ತುಳಸಿಮತಿಗೆ ಗೆಲುವು

ಸುಹಾಸ್, ಸುಕಾಂತ್ ಶುಭಾರಂಭ

ಪ್ಯಾರಿಸ್ (ಪಿಟಿಐ): ಭಾರತದ ಸುಹಾಸ್ ಯತಿರಾಜ್, ಸುಕಾಂತ್ ಕದಂ ಮತ್ತು ತರುಣ್ ಅವರು ಪ್ಯಾರಾಲಿಂಪಿಕ್ಸ್‌ನ ಬ್ಯಾಡ್ಮಿಂಟನ್ ಪುರುಷರ ಸಿಂಗಲ್ಸ್‌ನ (ಎಸ್‌ಎಲ್ 4) ಗುಂಪು ಹಂತದ ಪಂದ್ಯಗಳಲ್ಲಿ ಶುಭಾರಂಭ ಮಾಡಿದರು.

ಟೋಕಿಯೊ ಪ್ಯಾರಾಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ, ಕನ್ನಡಿಗ ಸುಹಾಸ್ ಅವರು ಗುರುವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ 21-7, 21-5ರಿಂದ ಇಂಡೊನೇಷ್ಯಾದ ಹಿಕ್ಮತ್ ರಾಮದಾನಿ ಅವರನ್ನು ಸೋಲಿಸಿದರು. ಉತ್ತರ ಪ್ರದೇಶ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ 41 ವರ್ಷ ವಯಸ್ಸಿನ ಸುಹಾಸ್ ಕೇವಲ 22 ನಿಮಿಷದಲ್ಲಿ ನಿರಾಯಾಸ ಗೆಲುವನ್ನು ತನ್ನದಾಗಿಸಿಕೊಂಡರು. ಸುಹಾಸ್, ಹಾಸನದ ಅರಸೀಕೆರೆ ಮೂಲದವರು.

31 ವರ್ಷ ವಯಸ್ಸಿನ ಸುಕಾಂತ್ 'ಬಿ' ಗುಂಪಿನ ಪಂದ್ಯದಲ್ಲಿ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 17-21, 21-15, 22-20ರಿಂದ ಮಲೇಷ್ಯಾದ ಮೊಹಮ್ಮದ್ ಅಮೀನ್ ಬುರ್ಹಾನುದ್ದೀನ್ ವಿರುದ್ಧ ಗೆಲುವು ಸಾಧಿಸಿದರು.

ಎರಡನೇ ಪ್ಯಾರಾಲಿಂಪಿಕ್ಸ್‌ನಲ್ಲಿ ಆಡುತ್ತಿರುವ ತರುಣ್ 'ಡಿ' ಗುಂಪಿನ ಪಂದ್ಯದಲ್ಲಿ 21-17 21-19 ರಿಂದ ಬ್ರೆಜಿಲ್‌ನ ಒಲಿವೇರಾ ರೋಜೆರಿಯೊ ಜೂನಿಯರ್ ಕ್ಸೇವಿಯರ್ ಅವರನ್ನು ಸೋಲಿಸಿದರು.

ಮಹಿಳೆಯರಿಗೆ ನಿರಾಸೆ: ಭಾರತದ ಮನ್‌ದೀಪ್ ಕೌರ್ ಮತ್ತು ಮಾನಸಿ ಜೋಶಿ ಅವರು ಮಹಿಳೆಯರ ಸಿಂಗಲ್ಸ್‌ನ (ಎಸ್‌ಎಲ್3) ಗುಂಪು ಹಂತದ ತಮ್ಮ ಪಂದ್ಯಗಳಲ್ಲಿ ನಿರಾಸೆ ಮೂಡಿಸಿದರು.

2019ರ ವಿಶ್ವ ಚಾಂಪಿಯನ್ ಮಾನಸಿ 'ಎ' ಗುಂಪಿನ ಪಂದ್ಯದಲ್ಲಿ 21-16, 13-21, 18-21ರಿಂದ ಇಂಡೊನೇಷ್ಯಾದ ಕೊನಿತಾಹ್ ಇಖ್ತಿಯಾರ್ ಸೈಕುರೋಹ್ ಅವರಿಗೆ ಶರಣಾದರೆ, ಮನ್‌ದೀಪ್ 'ಬಿ' ಗುಂಪಿನ ಪಂದ್ಯದಲ್ಲಿ 8-21 14-21ರಿಂದ ನೈಜೀರಿಯಾದ ಮರಿಯಮ್ ಎನಿಯೊಲಾ ಬೊಲಾಜಿ ಅವರಿಗೆ ಸೋತರು.

ನಿತೇಶ್– ತುಳಸಿಮತಿಗೆ ಗೆಲುವು: ಭಾರತದ ನಿತೇಶ್ ಕುಮಾರ್ ಮತ್ತು ತುಳಸಿಮತಿ ಮುರುಗೇಶನ್ ಬ್ಯಾಡ್ಮಿಂಟನ್ ಮಿಶ್ರ ಡಬಲ್ಸ್‌ನ (ಎಸ್‌ಎಲ್ 3-ಎಸ್‌ಯು5) ಗುಂಪು ಹಂತದ ಪಂದ್ಯದಲ್ಲಿ ಸ್ವದೇಶದ ಸುಹಾಸ್ ಯತಿರಾಜ್ ಮತ್ತು ಪಾಲಕ್ ಕೊಹ್ಲಿ ಅವರನ್ನು ಮಣಿಸಿ ಶುಭಾರಂಭ ಮಾಡಿದರು.

ಗುರುವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ನಿತೇಶ್– ತುಳಸಿಮತಿ ಜೋಡಿಯು 21-14, 21-17ರಿಂದ ಗೆಲುವು ಸಾಧಿಸಿತು. ಕೇವಲ 31 ನಿಮಿಷಗಳ ಹೋರಾಟ ನಡೆಸಿ ನೇರ ಗೇಮ್‌ಗಳ ಜಯವನ್ನು ತಮ್ಮದಾಗಿಸಿಕೊಂಡರು.

ಶಿವರಾಜನ್– ನಿತ್ಯಾಶ್ರೀಗೆ ಆಘಾತ: ಶಿವರಾಜನ್ ಸೋಲೈಮಲೈ ಮತ್ತು ನಿತ್ಯಾಶ್ರೀ ಅವರು ಮಿಶ್ರ ಡಬಲ್ಸ್‌ನ ಮೊದಲ ಪಂದ್ಯದಲ್ಲಿ ನಿರಾಸೆ ಅನುಭವಿಸಿದರು. ಎಸ್‌ಎಚ್6 ವಿಭಾಗದ 'ಬಿ' ಗುಂಪಿನ ಪಂದ್ಯದಲ್ಲಿ ಭಾರತದ ಜೋಡಿಯು 21-23, 11-21 ರಿಂದ ಅಮೆರಿಕದ ಮೈಲ್ಸ್ ಕ್ರಾಜೆವ್ಸ್ಕಿ ಮತ್ತು ಜೇಸಿ ಸೈಮನ್ ವಿರುದ್ಧ ಪರಾಭವಗೊಂಡರು.



ಕಾಲಿನಲ್ಲಿ ಬಾಣ ಪ್ರಯೋಗಿಸಿದ ಭಾರತದ ಪ್ಯಾರಾ ಬಿಲ್ಗಾರ್ತಿ ಶೀತಲ್ ದೇವಿ –ಎಪಿ/ಪಿಟಿಐ ಚಿತ್ರ

ಸುಹಾಸ್ ಯತಿರಾಜ್

ಪ್ರಿ ಕ್ವಾರ್ಟರ್ ಫೈನಲ್‌ಗೆ ಬಿಲ್ಗಾರ್ತಿ ಶೀತಲ್ ದೇವಿ

ಪ್ಯಾರಿಸ್ (ಪಿಟಿಐ): ಭಾರತದ ಪ್ಯಾರಾ ಬಿಲ್ಗಾರ್ತಿ ಶೀತಲ್ ದೇವಿ ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ ವೈಯಕ್ತಿಕ ಕಾಂಪೌಂಡ್ ಮುಕ್ತ ರ‍್ಯಾಂಕಿಂಗ್ ಸುತ್ತಿನಲ್ಲಿ ಎರಡನೇ ಸ್ಥಾನ ಪಡೆದು, ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಜಮ್ಮು ಮತ್ತು ಕಾಶ್ಮೀರದ 17 ವರ್ಷ ವಯಸ್ಸಿನ ಕೈಗಳಿಲ್ಲದ ಶೀತಲ್, ಕಾಲಿನಿಂದಲೇ ಬಾಣ ಪ್ರಯೋಗಿಸಿ 720ರಲ್ಲಿ 703 ಅಂಕಗಳನ್ನು ಪಡೆದರು. ಟರ್ಕಿಯ ಓಜ್ನೂರ್ ಗಿರ್ಡಿ ಕ್ಯೂರ್ 704 ಅಂಕ ಪಡೆದು ಅಗ್ರಸ್ಥಾನ ಪಡೆದರು.

ಈ ತಿಂಗಳ ಆರಂಭದಲ್ಲಿ ಬ್ರಿಟನ್‌ನ ಫೋಬೆ ಪೈನ್ ಪ್ಯಾಟರ್ಸನ್ ಸ್ಥಾಪಿಸಿದ (698 ಅಂಕ) ವಿಶ್ವದಾಖಲೆಯನ್ನು ಶೀತಲ್ ಮುರಿದರು. ಅದಾದ ಕೆಲವೇ ಹೊತ್ತಿನಲ್ಲಿ ಓಜ್ನೂರ್ ಆ ದಾಖಲೆಯನ್ನು ತಮ್ಮದಾಗಿಸಿಕೊಂಡರು.

ಶೀತಲ್ ಸೇರಿದಂತೆ ರ‍್ಯಾಂಕಿಂಗ್ ಸುತ್ತಿನಲ್ಲಿ ಅಗ್ರ ನಾಲ್ಕು ಸ್ಥಾನ ಪಡೆದವರು 16ರ ಸುತ್ತಿಗೆ ಬೈ ಪಡೆದರು. ಪ್ರಿ ಕ್ವಾರ್ಟರ್ ಫೈನಲ್ ಸ್ಪರ್ಧೆ ಶನಿವಾರ ನಡೆಯಲಿದೆ.

ಶೀತಲ್ ಅವರು ಮುಂದಿನ ಸುತ್ತಿನಲ್ಲಿ ಚಿಲಿಯ ಮರಿಯಾನಾ ಜುನಿಗಾ ಮತ್ತು ಕೊರಿಯಾದ ಚೋಯ್ ನಾ ಮಿ ನಡುವಿನ ಸ್ಪರ್ಧೆಯ ವಿಜೇತರನ್ನು ಎದುರಿಸಲಿದ್ದಾರೆ. ಜುನಿಗಾ ಅವರು ಟೋಕಿಯೊ ಪ್ಯಾರಾಲಿಂಪಿಕ್ಸ್‌ನಲ್ಲಿ ಮಹಿಳೆಯರ ವೈಯಕ್ತಿಕ ಕಾಂಪೌಂಡ್ ಓಪನ್ ವಿಭಾಗದಲ್ಲಿ ಬೆಳ್ಳಿ ಗೆದ್ದಿದ್ದರು.

ಕಳೆದ ವರ್ಷ ಚೀನಾದ ಹಾಂಗ್‌ಝೌನಲ್ಲಿ ನಡೆದ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಶೀತಲ್ ಎರಡು ಚಿನ್ನ ಸೇರಿದಂತೆ ಮೂರು ಪದಕಗಳನ್ನು ಗೆದ್ದು ದಾಖಲೆ ಬರೆದಿದ್ದರು.

ಹೊರಬಿದ್ದ ಜ್ಯೋತಿ

ಭಾರತದ ಜ್ಯೋತಿ ಗಡೇರಿಯಾ ಪ್ಯಾರಾಲಿಂಪಿಕ್ಸ್‌ನ ಮಹಿಳೆಯರ (ಸಿ1-3) 3000 ಮೀಟರ್ ವೈಯಕ್ತಿಕ ಪರ್ಸ್ಯೂಟ್ ಸೈಕ್ಲಿಂಗ್ ಸ್ಪರ್ಧೆಯಿಂದ ಹೊರಬಿದ್ದರು. ಅರ್ಹತಾ ಸುತ್ತಿನಲ್ಲಿ ಅವರು 10ನೇ ಸ್ಥಾನ ಗಳಿಸಿದರು. ಅವರು 4 ನಿಮಿಷ 53.929 ಸೆಕೆಂಡ್‌ನಲ್ಲಿ ಗುರಿ ತಲುಪಿದರು.

ಚೀನಾದ ವಾಂಗ್ ಕ್ಸಿಯೋಮಿ (3 ನಿಮಿಷ 44.660 ಸೆ) ಮತ್ತು ಬ್ರಿಟನ್‌ನ ಡ್ಯಾಫ್ನೆ ಸ್ಕಾಗರ್ (3 ನಿ. 45.133 ಸೆ) ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ಪಡೆದರು. ಜರ್ಮನಿಯ ಮೈಕೆ ಹೌಸ್‌ಬರ್ಗರ್ (3:49.444) ಮತ್ತು ಸ್ವಿಟ್ಜರ್ಲೆಂಡ್‌ನ ಫ್ಲುರಿನಾ ರಿಗ್ಲಿಂಗ್ (3:50.347) ಕ್ರಮವಾಗಿ ನಂತರದ ಸ್ಥಾನ ಗಳಿಸಿದರು.

ಅರುಣಾಗೆ ಸೋಲು

ಪ್ಯಾರಿಸ್ (ಪಿಟಿಐ): ಭಾರತದ ಅರುಣಾ ತನ್ವರ್ ಅವರು ಪ್ಯಾರಾಲಿಂಪಿಕ್ಸ್‌ನ ಟೇಕ್ವಾಂಡೊ ಮಹಿಳೆಯರ (ಕೆ 44) 47 ಕೆ.ಜಿ ವಿಭಾಗದ 16ನೇ ಸುತ್ತಿನ ಸ್ಪರ್ಧೆಯಲ್ಲಿ 0–19ರಿಂದ ಟರ್ಕಿಯ ನುರ್ಚಿಹಾನ್ ಎಕಿನ್ಸಿ ವಿರುದ್ಧ ಪರಾಭವಗೊಂಡರು.

ಅಮೆರಿಕ ಓಪನ್ ಟೆನಿಸ್: ಕ್ರೆಚಿಕೋವಾ ನಿರ್ಗಮನ

ಜೊಕೊವಿಚ್‌ಗೆ ದಾಖಲೆಯ ಜಯ

ನ್ಯೂಯಾರ್ಕ್ (ಎಪಿ): ಸರ್ಬಿಯಾದ ತಾರೆ ನೊವಾಕ್ ಜೊಕೊವಿಚ್ ಅವರು ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತನ್ನು ತಲುಪಿದರು. ಎರಡನೇ ಶ್ರೇಯಾಂಕದ ಜೊಕೊವಿಚ್ ಬುಧವಾರ 6–4, 6–4, 2–0 ಯಿಂದ ಮುಂದಿದ್ದಾಗ ಅವರ ಎದುರಾಳಿ, ಸ್ವದೇಶದ ಲಾಸ್ಲೊ ಜೇರೆ ಗಾಯಾಳಾಗಿ ಪಂದ್ಯ ಬಿಟ್ಟುಕೊಟ್ಟರು.

ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಎರಡನೇ ಸೆಟ್‌ನಲ್ಲಿ 4–2 ರಿಂದ ಮುಂದಿದ್ದಾಗ ಲಾಸ್ಲೊ ಅವರಿಗೆ ಮೊದಲ ಬಾರಿ ಬೆನ್ನಿನ ಕೆಳಭಾಗದಲ್ಲಿ ನೋವು ಕಾಣಿಸಿಕೊಂಡಿತು. ನಂತರ ಅವರು ಆಟ ಮುಂದುವರಿಸಿದರೂ, ಮೂರನೇ ಸೆಟ್‌ನ ಆರಂಭದಲ್ಲೇ ಪಂದ್ಯ ಬಿಟ್ಟುಕೊಡಬೇಕಾಯಿತು. ಆದರೆ ಜೊಕೊವಿಚ್ ಉತ್ತಮ ಲಯದಲ್ಲೇನೂ ಇರಲಿಲ್ಲ. ಅವರ ಸರ್ವ್‌ಗಳು ನಿರೀಕ್ಷಿತ ಮಟ್ಟದಲ್ಲಿರಲಿಲ್ಲ.

37 ವರ್ಷ ವಯಸ್ಸಿನ ಜೊಕೊವಿಚ್‌ಗೆ ಇದು ಅಮೆರಿಕ ಓಪನ್‌ನಲ್ಲಿ ಒಟ್ಟಾರೆ 90ನೇ ಗೆಲುವು ಎನಿಸಿತು. ಎಲ್ಲ ನಾಲ್ಕೂ ಗ್ರ್ಯಾನ್‌ಸ್ಲಾಮ್‌ಗಳಲ್ಲಿ 90 ಅಥವಾ ಹೆಚ್ಚು ಪಂದ್ಯಗಳನ್ನು ಗೆದ್ದ ಮೊದಲ ಟೆನಿಸಿಗ ಎಂಬ ಹಿರಿಮೆ ಅವರದಾಯಿತು. ಬೆಲ್‌ಗ್ರೇಡ್‌ನಲ್ಲಿ ಜನಿಸಿದ ಈ ಆಟಗಾರ ಆಸ್ಟ್ರೇಲಿಯಾ ಓಪನ್‌ನಲ್ಲಿ 94, ಫ್ರೆಂಚ್ ಓಪನ್‌ನಲ್ಲಿ 96, ವಿಂಬಲ್ಡನ್‌ನಲ್ಲಿ 97 ಪಂದ್ಯಗಳನ್ನು ಜಯಿಸಿದ್ದಾರೆ. 25ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯ ಯತ್ನದಲ್ಲಿರುವ ಜೊಕೊವಿಚ್ ಶುಕ್ರವಾರ ನಡೆಯುವ ಮೂರನೇ ಸುತ್ತಿನ ಪಂದ್ಯದಲ್ಲಿ 28ನೇ ಶ್ರೇಯಾಂಕದ ಅಲೆಕ್ಸಿ ಪೊಪಿರಿನ್ ಅವರನ್ನು ಎದುರಿಸಲಿದ್ದಾರೆ.

ಆರನೇ ಶ್ರೇಯಾಂಕದ ಆ್ಯಂಡ್ರಿ ರುಬ್ಲೇವ್ (ರಷ್ಯಾ) 4–6, 5–7, 6–1, 6–2, 6–2 ರಿಂದ ಆರ್ಥರ್ ರಿಂಡರ್‌ನೆಕ್ (ಫ್ರಾನ್ಸ್) ಅವರನ್ನು ಹಿಮ್ಮೆಟ್ಟಿಸಿದರು.

ಬಾರ್ಬರಾಗೆ ಸೋಲು: ವಿಂಬಲ್ಡನ್ ಮಹಿಳಾ ಸಿಂಗಲ್ಸ್ ಚಾಂಪಿಯನ್ ಬಾರ್ಬರಾ ಕ್ರೆಚಿಕೊವಾ ಎರಡನೇ ಸುತ್ತಿನಲ್ಲಿ ಹೊರಬಿದ್ದರು. ಎಲೆನಾ-ಗೇಬ್ರಿಯೆಲಾ ರುಸ್ 6–4, 7–5 ರಿಂದ ಝೆಕ್ ರಿಪಬ್ಲಿಕ್‌ನ ಆಟಗಾರ್ತಿಯನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿದರು. ಕ್ರೆಚಿಕೊವಾ ಈ ಟೂರ್ನಿಯಲ್ಲಿ ಎಂಟನೇ ಶ್ರೇಯಾಂಕ ಪಡೆದಿದ್ದರು.

ದಾಖಲೆ ಅವಧಿಯ ಪಂದ್ಯ ಆಡಿದ ಇವಾನ್ಸ್: ಅಂತಿಮ ಸೆಟ್‌ನಲ್ಲಿ 0–4 ಹಿನ್ನಡೆಯಿಂದ ಅಮೋಘವಾಗಿ ಪುನರಾಗಮನ ಮಾಡಿದ ಬ್ರಿಟನ್‌ನ ಡೇನಿಯಲ್ ಇವಾನ್ಸ್ ಅಮೆರಿಕ ಓಪನ್ ಇತಿಹಾಸದಲ್ಲೇ ಅತಿ ದೀರ್ಘ ಪಂದ್ಯ ಆಡಿ ಕರೆನ್ ಕಚನೋವ್ ಅವರನ್ನು ಸೋಲಸಿಇದರು.

ಆರನೇ 6ಕೋರ್ಟ್‌ನಲ್ಲಿ ಇವಾನ್ಸ್ 5 ಗಂಟೆ 35 ನಿಮಿಷಗಳವರೆಗೆ ನಡೆದ ಮ್ಯಾರಥಾನ್ ಪಂದ್ಯದಲ್ಲಿ 23ನೇ ಶ್ರೇಯಾಂಕದ ರಷ್ಯನ್ ಆಟಗಾರ ಕಚನೋವ್ ಅವರನ್ನು 6–7 (6–8), 7–6 (7–2), 7–6 (7–4), 4–6, 6–4 ರಿಂದ ಜಯಗಳಿಸಿದರು. ಬುಧವಾರ ತಡರಾತ್ರಿವರೆಗೆ ಪಂದ್ಯ ನಡೆಯಿತು.

ಈ ಹಿಂದೆ 1992ರ ಸೆಮಿಫೈನಲ್ ಪಂದ್ಯದಲ್ಲಿ ಸ್ವೀಡನ್‌ನ ಸ್ಟೀಫನ್ ಎಡ್ಬರ್ಗ್ ಅವರು ಅಮೆರಿಕದ ಮೈಕೆಲ್ ಚಾಂಗ್ ಅವರನ್ನು 6–7 (3–7), 7–5, 7–6 (7–3), 5–7, 6–4 ರಿಂದ ಸೋಲಿಸಲು 5 ಗಂಟೆ 26 ನಿಮಿಷ ಹೋರಾಡಿದ್ದು, ಈ ಹಿಂದಿನ ದಾಖಲೆ ಆಗಿತ್ತು.

ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರ

ಬಾಲಾಜಿ, ಭಾಂಬ್ರಿ ಮುನ್ನಡೆ

ನ್ಯೂಯಾರ್ಕ್ (ಪಿಟಿಐ): ಭಾರತದ ಡಬಲ್ಸ್ ಆಟಗಾರರು ಅಮೆರಿಕ ಓಪನ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಡೇವಿಸ್ ಕಪ್ ಆಟಗಾರ ಎನ್.ಶ್ರೀರಾಮ್ ಬಾಲಾಜಿ ಮತ್ತು ಯುಕಿ ಭಾಂಬ್ರಿ ಅವರು ತಮ್ಮ ತಮ್ಮ ಜೊತೆಗಾರರೊಡನೆ ಡಬಲ್ಸ್‌ನಲ್ಲಿ ಮೊದಲ ಸುತ್ತಿನ ಪಂದ್ಯಗಳನ್ನು ಗೆದ್ದುಕೊಂಡರು.

ಬಾಲಾಜಿ ಅವರು ಅರ್ಜೆಂಟೀನಾದ ಜೊತೆಗಾರ ಗಿದೊ ಅಂಡ್ರಿಯೋಜಿ ಅವರೊಂದಿಗೆ ಆರಂಭದ ಹಿನ್ನಡೆಯಿಂದ ಚೇತರಿಸಿ 5–7, 6–1, 7–6 (12–6) ರಿಂದ ನ್ಯೂಜಿಲೆಂಡ್ ಮಾರ್ಕಸ್ ಡೇನಿಯಲ್ ಮತ್ತು ಮೆಕ್ಸಿಕೊದ ಮಿಗೆಲ್ ರಯೆಸ್ ವರೆಲಾ ಜೋಡಿಯ ಮೇಲೆ ಜಯಗಳಿಸಿದರು. ತೀವ್ರ ಪೈಪೋಟಿಯ ಈ ಪಂದ್ಯ 2 ಗಂಟೆ 36 ನಿಮಿಷಗಳವರೆಗೆ ಬೆಳೆಯಿತು.

ಬಾಲಾಜಿ ಫ್ರೆಂಚ್ ಓಪನ್‌ನಲ್ಲೂ ಗಮನ ಸೆಳೆದಿದ್ದರು. ಅಲ್ಲಿನ ಕ್ಲೇ ಅಂಕಣದಲ್ಲಿ ಬಾಲಾಜಿ-ರೆಯೆಸ್ ಜೋಡಿ, ಅನುಭವಿಗಳಾದ ರೋಹನ್ ಬೋಪಣ್ಣ– ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಅವರಿಗೆ ತೀವ್ರ ಪೈಪೋಟಿ ನೀಡಿತ್ತು. ಇಲ್ಲಿ ಯಶಸ್ಸಿನ ಓಟ ಮುಂದುವರಿಸಿದರೆ, ಅದು ಬಾಲಾಜಿ ಅವರಿಗೆ ಸ್ವೀಡನ್ ವಿರುದ್ಧ ಡೇವಿಸ್ ಕಪ್‌ಗೆ ಉತ್ತಮ ತಯಾರಿ ಎನಿಸಲಿದೆ.

ಯುಕಿ ಭಾಂಬ್ರಿ ಅವರು ಫ್ರಾನ್ಸ್‌ನ ಅಲ್ಬಾನೊ ಒಲಿವೆಟ್ಟಿ ಜೊತೆಗೂಡಿ 6–3, 6–4 ರಿಂದ ಸ್ಥಳೀಯರಾದ ರಯಾನ್ ಸೆಗೆರ್‌ಮನ್– ಪ್ಯಾಟ್ರಿಕ್ ಟ್ರಹಾಕ್ ಅವರನ್ನು ಸೋಲಿಸಿದರು. ರಯಾನ್– ಪ್ಯಾಟ್ರಿಕ್ ಅವರು ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದರು.

ಸಂಕ್ಷಿಪ್ತ ಸುದ್ದಿ

ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್ ಇಂದಿನಿಂದ

ಬೆಂಗಳೂರು: ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ 63ನೇ ರಾಷ್ಟ್ರೀಯ ಮುಕ್ತ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಶುಕ್ರವಾರ ಪ್ರಾರಂಭವಾಗಲಿದೆ.

ಆತಿಥೇಯ ಕರ್ನಾಟಕ ಅಥ್ಲೆಟಿಕ್ಸ್ ಸಂಸ್ಥೆ ಪ್ರಕಾರ ದೇಶದಾದ್ಯಂತ 900 ಅಥ್ಲೀಟ್‌ಗಳು ಭಾಗವಹಿಸಲಿದ್ದಾರೆ. ರಾಜ್ಯದ 51 ಸ್ಪರ್ಧಿಗಳು ಕಣಕ್ಕೆ ಇಳಿಯಲಿದ್ದಾರೆ.

ರಾಷ್ಟ್ರೀಯ ದಾಖಲೆ ಹೊಂದಿರುವ ತೇಜಸ್ ಶಿರ್ಸೆ (110 ಮೀ ಹರ್ಡಲ್ಸ್), ಗುಲ್ವೀರ್ ಸಿಂಗ್ (5000 ಮೀ) ಮತ್ತು ಅಮ್ಲಾನ್ ಬೊರ್ಗೊಹೈನ್ (100 ಮೀ, 200 ಮೀ) ಹಾಗೂ ಏಷ್ಯನ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಮೊಹಮ್ಮದ್ ಅಫ್ಸಲ್ (800 ಮೀ), ರಾಷ್ಟ್ರೀಯ ದಾಖಲೆ ಹೊಂದಿರುವ ರೋಸಿ ಮೀನಾ ಪೌಲ್‌ರಾಜ್ (ಪೋಲ್ ವಾಲ್ಟ್), ಮೌಮಿತಾ ಮೊಂಡಲ್ (ಹೆಪ್ಟಾಥ್ಲಾನ್), ಮಣಿಕಂಠ ಹೋಬಳಿಧರ್ (100 ಮೀ), ಗುರಿಂದರ್‌ವೀರ್ ಸಿಂಗ್ (100 ಮೀ), ಯಮನ್‌ದೀಪ್ ಶರ್ಮಾ (ಡೆಕಾಥ್ಲಾನ್), ಸೇರಿ ಪ್ರಮುಖರು ಭಾಗಿಯಾಗಲಿದ್ದಾರೆ.

ಅಭಿವನ್ ಕೆ. ಮತ್ತು ದೇಶ್ನಾ ಎಂ.

ಅಭಿನವ್‌ಗೆ ಪ್ರಶಸ್ತಿ

ಬೆಳಗಾವಿ: ಅಭಿನವ್ ಕೆ. ಮೂರ್ತಿ ಮತ್ತು ದೇಶ್ನಾ ಎಂ ವಂಶಿಕಾ ಅವರು ಬೆಳಗಾವಿ ಕ್ಲಬ್‌ನಲ್ಲಿ ನಡೆಯುತ್ತಿರುವ ಐದನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 19 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ವಿಭಾಗದ ಪ್ರಶಸ್ತಿ ಗೆದ್ದರು.

ಬೆಳಗಾವಿ ಜಿಲ್ಲಾ ಟೇಬಲ್ ಟೆನಿಸ್ ಸಂಸ್ಥೆ (ಬಿಡಿಟಿಟಿಎ) ಆಶ್ರಯದಲ್ಲಿ ಆಯೋಜನೆಯಾಗಿರುವ ಟೂರ್ನಿಯ ಬಾಲಕರ ವಿಭಾಗದ ಫೈನಲ್‌ನಲ್ಲಿ ಅಭಿನವ್ 7-11, 11-9, 11-9, 11-5, 11 - 8ರಿಂದ ವಿ.ಜಿ. ವಿಭಾಸ್ ವಿರುದ್ಧ ಜಯಿಸಿದರು. ಬಾಲಕಿಯರ ಫೈನಲ್‌ನಲ್ಲಿ ದೇಶ್ನಾ 11-9, 11-9, 11-2, 11-3ರಿಂದ ಹಿಮಾಂಶಿ ಚೌಧರಿ ವಿರುದ್ಧ ಜಯಿಸಿದರು.

ವೇಗಿ ಬರಿಂದರ್ ಸರನ್ ನಿವೃತ್ತಿ

ನವದೆಹಲಿ (ಪಿಟಿಐ): ಎಡಗೈ ವೇಗದ ಬೌಲರ್ ಬರಿಂದರ್ ಸರನ್ ಅವರು ಎಲ್ಲ ಮಾದರಿಗಳ ಕ್ರಿಕೆಟ್‌ಗೆ ಗುರುವಾರ ನಿವೃತ್ತಿ ಘೋಷಿಸಿದರು.

ಬರಿಂದರ್ ಅವರು ಭಾರತ ತಂಡವನ್ನು 2016ರಲ್ಲಿ ಆರು ಏಕದಿನ ಮತ್ತು ಎರಡು ಟಿ20 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದರು. 2015–16ರಲ್ಲಿ ಪರ್ತ್‌ನಲ್ಲಿ ನಡೆದಿದ್ದ ಆಸ್ಟ್ರೇಲಿಯಾ ಎದುರಿನ ಏಕದಿನ ಪಂದ್ಯದಲ್ಲಿ ಪದಾರ್ಪಣೆ ಮಾಡಿದ್ದರು. ಜಿಂಬಾಬ್ವೆ ಎದುರಿನ ಎರಡು ಟಿ20 ಪಂದ್ಯಗಳಲ್ಲಿ ಆಡಿದ್ದರು. ಏಕದಿನ ಕ್ರಿಕೆಟ್‌ನಲ್ಲಿ ಏಳು ಮತ್ತು ಟಿ20 ಕ್ರಿಕೆಟ್‌ನಲ್ಲಿ ಆರು ವಿಕೆಟ್‌ಗಳನ್ನು ಗಳಿಸಿದ್ದಾರೆ. ಐಪಿಎಲ್‌ನಲ್ಲಿ ಅವರು ಮುಂಬೈ, ಪಂಜಾಬ್, ರಾಜಸ್ಥಾನ ಮತ್ತು ಹೈದರಾಬಾದ್ ತಂಡಗಳಲ್ಲಿ ಆಡಿದ್ದಾರೆ.

ಟೈಗರ್ಸ್ ಮಣಿಸಿದ ಗುಲ್ಬರ್ಗ ಮಿಸ್ಟಿಕ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭಿಕ ಆಘಾತದ ಹೊರತಾಗಿಯೂ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಉತ್ತಮ ಆಟದ ನೆರವಿನಿಂದ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಹಾಲಿ ಚಾಂಪಿಯನ್ ಹುಬ್ಬಳ್ಳಿ ಟೈಗರ್ಸ್ ತಂಡವನ್ನು ಮಣಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಮಹಾರಾಜ ಟ್ರೋಫಿ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ತಂಡವು ಹುಬ್ಬಳ್ಳಿ ತಂಡದ ಮೇಲೆ ನಾಲ್ಕು ವಿಕೆಟ್‌ಗಳ ಜಯ ದಾಖಲಿಸಿತು.

ಶುಕ್ರವಾರ ನಡೆಯಲಿರುವ ಮೊದಲ ಸೆಮಿಫೈನಲ್‌ನಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡ ಗುಲ್ಬರ್ಗ ಮಿಸ್ಟಿಕ್ಸ್ ವಿರುದ್ಧ ಸೆಣಸಲಿದ್ದು, ಶನಿವಾರದ ಎರಡನೇ ಸೆಮಿಫೈನಲ್‌ನಲ್ಲಿ ಮೈಸೂರು ವಾರಿಯರ್ಸ್ ತಂಡ ಹುಬ್ಬಳ್ಳಿ ಟೈಗರ್ಸ್ ತಂಡಗಳು ಸೆಣಸಲಿದೆ.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಗುಲ್ಬರ್ಗ ತಂಡದ ಬೌಲರ್ ಮೋನಿಶ್ ರೆಡ್ಡಿ (32ಕ್ಕೆ4) ಅವರ ನಿಖರ ದಾಳಿಯಿಂದಾಗಿ ಹುಬ್ಬಳ್ಳಿಗೆ ಆರಂಭದಲ್ಲಿಯೇ ಪೆಟ್ಟು ಬಿದ್ದಿತು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಶ್ರೀಜಿತ್ 51 ಎಸೆತಗಳಲ್ಲಿ 100 ರನ್ ಗಳಿಸಿದರು. 14 ಬೌಂಡರಿ ಮತ್ತು 3 ಸಿಕ್ಸರ್‌ಗಳನ್ನು ಸಿಡಿಸಿದರು. ಅವರು ಮೊಹಮ್ಮದ್ ತಹಾ ಅವರೊಂದಿಗೆ 32 ರನ್ ಸೇರಿಸಿದರು.

ಎಲ್ಲ ಬೌಲರ್‌ಗಳಿಗೂ ಚುರುಕು ಮುಟ್ಟಿಸಿದ ಅವರ ಬ್ಯಾಟಿಂಗ್ ಅಮೋಘವಾಗಿತ್ತು. ಆದರೆ ಅನೀಶ್ವರ್ ಗೌತಮ (9), ಕೆಪಿ. ಕಾರ್ತಿಕೇಯ (6), ಮನೀಷ್ ಪಾಂಡೆ (9), ಮನ್ವಂತ್ ಕುಮಾರ್ (11) ಮತ್ತು ರಿಶಿ ಬೋಪಣ್ಣ ಅವರು ದೊಡ್ಡ ಇನಿಂಗ್ಸ್ ಆಡಲಿಲ್ಲ. 196.08ರ ಸ್ಟ್ರೈಕ್‌ರೇಟ್‌ನಲ್ಲಿ ಶ್ರೀಜಿತ್ ರನ್‌ಗಳನ್ನು ಸೂರೆ ಮಾಡಿದರು. ಶ್ರೀಜಿತ್ ಅವರ ಬ್ಯಾಟಿಂಗ್ ಬಲದಿಂದ 'ಹಾಲಿ ಚಾಂಪಿಯನ್' ಹುಬ್ಬಳ್ಳಿ ಟೈಗರ್ಸ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 179 ರನ್ ಗಳಿಸಿತು.

ಗೆಲುವಿನ ಗುರಿ ಬೆನ್ನತ್ತಿದ ಗುಲ್ಬರ್ಗ ತಂಡದ ಬ್ಯಾಟರ್‌ಗಳಾದ ಲವನಿತ್ ಸಿಸೋಡಿಯಾ (10), ಅನೀಶ್ ಕೆ.ವಿ (0), ಶರತ್ ಬಿ.ಆರ್ (13) ಅವರು ಬಹುಬೇಗನೆ ವಿಕೆಟ್ ಒಪ್ಪಿಸಿದರು. ನಂತರ ಕ್ರೀಸ್‌ಗೆ ಬಂದ ವಿಜಯಕುಮಾರ್ ವೈಶಾಖ್ ಅವರು ಏಳು ಬೌಂಡರಿ ಮತ್ತು ಒಂದು ಸಿಕ್ಸರ್ ಸಹಿತ ಆಕರ್ಷಕ ಅರ್ಧ ಶತಕ (51) ಗಳಿಸಿದರು. ಇದು ತಂಡಕ್ಕೆ ಚೈತನ್ಯ ನೀಡಿತು.

ನಂತರ ಕ್ರೀಸ್ ಬಂದ ರಿತೇಶ್ ಭಟ್ಕಳ್ (35) ಪ್ರವೀಣ್ ದುಬೆ (34) ತಂಡವನ್ನು ಜಯದ ದಡ ತಲುಪಿಸಿದರು.

ಪಂದ್ಯ ರದ್ದು: ರಭಸದ ಮಳೆ ಸುರಿದ ಕಾರಣ ಮಧ್ಯಾಹ್ನ ನಡೆಬೇಕಿದ್ದ ಬೆಂಗಳೂರು ಬ್ಲಾಸ್ಟರ್ಸ್ ಮತ್ತು ಮಂಗಳೂರು ಡ್ರ್ಯಾಗನ್ಸ್ ನಡುವಣ ಪಂದ್ಯವು ರದ್ದಾಯಿತು.

ಸಂಕ್ಷಿಪ್ತ ಸ್ಕೋರು: ಹುಬ್ಬಳ್ಳಿ ಟೈಗರ್ಸ್: 20 ಓವರ್‌ಗಳಲ್ಲಿ 7ಕ್ಕೆ 179 (ಕೃಷ್ಣನ್ ಶ್ರೀಜಿತ್ ಔಟಾಗದೆ 100, ಮೊಹಮ್ಮದ್ ತಹಾ 35,ಮೋನಿಶ್ ರೆಡ್ಡಿ 32ಕ್ಕೆ4) **ಗುಲ್ಬರ್ಗ ಮಿಸ್ಟಿಕ್ಸ್:** 19.1 ಓವರ್‌ಗಳಲ್ಲಿ 6ಕ್ಕೆ 183 (ವಿಜಯಕುಮಾರ್ ವೈಶಾಖ್ 51, ರಿತೇಶ್ ಭಟ್ಕಳ್ ಔಟಾಗದೆ 35, ಪ್ರವೀಣ್ ದುಬೆ ಔಟಾಗದೆ 34, ಕೆ.ಸಿ.ಕಾರಿಯಪ್ಪ 19ಕ್ಕೆ 2) **ಪಂದ್ಯದ ಆಟಗಾರ:** ವೈಶಾಖ್ ವಿ. **ಫಲಿತಾಂಶ:** ಗುಲ್ಬರ್ಗ ಮಿಸ್ಟಿಕ್ಸ್ ತಂಡಕ್ಕೆ ನಾಲ್ಕು ವಿಕೆಟ್‌ಗಳ ಜಯ.

ಕೃಷ್ಣನ್ ಶ್ರೀಜಿತ್

ಎಲ್ಲ 9 ಪಂದ್ಯ ಡ್ರಾ ಮಾಡಿದ ಗುಕೇಶ್, ಪ್ರಜ್ಞಾನಂದ

ಸಿಂಕ್ವೆಫೀಲ್ಡ್ ಕಪ್ ಗೆದ್ದ ಅಲಿರೇಜಾ

ಸೇಂಟ್ ಲೂಯಿ (ಅಮೆರಿಕ), (ಪಿಟಿಐ): ಪ್ರಜ್ಞಾನಂದ ರಮೇಶಬಾಬು ವಿರುದ್ಧ ಬುಧವಾರ ಕೊನೆಯ (ಒಂಬತ್ತನೇ) ಸುತ್ತಿನ ಪಂದ್ಯವನ್ನು 47 ನಡೆಗಳಲ್ಲಿ 'ಡ್ರಾ' ಮಾಡಿಕೊಂಡ ಫ್ರಾನ್ಸ್‌ನ ಅಲಿರೇಜಾ ಫಿರೋಜ್ ಸಿಂಕ್ವೆಫೀಲ್ಡ್ ಕಪ್ ಚೆಸ್ ಟೂರ್ನಿಯಲ್ಲಿ ನಿರೀಕ್ಷೆಯಂತೆ ಪ್ರಶಸ್ತಿ ಗೆದ್ದುಕೊಂಡರು.

ಇರಾನ್‌ನಲ್ಲಿ ಜನಿಸಿ ಫ್ರಾನ್ಸ್‌ನಲ್ಲಿ ನೆಲೆಸಿರುವ ಫಿರೋಜ್, ಒಂದು ಸುತ್ತು ಮೊದಲೇ ಗ್ರ್ಯಾಂಡ್ ಚೆಸ್ ಟೂರ್ ಟ್ರೋಫಿಯನ್ನೂ ಖಚಿತಪಡಿಸಿಕೊಂಡಿದ್ದರು. ಗ್ರ್ಯಾಂಡ್ ಚೆಸ್ ಟೂರ್, ಐದು ಟೂರ್ನಿಗಳ ಸರಣಿಯಾಗಿದ್ದು, ಇದರಲ್ಲಿ ಸಿಂಕ್ವೆಫೀಲ್ಡ್ ಕಪ್ ಒಳಗೊಂಡಿದೆ.

ಎರಡು ವರ್ಷಗಳ ಹಿಂದೆ ಕೂಡ ಅಲಿರೇಜಾ ಅವರು ಗ್ರ್ಯಾಂಡ್ ಚೆಸ್ ಟೂರ್ ಗೆದ್ದುಕೊಂಡಿದ್ದರು. ಆ ಬಾರಿ ಅವರು ಸೇಂಟ್ ಲೂಯಿ ಟೂರ್ನಿಯಲ್ಲೂ ವಿಜೇತರಾಗಿದ್ದರು. ಎರಡೂ ಬಾರಿ ಟೂರ್ ಟ್ರೋಫಿ ಗೆಲ್ಲುವ ಮೊದಲು ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಅವರು ನಿರಾಶಾದಾಯಕ ಪ್ರದರ್ಶನದಿಂದ ಪುಟಿದೆದ್ದಿದ್ದರು.

ಅಲಿರೇಜಾ ಆರು ಪಾಯಿಂಟ್ಸ್ ಸಂಗ್ರಹಿಸಿದರೆ, ಅರ್ಧ ಪಾಯಿಂಟ್ ಅಂತರ ದಿಂದ ಹಿಂದೆಬಿದ್ದ ಅಮೆರಿಕದ ಫ್ಯಾಬಿಯಾನೊ ಕರುವಾನ (5.5) ಎರಡನೇ ಸ್ಥಾನ ಗಳಿಸಿದರು. ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಮತ್ತು ಉಜ್ಬೇಕಿಸ್ತಾನದ ನಾಡಿರ್ಬೆಕ್ ಅಬ್ದುಸತ್ತಾರೋವ್ ತಲಾ ಐದು ಅಂಕ ಕಲೆಹಾಕಿ ಮೂರನೇ ಸ್ಥಾನ ಹಂಚಿಕೊಂಡರು.

ಗುಕೇಶ್ ದೊಮ್ಮರಾಜು, ಪ್ರಜ್ಞಾನಂದ ಮತ್ತು ಅಮೆರಿಕದ ವೆಸ್ಲಿ ಸೊ (ತಲಾ 4.5) ನಾಲ್ಕನೇ ಸ್ಥಾನ ಹಂಚಿಕೊಂಡರು. ಗುಕೇಶ್ ಮತ್ತು ಪ್ರಜ್ಞಾನಂದ ಆಡಿದ 9 ಸುತ್ತುಗಳಲ್ಲೂ ಎಲ್ಲ ಡ್ರಾ ಮಾಡಿಕೊಂಡರು.

ಇಯಾನ್ ನಿಪೊಮ್‌ನಿಷಿ ಮತ್ತು ಡಿಂಗ್ ಲಿರೆನ್ (ತಲಾ 3.5) ನಂತರದ ಸ್ಥಾನ ಪಡೆದರೆ, ನೆದರ್ಲೆಂಡ್ಸ್‌ನ ಅನಿಶ್ ಗಿರಿ (3) ಕೊನೆಯ ಸ್ಥಾನ ಪಡೆದರು.

ಒಂಬತ್ತನೇ ಸುತ್ತಿನಲ್ಲಿ ಮೂರು ನಿರ್ಣಾಯಕ ಫಲಿತಾಂಶಗಳು ದಾಖಲಾದವು. ಕರುವಾನ, ಅನೀಶ್ ಗಿರಿ ವಿರುದ್ಧ ಜಯಗಳಿಸಿದರೆ, ವೇಷಿಯರ್ ಲಗ್ರಾವ್, ವಿಶ್ವ ಚಾಂಪಿಯನ್ ಡಿಂಗ್ ಲಿರೆನ್ ಅವರಿಗೆ ಸೋಲುಣಿಸಿದರು. ನಾಡಿರ್ಬೆಕ್ ಅಬ್ದುಸತ್ತಾರೋವ್, ರಷ್ಯಾದ ಇಯಾನ್ ನಿಪೊಮ್‌ನಿಷಿ ಅವರನ್ನು ಪರಾಭವಗೊಳಿಸಿದರು. ಗುಕೇಶ್ ಮತ್ತು ವೆಸ್ಲಿ 'ಡ್ರಾ'ಕ್ಕೆ ಸಹಿಹಾಕಿದರು.

ಟ್ರೋಫಿಯೊಂದಿಗೆ ಫ್ರಾನ್ಸ್‌ನ ಅಲಿರೇಜಾ ಫಿರೋಜ್ –ಎಕ್ಸ್ ಚಿತ್ರ

ಮನವಿ ಸಲ್ಲಿಸಲು ಬ್ರಿಜ್‌ಭೂಷಣ್‌ಗೆ ಹೈಕೋರ್ಟ್ ಅವಕಾಶ

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳ ನೀಡಿದ ಆರೋಪದಡಿ ಕೆಲವು ಮಹಿಳಾ ಕುಸ್ತಿಪಟುಗಳು ದಾಖಲಿಸಿರುವ ಪ್ರಕರಣದಲ್ಲಿ ತಮ್ಮ ವಿರುದ್ಧದ ಆರೋಪಪಟ್ಟಿ ಹಾಗೂ ದೋಷಾರೋಪ ನಿಗದಿ ಮಾಡಿರುವುದನ್ನು ಕೈಬಿಡುವಂತೆ ಕೋರಿ ಮನವಿ ಸಲ್ಲಿಸಲು ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ಅವರಿಗೆ ದೆಹಲಿ ಹೈಕೋರ್ಟ್ ಸಮಯಾವಕಾಶ ನೀಡಿ ಗುರುವಾರ ಆದೇಶಿಸಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ನೀನಾ ಬನ್ಸಲ್ ಕೃಷ್ಣ, ಎರಡು ವಾರಗಳ ಒಳಗಾಗಿ ಮನವಿ ಸಲ್ಲಿಸುವಂತೆ ಬ್ರಿಜ್‌ಭೂಷಣ್ ಸಿಂಗ್ ಅವರಿಗೆ ಸೂಚಿಸಿ, ವಿಚಾರಣೆಯನ್ನು ಸೆಪ್ಟೆಂಬರ್ 26ಕ್ಕೆ ಮುಂದೂಡಿದರು.

ಇದಕ್ಕೂ ಮುನ್ನ, ರಾಜ್ಯ ಸರ್ಕಾರ ಮತ್ತು ಅರ್ಜಿದಾರರ ಪರ ಹಾಜರಿದ್ದ ವಕೀಲರು, ಬ್ರಿಜ್‌ಭೂಷಣ್ ಸಿಂಗ್ ಅವರ ಅರ್ಜಿಯನ್ನು ವಿರೋಧಿಸಿದರು.

'ತಮ್ಮ ವಿರುದ್ಧ ನಿಗದಿ ಮಾಡಿರುವ ದೋಷಾರೋಪಗಳನ್ನು ಪ್ರಶ್ನಿಸಿ ಹಾಗೂ ಎಫ್‌ಐಆರ್ ಮತ್ತು ಆರೋಪಪಟ್ಟಿ ರದ್ದುಪಡಿಸುವಂತೆ ಕೋರಿ ಬ್ರಿಜ್‌ಭೂಷಣ್ ಸಿಂಗ್ ಒಂದೇ ಅರ್ಜಿ ಸಲ್ಲಿಸಿದ್ದಾರೆ. ಈ ಎಲ್ಲ ವಿಚಾರಗಳಿಗೆ ಸಂಬಂಧಿಸಿ ಸಮಗ್ರವಾದ ಆದೇಶ ನೀಡಲು ಸಾಧ್ಯವಿಲ್ಲ. ಪ್ರಕರಣ ಕುರಿತು ವಿಚಾರಣೆ ಆರಂಭವಾದ ನಂತರ ಅರ್ಜಿದಾರ ಪ್ರತಿಯೊಂದನ್ನೂ ಈಗ ಪ್ರಶ್ನಿಸುತ್ತಿದ್ದಾರೆ' ಎಂದು ನ್ಯಾಯಾಧೀಶೆ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಬ್ರಿಜ್‌ಭೂಷಣ್ ವಕೀಲ ರಾಜೀವ್ ಮೋಹನ್, 'ಡಬ್ಲ್ಯುಎಫ್‌ಐ ಅಧ್ಯಕ್ಷ ಸ್ಥಾನದಿಂದ ಬ್ರಿಜ್‌ಭೂಷಣ್ ಸಿಂಗ್ ಅವರನ್ನು ಕೆಳಗಿಳಿಸಬೇಕು ಎಂಬ ಏಕೈಕ ಉದ್ದೇಶದಿಂದ ಅವರ ವಿರುದ್ಧ ದೂರು ಗಳನ್ನು ದಾಖಲಿಸಲಾಗಿದೆ' ಎಂದರು.

ಆಗ, 'ಅರ್ಜಿದಾರರು ಈಗ ನೀಡುತ್ತಿರುವ ಎಲ್ಲ ಹೇಳಿಕೆಗಳನ್ನು, ಅವರ ವಿರುದ್ಧ ದೋಷಾ ರೋಪ ನಿಗದಿ ಮಾಡುವ ವೇಳೆ ವಿಚಾರಣಾ ನ್ಯಾಯಾಲಯ ಪರಿಗಣಿಸಬೇಕಿತ್ತು' ಎಂದು ನ್ಯಾಯಾಧೀಶೆ ಹೇಳಿದರು.

ವಿಶ್ವ ಸ್ನೂಕರ್: ರಾಹುಲ್‌ಗೆ ಜಯ

ಬೆಂಗಳೂರು: ಭಾರತದ ರಾಹುಲ್ ವಿಲಿಯಮ್ಸ್ ಅವರು ವಿಶ್ವ 21 ವರ್ಷದೊಳಗಿನವರ ಸ್ನೂಕರ್ ಚಾಂಪಿಯನ್‌ಷಿಪ್ 16ರ ಘಟಕ್ಕೆ ತಲುಪಿದರು.

ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಅಸೋಸಿಯೇಷನ್‌ನಲ್ಲಿ ನಡೆದ ಪಂದ್ಯದಲ್ಲಿ ರಾಹುಲ್ ಅವರು 3-2 (27-79, 58-23, 75-56, 29-62, 71-24)ರಿಂದ ಹಾಂಗ್‌ಕಾಂಗ್ ಸ್ಟೈ ಚಾನ್ ಅವರನ್ನು ಮಣಿಸಿದರು.

ಮಹೇಂದ್ರ ಚೌಹಾಣ್, ಆರವ್, ವಿಭಾಸ್ ಕೆ. ಮತ್ತು ರಣವೀರ್ ದುಗ್ಗಲ್ ಅವರು ಕೂಡಾ 16ರ ಘಟ್ಟ ತಲುಪಿದ್ದಾರೆ.

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿರುವ ಒಲಿಂಪಿಕ್ ಭವನದಲ್ಲಿ ಗುರುವಾರ ನಡೆದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಂತರರಾಷ್ಟ್ರೀಯ ಕ್ರೀಡಾಪಟುಗಳನ್ನು ಗೌರವಿಸಲಾಯಿತು. ಈ ಸಂದರ್ಭದಲ್ಲಿ ಕ್ರೀಡೆ ಮತ್ತು ಯುವ ಸಬಲೀಕರಣ ಇಲಾಖೆಯ ಆಯುಕ್ತ ಚೇತನ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಗೃಹಸಚಿವ ಜಿ. ಪರಮೇಶ್ವರ್, ಕೆ.ಒ.ಎ ಅಧ್ಯಕ್ಷ ಕೆ. ಗೋವಿಂದರಾಜು, ಮಹಾಪ್ರಧಾನ ಕಾರ್ಯದರ್ಶಿ ಅನಂತರಾಜು, ಅಥ್ಲೆಟಿಕ್ ಕೋಚ್ ಅಂಜು ಬಾಬಿ ಜಾರ್ಜ್ ಹಾಜರಿದ್ದರು ಪ್ರಜಾವಾಣಿ ಚಿತ್ರ

'ಬೆಂಗಳೂರಿನಲ್ಲಿ ಕ್ರೀಡಾ ನಗರಿ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ವಿಶ್ವದ ಗಮನ ಸೆಳೆದಿರುವ ಬೆಂಗಳೂರು, ಕ್ರೀಡೆಯಲ್ಲಿಯೂ ಉನ್ನತ ಸಾಧನೆ ಮಾಡಬೇಕಿದೆ. ಅದಕ್ಕಾಗಿ ದೇವನಹಳ್ಳಿ ಸಮೀಪದ 50 ಎಕರೆ ಪ್ರದೇಶದಲ್ಲಿ ಕ್ರೀಡಾ ನಗರಿ ನಿರ್ಮಾಣಕ್ಕೆ ಆದೇಶ ನೀಡಲಾಗಿದೆ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಗುರುವಾರ ಹೇಳಿದರು.

ರಾಜ್ಯ ಕ್ರೀಡೆ ಮತ್ತು ಯುವ ಸಬಲೀಕರಣ ಇಲಾಖೆಯು ಕಂಠೀರವ ಕ್ರೀಡಾಂಗಣದ ಒಲಿಂಪಿಕ್ ಭವನದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕ್ರೀಡಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರ ನೇತೃತ್ವದಲ್ಲಿ ನಮ್ಮ ಸರ್ಕಾರವು ಎಲ್ಲ ಇಲಾಖೆಗಳ ನೇಮಕಾತಿಯಲ್ಲಿ ಕ್ರೀಡಾ ಮೀಸಲಾತಿ ಕಲ್ಪಿಸಿದೆ. ಮೂಲಸೌಲಭ್ಯಗಳ ಅಭಿವೃದ್ಧಿಗೂ ಒತ್ತು ನೀಡಿದೆ. ಅದಕ್ಕಾಗಿಯೇ ಸಕಲ ಸೌಲಭ್ಯಗಳು ಇರುವ ಕ್ರೀಡಾ ನಗರಿ ನಿರ್ಮಾಣವಾಗಲಿದೆ. ಅಲ್ಲದೇ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾ ವಸ್ತುಸಂಗ್ರಹಾಲಯವನ್ನು ನಿರ್ಮಿಸುವ ಚಿಂತನೆ ಕೂಡ ನಡೆದಿದೆ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಒಲಿಂಪಿಕ್ಸ್ ಮತ್ತು ಅಂತರರಾಷ್ಟ್ರೀಯ ಕೂಟಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ಕ್ರೀಡಾಪಟುಗಳಾದ ಶ್ರೀಹರಿ ನಟರಾಜ್, ದಿನಿಧಿ ದೇಸಿಂಗು, ಎಬಿ ಸುಬ್ಬಯ್ಯ, ಸಿ.ಎಸ್. ಪೂಣಚ್ಚ, ಅನಿಲ್ ಅಲೆಕ್ಸಾಂಡರ್, ವಿ.ಎಸ್. ವಿನಯ, ನಿಕಿನ್ ತಿಮ್ಮಯ್ಯ, ಕೆ.ಕೆ. ಪೂಣಚ್ಚ, ಬಿ.ಸಿ. ಪೂಣಚ್ಚ, ಎಚ್.ಎಸ್. ಮೋಹಿತ್, ಸಿ.ಬಿ. ಪೂವಣ್ಣ, ಮೊಹಮ್ಮದ್ ರಾಹಿಲ್, ದಿಲೀಪ್ ಕುಮಾರ್, ದಿಲೀಪ್ ಗುರುಮೂರ್ತಿ, ಆರ್. ರಾಜನ್, ಅಂಜು ಬಾಬಿ ಜಾರ್ಜ್, ಅರ್ಜುನ್ ಹಾಲಪ್ಪ, ಡಾ. ಸಿ. ಪ್ರಭಾಕರ್ ಅವರನ್ನು ಗೌರವಿಸಲಾಯಿತು.